ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಾರ್ಖಂಡ್ ಚುನಾವಣೆಗೆ ಧೋನಿ ರಾಯಭಾರಿ

ಪ್ರಧಾನಿ ಮೋದಿ ಮನ್ ಕೀ ಬಾತ್‌ನಲ್ಲಿ ವಿಜಯಪುರದ ಸೈಬರ್ ಕ್ರೈಂ ಉಲ್ಲೇಖ

ಪುಟ ತೆರೆದಂತೆ...

ಮೂರು ಕ್ಷೇತ್ರಗಳ ಎಫ್‌ಐಆರ್ ಕಾಪಿ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಬಾರದಂಥ ಮಳೆ ಬಂತಣ್ಣ, ಮರುಭೂಮಿಯೊಳಗೆ
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ದಾರಿದೀಪೋಕ್ತಿ

ಈಗಿನ ಕಾಲದಲ್ಲಿ ಎಲ್ಲರೂ ಭಾರವನ್ನು ಕಮ್ಮಿ (ವೇಟ್ ಲಾಸ್) ಮಾಡಿಕೊಳ್ಳಲು ಜಿಮ್‌ಗೆ ಹೋಗಿ ಇನ್ನಿಲ್ಲದ ಕಸರತ್ತು ಮಾಡುತ್ತಾರೆ. ಆದರೆ ನಾವೆಲ್ಲರೂ ಕಮ್ಮಿ ಮಾಡಿಕೊಳ್ಳಬೇಕಾದ ಬಹುದೊಡ್ಡ ಭಾರ ಅಂದ್ರೆ, ನಮ್ಮ ತಲೆಯಲ್ಲಿ ಭಾರವಾಗಿರುವ ಬೇರೆ ವ್ಯಕ್ತಿಗಳ ಅನಿಸಿಕೆ ಮತ್ತು ಟೀಕೆ.

ವಕ್ರತುಂಡೋಕ್ತಿ

ನಮಗೆ ಯಾವುದನ್ನು ಹೊಂದುವುದು ಸಾಧ್ಯವಿಲ್ಲವೋ, ಅದನ್ನು ಹೊಂದಬಾರದು. ಆದರೆ ಈ ಮಾತು ಮಕ್ಕಳನ್ನು ಹೊಂದುವುದಕ್ಕೆ ಅನ್ವಯವಾಗುವುದಿಲ್ಲ.

ರಾಜ್ಯ ನಾಯಕರಿಗೆ ಸುರ್ಜೇವಾಲ ಸಂದೇಶ | ಪ್ರತಿಪಕ್ಷದ ಆರೋಪಗಳಿಗೆ ತಕ್ಕ ಉತ್ತರ ನೀಡಿ

ಉಪಸಮರ: ಮೂರಕ್ಕೆ ಮೂರು ಗೆಲ್ಲಿ

ಬೆಂಗಳೂರು: ಪ್ರತಿಷ್ಠೆಯ ಪ್ರಶ್ನೆಯಾಗಿರುವ ಉಪಚುನಾವಣೆಯ ಮೂರು ಕ್ಷೇತ್ರಗಳ ಪೈಕಿ ಮೂರರಲ್ಲೂ ಗೆಲ್ಲಬೇಕು ಎಂದು ರಾಜ್ಯ ಕಾಂಗ್ರೆಸ್ ನಾಯಕರಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟ ಸೂಚನೆ ನೀಡಿದ್ದಾರೆ.

ಭಾನುವಾರ ನಡೆದ ಆನ್‌ಲೈನ್ ಸಭೆಯಲ್ಲಿ ದೆಹಲಿಯಿಂದ ಮಾತನಾಡಿದ ಸುರ್ಜೇವಾಲ, ಉಪಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿದಂತೆ ರಾಜ್ಯ ನಾಯಕರೊಂದಿಗೆ ಚರ್ಚಿಸಿದರು. ಕಾಂಗ್ರೆಸ್ ಸರಕಾರ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಚುನಾವಣೆಗೆ ಹೋಗಬೇಕು. ಮುಂಬರುವ ದಿನಗಳಲ್ಲಿ ಪ್ರತಿಪಕ್ಷಗಳಿಂದ ಎದುರಾಗಬಹುದಾದ ಆರೋಪಗಳಿಗೆ ಸಮರ್ಥವಾಗಿ ಉತ್ತರಿಸಬೇಕು ಎಂದು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆನ್‌ಲೈನ್ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು, ಸಂಸದರು, ಕೆಪಿಸಿಸಿ ಪದಾಧಿಕಾರಿಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

ಬಂಡಾಯ ಶಮನಗೊಳಿಸಿ: ಮೂರೂ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಬಂಡಾಯ ಕಾಣಿಸಿಕೊಂಡಿದೆ. ಇದನ್ನು ಆರಂಭಿಕ ಹಂತದಲ್ಲಿಯೇ ಬಗೆಹರಿಸುವ ಕೆಲಸವನ್ನು ನಾಯಕರು ಮಾಡಬೇಕು. ಸ್ಥಳೀಯ ಮಟ್ಟದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನೂ ಒಗ್ಗೂಡಿಸಿ ಚುನಾವಣಾ ಪ್ರಚಾರ ನಡೆಸಬೇಕು. ರಾಜ್ಯದಲ್ಲಿ ನಮ್ಮದೇ ಸರಕಾರವಿರುವುದರಿಂದ ಮೂರೂ ಕ್ಷೇತ್ರಗಳನ್ನು ಗೆಲ್ಲಬೇಕು. ಇಲ್ಲದಿದ್ದರೆ ಕೆಟ್ಟ ಸಂದೇಶ ರವಾನೆಯಾಗುತ್ತದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನರಿಗೆ ಭರವಸೆ ನೀಡಿದ್ದ ಪಂಚ ಗ್ಯಾರಂಟಿಗಳನ್ನು ನಮ್ಮ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಈಡೇರಿಸಿದೆ. ಇದರೊಂದಿಗೆ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೂ, ಪ್ರತಿಪಕ್ಷ ನಾಯಕರು ಸರಕಾರದ ಹಾಗೂ ಪಕ್ಷದ ವಿರುದ್ಧ ಸುಳ್ಳು ಆರೋಪ ಮಾಡುವ ಸಾಧ್ಯತೆಯಿದೆ. ಈ ಎಲ್ಲ ಆರೋಪಗಳಿಗೂ ನಾಯಕರು ಸಮರ್ಥವಾಗಿ ಉತ್ತರಿಸಬೇಕು ಎಂದು ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸುರ್ಜೇವಾಲ ಸೂಚನೆಗಳೇನು?

- ಮೂರೂ ಕ್ಷೇತ್ರಗಳನ್ನು ಗಂಭೀರವಾಗಿ ಪರಿಗಣಿಸಿ, ಗೆಲುವಿಗೆ ಎಲ್ಲರೂ ಶ್ರಮಿಸಬೇಕು
- ಸ್ಥಳೀಯ ಮಟ್ಟದಲ್ಲಿ ಕಾರ್ಯಕರ್ತರನ್ನು ವಿಶ್ವಾಸಕ್ಕೆ ಪಡೆಯಲು ಕೆಲಸ ಮಾಡಿ
- ಯಾವುದೇ ಅಸಮಾಧಾನವಿದ್ದರೂ ಪಕ್ಷದ ವೇದಿಕೆಯಲ್ಲಿಯೇ ಬಗೆಹರಿಸಿಕೊಳ್ಳಿ
- ನಮ್ಮ ಸರಕಾರದ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ
- ಪ್ರತಿಪಕ್ಷಗಳ ಆರೋಪಗಳಿಗೆ ಎಲ್ಲ ನಾಯಕರು ಸಮರ್ಥವಾಗಿ ಉತ್ತರಿಸಿ

ಸಚಿವರ ಗೈರು; ಸುರ್ಜೇವಾಲ ಗರಂ

ಉಪ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕರೆದಿದ್ದ ಜೂಮ್ ಮೀಟಿಂಗ್‌ಗೆ ಹಲವು ಸಚಿವರು ಗೈರಾಗಿದ್ದರು. ಇದನ್ನು ಗಮನಿಸಿದ ಸುರ್ಜೇವಾಲ ಅವರು, ಪಕ್ಷದ ಸಭೆಗಿಂತ ಪ್ರಮುಖವಾದ ಕೆಲಸವೇನಿರುತ್ತದೆ? ಎಂದು ಅಸಮಾಧಾನ ಹೊರಹಾಕಿದ್ದಾರೆ. ಆನ್‌ಲೈನ್ ಮೀಟಿಂಗ್‌ನಲ್ಲಿ ಎಲ್ಲ ಸಚಿವರು, ಶಾಸಕರು, ಸಂಸದರು ಭಾಗವಹಿಸಬೇಕು ಎನ್ನುವ ಸೂಚನೆ ನೀಡಲಾಗಿತ್ತು. ಆದರೆ ಈ ಸಭೆಯಲ್ಲಿ ಆರೇಳು ಸಚಿವರು ಮಾತ್ರ ಭಾಗವಹಿಸಿದ್ದರು. ಇನ್ನುಳಿದ ಸಚಿವರು ವಿವಿಧ ಕಾರಣ ನೀಡಿ ಗೈರಾಗಿದ್ದರು. ಇದಕ್ಕೆ ಅಸಮಾಧಾನಗೊಂಡ ಸುರ್ಜೇವಾಲ, 'ಆಫ್‌ಲೈನ್ ಮೀಟಿಂಗ್‌ಗೆ ಗೈರಾಗುವುದರಲ್ಲಿ ಅರ್ಥವಿದೆ. ಆನ್‌ಲೈನ್ ಮೂಲಕ ಭಾಗವಹಿಸುವ ಸಭೆಗಳಿಗೂ ಸಚಿವರು ಬಾರದಿದ್ದರೆ ಹೇಗೆ? ಪಕ್ಷದ ಸಂಘಟನೆಯನ್ನು ಸಚಿವರು ಗಂಭೀರವಾಗಿ ಪರಿಗಣಿಸಿಲ್ಲ ಎನ್ನುವ ಅನುಮಾನ ಮೂಡುತ್ತದೆ ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಸಿಎಂ ಸಿದ್ದರಾಮಯ್ಯ ಅವರು, ಇನ್ನೊಮ್ಮೆ ಈ ರೀತಿಯಾಗದಂತೆ ಎಚ್ಚರವಹಿಸುವುದಾಗಿ ಸ್ಪಷ್ಟಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಉಪಚುನಾವಣೆ ಹಿನ್ನೆಲೆಯಲ್ಲಿ ಶಾಸಕರು, ಸಂಸದರಿಗೆ ಜವಾಬ್ದಾರಿ ನೀಡಲಾಗಿದೆ. ಪ್ರತಿ ಹೋಬಳಿಗೆ ಒಬ್ಬರಂತೆ ಸಚಿವರು, ಗ್ರಾಮ ಪಂಚಾಯತಿಗೆ ಶಾಸಕರು, ಸಂಸದರು ಹೋಗಿ ಮತಬೇಟೆ ನಡೆಸುವಂತೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಒಗ್ಗಟ್ಟಿನ ಪಣತೊಡಬೇಕು.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬಸವರಾಜ ಉಳ್ಳಾಗಡ್ಡಿ

ವಿಜಯಪುರ: ವಿಜಯಪುರದಲ್ಲಿ ವಾರದ ಹಿಂದೆ ನಡೆದ 'ಡಿಜಿಟಲ್ ಅರೆಸ್ಟ್' ಎಂಬ ಸೈಬರ್ ಅಪರಾಧ ಪ್ರಕರಣದ ಕುರಿತು ಪ್ರಧಾನಿ ನರೇಂದ್ರ ಮೋದಿ ಮನ್ ಕೀ ಬಾತ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

ಭಾನುವಾರ ಆಕಾಶವಾಣಿಯಲ್ಲಿ ಪ್ರಸಾರವಾದ 115ನೇ ಮನ್ ಕೀ ಬಾತ್‌ನಲ್ಲಿ ಡಿಜಿಟಲ್ ಅರೆಸ್ಟ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಧಾನಿ ಮೋದಿ ಅವರು ವಿಜಯಪುರದಲ್ಲಿ ನಡೆದಿದ್ದ ಸೈಬರ್ ವಂಚನೆ ಪ್ರಕರಣವನ್ನು ಉದಾಹರಣೆಯಾಗಿ ನೀಡುವ ಮೂಲಕ ಇಡೀ ದೇಶದ ಗಮನ ಸೆಳೆದಿದ್ದಾರೆ.

'ಸೈಬರ್ ಲೋಕದ ವಂಚಕನೊಬ್ಬ ಮುಂಬೈ ಪೊಲೀಸರ ಹೆಸರಿನಲ್ಲಿ ಇತ್ತೀಚೆಗೆ ವಿಜಯಪುರದ ಸಂತೋಷ ಚೌಧರಿ ಎಂಬುವವರಿಗೆ ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಲು ಯತ್ನಿಸಿದ್ದನು. ಆದರೆ, ಚೌಧರಿ ಅವರಿಗೆ ಈ ಬಗ್ಗೆ ಮೊದಲೇ ಅರಿವಿದ್ದ ಕಾರಣ ಮೋಸ ಹೋಗಿರಲಿಲ್ಲ. ದೇಶದಲ್ಲಿ ಡಿಜಿಟಲ್ ಅರೆಸ್ಟ್ ಎಂಬ ಕಾನೂನೇ ಇಲ್ಲ. ಸೈಬರ್ ಲೋಕದ ವಂಚಕರು ಮಾಡುವ ಅಪರಾಧ ಇದು. ಈ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು. ಆನ್‌ಲೈನ್ ಮೂಲಕ ನಡೆಯುತ್ತಿರುವ ವಂಚನೆಗಳ ಬಗ್ಗೆ ಜನರು ಜಾಗೃತಿ ವಹಿಸಬೇಕು' ಎಂದು ಸಲಹೆ ನೀಡಿದರು. ಸಿಬಿಐ, ಪೊಲೀಸ್, ಇ.ಡಿ, ಆರ್‌ಬಿಐ ಅಧಿಕಾರಿಗಳ ಹೆಸರಿನಲ್ಲಿ ವಂಚಕರು ಫೋನ್, ವಿಡಿಯೋ ಕಾಲ್ ಮಾಡುತ್ತಾರೆ. ವೈಯಕ್ತಿಕ ಮಾಹಿತಿ ಸಂಗ್ರಹಿಸಿರುತ್ತಾರೆ. ನಿಮ್ಮ ಮೇಲೆ ದೂರು ದಾಖಲಿಸುತ್ತೇವೆ, ಬಂಧಿಸುತ್ತೇವೆ ಎಂದು ಬೆದರಿಕೆ ಹಾಕಿ, ವಂಚಿಸುತ್ತಾರೆ. ಈ ಬಗ್ಗೆ ಹುಷಾರಾಗಿರಬೇಕು ಎಂದು ಮೋದಿ ಸಲಹೆ ನೀಡಿದರು.

ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಪರ್ಕಿಸಲು ಅಥವಾ ಅದರ ಪೋರ್ಟಲ್‌ಗೆ ಸಂಪರ್ಕ ಸಾಧಿಸಲು 1930 ಸಂಖ್ಯೆಗೆ ಕರೆ ಮಾಡಿ, ಅಪರಾಧ ಘಟನೆ ಬಗ್ಗೆ ಪೊಲೀಸರಿಗೆ ತಿಳಿಸಿ. ವಂಚಕರ ಕರೆ ಬಂದಾಗ ಸಂಭಾಷಣೆ ರೆಕಾರ್ಡ್ ಮಾಡಿ ಸ್ಕ್ರೀನ್ ಶಾಟ್‌ಗಳನ್ನು ಸಂಗ್ರಹಿಸಿಟ್ಟುಕೊಂಡು ಪೊಲೀಸರಿಗೆ ದೂರು ನೀಡಿ.
- ನರೇಂದ್ರ ಮೋದಿ ಪ್ರಧಾನಿ

ಸಂತೋಷ ರೀತಿ ಬೇರೆಯವರೂ ಎಚ್ಚರವಿರಬೇಕು

ಈ ಕುರಿತು ಪ್ರತಿಕ್ರಿಯಿಸಿದ ಪ್ರಭಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ದೇಸಾಯಿ, ಪ್ರಧಾನಿ ಮೋದಿ ಅವರು ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸಲು ವಿಜಯಪುರ ನಗರದ ಸಂತೋಷ ಚೌಧರಿ ಅವರ ಪ್ರಕರಣವನ್ನು ಪ್ರಸ್ತಾಪಿಸಿರುವುದು ಕೇಳಿ ಖುಷಿಯಾಗಿದೆ. ಎಂಟು ದಿನಗಳ ಹಿಂದೆ ಸಂತೋಷ ಚೌಧರಿ ಎಂಬವವರಿಗೆ ಮುಂಬೈ ಪೊಲೀಸ್ ಹೆಸರಲ್ಲಿ ಆನ್‌ಲೈನ್ ಮೂಲಕ ವಿಚಾರಣೆ ಮಾಡುತ್ತೇವೆ ಎಂದು ವಂಚಕರು ಹೆದರಿಸಿದ್ದಾರೆ. ಈ ಬಗ್ಗೆ ಮೊದಲೇ ತಿಳಿವಳಿಕೆ ಇದ್ದ ಸಂತೋಷ್ ಅವರು ಮೋಸ ಹೋಗದೇ ತಕ್ಷಣ ಸ್ಕ್ರೀನ್ ರೆಕಾರ್ಡ್ ಮಾಡಿಕೊಂಡು, ವಿಡಿಯೋ ಕಾಲ್ ಡಿಸ್ ಕನೆಕ್ಟ್ ಆಗಿದ್ದಾರೆ. ಸಂತೋಷ ಅವರಂತೆ ಜನ ಸಾಮಾನ್ಯರು ಎಚ್ಚರ ಇರಬೇಕು ಎಂಬುದನ್ನು ಪ್ರಧಾನಿ ತಿಳಿಸಿದ್ದಾರೆ ಎಂದು ಹೇಳಿದರು.

ಮತ್ತೆ ಬಾಂಬ್ ಬೆದರಿಕೆ

ದೆಹಲಿ: ಭಾರತದ ವಿವಿಧ ವಿಮಾನಯಾನ ಸಂಸ್ಥೆಗಳಿಗೆ ಸೇರಿದ 50ಕ್ಕೂ ವಿಮಾನಗಳಿಗೆ ಭಾನುವಾರ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಈ ಮೂಲಕ 14 ದಿನಗಳಲ್ಲಿ ಒಟ್ಟಾರೆ 350ಕ್ಕೂ ಹೆಚ್ಚು ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆಗಳು ಬಂದಂತಾಗಿವೆ. ಈ ಮಧ್ಯೆ, ಹುಸಿ ಬಾಂಬ್ ಕರೆಗಳ ಪಿಡುಗಿಗೆ ಕಡಿವಾಣ ಹಾಕಲು ಶಾಸನಾತ್ಮಕ ಕ್ರಮ ಜರುಗಿಸುವ ಕುರಿತು ಕೇಂದ್ರ ವಿಮಾನಯಾನ ಸಚಿವಾಲಯ ಚಿಂತನೆ ನಡೆಸುತ್ತಿದೆ.

ಕಾಂಗ್ರೆಸ್ ಅಧಿವೇಶನಕ್ಕೆ ಶತಮಾನೋತ್ಸವ; ಅದ್ದೂರಿ ಕಾರ್ಯಕ್ರಮ

ಬೆಂಗಳೂರು: ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಹಿನ್ನೆಲೆಯಲ್ಲಿ ಅದ್ದೂರಿ ಕಾರ್ಯಕ್ರಮ ಆಯೋಜಿಸಲು ಕಾಂಗ್ರೆಸ್ ತಯಾರಿ ನಡೆಸಿದ್ದು, ಭಾನುವಾರ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಮಹತ್ವದ ಸಭೆ ನಡೆಯಿತು.

ಗೃಹಕಚೇರಿ ಕೃಷ್ಣಾದಲ್ಲಿ ನಡೆದ ವಿಡಿಯೊ ಸಂವಾದದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಿಜೆಪಿಯು ಮಹಾತ್ಮ ಗಾಂಧೀಜಿಯವರ ವರ್ಚಸ್ಸಿಗೆ ಧಕ್ಕೆ ತರಲು ಯತ್ನಿಸುತ್ತಿದೆ. ಗಾಂಧೀಜಿ ಹಾಗೂ ಕಾಂಗ್ರೆಸ್‌ನ ಸೈದ್ಧಾಂತಿಕ ನಿಲುವುಗಳಿಗೆ ವಿರುದ್ಧವಾಗಿ ಅಪಪ್ರಚಾರ ನಡೆಸುತ್ತಿದೆ. ಸಂವಿಧಾನೇತರ ಶಕ್ತಿಗಳ ಆರ್ಭಟ ಮತ್ತು ಹಸ್ತಕ್ಷೇಪ ಎಲ್ಲ ಹಂತಗಳಲ್ಲೂ ಕಂಡುಬರುತ್ತಿದೆ. ಇದಕ್ಕೆ ಪ್ರತ್ಯುತ್ತರ ನೀಡುವ ಮೂಲಕ ಕಾಂಗ್ರೆಸ್ ತನ್ನ ಸೈದ್ಧಾಂತಿಕ ಬದ್ಧತೆಯನ್ನು ಮರು ಸ್ಥಾಪಿಸಲು ಬೆಳಗಾವಿ ಅಧಿವೇಶನದ ಶತಮಾನೋತ್ಸವ ವೇದಿಕೆಯಾಗಬೇಕು ಎಂದು ಸೂಚಿಸಿದ್ದಾರೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಪಕ್ಷದ ಮುಖಂಡರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ಆಯೋಜನೆ ಮಾಡಬೇಕು. ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನೆಲ್ಲ ಬದಿಗೊತ್ತಿ ಪಕ್ಷದ ಕಚೇರಿಯಲ್ಲಿ ಸಭೆಗಳನ್ನು ನಡೆಸಬೇಕು ಎಂದು ಸಲಹೆ ನೀಡಿದರು.

ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ನಡೆಯುವ ಪಥಸಂಚಲನ ಹಾಗೂ ವೇದಿಕೆ ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬ ಶಾಸಕರು, ಸಂಸದರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕಾರ್ಯಕ್ರಮಕ್ಕೆ ಬೆನ್ನೆಲುಬಾಗಿ ಸಹಕರಿಸಬೇಕು.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಇಂದು ದರ್ಶನ್ ಜಾಮೀನು ಭವಿಷ್ಯ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ಬಳ್ಳಾರಿ ಜೈಲಿನಲ್ಲಿ ರುವ ನಟ ದರ್ಶನ್ ಜಾಮೀನು ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ಸೋಮವಾರ ನಡೆಯಲಿದೆ.

ನಟ ದರ್ಶನ್‌ರ ಮೆಡಿಕಲ್ ರಿಪೋರ್ಟ್ ಸಲ್ಲಿಕೆ ಮಾಡುವಂತೆ ಬಳ್ಳಾರಿ ಜೈಲಾಧಿಕಾರಿಗಳಿಗೆ ಹೈಕೋರ್ಟ್ ಸೂಚಿಸಿತ್ತು. ಹೀಗಾಗಿ ಜೈಲಾಧಿಕಾರಿಗಳು ಹೈಕೋರ್ಟ್‌ಗೆ ವೈದ್ಯಕೀಯ ವರದಿ ಸಲ್ಲಿಕೆ ಮಾಡಲಿದ್ದಾರೆ. ವೈದ್ಯಾಧಿಕಾರಿಗಳು ಈಗಾಗಲೇ ನಟ ದರ್ಶನ್‌ಗೆ ಎಂಆರ್‌ಐ ಸ್ಕ್ಯಾನ್ ಮಾಡಿದ್ದಾರೆ. ಸ್ಕ್ಯಾನಿಂಗ್ ವೇಳೆ ಬೆನ್ನುನೋವು ಇರುವುದರ ಬಗ್ಗೆ ಉಲ್ಲೇಖಿಸಿದ್ದಾರೆ. ಮತ್ತೊಂದು ಕಡೆ ವೈದ್ಯಕೀಯ ವರದಿ ಇಟ್ಟುಕೊಂಡೇ ನಟ ದರ್ಶನ್ ಪರ ವಕೀಲರು ಜಾಮೀನು ಕೋರಿ ವಾದ ಮಂಡಿಸಲಿದ್ದಾರೆ. ದರ್ಶನ್ ಪರವಾಗಿ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಲಿದ್ದಾರೆ. ಮತ್ತೊಂದು ಕಡೆ ಜಾಮೀನು ಕೊಡದಂತೆ ಎಸ್‌ಪಿಪಿ ಪ್ರಸನ್ನ ಕುಮಾರ್ ಆಕ್ಷೇಪಣೆಗೆ ತಯಾರಿ ಮಾಡಿಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಖಾಸಗಿ ವಿಡಿಯೊ ಬೆದರಿಕೆ ಪತಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಪತ್ನಿ ಮತ್ತು ಆಕೆಯ ಮಾಜಿ ಪ್ರಿಯಕರನ ಖಾಸಗಿ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವುದಾಗಿ ಪತಿಯೇ ಬೆದರಿಸುತ್ತಿರುವ ವಿಚಿತ್ರ ಪ್ರಕರಣ ಬೆಳಕಿಗೆ ಬಂದಿದೆ. 26 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಅನ್ವಯ ಆಕೆಯ ಪತಿ ಪ್ರಸನ್ನ ಎಂಬವರ ವಿರುದ್ಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೂರಿನ ವಿವರ: ಕುಟುಂಬ ನಿರ್ವಹಣೆಗೆ ಸಹಕಾರ ನೀಡದೇ ಕ್ರಿಕೆಟ್ ಬೆಟ್ಟಿಂಗ್ ಆಡುವುದು, ಪಾನಮತ್ತನಾಗಿ ಮನೆಗೆ ಬಂದು ದೈಹಿಕ ಹಿಂಸೆ ನೀಡುತ್ತಿದ್ದ ಪತಿಯ ಕಿರುಕುಳಕ್ಕೆ ಬೇಸತ್ತು ದೂರುದಾರ ಮಹಿಳೆ ಬೇರೆಯಾಗಿದ್ದರು. ಅದೇ ಸಂದರ್ಭದಲ್ಲಿ ದೂರುದಾರ ಮಹಿಳೆಗೆ ಮಾಜಿ ಪ್ರಿಯಕರನೊಂದಿಗೆ ಸಲುಗೆ ಬೆಳೆದಿದೆ. ಇಬ್ಬರೂ ಸಹ ತಮ್ಮ ಖಾಸಗಿ ಕ್ಷಣಗಳನ್ನು ಫೋಟೋ, ವಿಡಿಯೊ ಮಾಡಿಕೊಂಡಿದ್ದರು. ಅವುಗಳನ್ನು ಪತ್ನಿಯ ಮೊಬೈಲ್ ಫೋನ್‌ನಿಂದ ತನ್ನ ಫೋನ್‌ಗೆ ಕಳುಹಿಸಿಕೊಂಡಿರುವ ಆರೋಪಿ ಪತಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸುವುದಾಗಿ ಕರೆಯಲ್ಲಿ ನಿಂದಿಸುತ್ತಿದ್ದಾನೆ. ಮತ್ತು ಆ ವಿಡಿಯೊಗಳನ್ನು ಆತನ ಹಾಗೂ ನನ್ನ ಸ್ನೇಹಿತರಿಗೆ ಕಳುಹಿಸಿದ್ದಾನೆ. ನನಗೆ ಮತ್ತು ನನ್ನ ಮಾಜಿ ಪ್ರಿಯಕರನಿಗೆ ಜೀವ ಬೆದರಿಕೆ ಯೊಡ್ಡುತ್ತಿದ್ದಾನೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಬ್ಯಾಡರಹಳ್ಳಿ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

ಕನ್ನಡ ಬರಲ್ಲ ಅಂದಿದ್ದಕ್ಕೆ ಕ್ಯಾಶಿಯರ್ ಮೇಲೆ ಹಲ್ಲೆ

ಬೆಂಗಳೂರು: ಕನ್ನಡ ಬರಲ್ಲ ಅಂದಿದ್ದಕ್ಕೆ ಕ್ಯಾಶಿಯರ್ ಮೇಲೆ ಹಲ್ಲೆ ನಡೆಸಿದ ಘಟನೆ ವಿಜಯನಗರದ ಹಂಪಿನಗರದಲ್ಲಿ ನಡೆದಿದೆ. ಮದ್ಯ ಸೇವಿಸಿದ ವ್ಯಕ್ತಿಯಿಂದ ಅಂಗಡಿ ವ್ಯಾಪಾರಿ ಮೇಲೆ ಹಲ್ಲೆ ನಡೆದಿದ್ದಾನೆ. ಶನಿವಾರ ಮಧ್ಯಾಹ್ನ 3:30ಕ್ಕೆ ಈ ಘಟನೆ ನಡೆದಿದ್ದು ಹಲ್ಲೆ ನಡೆಸುತ್ತಿರುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅಂಗಡಿಗೆ ಬಂದವ ಮೊದಲೇ ಮದ್ಯ ಸೇವಿಸಿದ್ದ ವ್ಯಕ್ತಿ ವಸ್ತು ಖರೀದಿಸಿದ ಬಳಿಕ ಹಣ ಪಾವತಿಸಿರಲಿಲ್ಲ. ಈ ವೇಳೆ ಹಣ ಪಾವತಿಸುವಂತೆ ಕ್ಯಾಶಿಯರ್ ಹೇಳಿದಾಗ ಕನ್ನಡದಲ್ಲಿ ಮಾತನಾಡು ಎಂದಿದ್ದಾನೆ. ಈ ವೇಳೆ ಕನ್ನಡ ಬರುವುದಿಲ್ಲ ಎಂದಿದ್ದಕ್ಕೆ ಅತನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕ್ಯಾಶಿಯರ್ ಮೇಲೆ ಹಲ್ಲೆ ಮಾಡಿ ಕನ್ನಡ ಬಾರದೇ ಇದ್ದರೆ ಕಲಿ ಎಂದು ಬೆದರಿಕೆ ಹಾಕಿದ್ದಾನೆ.

ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 3ಎಗೆ ಸೇರಿಸಿದ್ದು ಸರಿಯಲ್ಲ | ಹಿಂದುಳಿದ ವರ್ಗಗಳ ಆಯೋಗದ ವರದಿ ಪರಿಶೀಲಿಸಿ ಕ್ರಮ

ಹಳ್ಳಿಕಾರ ಸಮುದಾಯಕ್ಕೆ ಮೀಸಲಿನ ಬಗ್ಗೆ ಕ್ರಮ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 1 ಕ್ಕೆ ಸೇರಿಸಬೇಕು ಎನ್ನುವ ಬೇಡಿಕೆ ಬಗ್ಗೆ ಶಾಶ್ವತ ಹಿಂದುಳಿದ ಆಯೋಗದ ವರದಿ ಪಡೆದು ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯ ಹಳ್ಳಿಕಾರರ ಸಂಘದ ವತಿಯಿಂದ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಆಯೋಜಿಸಿದ್ದ ಹಳ್ಳಿಕಾರ ಸಮುದಾಯದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ ತಾರತಮ್ಯದ ವ್ಯವಸ್ಥೆಯಲ್ಲಿ ಶಿಕ್ಷಣ ಇಲ್ಲದಿದ್ದರೆ ಸಮಾಜದ ಮುಖ್ಯ ವಾಹಿನಿಯಲ್ಲಿ ಸಮರ್ಥರಾಗಿರುವುದು ಕಷ್ಟ. ಹಳ್ಳಿಕಾರ ಸಮುದಾಯವನ್ನು ಪ್ರವರ್ಗ 3'ಎ'ದಿಂದ ಪ್ರವರ್ಗ 1ಕ್ಕೆ ಸೇರಿಸಬೇಕು ಎನ್ನುವ ಬೇಡಿಕೆ ಇದ್ದು, ಸಮಾಜದಲ್ಲಿ ಜಾತಿಯ ಆರ್ಥಿಕ, ಸಾಮಾಜಿಕ ಸ್ಥಿತಿ ಗತಿ ತಿಳಿಯಲು ಜಾತಿ ಸಮೀಕ್ಷಾ ವರದಿ ಮುಖ್ಯ ವಾಗಿದ್ದು, ಜಾತಿಗಣತಿ ವರದಿ ಈಗಾಗಲೇ ಸ್ವೀಕರಿಸಲಾಗಿದೆ ಎಂದರು. ಮೋದಿ ಸರಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10 ಮೀಸಲು ನೀಡಿದ್ದು, ಈ ವ್ಯಾಪ್ತಿಯೊಳಗೆ ಹಳ್ಳಿಕಾರ ಸಮುದಾಯ ಬರುತ್ತದೆಯೇ ಎನ್ನುವುದು ಪರಿಶೀಲಿಸ ಬೇಕಿದೆ. ಈ ಸಮುದಾಯವನ್ನು ಪ್ರವರ್ಗ 3ಎಗೆ ಸೇರಿಸಿರುವುದು ಸರಿಯಲ್ಲ, ಆದ್ದರಿಂದ ಶಾಶ್ವತ ಹಿಂದುಳಿದ ಆಯೋಗಕ್ಕೆ ಬೇಡಿಕೆ ಕಳುಹಿಸಿ ಅಧ್ಯಯನ ಮಾಡಿಸಿ ವರದಿ ಪಡೆಯಲಾಗುವುದು. ಆ ಬಳಿಕ ಸಮುದಾಯಕ್ಕೆ ನ್ಯಾಯಯುತವಾಗಿ ಏನು ಸಲ್ಲಬೇಕು ಎನ್ನುವುದನ್ನು ಪರಿಶೀಲಿಸಲಾ ಗುವುದು ಎಂದರು.

ಪೂರ್ಣಿಮಾ ಪ್ಯಾಲೇಸ್ ನಲ್ಲಿ ಆಯೋಜನೆಗೊಂಡಿದ್ದ ಹಳ್ಳಿಕಾರ ಸಮುದಾಯದ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.ಡಿಸಿಎಂ ಡಿ.ಕೆ.ಶಿವಕುಮಾರ್, ಹಳ್ಳಿಕಾರರ ಸಂಘದ ಉಪಾಧ್ಯಕ್ಷ ಕೆ.ಎಂ.ನಾಗರಾಜು, ಮಾಜಿ ಸಿಎಂ ವೀರಪ್ಪಮೋಯ್ಲಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ ಇತರರು ಉಪಸ್ಥಿತರಿದ್ದರು.

ಮಾಜಿ ಸಿಎಂ ವೀರಪ್ಪ ಮೊಯಿಲಿ ನಾಗರಾಜು ಅವರನ್ನು ಎಂಎಲ್‌ಸಿ ಸ್ಥಾನಕ್ಕೆ ಸೂಚಿಸಿದ್ದರು. ಆದರೆ ಈ ಸ್ಥಾನ ನನಗೆ ಬೇಡವೆಂದು ದಯಾನಂದ ಸಾಗರ್ ಅವರ ಮಗ ಪ್ರೇಮಚಂದ್ರ ಸಾಗರ್‌ಗೆ ತ್ಯಾಗ ಮಾಡಿದರು. ಸಿಕ್ಕ ಅಧಿಕಾರ ಬಿಟ್ಟು ಕೊಟ್ಟಂತಹ ಹೃದಯ ಶ್ರೀಮಂತಿಕೆಯ ವ್ಯಕ್ತಿ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹಳ್ಳಿಕಾರರಿಗೆ ಅಭಯ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನಾನು ಮತ್ತು ಸಿದ್ದರಾಮಯ್ಯ ಇಬ್ಬರೂ ಹಳ್ಳಿಕಾರ ಸಮಾಜದವರು. ನಮ್ಮ ಸರಕಾರ ಎಲ್ಲಾ ಬೇಡಿಕೆಗಳ ಬಗ್ಗೆ ಸೂಕ್ತ ಕಾಲದಲ್ಲಿ ಚರ್ಚಿಸಿ, ಶೀಘ್ರ, ಈಡೇರಿಸಲಾಗುವುದು ಎಂದು ತಿಳಿಸಿದ್ದಾರೆ. ಹಳ್ಳಿಕಾರರು ಎಲ್ಲಾ ಸಮುದಾಯಗಳ ಜತೆಗೆ ಸೌಹಾರ್ದ ನಡೆಸುತ್ತಾ ಬಂದಿದ್ದು, ಇಡೀ ಸರಕಾರವೇ ನಿಮ್ಮ ಜತೆಯಲ್ಲಿದೆ ಎಂದು ಭರವಸೆ ನೀಡಿದರು. 80 ವರ್ಷಗಳ ನಂತರ ಕೆ.ಎಂ. ನಾಗರಾಜು ಮುಖಂಡತ್ವದಲ್ಲಿ ಸಮಾವೇಶ ನಡೆಯುತ್ತಿದ್ದು, ಹಳ್ಳಿಕಾರ ಸಮುದಾಯಕ್ಕೆ 1,200 ವರ್ಷಗಳ ಇತಿಹಾಸವಿದೆ. ರಾಸುಗಳನ್ನು ಸಂರಕ್ಷಿಸುತ್ತಿರುವ ಸಮಾಜದ ಯಶಸ್ಸು ಹಾಗೂ ಏಳಿಗೆಗೆ ನಾವು ಕೈ ಜೋಡಿಸುವುದು ಖಂಡಿತ. ಜತೆಗೆ ಯಶಸ್ಸನ್ನು ಕಾಣಲು ಧರ್ಮರಾಯನ ಧರ್ಮತ್ವ, ಕರ್ಣನ ದಾನ, ಭೀಮನ ಬಲ, ವಿದುರನ ನೀತಿ, ಅರ್ಜುನನ ಗುರಿ ಕೊನೆಯದಾಗಿ ಕೃಷ್ಣನ ತಂತ್ರ ಇರಬೇಕು ಎಂದರು.

ಅಕ್ಕನ ಮಗುವನ್ನೇ ಅಪಹರಿಸಿದ ತಮ್ಮ

ಬೆಂಗಳೂರು: ಅಕ್ಕನ ಅಕ್ರಮ ಸಂಬಂಧಕ್ಕೆ ಬೇಸತ್ತ ತಮ್ಮನೊಬ್ಬ ಅಕ್ಕನ ಮಗುವನ್ನೇ ಅಪಹರಿಸಿದ ಘಟನೆ ಬೆಳಕಿಗೆ ಬಂದಿದೆ. ಬೆಂಗಳೂರಿನಿಂದ ಹೊರಟಿದ್ದ ಅಪ್ರಾಪ್ತ ವಯಸ್ಸಿನ ಬಾಲಕನನ್ನು ದಾವಣಗೆರೆಯಲ್ಲಿ ಬಂಧಿಸಲಾಗಿದೆ. 17 ವರ್ಷದ ತರುಣ್ ಎಂಬಾತ ಗೋಯಲ್ (3) ಎಂಬ ಮಗುವನ್ನು ಅಪಹರಿಸಿದ್ದ. ನಿಜಾಮುದ್ದೀನ್ ಎಕ್ಸ್ ಪ್ರೆಸ್ ರೈಲಿನ ಮೂಲಕ ದಾವಣಗೆರೆಗೆ ಬಂದಾಗ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನಲ್ಲಿ ತರುಣ್‌ನ ಅಕ್ಕ ಅಕ್ರಮ ಸಂಬಂಧವಿಟ್ಟುಕೊಂಡು ಬೇರೆ ವ್ಯಕ್ತಿ ಜತೆ ವಾಸಿಸುತ್ತಿದ್ದಳು. ಈ ವೇಳೆ ಅಕ್ರಮ ಸಂಬಂಧ ಬಿಡಲು ಒಪ್ಪದಿದ್ದಕ್ಕೆ ಅಕ್ಕನ ಮಗುವನ್ನು ಅಪಹರಿಸಿಕೊಂಡು ಬರುವಾಗ ದಾವಣಗೆರೆ ಆರ್‌ಪಿಎಫ್ ವಿಚಾರಣೆ ನಡೆಸಿ ವಶಕ್ಕೆ ಪಡೆದುಕೊಂಡು, ಬಳಿಕ ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ರೈಲು ಬರುತ್ತಿದ್ದಂತೆ ತಪಾಸಣೆ ಮಾಡಿ ವಿಚಾರಿಸಿದಾಗ ಮಗು ಅಪಹರಿಸಿಕೊಂಡು ಹೋಗುತ್ತಿರುವುದು ಬೆಳಕಿಗೆ ಬಂದಿದೆ. ರೈಲ್ವೆ ಇನ್‌ಸ್ಪೆಕ್ಟರ್ ಎಕೆ ರೆಡ್ಡಿ, ಸಿಬ್ಬಂದಿಗಳಾದ ಶಿವಾನಂದ, ಅಮಿತ್, ಬಿಂದು ಮಾಧುರಿ ಅವರು ಇಬ್ಬರನ್ನು ರಕ್ಷಿಸಿದ್ದಾರೆ.

ಡಾ.ಆನಂದ ಸಂಕೇಶ್ವರಗೆ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ

ಬೆಂಗಳೂರು: ಜೆಕೆ ಟೈರ್ ಕಂಪನಿ 20 ವರ್ಷಗಳ ಸಂಭ್ರಮಾಚರಣೆ ನಿಮಿತ್ತ ಸಿಂಗಾಪುರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ ಸಂಕೇಶ್ವರ ಅವರಿಗೆ ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಆಧುನಿಕ ಲಾಜಿಸ್ಟಿಕ್ಸ್ ನಿರ್ವಹಣೆಯಲ್ಲಿ ಪರಿವರ್ತನೆಯ ಪಾತ್ರ ನಿರ್ವಹಿಸಿದ ಸರಕು ಸಾಗಣೆ ಉದ್ಯಮದ ಅಗ್ರವ್ಯಕ್ತಿಯೆಂದು ಗುರುತಿಸಿ ಡಾ. ಆನಂದ ಸಂಕೇಶ್ವರ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಸಮ್ಮೇಳನದಲ್ಲಿ ದೇಶದ ಅಗ್ರ 100 ಫ್ಲೀಟ್ ಮಾಲೀಕರು, ಉದ್ಯಮದ ಪ್ರಮುಖರು, ಪಾಲುದಾರರು ಭಾಗವಹಿಸಿದ್ದರು.

ಸಂಕೇಶ್ವರ ಮಾರ್ಗದರ್ಶನ ಕಾರಣ

ಪ್ರಶಸ್ತಿ ಸ್ವೀಕರಿಸಿದ ಡಾ. ಆನಂದ ಸಂಕೇಶ್ವರ , ಲಾಜಿಸ್ಟಿಕ್ಸ್‌ನ ಯಶಸ್ಸಿಗೆ ತಮ್ಮ ತಂಡ ಹಾಗೂ ತಂದೆ ಡಾ. ವಿಜಯ ಸಂಕೇಶ್ವರರ ಮಾರ್ಗದರ್ಶನ ಕಾರಣವಾಗಿದೆ. ಜೆಕೆ ಟೈರ್ ಕಂಪನಿಯ ಪಾತ್ರ ಸೇರಿ ಅಸಂಖ್ಯಾತ ಪಾಲುದಾರರು ಮತ್ತು ಗ್ರಾಹಕರ ನಂಬಿಕೆಯನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಜೆಕೆ ಟೈರ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ ಮಾತನಾಡಿ, ಕಳೆದ ಎರಡು ದಶಕಗಳಲ್ಲಿ ಜೆಕೆ ಟೈರ್ ಭಾರತದ ಲಾಜಿಸ್ಟಿಕ್ಸ್ ವಲಯದ ಕಾರ್ಯಾಚರಣೆಯ ದಕ್ಷತೆ ಮತ್ತು ಸುರಕ್ಷತೆಯನ್ನು ಹೆಚ್ಚಿಸುವ ಬದ್ಧತೆಯೊಂದಿಗೆ ಟೈರ್ ತಂತ್ರಜ್ಞಾನ ಮತ್ತು ಫ್ಲೀಟ್ ನಿರ್ವಹಣೆಯಲ್ಲಿ ಪ್ರಗತಿಯನ್ನು ಸಾಧಿಸಿದೆ. ಇಂದು ಈ ಉದ್ಯಮವನ್ನು ಪರಿವರ್ತಿಸಲು ಸಹಾಯ ಮಾಡಿದ ವ್ಯಕ್ತಿಗಳ ಸಾಧನೆಗಳನ್ನು ಗುರುತಿಸಿ ಗೌರವಿಸುತ್ತಿದ್ದೇವೆ. ಅವರಲ್ಲಿ ಡಾ. ಆನಂದ ಸಂಕೇಶ್ವರ ಅಗ್ರಗಣ್ಯರು. ಲಾಜಿಸ್ಟಿಕ್ಸ್ ಕ್ಷೇತ್ರದಲ್ಲಿ ಅವರ ಕೊಡುಗೆ ಅನನ್ಯ ಎಂದರು.

ಜೆಕೆ ಟೈರ್ ಸಿಂಗಾಪುರದಲ್ಲಿ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ ಸಂಕೇಶ್ವರ ಅವರಿಗೆ ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿತು. ಜೆಕೆ ಟೈರ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ, ಪ್ರಮುಖರು ಇದ್ದರು.

ಎರಡು ಕಡೆ ದರೋಡೆ: ಮೊಬೈಲ್ ಅಪಹರಣ

ಬೆಂಗಳೂರು: ಕಳೆದ ರಾತ್ರಿ ನಗರದ ಎರಡು ಕಡೆ ದರೋಡೆಕೋರರು ಎರಡು ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದಾರೆ. ಕಾರಿನಲ್ಲಿ ಹೋಗುತ್ತಿದ್ದ ಯುವಕನನ್ನು ದ್ವಿಚಕ್ರ ವಾಹದಲ್ಲಿ ಹಿಂಬಾಲಿಸಿದ ಇಬ್ಬರು ದರೋಡೆಕೋರರು ಅಡ್ಡಗಟ್ಟಿ ಬೆದರಿಸಿ ಮೊಬೈಲ್ ಫೋನ್ ದೋಚಿದ ಘಟನೆ ರಾತ್ರಿ ಮಹದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಘಟನೆ ಸಂಬಂಧ ಪರಶುರಾಮ್ ಎಂಬುವವರು ಪೊಲೀಸರಿಗೆ ದೂರು ನೀಡಿದ್ದಾರೆ. ಕಳೆದ ರಾತ್ರಿ 9.30ರ ಸಂದರ್ಭದಲ್ಲಿ ಐಸಿರಿ ಗೋಸಾಲಾ ಬಳಿ ಪರಶುರಾಮ್ ಅವರು ತಮ್ಮ ಕಾರಿನಲ್ಲಿ ಹೋಗುತ್ತಿದ್ದಾಗ ಹೊಂಡಾ ಬೈಕ್‌ನಲ್ಲಿ ಇಬ್ಬರು ದರೋಡೆಕೋರರು ಹಿಂಬಾಲಿಸಿ ಅಡ್ಡಗಟ್ಟಿದ್ದಾರೆ. ನಂತರ ಪರಶುರಾಮ್ ಜತೆ ಜಗಳವಾಡಿ ಕಾರಿನಲ್ಲಿದ್ದ ಮೊಬೈಲ್ ಎಗರಿಸಿ ಪರಾರಿಯಾಗಿದ್ದಾರೆ. ಈ ಬಗ್ಗೆ ಮಹದೇವಪುರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಹೈಗ್ರೌಂಡ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಮತ್ತೊಂದು ಘಟನೆಯಲ್ಲಿ ತಿಮ್ಮಯ್ಯ ರಸ್ತೆಯಲ್ಲಿ ನಿತಿನ್ ಎಂಬುವವರು ನಡೆದು ಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಕಪ್ಪು ಬಣ್ಣದ ದ್ವಿಚಕ್ರ ವಾಹನದಲ್ಲಿ ಬಂದ ದರೋಡೆ ಕೋರರು ಏಕಾಏಕಿ ಅವರ ಕೈನಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಕಳೆದ ರಾತ್ರಿ 10.15ರಲ್ಲಿ ಈ ಘಟನೆ ನಡೆದಿದೆ.

Muthoot Finance

ಚಿನ್ನದ ಹರಾಜಿನ ಸೂಚನಾ ಪತ್ರ

GSTN - 29AABCT0343B1ZU

Registered Office: 2nd Floor, Muthoot Chambers, Banerji Road, Kochi-682 018, Kerala, India. CIN:L65910KL1997PLC011300, Ph:+91 484 2396478. 2394712, Fax:+91 484 2396506. mails@muthootgroup.com, www.muthootfinance.com

ಈ ಮೂಲಕ ಎಚ್ಚರಿಕೆ ಮಾಹಿತಿಯನ್ನು ನೀಡುತ್ತಿದ್ದು ನೀವು ನಿಮ್ಮ ಚಿನ್ನಾಭರಣವನ್ನು ಈ ಕೆಳಕಂಡ ಶಾಖೆಗಳಲ್ಲಿ ಗಿರಿವಿ ಇಟ್ಟಿದ್ದು, ಪುನರಾವರ್ತಿತ ಪ್ರಕಟಣೆಗಳನ್ನು ನೀಡಿದ್ದರೂ ಸಹ ಪಡೆದುಕೊಂಡ ಬಾಕಿ ಮೊತ್ತವನ್ನು ನೀಡಲು ವಿಫಲರಾಗಿದ್ದಿರಿ. ಆದ್ದರಿಂದ ಕಂಪನಿಯು ಸಂಬಂಧಪಟ್ಟ ಶಾಖೆಗಳಲ್ಲಿ ದಿನಾಂಕ 08.11.2024 ರಂದು ಬೆಳಿಗ್ಗೆ 10.00 ಗಂಟೆಗೆ ಹರಾಜು ಮಾಡಲು ನಿರ್ಧರಿಸಿರುತ್ತಾರೆ. ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದ ಹರಾಜು ನಡೆಯದಿದ್ದರೆ, ಹರಾಜುಗಾರರು ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಹಕ್ಕನ್ನು ಹೂಂದಿರುತ್ತಾರೆ ಹಾಗೂ ಯಾವುದೇ ಸೂಚನಾ ಪತ್ರ ನೀಡದೆ ಎರಡನೇ ಹರಾಜಿನ ದಿನಾಂಕದಂದು ಅಥವಾ ಅನಂತರದ ದಿನಾಂಕಗಳಂದು ಹರಾಜು ಪ್ರಕ್ರಿಯೆಯನ್ನು ಈ ಕೆಳಗೆ ನೀಡಿರುವ ವಿಳಾಸದಲ್ಲಿ ನಡೆಸಲಾಗುತ್ತಾದೆ. ಹಾರಾಜು ಹಾಕುವ ದಿನಾಂಕದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ,ಬದಲಾದ ದಿನಾಂಕವನ್ನು ಹರಾಜು ನಡೆಯುವ ಸ್ಥಳದಲ್ಲಿ, ಸೂಚಿಸಲಾಗುವುದು.

ಎರಡನೇ ಹರಾಜು ದಿನಾಂಕ : **14.11.2024,10:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ನಂ.651/69, 11ನೇ ಮುಖ್ಯ, ಜಯನಗರ 4ನೇ ಬ್ಲಾಕ್, ಬೆಂಗಳೂರು ,560011 (ಬೆಂಗಳೂರು ನಗರ ಜಿಲ್ಲೆ) (1577)

ಅನ್ನಸಂದ್ರಪಾಳ್ಯ ಎಕ್ಸ್ಟೆನ್ಶನ್(KA)(4666)- MSL- 7908, 7428, MHL- 332, ಬೆಂಗಳೂರು-ಬನ್ನೇರುಘಟ್ಟ(3671)- MHL- 53, ಬೆಂಗಳೂರು-ದೊಡ್ಡಬೊಮ್ಮಸಂದ್ರ(3327)- MAL- 5367, MDL- 347, 350, SRS- 42, ಬೆಂಗಳೂರು-ಗಾಂಧಿ ಬಜಾರ್(3053)- MDL- 95, ಬೆಂಗಳೂರು-ಗಂಗಾನಗರ(3098)- MHL- 644, ಬೆಂಗಳೂರು-ಕಗ್ಗಲೀಪುರ(3077)- MAL- 8928, ಬೆಂಗಳೂರು - ಲಾಲ್ ಬಾಗ್ ರಸ್ತೆ(3407)- MSL- 4274, ಬೆಂಗಳೂರು-ಮುನೇಶ್ವರ ನಗರ್(3253)- MHP- 378, MHL- 241, 454, MDL- 80, SRS- 32, 30, 33, 77, TMS- 12, ಬೆಂಗಳೂರು-ನಾಗದೇವನಹಳ್ಳಿ(3254)- MHL- 154, 337, ಬೆಂಗಳೂರು - ಪಾದರಾಯನಪುರ ಮೈಸೂರು ಆರ್.ಡಿ(3174)- MDL- 502, ಬೆಂಗಳೂರು-ರಾಮಚಂದ್ರಪುರಂ(4685)- SRS- 95, ಬೆಂಗಳೂರು-ಶಿವಾಜಿನಗರ(3075)- MHL- 170, ಬೆಂಗಳೂರು - ಸಿದ್ದಾಪುರ ವೃತ್ತ(3538)- MSL- 5432, ಬೆಂಗಳೂರು - ವಿ.ನಾಗನಾಗಲ್ಲಿ(3648)- MSL- 13472, MHL- 284, 394, 667, MDL- 136, ಬೆಂಗಳೂರು - ವಸಂತಪುರ ಮುಖ್ಯ ರಸ್ತೆ(3537)- MSL- 12174, ಬೆಂಗಳೂರು-ವಿಜ್ಞಾನ ನಗರ್(3172)- TCB- 1, ಬೆಂಗಳೂರು -ಬನ್ಶಂಕರಿ 3ನೇ ಹಂತ(2096)- SRS- 38, ಬೆಂಗಳೂರು-ಕೆಂಗೇರಿ ಬಸ್ ನಿಲ್ದಾಣ(1662)- MHL- 252, 253, 254, ಬೆಂಗಳೂರು-ಮಧುರೆ ನಗರ್(2114)- MSL- 12371, 12376, 12380, 12381, 12393, 12600, 12689, MHL- 126, 367, 368, 369, 402, 403, 404, 413, MDL- 386, ಬೆಂಗಳೂರು-ಶ್ರೀನಿವಾಸನಗರ(1487)- SRS- 50, MDD- 118, ಬೆಂಗಳೂರು - ಟಿ. ದಾಸರಹಳ್ಳಿ-ತುಮಕೂರು ರಸ್ತೆ(2008)- MSL- 22883, 22969, MHL- 586, SRS- 34, 297, ಬೆಂಗಳೂರು-ಯಶವಂತಪುರ(1653)- MSL- 18990, MDL- 416, ಬೆಂಗಳೂರು-ಬನಶಂಕರಿ ಸ್ಟೇಜ್ II(2314)- MHL- 164, SRS- 9, ಬೆಂಗಳೂರು-ಬಸವನಗುಡಿ(0434)- MDL- 124, WBP- 72, ಬೆಂಗಳೂರು-ಭಾಷ್ಯಂ ವೃತ್ತ(2546)- MSL- 6567, MDL- 15, SRS- 15, MDD- 34, ಬೆಂಗಳೂರು-ಬಿಳೇಕಹಳ್ಳಿ(1867)- MHL- 194, ಬೆಂಗಳೂರು-ಚಾಮರಾಜಪೇಟೆ(1579)- MHL- 680, MDL- 447, SRS- 25, ಬೆಂಗಳೂರು-ಚಂದ್ರಾ ಲೇಔಟ್(2452)- MSL- 10555, MDL- 103, ಬೆಂಗಳೂರು-ಡಿಸ್ಪೆನ್ಸರಿ ರಸ್ತೆ(1316)- MSL- 8874, ಬೆಂಗಳೂರು-ದೊಮ್ಮಲೂರು(2590)- MHL- 413, 113, MDC- 2, SSM- 18, ಬೆಂಗಳೂರು-ಡಾ.ರಾಜ್ಕುಮಾರ್ ರಸ್ತೆ(1949)- MDD- 134, ಬೆಂಗಳೂರು-ಪುಲಕೇಶಿನಗರ(2049)- NCA- 17, SRS- 136, 25, 24, 269, TCB- 18, 17, ಬೆಂಗಳೂರು-ಗೊರಗುಂಟೆಪಾಳ್ಯ(2810)- MHL- 66, ಬೆಂಗಳೂರು-ಹಂಪಿ ನಗರ್(2360)- MAL- 4163, 4318, 4332, MML- 1377, MSL- 9569, MHL- 690, MDL- 38, SRS- 233, ಬೆಂಗಳೂರು-ಜೆ ಪಿ ನಗರ1ನೇ ಫೇಸ್(2267)- MSL- 15250, MDL- 225, ಬೆಂಗಳೂರು-JP ನಗರ್ 7ನೇ ಫೇಸ್(1474)- MAL- 9249, MSL- 22590, MDL- 820, SRS- 27, 64, 26, MDD- 364, ಬೆಂಗಳೂರು-ಕಗ್ಗದಾಸಪುರ(1078)- MDL- 412, SRS- 46, 118, 157, 291, TMS- 18, ಬೆಂಗಳೂರು-ಕಾಮಾಕ್ಷಿಪಾಳ್ಯ(2310)- MSL- 12660, 12664, 12683, ಬೆಂಗಳೂರು-ಕೆಂಗೇರಿ(0547)- MSL- 30396, ಬೆಂಗಳೂರು-ಕೋಣನಕುಂಟೆ(2413)- MAL- 9356, ZIP- 91, MHL- 276, ಬೆಂಗಳೂರು-ಕುಮಾರಸ್ವಾಮಿ ಬಡಾವಣೆ(2589)- SRS- 46, ಬೆಂಗಳೂರು-ಮಾಗಡಿ ರಸ್ತೆ(1021)- MSL- 20634, MHL- 424, 492, SRS- 39, 94, 160, ಬೆಂಗಳೂರು-ಮಂಜುನಾಥ ನಗರ್(2506)- MSL- 12030, 12113, MHL- 539, ಬೆಂಗಳೂರು-ಮರಿಯಪ್ಪನ ಪಾಳ್ಯ(1827)- MAL- 6572, SRS- 82, 83, ಬೆಂಗಳೂರು-ಮತ್ತೀಕೆರೆ(0087)- MHP- 625, MHL- 297, 818, 1030, SRS- 183, ಬೆಂಗಳೂರು-ಗೋಕುಲಾ ಎಕ್ಸ್ಟೆನ್ಶನ್(2858)- SRS- 64, ಬೆಂಗಳೂರು-ನಾಗರಭಾವಿ(1322)- MAL- 8369, ಬೆಂಗಳೂರು-ನಾಗವಾರ ಮುಖ್ಯ ರಸ್ತೆ(2582)- MAL- 20742, MDL- 455, ಬೆಂಗಳೂರು-ಪದ್ಮನಾಭನಗರ(2998)- MDL- 52, SRS- 39, ಬೆಂಗಳೂರು-ಆರ್. ಟಿ. ನಗರ(0435)- MHP- 440, MHL- 652, 1027, ಬೆಂಗಳೂರು-ರಾಜರಾಜೇಶ್ವರಿ ನಗರ(2588)- SRS- 46, 96, 104, 114, 117, ಬೆಂಗಳೂರು-ಸಂಜಯನಗರ(0912)- MSL- 34286, ಬೆಂಗಳೂರು-ಸಾರಕ್ಕಿ ಕೆರೆ(1166)- TTB- 16, ಬೆಂಗಳೂರು-ಸೆಪ್ಪಿಂಗ್ ರಸ್ತೆ(1193)- MSL- 22808, 22813, ಬೆಂಗಳೂರು-ಸುಬ್ರಮಣ್ಯಪುರಂ(2594)- MAL- 6306, MSL- 12581, SRS- 77, 183, 56, 78, 79, 133, 182, ಬೆಂಗಳೂರು-ಸುಲ್ತಾನಪಾಳ್ಯ(2857)- MDL- 234, ಬೆಂಗಳೂರು-ಸುಂಕದಕಟ್ಟೆ(1675)- MDL- 290, ಬೆಂಗಳೂರು-ಉಲ್ಸೂರ್-CMH ರಸ್ತೆ(2952)- MSL- 6720, ಬೆಂಗಳೂರು-ವಿದ್ಯಾರಣ್ಯಪುರBEL ಲೇಔಟ್(1830)- MHL- 225, 285, 505, SRS- 141, 142, ಬೆಂಗಳೂರು-ವಿಜಯ್ ನಗರ(1875)- MSL- 9060, MHL- 327, MDL- 133, MDD- 80, ಬೆಂಗಳೂರು-ವಿವಿ ಪುರಂ ಸಜ್ಜನ್ ರಾವ್ ವೃತ್ತ(2843)- MSL- 7984, 7985, 7986, ಬೆಂಗಳೂರು-ವಿಲ್ಸನ್ ಗಾರ್ಡನ್(2505)- MBL- 5114, ZIP- 74, ಬೆಂಗಳೂರು-ಬನಶಂಕರಿ-ಕೆಆರ್ ರಸ್ತೆ ಕ್ರಾಸ್(4032)- MSL- 5740, 5742, BLR-ದೇವರಚಿಕ್ಕನಹಳ್ಳಿ(2432)- MDD- 157, BVS- 67, BLR-ಮದನಾಯಕನಹಳ್ಳಿ(2426)- MHL- 497, BLR-ಪಂತರಪಾಳ್ಯ ಮೈಸೂರು ರಸ್ತೆ(2433)- SRS- 184, ನೆಲಗದರನಹಳ್ಳಿ(KA)(4806)- SRS- 52, MDD- 3,

Low Quality/Low touch/Insufficient weight deduction accounts details- ಬೆಂಗಳೂರು-ಗಾಂಧಿ ಬಜಾರ್(3053)- MLM- 512, ಬೆಂಗಳೂರು - ಲಾಲ್ ಬಾಗ್ ರಸ್ತೆ(3407)- MSL- 5044, ಬೆಂಗಳೂರು-ಮುನೇಶ್ವರ ನಗರ್(3253)- MHL- 4030, ಬೆಂಗಳೂರು-ಮಧುರ ನಗರ್(2114)- MAL- 5550, ಬೆಂಗಳೂರು - ಟಿ. ದಾಸರಹಳ್ಳಿ-ತುಮಕೂರು ರಸ್ತೆ(2008)- MAL- 13420, MHL- 2984, ಬೆಂಗಳೂರು-ಬಿಳೇಕಹಳ್ಳಿ(1867)- MAL- 7516, ಬೆಂಗಳೂರು-ಡಾ.ರಾಜ್ಕುಮಾರ್ ರಸ್ತೆ(1949)- MSL- 15938, MHL- 1557, ಬೆಂಗಳೂರು-ಕಾಮಾಕ್ಷಿಪಾಳ್ಯ(2310)- MSL- 15401, ಬೆಂಗಳೂರು-ಕುಮಾರಸ್ವಾಮಿ ಬಡಾವಣೆ(2589)- MAL- 3961, ಬೆಂಗಳೂರು-ಮತ್ತೀಕೆರೆ(0087)- MSL- 90871, ಬೆಂಗಳೂರು-ಪದ್ಮನಾಭನಗರ(2998)- MAL- 7008, ಬೆಂಗಳೂರು-ಸಾರಕ್ಕಿ ಕೆರೆ(1166)- MLM- 1316, ಬೆಂಗಳೂರು-ಸುಲ್ತಾನಪಾಳ್ಯ(2857)- MHL- 2746, 2747, ಬೆಂಗಳೂರು-ಅರಕೆರೆ(2232)- MSL- 13905, 14000, ಬೆಂಗಳೂರು-ಹೊಂಗಸಂದ್ರ(1601)- MLM- 1205, ಬೆಂಗಳೂರು-ಜಯನಗರ 9ನೇ ಬ್ಲಾಕ್(1467)- MHL- 2939, ಬೆಂಗಳೂರು-ಜಾಲಹಳ್ಳಿ ಮುತ್ಯಾನಗರ(2584)- MAL- 4613, ಬೆಂಗಳೂರು-ಗೋವಿಂದರಾಜ ನಗರ(2382)- MAL- 3562, ಚಾಮರಾಜಪೇಟೆ - ಜೆಜೆಆರ್ ನಗರ(5256)- MLM- 299, ಕಾಕ್ಸ್ ಟೌನ್(KA)(5191)- MAL- 231,

ಎರಡನೇ ಹರಾಜು ದಿನಾಂಕ : **14.11.2024, 12:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, 1ನೇ ಮಹಡಿ ಸೈಟ್ ಸಂ 3, ಖಾತಾ, 4702/3A, ಚನ್ನಪ್ಪ ಬಡಾವಣೆ, ಬೆಂಗಳೂರು ನಗರ, ಕರ್ನಾಟಕ, 562123 (ಬೆಂಗಳೂರು ಗ್ರಾಮಾಂತರ ಜಿಲ್ಲೆ) (4254)

ಬೆಂಗಳೂರು-ಕಮ್ಮಗೊಂಡಹಳ್ಳಿ(4519)- MSL- 3524, TMS- 22, ಬೆಂಗಳೂರು-ಕುಂಬಳಗೋಡು(3181)- MHL- 289, MDL- 69, SRS- 89, BTN- 8, ಬೆಂಗಳೂರು-ದಾಬಸ್ ಪೇಟೆ(3017)- MHP- 33, MSL- 14187, MDL- 191, SRS- 4, ಮುರುಗೇಶ್ ಪಾಳ್ಯ(KA)(5172)- MHP- 26, MSL- 142, 143, NCA- 7, MHL- 39, MDL- 13, ನೆಲಮಂಗಲ - ಚನ್ನಪ್ಪ ಬಡವಣೆ(4254)- MHP- 218, MSL- 12902, 12903, 12904, SRS- 124, 150, 230, TON- 6,

Low Quality/Low touch/Insufficient weight deduction accounts details- ಮುರುಗೇಶ್ ಪಾಳ್ಯ(KA)(5172)- MLM- 182,

ಎರಡನೇ ಹರಾಜು ದಿನಾಂಕ : **15.11.2024,10:00AM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಮಧು ಕಾಂಪ್ಲೆಕ್ಸ್, ನಂ 39/41/1359 ಇ, ಬಾನಗೋಲ್ರೆ- ಮೈಸೂರು ಹೆದ್ದಾರಿ ರಸ್ತೆ, ಇಜೂರ್, ರಾಮನಗರ - 571511, ದೂರವಾಣಿ: 571511 (ರಾಮನಗರ ಜಿಲ್ಲೆ) (1829)

ಬಿಡದಿ(KA)(1863)- TMS- 16, ಹಾರೋಹಳ್ಳಿ(KA)(4308)- MSL- 14185, 14284, 14416, MHL- 645, SRS- 264, 266, ಕನಕಪುರ(KA)(2587)- MHL- 114, 115, ಕುದೂರು ಪಟ್ಟಣ (KA)(5165)- MAL- 302, ಮಾಗಡಿ(KA)(3506)- MSL- 8588,

Low Quality/Low touch/Insufficient weight deduction accounts details- ಮಾಗಡಿ(KA)(3506)- MHL- 2005, ಸಾತನೂರ್(KA)(3795)- MHL- 1504,

ಎರಡನೇ ಹರಾಜು ದಿನಾಂಕ : **14.11.2024, 04:00PM,** ಹರಾಜು ಕೇಂದ್ರ : ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ವಾರ್ಡ್ ನಂ.12, ಕಥಾ ನಂ.483/34-39, ಸಿ ಆರ್ ಕಾಂಪ್ಲೆಕ್ಸ್, ಬಿಎಚ್ ರಸ್ತೆ, ತುಮಕೂರು - 592101 (ತುಮಕೂರು ಜಿಲ್ಲೆ) (2586)

ಚಿಕ್ಕನಾಯಕನಹಳ್ಳಿ(4136)- MSL- 5192, MDL- 177, SRS- 36, ಹುಳಿಯಾರ್(KA)(4359)- MAL- 6811, ಕೊರಟಗೆರೆ(KA)(4532)- NCA- 14, MHL- 121, 426, MDL- 104, ಮಧುಗಿರಿ(KA)(2473)- MAL- 16161, MSL- 11361, SRS- 98, 169, ಪಾವಗಡ(KA)(2443)- MAL- 23848, 23889, MSL- 25234, MHL- 1203, 1224, MDL- 224, 596, SRS- 91, 92, 214, 421, MDD- 219, ಸಿರಾ(KA)(2315)- MAL- 21435, 22138, 22307, MHL- 213, 516, 774, SRS- 30, 105, 111, ತಿಪಟೂರು(KA)(2135)- MAL- 13838, ತುಮಕೂರು-ಬಾಟವಾಡಿ(4174)- MAL- 4443, MHL- 21, MDL- 8, SRS- 12, ತುಮಕೂರು(0569)- MAL- 10031, MDL- 242, ತುಮಕೂರು-ಬಿಎಚ್ ರಸ್ತೆ(2586)- MSL- 15185, SRS- 80, WBP- 21,

Low Quality/Low touch/Insufficient weight deduction accounts details- ತುಮಕೂರು-ಬಿಎಚ್ ರಸ್ತೆ(2586)- MHL- 2776, MHS- 16, ಬೆಂಗಳೂರು - ತುರುವೇಕೆರೆ(3469)- MHL- 3134, ಗುಬ್ಬಿ - ಮುಖ್ಯ ರಸ್ತೆ(KA)(3478)- MSL- 13921, 14301, 14330, 14925, ಕುಣಿಗಲ್(KA)(2375)- MAL- 10813,

ಟಿಪ್ಪಣಿ:- ಹರಾಜು ದಿನಾಂಕಕ್ಕೂ (08.11.2024) ಮೊದಲು ಚಿನ್ನದ ಆಭರಣಗಳನ್ನು ಗ್ರಾಹಕರು ಬಿಡುಗಡೆ ಮಾಡಿಕೊಳ್ಳಬಹುದು.
ಟಿಪ್ಪಣಿ:- ಐಡೆಂಟಿಟಿ ಕಾರ್ಡ್/ಪ್ಯಾನ್ (PAN) ಕಾರ್ಡ್ ಸಂ./ಜಿಎಸ್ಟಿ ಸರ್ಟಿಫಿಕೇಟ್ ಅನ್ನು ಸಲ್ಲಿಸುವಂತೆ ಬಿಡ್ದರ್ಗಳಿಗೆ ವಿನಂತಿ ಮಾಡಲಾಗಿದೆ.
(ನೋಂದಾಯಿತ ಡೀಲರ್ಗಳಾಗಿದ್ದರೆ) ಯಶಸ್ವಿಯಾದ ಬಿಡ್ದರ್ಗಳು ಸಂಪೂರ್ಣ ಹರಾಜು ಮೊತ್ತವನ್ನು RTGS ಮೂಲಕ ವರ್ಗಾವಣೆ ಮಾಡಬೇಕು

For Muthoot Finance,
Mr. M Rajendran, Advocate, No 688, Kalpak,
7th Main Road, RBI Layout, JP Nagar 7th Phase, Bangalore - 560078

Place : ಬೆಂಗಳೂರು
Date : 28.10.2024

ಚಾಲಕ, ನಿರ್ವಾಹಕನ ಮೇಲೆ ಹಲ್ಲೆ: ಪ್ರಕರಣ ದಾಖಲು

ಬೆಂಗಳೂರು: ಬಿಎಂಟಿಸಿ ಬಸ್ ನಿರ್ವಾಹಕ ಹಾಗೂ ಚಾಲಕನ ಮೇಲೆ ಕಿಡಿಗೇಡಿಗಳು ಹಲ್ಲೆಗೈದ ಘಟನೆ ಶನಿವಾರ ಸಂಜೆ ಟ್ಯಾನರಿ ರಸ್ತೆಯಲ್ಲಿ ನಡೆದಿದೆ.

ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು, ನಿರ್ವಾಹಕ ಶಿವಕುಮಾರ್ ಮತ್ತು ಚಾಲಕ ಗಗನ್ ಮೇಲೆ ಹಲ್ಲೆ ಮಾಡಿದ್ದು, ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಸ್ತೆಯಲ್ಲೇ ಹೊಡೆದಾಡುತ್ತಿರುವ ಘಟನೆಯ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಯಲಹಂಕ ಹಾಗೂ ಶಿವಾಜಿ ನಗರ ಮಾರ್ಗದ ಬಸ್ ಅನ್ನು ಚಾಲಕ ಸಂಜೆ 5.25ರ ಸುಮಾರಿಗೆ ಟ್ಯಾನರಿ ರಸ್ತೆಯ ಕೆನರಾ ಬ್ಯಾಂಕ್ ನಿಲ್ದಾಣದಲ್ಲಿ ನಿಲ್ಲಿಸಿದ್ದರು. ಈ ವೇಳೆ ಅಲ್ಲಿಗೆ ಆಗಮಿಸಿದ ಆರೋಪಿಗಳು ವಾಹನದ ಮುಂಬಾಗಿಲಿನಿಂದ ಒಳ ಪ್ರವೇಶಿಸಿ ಗಗನ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಲಾರಂಭಿಸಿದ್ದಾರೆ. ಈ ವೇಳೆ ತಡೆಯಲು ಮುಂದಾದ ಶಿವಕುಮಾರ್ ಅವರನ್ನೂ ಸಹ ಬಸ್‌ನಿಂದ ಹೊರಗಡೆ ಎಳೆದೊಯ್ದು ಹಲ್ಲೆ ಮಾಡಿದ್ದಾರೆ ಎಂದು ದೂರಲಾಗಿದೆ. ಗಗನ್ ದೂರಿನ ಮೇರೆಗೆ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಮಾಡಿದ ಆರೋಪಿಗಳ ವಿರುದ್ಧ ಡಿ.ಜೆ.ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆ ಪ್ರಕರಣ ಹೆಚ್ಚಳ: ಕಠಿಣ ಕ್ರಮದ ಎಚ್ಚರಿಕೆ

ಬೆಂಗಳೂರು: ನಗರದ ಟ್ಯಾನರಿ ರಸ್ತೆಯಲ್ಲಿ ಶನಿ ವಾರ ಸಂಜೆ ಕ್ಷುಲ್ಲಕ ಕಾರಣಕ್ಕೆ ಬಿಎಂಟಿಸಿ ಚಾಲಕ ಹಾಗೂ ನಿರ್ವಾಹಕರ ಮೇಲೆ ಕುಡಿದ ಮತ್ತಿನಲ್ಲಿ ಹಲ್ಲೆ ಮಾಡಿರುವ ಘಟನೆ ನಡೆದಿದ್ದು, ಆರೋಪಿ ಗಳ ವಿರುದ್ಧ ಕಠಿಣ ಕ್ರಮಕ್ಕೆ ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆಯುವುದಾಗಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ಕುರಿತು ಮಾತನಾಡಿದ ಅವರು, ಶನಿವಾರ ನಡೆದಿರುವ ಘಟನೆಯ ಬಗ್ಗೆ ಮಾಹಿತಿ ಪಡೆದಿದ್ದೇನೆ. ಬಿಎಂಟಿಸಿಎಂಡಿ ರಾಮಚಂದ್ರನ್, ಪೊಲೀಸ್ ಆಯುಕ್ತರ ಭೇಟಿ ಮಾಡುತ್ತೇನೆ. ಚಾಲಕರ ಮೇಲೆ ಹಲ್ಲೆ ನಡೆಸುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದು, ಆರೋಪಿಗಳ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು. ಕೇಸ್ ಮಾಡುವುದು ಮುಖ್ಯವಲ್ಲ, ಶಿಕ್ಷೆ ಆಗುವ ರೀತಿಯಲ್ಲಿ ಮಾಡಬೇಕು. ಜೈಲಿಗೆ ಹೋಗುವ ರೀತಿ ಮಾಡಬೇಕು ಆಗ ಅವರಿಗೆ ಬುದ್ಧಿ ಬರುತ್ತದೆ ಎಂದು ಹೇಳಿದ್ದಾರೆ.

ಮಹಿಳಾ ಪ್ರಯಾಣಿಕರ ಆಕ್ರೋಶ: ಈ ವಿಚಾರವಾಗಿ ಬಿಎಂಟಿಸಿಯ ಮಹಿಳಾ ಪ್ರಯಾಣಿಕರೊಬ್ಬರು ಪ್ರತಿಕ್ರಿಯಿಸಿದ್ದು, ಚಾಲಕ ಹಾಗೂ ನಿರ್ವಾಹಕರ ಮೇಲೆ ಹಲ್ಲೆ ಮಾಡಿದವರಿಗೆ ಗಲ್ಲು ಶಿಕ್ಷೆ ನೀಡಬೇಕು. ಬಿಎಂಟಿಸಿ ಚಾಲಕ ಹಾಗೂ ನಿರ್ವಾಹಕರು ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತಾರೆ. ಅವರ ಮೇಲೆ ಹಲ್ಲೆ ಮಾಡಿದರೆ ಹೇಗೆ? ಅವರ ಕುಟುಂಬ ಏನು ಮಾಡಬೇಕು ಹೇಳಿ. ಹಲ್ಲೆ ಮಾಡುವುದು ಸರಿಯಲ್ಲ. ತುಂಬಾ ಬೇಜಾರು ಆಯಿತು ವಿಡಿಯೊ ನೋಡಿ. ಅವರು ಕೆಲಸಕ್ಕೆ ಬರುವುದು ಹೊಟ್ಟೆಪಾಡಿಗಾಗಿ. ಹೀಗೆ ಅವರ ಮೇಲೆ ಹಲ್ಲೆ ಮಾಡಿದರೆ ಹೇಗೆ? ತುಂಬಾ ರಿಸ್ಕ್ ತೆಗೆದುಕೊಂಡು ಕೆಲಸ ಮಾಡುತ್ತಾರೆ. ಹಲ್ಲೆ ಮಾಡಿದವರನ್ನು ಒದ್ದು ಒಳಗೆ ಹಾಕಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಟ್ಟಡ ದುರಂತ: ಕ್ರಮಕ್ಕೆ ಮನವಿ

ಬೆಂಗಳೂರು: ಬಾಬುಸಾಪಾಳ್ಯ ಕಟ್ಟಡ ದುರಂತ ಪ್ರಕರಣದಲ್ಲಿ ಕಿರಿಯ ಅಧಿಕಾರಿಗಳ ವಿರುದ್ಧ ಕ್ರಮವಹಿಸುವ ಮೊದಲು, ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮವಹಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಮರಿಲಿಂಗೇಗೌಡ ಪಾಟೀಲ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

NOTICE
Titan Company Limited
Registered office: 3, Sipcot Industrial Complex, Hosur - 635126

NOTICE is hereby given that the certificate for the undermentioned securities of the Company has been lost/misplaced and the holder of the said securities has applied to the Company to issue duplicate certificate.
Any person who has a claim in respect of the said securities should lodge such claim with the Company at its Registered Office within 15 days from this date, else the Company will proceed to issue duplicate certificate without further intimation.

Name of the holder	Folio No.	Number and Kind of Securities	Certificate No.	Distinctive Nos.
Vandana Sharma	TWV0006055	1000 Equity shares of F.V. Re.1/-	3616	8582701 - 8583700

Place : Bangalore
Date : 28/10/2024
Name Of The Applicant
Vandana Sharma

ಎಸ್‌ಸಿಎಸ್‌ಟಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ

ರಾಜ್ಯದಲ್ಲಿ ಪರಿಶಿಷ್ಟರ ಪ್ರಗತಿ

ವಿಧಾನಸೌಧದ ಕೊಠಡಿಯಲ್ಲಿ 2024–25 ನೇ ಸಾಲಿನ ಎಸ್‌ಸಿಎಸ್ಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ. ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು ಮತ್ತು ವಿವಿಧ ಇಲಾಖೆಗಳ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಐತಿಹಾಸಿಕ ಎಸ್‌ಸಿಎಸ್ಪಿ, ಟಿಎಸ್‌ಪಿ ಕಾಯ್ದೆ ಜಾರಿಗೊಳಿಸಿದ ಬಳಿಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ಸಮುದಾಯಗಳ ಏಳಿಗೆಯ ನಿಟ್ಟಿನಲ್ಲಿ ಸಾಕಷ್ಟು ಆಶಯ ಹೊಂದಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ವಿಧಾನಸೌಧದ ಕೊಠಡಿಯಲ್ಲಿ 2024–25ನೇ ಸಾಲಿನ ಎಸ್‌ಸಿಎಸ್‌ಟಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿ ಅವರು, ಸರಕಾರದಲ್ಲಿ ಬರುವ ಎಲ್ಲಾ ಇಲಾಖೆಗಳಿಗೂ ಹಂಚಿಕೆಯಾಗಿರುವ ಅನುದಾನವನ್ನು ಸಮರ್ಥವಾಗಿ ಬಳಸಿಕೊಂಡು ಪರಿಶಿಷ್ಟ ವರ್ಗಗಳ ಬದುಕಿಗೆ ನೆರವಾಗಬೇಕು ಮತ್ತು ಆ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಎಲ್ಲರೂ ಶ್ರಮಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. 2024ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ನೀಡಲಾದ ಎಸ್ಸಿಎಸ್ಪಿ, ಟಿಎಸ್‌ಪಿ ಅನುದಾನ ಹಂಚಿಕೆ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಶೇ.87, ಪರಿಶಿಷ್ಟ ವರ್ಗಗಳಿಗೆ ಶೇ.83 ಅನುದಾನದ ಬಳಕೆಯಾಗಿದ್ದು ಪರಿಶಿಷ್ಟ ಸಮುದಾಯಗಳಲ್ಲಿ ಧನಾತ್ಮಕ ಬದಲಾವಣೆಯ ಸೂಚನೆ ಸಿಗುತ್ತಿವೆ ಎಂದು ತಿಳಿಸಿದ್ದಾರೆ.

ಐಎಎಸ್ ಅಧಿಕಾರಿಗಳಿಗೆ ದೇಶಕಟ್ಟುವ ಜವಾಬ್ದಾರಿ: ಚುನಾವಣೆಯಿಂದ ಚುನಾವಣೆಗೆ ಬದಲಾಗುವ ರಾಜಕೀಯ ನಾಯಕರ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ದೇಶ ನಿರ್ಮಾಣದಲ್ಲಿ ಐಎಎಸ್ ಅಧಿಕಾರಿಗಳ ಪಾತ್ರವು ಅಧಿಕವಾಗಿದ್ದು, ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಹೆಚ್ಚು ಬದ್ಧತೆಯಿಂದ ಕೆಲಸ ಮಾಡುವುದು ಒಳಿತೆಂದು ತಿಳಿಸಿದರು. ಕಳೆದ ಬಾರಿಗೆ ಹೋಲಿಸಿದರೆ ಎಸ್ಸಿಎಸ್ಪಿ, ಟಿಎಸ್‌ಪಿ ಅನುದಾನದ ಬಳಕೆಯು ಈ ವರ್ಷದಲ್ಲಿ ಗಣನೀಯವಾಗಿ ಹೆಚ್ಚಾಗಿದ್ದು ಇದು ಇನ್ನೂ ಹೆಚ್ಚಿನ ಗತಿಯಲ್ಲಿ ಕಾರ್ಯ ನಿರ್ವಹಿಸಿ ಪರಿಶಿಷ್ಟರ ಏಳಿಗೆ ಆಗಬೇಕೆಂದು ತಿಳಿಸಿದರು.

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 686/2024

ಅರ್ಜಿದಾರರು: ಶ್ರೀಮತಿ ಗೌರಮ್ಮ ಕೋಂ ಶಿವರಾಮು ಬಿನ್ ಲೇಟ್ ಮಾದೇಗೌಡ ವಯಸ್ಸು 73 ವರ್ಷ ವಾಸ: ಚಿಕ್ಕಮುದವಾಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಚಿಕ್ಕಮುದವಾಡಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ರಿಂದ 4 ರವರ ತಾಯಿ ಪುಟ್ಟಮ್ಮ ಕೋಂ ಲೇಟ್ ಎಂ.ಮಾದೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಮುದವಾಡಿ ಗ್ರಾಮದಲ್ಲಿ ದಿನಾಂಕ 09/08/1973 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/11/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 22ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎ.ಸಿ. ಚನ್ನೇಗೌಡ,
ವಕೀಲರು, ಕನಕಪುರ
ಸ್ಥಳ : ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 712/2024

ಅರ್ಜಿದಾರರು: ಶ್ರೀ ರಾಮೇಗೌಡ ಬಿನ್ ಲೇಟ್ ಕರೀಗೌಡ ವಯಸ್ಸು 74 ವರ್ಷ ವಾಸ: ನಂ. 1914/169 ಎಂ.ಜಿ ಬಡಾವಣೆ ಕಸಬಾ ಹೋಬಳಿ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಮುರುಕಣಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 3 ರಿಂದ 5ನೇ ತಾಯಿ ಹಾಗೂ 2ನೇ ಅರ್ಜಿದಾರರ ಅತ್ತೆಯವರಾದ ಹೊಂಬಮ್ಮ ಕೋಂ ಕರೀಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮುರುಡಿಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 12/05/2011 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಎ.ಸಿ. ಚನ್ನೇಗೌಡ, ವೈರಮುಡಿ
ಅರ್ಜಿದಾರರ ಪರ ವಕೀಲರು
ವಕೀಲರು, ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 714/2024

ಅರ್ಜಿದಾರರು: ಶ್ರೀ ರಾಮೇಗೌಡ ಬಿನ್ ಲೇಟ್ ಕರೀಗೌಡ ವಯಸ್ಸು 74 ವರ್ಷ ವಾಸ: ನಂ. 1914/169 ಎಂ.ಜಿ ಬಡಾವಣೆ ಕಸಬಾ ಹೋಬಳಿ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಮುರುಕಣಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 3 ರಿಂದ 5 ರವರ ಅಜ್ಜಿ ಹಾಗೂ 2ನೇ ಅರ್ಜಿದಾರರ ಗಂಡನ ಅಜ್ಜಿಯವರಾದ ಚೀಕ್ಲಮ್ಮ ಕೋಂ ಲೇಟ್ ರಾಮೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮುರುಡಿಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 26/10/1975 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಎ.ಸಿ. ಚನ್ನೇಗೌಡ, ವೈರಮುಡಿ
ಅರ್ಜಿದಾರರ ಪರ ವಕೀಲರು
ವಕೀಲರು, ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 713/2024

ಅರ್ಜಿದಾರರು: ಶ್ರೀ ರಾಮೇಗೌಡ ಬಿನ್ ಲೇಟ್ ಕರೀಗೌಡ ವಯಸ್ಸು 74 ವರ್ಷ ವಾಸ: ನಂ. 1914/169 ಎಂ.ಜಿ ಬಡಾವಣೆ ಕಸಬಾ ಹೋಬಳಿ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಮುರುಕಣಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 3 ರಿಂದ 5 ರವರ ತಾತ ಹಾಗೂ 2ನೇ ಅರ್ಜಿದಾರರ ಗಂಡನ ತಾತನವರಾದ ರಾಮೇಗೌಡ ಬಿನ್ ಲೇಟ್ ಗುಮ್ಮಕ್ಕೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮುರುಡಿಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 08/05/1970 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಎ.ಸಿ. ಚನ್ನೇಗೌಡ, ವೈರಮುಡಿ
ಅರ್ಜಿದಾರರ ಪರ ವಕೀಲರು
ವಕೀಲರು, ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 715/2024

ಅರ್ಜಿದಾರರು: ಶ್ರೀ ರಾಮೇಗೌಡ ಬಿನ್ ಲೇಟ್ ಕರೀಗೌಡ ವಯಸ್ಸು 74 ವರ್ಷ ವಾಸ: ನಂ. 1914/169 ಎಂ.ಜಿ ಬಡಾವಣೆ ಕಸಬಾ ಹೋಬಳಿ, ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಮುರುಕಣಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 3 ರಿಂದ 5 ರವರ ತಂದೆ ಹಾಗೂ 2ನೇ ಅರ್ಜಿದಾರರ ಮಾವನವರಾದ ಕರೀಗೌಡ ಬಿನ್ ಲೇಟ್ ರಾಮೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಮುರುಡಿಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ 05/10/2002 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 24/12/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಎ.ಸಿ. ಚನ್ನೇಗೌಡ, ವೈರಮುಡಿ
ಅರ್ಜಿದಾರರ ಪರ ವಕೀಲರು
ವಕೀಲರು, ಕನಕಪುರ

ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 687/2024

ಅರ್ಜಿದಾರರು: ಶ್ರೀಮತಿ ಗೌರಮ್ಮ ಕೋಂ ಶಿವರಾಮು ಬಿನ್ ಲೇಟ್ ಮಾದೇಗೌಡ ವಯಸ್ಸು 73 ವರ್ಷ ವಾಸ: ಚಿಕ್ಕಮುದವಾಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ಟೌನ್, ರಾಮನಗರ ಜಿಲ್ಲೆ. ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ 2. ಗ್ರಾಮ ಲೆಕ್ಕಾಧಿಕಾರಿಗಳು, ಚಿಕ್ಕಮುದವಾಡಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ರಿಂದ 4 ರವರ ತಂದೆ ಎಂ.ಮಾದೇಗೌಡ ಬಿನ್ ಲೇಟ್ ಮಾಳಿಗೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಮುದವಾಡಿ ಗ್ರಾಮದಲ್ಲಿ ದಿನಾಂಕ 05/03/1988 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/11/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಅಕ್ಟೋಬರ್ 22ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎ.ಸಿ. ಚನ್ನೇಗೌಡ,
ವಕೀಲರು, ಕನಕಪುರ
ಸ್ಥಳ : ಕನಕಪುರ

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಂಸದ ತೇಜಸ್ವಿ ಸೂರ್ಯ ಐರನ್‌ಮ್ಯಾನ್

ಗೋವಾ ಸ್ಪರ್ಧೆಯಲ್ಲಿ ಭಾಗಿ ವಾಕಿಂಗ್, ಸ್ವಿಮ್ಮಿಂಗ್ ಹಾಗೂ ಸೈಕ್ಲಿಂಗ್‌ನಲ್ಲಿ ಗೆಲುವು

- ಫಿಟ್‌ನೆಸ್ ಮೂಲಕವೇ ಹೊಸ ದಾಖಲೆ ಬರೆದ ತೇಜಸ್ವಿ ಸೂರ್ಯ
- ಐರನ್ ಮ್ಯಾನ್ 70.3 ರೇಸ್‌ನಲ್ಲಿ ವಿಜೇತರಾದ ಮೊದಲ ಸಂಸದ
- ಈ ಸ್ಪರ್ಧೆಯಲ್ಲಿ ಭಾಗವಹಿವುದಕ್ಕೆ ನಾಲ್ಕು ತಿಂಗಳು ಕಠಿಣ ಪರಿಶ್ರಮ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಫಿಟ್‌ನೆಸ್ ಮೂಲಕವೇ ದೇಶದಲ್ಲಿ ಹೆಸರಾಗಿರುವ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಇದೀಗ ತಮ್ಮ ಫಿಟ್‌ನೆಸ್ ಮೂಲಕವೇ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ.

ದೇಶದಲ್ಲಿ ತೀರಾ ಕಠಿಣ ಎನಿಸುವ ಸ್ಪರ್ಧೆಯಲ್ಲಿ ಒಂದೆನಿಸಿರುವ ಐರನ್ ಮ್ಯಾನ್ 70.3 ರೇಸ್‌ನಲ್ಲಿ ಸಂಸದ ತೇಜಸ್ವಿ ಸೂರ್ಯ ಅವರು ಗೆಲುವು ಸಾಧಿಸುವ ಮೂಲಕ, ಈ ಸ್ಪರ್ಧೆಯಲ್ಲಿ ವಿಜೇತರಾದ ಮೊದಲ ಸಂಸದ ಎನ್ನುವ ದಾಖಲೆ ಬರೆದಿದ್ದಾರೆ. ಐರನ್‌ಮ್ಯಾನ್ ಸ್ಪರ್ಧೆಯಲ್ಲಿ ವಾಕಿಂಗ್, ಸ್ವಿಮ್ಮಿಂಗ್ ಹಾಗೂ ಸೈಕ್ಲಿಂಗ್ ಸ್ಪರ್ಧೆಗಳಿರುತ್ತದೆ. ಈ ಮೂರರಲ್ಲಿಯೂ ತೇಜಸ್ವಿ ಸೂರ್ಯ ಅವರು ಗೆಲುವು ಸಾಧಿಸುವ ಮೂಲಕ ಐರನ್ ಮ್ಯಾನ್ ಆಗಿದ್ದಾರೆ.

ಗೋವಾದಲ್ಲಿ ಭಾನುವಾರ ನಡೆದ ಈ ಸ್ಪರ್ಧೆಯಲ್ಲಿ ತೇಜಸ್ವಿ ಸೂರ್ಯ ಅವರು, 1,900 ಮೀಟರ್ ಈಜು, 90 ಕಿಮೀ ಸೈಕ್ಲಿಂಗ್ ಮತ್ತು 21.1 ಕಿಮೀ ಓಟದ ಮೂರು ವಿಭಾಗಗಳಲ್ಲಿ ಭಾಗಿಯಾಗಿ 8 ಗಂಟೆ, 27 ನಿಮಿಷ ಮತ್ತು 32 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿದರು. ಈ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಈಜು, ಓಟ ಹಾಗೂ ಸೈಕ್ಲಿಂಗ್ ಮೂರರಲ್ಲಿಯೂ ಪರಿಣತಿ ಇರಬೇಕು ಹಾಗೂ ದೈಹಿಕವಾಗಿಯೂ ಸಾಕಷ್ಟು ಸದೃಢರಾಗಿರಬೇಕು. ಈ ಸ್ಪರ್ಧೆಯಲ್ಲಿ ಭಾಗವಹಿಸಲು ತಿಂಗಳಾನುಗಟ್ಟಲೇ ಪರಿಶ್ರಮ ಪಡಬೇಕಾಗುತ್ತದೆ. ಆದ್ದರಿಂದ ಬಹುತೇಕರು ಈ ಐರನ್‌ಮ್ಯಾನ್ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಹಿಂದೇಟು ಹಾಕುತ್ತಾರೆ. ಆದರೆ ತೇಜಸ್ವಿ ಸೂರ್ಯ ಅವರು ನಾಲ್ಕು ತಿಂಗಳ ಕಠಿಣ ಪರಿಶ್ರಮದ ಮೂಲಕ ಈ ಸ್ಪರ್ಧೆಯಲ್ಲಿ ಸ್ಪರ್ಧಿಸಿ ವೃತ್ತಿಪರ ಕ್ರೀಡಾಪಟುಗಳನ್ನು ಮೀರಿ ಗೆಲುವು ಸಾಧಿಸಿದ್ದಾರೆ.

50ಕ್ಕೂ ಹೆಚ್ಚು ದೇಶದ ಕೀಡಾಪಟುಗಳು ಭಾಗಿ: ಈ ಬಗ್ಗೆ ಮಾತನಾಡಿರುವ ಸಂಸದ ತೇಜಸ್ವಿ ಸೂರ್ಯ, ಐರನ್‌ಮ್ಯಾನ್ ಸ್ಪರ್ಧೆ ಕ್ರೀಡೆಗೆ ಹೆಸರುವಾಸಿ. 50ಕ್ಕೂ ಹೆಚ್ಚು ದೇಶ ಗಳ ಕ್ರೀಡಾಪಟುಗಳು ಭಾಗವಹಿಸಿದ್ದರು.

→ 4

ಸ್ಪರ್ಧೆಯಲ್ಲಿ ಏನೇನು?

ಈಜು	1900 ಮೀಟರ್
ಸೈಕ್ಲಿಂಗ್	90 ಕಿಮೀ
ಓಟ	21.1 ಕಿಮೀ

ಈ ಮೂರನ್ನು ಪೂರ್ಣಗೊಳಿಸಲು ತೇಜಸ್ವಿ ಸೂರ್ಯ ತಗೆದುಕೊಂಡ ಸಮಯ: 8:27: 32 ಗಂಟೆ

ಐರನ್‌ಮ್ಯಾನ್ ಸ್ಪರ್ಧೆಯಲ್ಲಿ ಭಾಗವಹಿಸುವುದು ಕಠಿಣ ಸವಾಲು. ಕಳೆದ ನಾಲ್ಕು ತಿಂಗಳಿಂದ ಫಿಟ್‌ನೆಸ್ ಸುಧಾರಿಸಲು ಕಠಿಣ ತರಬೇತಿ ಪಡೆದಿದ್ದೆ. ಈ ಸವಾಲನ್ನು ಪೂರ್ಣಗೊಳಿಸಿದ್ದಕ್ಕಾಗಿ ನನಗೆ ಅತ್ಯಂತ ಸಂತೋಷವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಫಿಟ್ ಇಂಡಿಯಾ ಅಭಿಯಾನ ಇಂತಹ ಸವಾಲನ್ನು ಸ್ವೀಕರಿಸಲು ಪ್ರೇರಣೆ ನೀಡಿದೆ.
– **ತೇಜಸ್ವಿ ಸೂರ್ಯ** ಸಂಸದ

ಮಾತಂದ್ರೆ ಮಾತು

ಕೇಂದ್ರ-ರಾಜ್ಯಗಳ ನಡುವೆ ದಶಕಗಳಿಂದಲೂ ತಿಕ್ಕಾಟವಿದೆ. ಆಗ, ರಾಜ್ಯಗಳ ಸಮಸ್ಯೆಗಳನ್ನು ಆಲಿಸಿ, ಚರ್ಚಿಸಿ, ಒಮ್ಮತದ ತೀರ್ಮಾನಕ್ಕೆ ಬಂದು ಪರಿಹಾರ ನೀಡಲಾಗುತ್ತಿತ್ತು. ಆದರೆ, ಈಗ ಸಮಸ್ಯೆಗಳನ್ನೂ ಆಲಿಸದೇ, ಸಮಸ್ಯೆ ಕೇಳಿದವರನ್ನೇ ದೇಶದ್ರೋಹಿ ಎನ್ನುವಂತಹ ಬದಲಾವಣೆಯ ವಾತಾವರಣ ನಿರ್ಮಾಣವಾಗಿದೆ.

– **ಕೃಷ್ಣಬೈರೇಗೌಡ**
ಕಂದಾಯ ಸಚಿವ

ಭ್ರಷ್ಟಾಚಾರ ದಾಖಲೆ ಬಹಿರಂಗಪಡಿಸಿ: ಶೋಭಾ

ವಿವರಪುಟ → 4

ಫನ್‌ತರಂಗ
– ರಘುಪತಿ ಶೃಂಗೇರಿ –

ಈ ಬಾರಿ ದೀಪಾವಳಿ ನಮ್‌ಜೊತೇನೆ ಆಚರಿಸಿ ಅಂತ ಟಿವೀಲಿ ಜಾಹಿರಾತು ಕೊಟ್ಟಿದ್ರಲ್ಲ ಅಂಕಲ್, ಅದ್ಕೇ ನಾವೆಲ್ಲಾ ನಿಮ್ ಅಂಗಡೀಲೇ ಪಟಾಕಿ ಹೊಡ್ಯೋಣ ಅಂತ ಬಂದ್ವಿ...!!

ಪ್ರಚಾರದಲ್ಲಿ ಅಭಿಮನ್ಯು, ಅರ್ಜುನರದ್ದೇ ಸದ್ದು | ಕಾರ್ಯಕರ್ತರ ಅಸಮಾಧಾನ ತಣಿಸುವಲ್ಲಿ ಯಶ

ಗೊಂಬೆ ನಾಡಲ್ಲಿ ಕುರುಕ್ಷೇತ್ರ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು/ಹಾಸನ/ಚನ್ನಪಟ್ಟಣ: ರಾಜ್ಯದಲ್ಲಿ ನಡೆಯುತ್ತಿರುವ ಮೂರು ಕ್ಷೇತ್ರಗಳ ಉಪಚುನಾವಣೆಯು ದಿನದಿಂದ ದಿನಕ್ಕೆ ಬಿರುಸು ಪಡೆಯುತ್ತಿದ್ದು, ಮೂರು ಕ್ಷೇತ್ರಗಳ ಪೈಕಿ ಚನ್ನಪಟ್ಟಣವೇ ಅತಿ ಹೆಚ್ಚು ಜಿದ್ದಾಜಿದ್ದಿಗೆ ಕಾರಣವಾಗಿದೆ. ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷಗಳ ನಾಯಕರು ಹೇಳಿಕೆಗೆ ಪ್ರತಿಹೇಳಿಕೆ ಕೊಡುತ್ತಿದ್ದು, ಇಡೀ ಕ್ಷೇತ್ರವೇ ಕುರುಕ್ಷೇತ್ರವಾಗಿ ಮಾರ್ಪಟ್ಟಿದೆ. ಚನ್ನಪಟ್ಟಣ ಚುನಾವಣಾ ಕಣದಲ್ಲಿ ಅಪ್ಪನೇ ಮಗನನ್ನು ಅಭಿಮನ್ಯು ಬದಲಾಗಿ ಅರ್ಜುನ ಎಂದಿದ್ದು, ಇದಕ್ಕೆ ಪ್ರತ್ಯುತ್ತರವಾಗಿ ಅಪ್ಪನೇ ಒಂದು ಕಾಲದಲ್ಲಿ ಅಭಿಮನ್ಯು ಆಗಿರಲಿಲ್ಲವೇ ಎಂದು ಕಾಂಗ್ರೆಸ್ ಕೌಂಟರ್ ಕೊಟ್ಟಿದೆ.

ಭಾನುವಾರ ಹಾಸನದಲ್ಲಿ ಮಾತನಾಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಈಗ ಅಭಿಮನ್ಯು ಅಲ್ಲ, ಅರ್ಜುನ. ಇಲ್ಲಿ ಕುತಂತ್ರಕ್ಕೆ ಜಯವಿಲ್ಲ, ಧರ್ಮಕ್ಕೆ ಜಯ. ಇಲ್ಲಿಂದಲೇ ಕಾಂಗ್ರೆಸ್‌ನ ಅವನತಿ ಆರಂಭವಾಗುತ್ತದೆ. ಈ ಬಾರಿ ನಿಖಿಲ್ ಅಭಿಮನ್ಯುವಾಗಿ ಕೌರವರ ಪದ್ಮವ್ಯೂಹಕ್ಕೆ ಬಲಿ ಆಗುವುದಿಲ್ಲ. ಬದಲಿಗೆ ಅರ್ಜುನನಾಗಿ ಕಾಂಗ್ರೆಸ್ ಪಕ್ಷಕ್ಕೆ ಸಡ್ಡು ಹೊಡೆಯುತ್ತಾರೆ. ಈ ಚುನಾವಣೆಯಲ್ಲಿ ತಂತ್ರ ಕುತಂತ್ರ ಎಲ್ಲವೂ ನಡೆಯುತ್ತಿದೆ. ಅದೆಲ್ಲವನ್ನೂ ಮೆಟ್ಟಿ ನಿಲ್ಲುತ್ತೇವೆ. ಜನರ ಆಶೀರ್ವಾದದಿಂದ ಕಾಂಗ್ರೆಸ್ ಪಕ್ಷ ಹಿಮ್ಮೆಟ್ಟಿಸುತ್ತೇವೆ ಎಂದಿದ್ದಾರೆ. ಇದಕ್ಕೂ ಮೊದಲು ಎನ್‌ಡಿಎ ಅಭ್ಯರ್ಥಿಯಾಗಿ ಪುತ್ರ ನಾಮಪತ್ರ ಸಲ್ಲಿಸುವ ವೇಳೆ, ಅಭಿಮನ್ಯು ಈ ಯುದ್ಧದಲ್ಲಿ ಗೆಲ್ಲುತ್ತಾರೆ ಎಂದಿದ್ದರು. ಇದಕ್ಕೆ ತಿರುಗೇಟು ನೀಡಿರುವ ಸಿಎಂ ಸಿದ್ದರಾಮಯ್ಯ, ಕುಮಾರ ಸ್ವಾಮಿ ಹಿಂದೆ ಅಭಿಮನ್ಯು ಆಗಿರಲಿಲ್ಲವೇ? ಅವರು ಮುಖ್ಯಮಂತ್ರಿ ಯಾಗಿದ್ದಾಗ, ಮಂಡ್ಯದಲ್ಲಿ ಹಾಗೂ ನಂತರ ರಾಮನಗರದಲ್ಲಿ ಸೋತಿದ್ದರು. ಆಗ ಅವರು ಅಭಿಮನ್ಯು ಆಗಿರಲಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಸುದ್ದಿ ಬಿತ್ತರಿಸದಂತೆ ಯೋಗೇಶ್ವರ್ ತಡೆಯಾಜ್ಞೆ

ತಮ್ಮ ಕುಟುಂಬದ ವಿರುದ್ಧ ಯಾವುದೇ ಮಾಧ್ಯಮದಲ್ಲಿ ಸುದ್ದಿ ಬಿತ್ತರ ಮಾಡದಂತೆ ಯೋಗೇಶ್ವರ್ ತಡೆಯಾಜ್ಞೆ ತಂದಿದ್ದಾರೆ ಎನ್ನಲಾಗಿದೆ. ಇತ್ತೀಚೆಗೆ ತಂದೆಯ ನಡೆಯ ಬಗ್ಗೆ ಮುನಿಸಿಕೊಂಡು ಪುತ್ರಿ ಸಾಮಾಜಿಕ ಜಾಲತಾಣ ಸೇರಿದಂತೆ ಹಲವೆಡೆ ಪೋಸ್ಟ್ ಹಾಕಿರುವುದಲ್ಲದೆ, ಕಾಂಗ್ರೆಸ್‌ನ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ್ದರು. ಅಭ್ಯರ್ಥಿಯ ಪುತ್ರಿಯು ಮೈತ್ರಿ ಪರ ಪ್ರಚಾರ ಮಾಡಲಿದ್ದಾರೆ ಎನ್ನುವುದೂ ಕ್ಷೇತ್ರದಲ್ಲಿ ಭಾರೀ ಚರ್ಚೆಯಾಗುತ್ತಿದೆ.

ಸಮನ್ವಯ ಯಶಸ್ವಿ

ಒಂದೆಡೆ, ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ.ಪಿ.ಯೋಗೇಶ್ವರ್ ಅವರ ವಿರುದ್ಧ ಸ್ಥಳೀಯ ಕಾಂಗ್ರೆಸ್‌ನ ಕೆಲ ಮುಖಂಡರು ಅಸಹಕಾರ ತೋರಿದ್ದರಿಂದ ಭಾನುವಾರ ಮಾಜಿ ಸಂಸದ ಡಿ.ಕೆ.ಸುರೇಶ್ ನೇತೃತ್ವದಲ್ಲಿ ಸಂಧಾನ ಸಭೆ ನಡೆದು ಸಮನ್ವಯ ಯಶಸ್ವಿಯಾಗಿದೆ ಎನ್ನಲಾಗಿದೆ. ಇನ್ನೊಂದೆಡೆ, ಮೈತ್ರಿ ಅಭ್ಯರ್ಥಿ ನಿಖಿಲ್‌ಗೆ ಸ್ಥಳೀಯ ಬಿಜೆಪಿ ಕಾರ್ಯಕರ್ತರು ಬೆಂಬಲಿಸುತ್ತಿಲ್ಲ ಎಂಬ ಮಾತುಗಳು ಕೇಳಿಬಂದಿದ್ದವು. ಹೀಗಾಗಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಜತೆ ಸರಣಿ ಸಭೆಗಳನ್ನು ನಡೆಸಿ ಸಮನ್ವಯ ಸಾಧಿಸಿದ್ದಾರೆ ಎನ್ನಲಾಗಿದೆ.

ಮೈತ್ರಿ ಮಾಡಿಸಿದ್ದು ನಾನೇ, ಕುಮಾರಸ್ವಾಮಿ ಗೆಲ್ಲಿಸಿದ್ದು ನಾನೇ. ಡಾ.ಮಂಜುನಾಥ್ ಅವರನ್ನು ಗೆಲ್ಲಿಸಿದ್ದು ನಾನೇ ಎಂದು ಸಿ.ಪಿ.ಯೋಗೇಶ್ವರ್ ಹೇಳುತ್ತಿದ್ದಾರೆ. ಹಾಗಾದರೆ ಅಷ್ಟು ಪಕ್ಷ ಸೇವೆ ಮಾಡಿದ್ದರೆ ಹೈಕಮಾಂಡ್ ಜತೆ ಮಾತನಾಡಿ ಬಿ ಫಾರಂ ಪಡೆದು ಯಾಕೆ ಚುನಾವಣೆಗೆ ನಿಲ್ಲಲಿಲ್ಲ?
ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಕುಮಾರಣ್ಣನ ನಾಯಕತ್ವದ ಅಗ್ನಿಪರೀಕ್ಷೆ. ಇಲ್ಲಿ ನಿಖಿಲ್ ನೆಪವಷ್ಟೆ. ಹಿಂದಿನಂತೆ ಈಗಲೂ ನೀವು ನಮಗೆ ಆಶೀರ್ವಾದ ಮಾಡಬೇಕು. ನಿಮಗೆ ಕೈ ಜೋಡಿಸಿ ಪಾದ ಮುಟ್ಟಿ ಬೇಡಿಕೊಳ್ಳುವೆ. ನನಗೊಂದು ಅವಕಾಶ ಕೊಡಿ. ಕೊನೆಯ ಉಸಿರಿರುವವರೆಗೆ ನಿಮ್ಮ ಜತೆಗಿರುತ್ತೇನೆ.
– **ನಿಖಿಲ್ ಕುಮಾರಸ್ವಾಮಿ** ಮೈತ್ರಿ ಅಭ್ಯರ್ಥಿ

ಆಯುಷ್ಮಾನ್ ಭಾರತ್ ಪಿಎಂ ಜನಾರೋಗ್ಯ ಯೋಜನೆ 4.50 ಕೋಟಿ ಕುಟುಂಬಗಳ 6 ಕೋಟಿ ಜನರಿಗೆ ಲಾಭ

70 ವರ್ಷ ದಾಟಿದವರಿಗೆ ಮೋದಿ ದೀಪಾವಳಿ ಗಿಫ್ಟ್

ದೆಹಲಿ: 70 ವರ್ಷ ದಾಟಿದವರಿಗೂ ಆರೋಗ್ಯ ವಿಮಾ ಯೋಜನೆಯಡಿ ಉಚಿತ ಚಿಕಿತ್ಸೆಯ ಸೌಲಭ್ಯ ಒದಗಿಸಲು ನರೇಂದ್ರ ಮೋದಿ ಅವರ ಎನ್‌ಡಿಎ ಸರಕಾರ ಮುಂದಾಗಿದೆ. ದೀಪಾವಳಿ ಹಬ್ಬದ ಸಂದರ್ಭ (ಅ.29) ಪ್ರಧಾನಿ ಮೋದಿ ಅವರೇ ಈ ವಿಶೇಷ ಕೊಡುಗೆಯ ಘೋಷಣೆ ಮಾಡಲಿದ್ದಾರೆ ಎನ್ನಲಾಗಿದೆ.

70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲ ನಾಗರಿಕರಿಗೂ ಅವರ ಆದಾಯ ಲೆಕ್ಕಿಸದೇ 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯಡಿ ಉಚಿತ ಚಿಕಿತ್ಸಾ ಸೌಲಭ್ಯದ ಆರೋಗ್ಯ ರಕ್ಷಣೆ ನೀಡುವುದೇ ಈ ಕೊಡುಗೆಯ ಉದ್ದೇಶವಾಗಿದೆ. ಇದರಿಂದ 4.50 ಕೋಟಿ ಕುಟುಂಬಗಳ ಅಂದಾಜು 6 ಕೋಟಿ ಹಿರಿಯ ನಾಗರಿಕರಿಗೆ ಪ್ರಯೋಜನವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಜತೆಗೆ ರೋಗನಿರೋಧಕ ಲಸಿಕೆ ನೋಂದಣಿಗೆ ಈ ಹಿಂದೆ ಅಭಿವೃದ್ಧಿಪಡಿಸಿದ್ದ 'ಯು- ವಿನ್' ಪೋರ್ಟಲ್‌ನಲ್ಲೇ ಈ ಯೋಜನೆಗೆ ಒಳಪಡಲು ವಿದ್ಯುನ್ಮಾನ ನೋಂದಣಿಗೆ ಅವಕಾಶ ಮಾಡಿಕೊಡಲಾಗುವುದು. ಪ್ರಸ್ತುತ ಇದು ಪ್ರಾಯೋಗಿಕ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅ.29ರಂದು ಈ ಪೋರ್ಟಲ್‌ಗೆ ಅಧಿಕೃತವಾಗಿ ಚಾಲನೆ ನೀಡಲಾಗುವುದು. 70 ವರ್ಷದವರಿಗೆ ಉಚಿತ ಚಿಕಿತ್ಸೆ ಯೋಜನೆಗೆ ಪ್ರಧಾನಿ ಅಂದೇ ಚಾಲನೆ ನೀಡಲಿದ್ದಾರೆ. ಇದಿಷ್ಟೇ ಅಲ್ಲದೇ, ಇನ್ನೂ ಕೆಲ ಹೊಸ ಯೋಜನೆಗಳನ್ನೂ ಮಂಗಳವಾರ ಆರಂಭಿಸಲಾಗುವುದು ಎಂದು ಮೂಲಗಳು ತಿಳಿಸಿವೆ.



ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ವಿದ್ಯಾರ್ಥಿವೇತನ/ಪ್ರೋತ್ಸಾಹ ಧನ ಅಭಿಯಾನ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

I. ವಿದ್ಯಾರ್ಥಿವೇತನ ಕಾರ್ಯಕ್ರಮ

2024–25ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. 1 – 8ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ ರೂ. 6 ಲಕ್ಷ ಹಾಗೂ 9–10ನೇ ತರಗತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಾರ್ಷಿಕ ಆದಾಯ ಮಿತಿ ರೂ.2.5 ಲಕ್ಷಗಳು.

Website ವಿವರ
https://ssp.postmatric.karnataka.gov.in/

Bio Metric e-Authentication : ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (9 ಮತ್ತು 10ನೇ ತರಗತಿ), ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕಡ್ಡಾಯವಾಗಿ Bio Metric e-Authentication ಗೆ ಒಳಗಾಗಬೇಕಾಗಿರುತ್ತದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿ ಮತ್ತು EDCS ನಾಗರಿಕ ಸೇವಾ ಕೇಂದ್ರಗಳಾದ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ Bio Metric e-Authentication ಮಾಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಸೇವೆಯು ಉಚಿತವಾಗಿದ್ದು, EDCS ನಾಗರಿಕ ಸೇವಾ ಕೇಂದ್ರಗಳಲ್ಲಿ ವಿದ್ಯಾರ್ಥಿಯು ಯಾವುದೇ ಹಣ ಪಾವತಿಸುವಂತಿಲ್ಲ.

II. ಪ್ರೋತ್ಸಾಹ ಧನ ಕಾರ್ಯಕ್ರಮ: ಎಸ್. ಎಸ್. ಎಲ್. ಸಿ. ಪ್ರೋತ್ಸಾಹ ಧನ

10ನೇ ತರಗತಿ/ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

III. ಮೆಟ್ರಿಕ್ ನಂತರದ ಪ್ರೋತ್ಸಾಹ ಧನ

12ನೇ ತರಗತಿ/ಪಿ.ಯು.ಸಿ, ಪಾಲಿಟೆಕ್ನಿಕ್ ಡಿಪ್ಲೋಮಾ, ಐ.ಟಿ.ಐ., ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

Website ವಿವರ
https://sw.kar.nic.in/swprizemoney/Home.aspx

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಿರುವುದು.

IV. ಆಧಾರ್ ಸೀಡಿಂಗ್

ವಿದ್ಯಾರ್ಥಿವೇತನ/ಪ್ರೋತ್ಸಾಹ ಧನ ಕಾರ್ಯಕ್ರಮದಡಿ ಮಂಜೂರಾದ ಮೊತ್ತವನ್ನು ವಿದ್ಯಾರ್ಥಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದ್ದು, ಸದರಿ ಪ್ರಕ್ರಿಯೆಗೆ ವಿದ್ಯಾರ್ಥಿಯ ಆಧಾರ್ ಸಂಖ್ಯೆಯನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ.

V. ವಿದ್ಯಾರ್ಥಿಯು ಕೈಗೊಳ್ಳಬೇಕಾದ ಕ್ರಮಗಳು

1. ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿ, ತಮ್ಮ ಆಧಾರ್ Active ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಆಧಾರ್ ವಿವರಗಳನ್ನು ಹಾಗೂ Biometric ವಿವರಗಳನ್ನು Update ಮಾಡಿಸುವುದು.
2. ಬ್ಯಾಂಕ್ ಖಾತೆ Active ಇರುವ ಬಗ್ಗೆ ಹಾಗೂ ಸದರಿ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಆಗಿರುವ ಬಗ್ಗೆ ಖಚಿತ ಮಾಡಿಕೊಳ್ಳುವುದು.
3. ಒಂದುವೇಳೆ ತಮ್ಮ ಆಧಾರ್ ಬ್ಯಾಂಕ್ ಖಾತೆಯೊಂದಿಗೆ ಸೀಡಿಂಗ್ ಆಗದೇ ಇದ್ದಲ್ಲಿ, ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಜೋಡಣೆ ಮಾಡಲು ಕ್ರಮವಹಿಸುವುದು ಅಥವಾ ಅಂಚೆ ಕಛೇರಿಯಲ್ಲಿ IPPB ಖಾತೆಯನ್ನು ತೆರೆಯುವುದು.
4. ಆಧಾರ್ ಜೋಡಣೆ ಬಗ್ಗೆ DBT Karnataka Mobile App ನಲ್ಲಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಇಲಾಖೆಯ ಸಹಾಯವಾಣಿ: 9482300400

@swd.gok

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸಮಾಚಾರ ಸಣ್ಣದಲ್ಲ

ಶಿಶುಗಳ ಸಾವು: ವರದಿ ಕೇಳಿದ ಸಚಿವೆ

ಬೆಳಗಾವಿ : ಬೆಳಗಾವಿ ಬಿಮ್ಸ್ ನಲ್ಲಿ 41 ನವಜಾತ ಶಿಶು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಿಮ್ಸ್ ನಿರ್ದೇಶಕರಿಗೆ ಸ್ಪಷ್ಟನೆ ಕೇಳಿದ್ದಾರೆ.

ಶಿಶುಗಳ ಮರಣ ಪ್ರಕರಣ ಕುರಿತು ಹೇಳಿಕೆ ನೀಡಿರುವ ಸಚಿವರು, ಇದು ಗಂಭೀರವಾದ ಪ್ರಕರಣ ಆಗಿದ್ದು , ಸ್ಪಷ್ಟನೆ ಕೇಳಿದ್ದೇನೆ. ಅಲ್ಲದೆ ಆರೋಗ್ಯ ಸಚಿವರೊಂದಿಗೆ ಮಾತುಕತೆ ನಡೆಸುವುದಾಗಿ ಸ್ಪಷ್ಟನೆ ನೀಡಿದ್ದಾರೆ.ಕಳೆದ ಮೂರು ತಿಂಗಳ ಅವಧಿಯಲ್ಲಿ ನಗರದ ಬಿಮ್ಸ್ ಆಸ್ಪತ್ರೆಯಲ್ಲಿ 41 ನವಜಾತ ಶಿಶುಗಳು ಮೃತಪಟ್ಟಿದ್ದು ಈ ಕುರಿತು ವಿಶ್ವವಾಣಿ ಶನಿವಾರ ವರದಿ ಪ್ರಕಟಿಸಿತ್ತು. ಶಿಶುಗಳ ಸಾವಿಗೆ ಆಸ್ಪತ್ರೆಯ ಏರ್ ಕಂಪ್ರೆಸರ್ ಕೆಟ್ಟಿರುವುದೇ ಕಾರಣ ಎಂಬ ಆರೋಪ ಕೇಳಿಬಂದಿದೆ.

ಭ್ರಷ್ಟಾಚಾರ ದಾಖಲೆ ಇದ್ದರೆ ಬಹಿರಂಗ ಪಡಿಸಿ

ಬೆಳಗಾವಿ: ನನ್ನ ಭ್ರಷ್ಟಾಚಾರದ ದಾಖಲೆ ಬಿಡುಗಡೆ ಮಾಡು ಎಂದು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸವಾಲು ಹಾಕಿದ್ದಾರೆ. ಭಾನುವಾರ ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬೈರತಿ ಸುರೇಶ್ ನೂರಾರು ಬುಡಾದ ದಾಖಲಾತಿಯನ್ನು ತಂದು ಸುಟ್ಟು ಹಾಕಿದ ಕುರಿತು ನಾನು ಧ್ವನಿ ಎತ್ತಿದೆ. ಈ ಕುರಿತು ಅವರು ನನ್ನ ಮೇಲೆ ಬೇರೆ ಬೇರೆ ಆರೋಪ ಮಾಡುತ್ತಿದ್ದಾರೆ. ಸರ್ಕಾರದಲ್ಲಿ ಅನೇಕ ಸಚಿವರು ಭ್ರಷ್ಟಾಚಾರದ ತನಿಖೆ ಎದುರಿಸಿ ದ್ದಾರೆ. ಶೋಭಾ ಕರಂದ್ಲಾಜೆ ಯಾವತ್ತಿಗೂ ಭ್ರಷ್ಟಾ ಚಾರ ಮಾಡಿಲ್ಲ, ಬಿಜೆಪಿಯಲ್ಲಿ ಕೊಟ್ಟ ಜವಾಬ್ದಾರಿ ಯನ್ನು ಜವಾಬ್ದಾರಿಯಿಂದ ಮಾಡುವವಳು ನಾನು ಎಂದು ಎಚ್ಚರಿಕೆ ಕೊಟ್ಟರು. ಪೊನ್ನಣ್ಣನಿಗೂ ವಿದ್ಯುತ್ ಇಲಾಖೆಗೂ ಏನು ಸಂಬಂಧ ಏನು ಮಾಡಲು ಹೊರಟ್ಟಿದ್ದೀರಿ? ನಕಲಿ ದಾಖಲೆ ಸೃಷ್ಟಿಸಲು ಪೊನ್ನ ಣ್ಣನಿಗೆ ಜವಾಬ್ದಾರಿ ನೀಡಿದ್ದೀರಾ? ಪೊನ್ನಣ್ಣ ಇರುವು ದು ಮುಖ್ಯ ಮಂತ್ರಿಯ ಕಾನೂನು ಸಲಹೆಗಾರರಾಗಿ ಅವರಿಗೆ ನೀವು ವಿದ್ಯುತ್ ಇಲಾಖೆಯ ಜವಾಬ್ದಾರಿ ನೋಡಿ ಎಂದರೆ ಅದರಲ್ಲಿಯೂ ಭ್ರಷ್ಟಾಚಾರ ಮಾಡಲು ಹೊರಟ್ಟಿದೀರಿ ಎನ್ನುವ ಸಂಶಯ ಕಾಡುತ್ತಿದೆ. ನಿಮ್ಮಲ್ಲಿ ಯಾವ ದಾಖಲಾತಿ ಇದೆ ತಕ್ಷಣ ಬಹಿರಂಗ ಪಡಿಸಿ ಎಂದು ಸವಾಲ್ ಹಾಕಿದರು.

ಯಾದಗಿರಿ ಜಿಲ್ಲೆಯಲ್ಲೂ ವಕ್ಫ್ ಆಸ್ತಿ ಲೂಟಿ

ಯಾದಗಿರಿ: ವಿಜಯಪುರಕ್ಕಿಂತ ಮೊದಲು ಯಾದಗಿರಿ ಜಿಲ್ಲೆಯಲ್ಲಿಯೂ ವಕ್ಫ್ ಆಸ್ತಿ ಕಬಳಿಕೆಯಾಗಿದ್ದು, ಎಷ್ಟು ಭೂ ಪರಿವರ್ತನೆಗೊಂಡು ನಿವೇಶನಗಳಾಗಿ ಬದಲಾಗಿವೆ ಎನ್ನುವುದು ಹೊರಬೀಳಬೇಕಾಗಿದೆ ಎಂದು ಗುರುಮಠಕಲ್ ಶಾಸಕ ಕಂದಕೂರ ಬಾಂಬ್ ಸಿಡಿಸಿದ್ದಾರೆ. ಯಾದಗಿರಿ ಜಿಲ್ಲಾಡಳಿತ ಭವನದ ಸುತ್ತಲಿನ ವಕ್ಫ್ ಆಸ್ತಿ ಕಬಳಿಕೆ ಮಾಡಿದ್ದಾರೆ ಎಂದು ದೂರಿದ ಅವರು, ಲೂಟಿಯಾಗಿರುವ ಕುರಿತು ದಾಖಲೆ ಕಲೆಹಾಕಲಾಗುತ್ತಿದೆ. ರೈತರಿಗೆ ಅನ್ಯಾಯವಾದರೆ ನಾವು ಧ್ವನಿ ಎತ್ತುತ್ತೇವೆ ಅದರಂತೆ ಚಳಿಗಾಲದ ಅಧಿವೇಶನದಲ್ಲಿ ಈ ಬಗ್ಗೆ ಸದನದಲ್ಲಿ ಮಾತನಾಡುವುದಾಗಿ ತಿಳಿಸಿದರು.

ತೇಜಸ್ವಿ ಸೂರ್ಯ ಐರನ್‌ಮ್ಯಾನ್

← ಮೊದಲಪುಟದಿಂದ

ಇದರಲ್ಲಿ ಭಾಗವಹಿಸಿ, ಗೆದ್ದಿರುವುದರಿಂದ ಅತ್ಯಂತ ಸಂತೋಷವಾಗಿದೆ. ನನ್ನ ದೈಹಿಕ ಸಾಮರ್ಥ್ಯ ದೇಶದ ಅಭ್ಯುದಯಕ್ಕೆ ಸಹಕಾರಿ ಯಾಗಲಿದೆ ಎಂಬ ವಿಶ್ವಾಸ ಮೂಡಿದೆ. ದೊಡ್ಡ ಮಹತ್ವಾಕಾಂಕ್ಷೆಗಳನ್ನು ಬೆನ್ನಟ್ಟುತ್ತಿರುವ ಭಾರತವು ಯುವ ರಾಷ್ಟ್ರವಾಗಿ ರೂಪುಗೊಳಿ ಸುವಲ್ಲಿ ನಮ್ಮ ದೈಹಿಕ ಸಾಮರ್ಥ್ಯವನ್ನು ಪೋಷಿಸುವಲ್ಲಿ ಹೆಚ್ಚಿನ ಉತ್ತೇಜನ ದೊರಕಿದ್ದು, ಭಾರತವನ್ನು ಆರೋಗ್ಯಕರ ರಾಷ್ಟ್ರವಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಮೂಲಕ ನಮ್ಮ ದೈಹಿಕ ಸಾಮರ್ಥ್ಯವನ್ನು ಸ್ಥಿರವಾಗಿಸಿಕೊಳ್ಳುವ ಮೂಲಕ ಯಾವುದೇ ಉದ್ಯಮದಲ್ಲಿ ಯಶಸ್ಸಿನ ಸಾಧ್ಯತೆಗಳನ್ನು ಸುಧಾರಿಸಬಹುದಾಗಿದೆ. ಫಿಟ್ ಇಂಡಿಯಾ ಅಭಿಯಾನವು ಕ್ರೀಡಾ ಸ್ಫೂರ್ತಿ, ಜಾಗೃತಿಯನ್ನು ಹೆಚ್ಚಿಸುವಲ್ಲಿ ಮತ್ತು ಹೆಚ್ಚಿನ ಜನರನ್ನು ಫಿಟ್ನೆಸ್ ದಿನಚರಿಗೆ ತರುವಲ್ಲಿ ಸಹಕಾರಿಯಾಗಿದೆ. ಅದು ನಮ್ಮ ರಾಷ್ಟ್ರಕ್ಕೆ ಮೂಲಭೂತವಾಗಿ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಗೆಲುವು ಸಾಧಿಸಿರುವ ಬಗ್ಗೆ ತೇಜಸ್ವಿ ಸೂರ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಪ್ರಧಾನಿ ಮೋದಿ, ಬಿ.ಎಲ್. ಸಂತೋಷ್ ಸೇರಿದಂತೆ ಹಲವು ನಾಯಕರು ಶುಭ ಹಾರೈಸಿದ್ದಾರೆ.

{ಯಾಸೀರ್ ಪಠಾಣ್} ಕಾಂಗ್ರೆಸ್ ಅಭ್ಯರ್ಥಿ

ಅಜ್ಜ ಸಿಎಂ ಆಗಿದ್ದು, ತಂದೆ ಸಿಎಂ ಆಗಿದ್ದು, ಮುಂದೆ ಭರತ್ ಬೊಮ್ಮಾಯಿ ಸಿಎಂ ಆಗುವುದೇ ಬೊಮ್ಮಾಯಿ ಕುಟುಂಬದ ಶಾಶ್ವತ ಗ್ಯಾರಂಟಿ. ಬಸವರಾಜ ಬೊಮ್ಮಾಯಿ ಶಾಸಕರಾಗಿದ್ದ ಕಳೆದ ಒಂದೂವರೆ ವರ್ಷ ಶಿಗ್ಗಾವಿಯಲ್ಲಿ ಯಾವುದೇ ಕೆಲಸ ಮಾಡಿಲ್ಲ. ಕ್ಷೇತ್ರದಲ್ಲಿ ಒಮ್ಮೆ ಓಡಾಡಿ ಬನ್ನಿ, ತಲೆ ಎತ್ತಿಕೊಂಡು ಓಡಾಡಲು ಆಗಲ್ಲ, ರಸ್ತೆ ಎಲ್ಲ ಹದಗೆಟ್ಟಿವೆ.

ಲೇಡಿ ಫೋನ್ ನಲ್ಲಿ ಎಂಟು ವಿಡಿಯೋಗಳು ಪತ್ತೆ.! | ಪ್ರಭಾವಿ ಮಾಜಿ ಸಚಿವರಿಗೆ ಗಾಳ ಹಾಕಿದ ಪ್ರಕರಣ, ತನಿಖೆ ತೀವ್ರ

ಹನಿಟ್ರ್ಯಾಪ್: ಮಹಿಳೆಯಿಂದ ಸ್ಮಾರ್ಟ್‌ಫೋನ್ ವಶ

ಕಲಬುರಗಿ: ಜಿಲ್ಲೆಯ ಪ್ರಭಾವಿ ಮಾಜಿ ಸಚಿವರೊಬ್ಬರಿಗೆ ಹನಿಟ್ರ್ಯಾಪ್ ಜಾಲದಲ್ಲಿ ಸಿಲುಕಿಸಿ ಬ್ಲ್ಯಾಕ್ಮೇಲ್ ಮಾಡಿ 20 ಲಕ್ಷಕ್ಕೆ ಬೇಡಿಕೆ ಇಟ್ಟು, ಹಣ ಪಡೆಯುವ ಸಂದರ್ಭದಲ್ಲೇ ಬೆಂಗಳೂರಿನ ಸಿಸಿಬಿ ಪೊಲೀಸರ ಬಲೆಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿರುವ ಕಾಂಗ್ರೆಸ್ ನಾಯಕಿ ಮಂಜುಳಾ ಪಾಟೀಲಳ ಖತರ್ನಾಕ್ ಐಡಿಯಾ ತನಿಖೆ ವೇಳೆ ಬಹಿರಂಗಗೊಂಡಿದೆ.

ಬ್ಲ್ಯಾಕ್ಮೇಲ್ ಮಾಡಿ 20 ಲಕ್ಷ ರು. ಹಣ ಪಡೆಯುವ ಸಂದರ್ಭದಲ್ಲಿ ಬೆಂಗಳೂರಿನ ಸಿಸಿಬಿ ಪೊಲೀಸರ ಬಲೆಗೆ ಬಿದ್ದಿರುವ ಲೇಡಿಯ ಹನಿಟ್ರ್ಯಾಪ್ ಪ್ರಕರಣದ ಕುರಿತು ತನಿಖೆ ನಡೆಯುತ್ತಿದ್ದು, ಆರೋಪಿ ಕಾಂಗ್ರೆಸ್ ನಾಯಕಿ ಮಂಜುಳಾ ಪಾಟೀಲಳ ವೇನಿಟಿ ಬ್ಯಾಗ್ ನಲ್ಲಿ ಆರು ಸ್ಮಾರ್ಟ್ ಫೋನ್ ಗಳು ಸಿಕ್ಕಿದ್ದು, ಕೇವಲ ಮಾಜಿ ಸಚಿವರಿಗಷ್ಟೇ ಅಲ್ಲದೇ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ, ಪಿಡಬ್ಲ್ಯೂಡಿ ಅಧಿಕಾರಿ, ಪೊಲೀಸ್ ಅಧಿಕಾರಿ ಸೇರಿ ಸುಮಾರು ಎಂಟು ಜನರ ವಿಡಿಯೋಗಳು ಮಂಜುಳಾ ಮೊಬೈಲ್ ನಲ್ಲಿ ಲಭ್ಯವಾಗಿರುವ ಸ್ಫೋಟಕ ಮಾಹಿತಿ ಬಯಲಾಗಿದೆ.

ಶ್ರೀಮಂತ ರಾಜಕಾರಣಿಗಳೇ ಟಾರ್ಗೆಟ್ : ಶಾರ್ಟ್ ಕಟ್ ನಲ್ಲಿ ಹಣ ಮಾಡುವ ಉದ್ದೇಶದಿಂದ ಶ್ರೀಮಂತರು, ಉದ್ಯಮಿಗಳು ಹಾಗೂ ಪ್ರಭಾವಿ ರಾಜಕಾರಣಿ ಹಾಗೂ ಅಧಿಕಾರಿಗಳನ್ನು ತನ್ನ ಮೋಹಜಾಲದ ಬಲೆಗೆ ಬೀಳಿಸಿಕೊಳ್ಳುತ್ತಿದ್ದಳು ಎಂದು ತನಿಖೆ ವೇಳೆ ಬಟಾಬಯಲಾಗಿದೆ. ರೀಲ್ಸ್ ಮಾಡುತ್ತ ಕಲಬುರಗಿ ಜಿಲ್ಲೆಯ ರಾಜಕಾರಣಿ, ಉದ್ಯಮಿ ಹಾಗೂ ಹಣ ಇರುವ ಹಾಗೂ ಮರ್ಯಾದೆಗೆ ಅಂಜುವವರನ್ನೇ ಮಂಜುಳಾ ಪಾಟೀಲ್ ತನ್ನ ಜಾಲದಲ್ಲಿ ಕೆಡವುತ್ತಿದ್ದಳು ಎಂದು ತಿಳಿದುಬಂದಿದೆ. ಇತ್ತೀಚಿಗೆ ಪ್ರಭಾವಿ ಮಾಜಿ ಸಚಿವರಿಗೆ ಹನಿಟ್ರ್ಯಾಪ್ ಪ್ರಕರಣದಲ್ಲಿ ಸಿಲುಕಿಸಿ ಅವರ ಪುತ್ರನಿಗೆ ವಾಟ್ಸಾಪ್ ಮೂಲಕ ಕರೆ ಮಾಡಿ 20 ಲಕ್ಷ ರು.ಗಳಿಗೆ ಬೇಡಿಕೆ ಇಟ್ಟದ್ದ ಆಡಿಯೋ ಇದೀಗ ಪೊಲೀಸರಿಗೆ ಲಭ್ಯವಾಗಿದೆ.

ಮಂಜುಳಾ ಜಾಲದ ಜಾಡು ಪರಿಶೀಲನೆ: ಸಿಸಿಬಿ ಕಮಿಷನರ್ ದಯಾನಂದ ಅವರು ಪ್ರಕರಣದ ತನಿಖೆ ನಡೆಸುತ್ತಿದ್ದು, ಮಂಜುಳಾ ಪಾಟೀಲಳ ಹಿನ್ನೆಲೆ, ಮುನ್ನಲೇ ಕೆದಕುತ್ತಿದ್ದಾರೆ. ಇವಳೊಂದಿಗೆ ಕೇವಲ ಪತಿ ಶಿವರಾಜ್ ಅಷ್ಟೇ ಇದ್ದಾನಾ..? ಅಥವಾ ಇನ್ನೂ ಯಾರು ಇದ್ದಾರೆ..? ಮಂಜುಳಾ ಪಾಟೀಲಳ ಜಾಲ ಎಷ್ಟು ದೊಡ್ಡದಾಗಿದೆ.? ಯಾರ್ಯಾರಿಗೆ ತನ್ನ ಬಲೆಗೆ ಬೀಳಿಸಿ ಅವರ ಬಳಿ ಎಷ್ಟು ಹಣ ಕಿತ್ತಿದ್ದಾಳೆ ಎನ್ನುವ ಬಗ್ಗೆ ವಿಚಾರಣೆ ನಡೆದಿದೆ. ಮಂಜುಳಾ ಹತ್ತಿರ ಸಿಕ್ಕಿರುವ ಮೊಬೈಲ್ ನಲ್ಲಿನ ವಿಡಿಯೊಗಳ ಬಗ್ಗೆ ಪರಿಶೀಲನೆ ನಡೆಯುತ್ತಿದ್ದು, ವಿಡಿಯೊದಲ್ಲಿನ ವ್ಯಕ್ತಿಗಳ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ರಾಜಕಾರಣಿಗಳಿಗೆ ನಡುಕ: ಸದ್ಯ, ಆರೋಪಿ ಕಾಂಗ್ರೆಸ್ ನಾಯಕಿ ಮಂಜುಳಾ ಹಾಗೂ ಆಕೆಯ ಪಾಟೀಲ್ ಶಿವರಾಜ್ ಪಾಟೀಲ್ ಇಬ್ಬರನ್ನು ಬಂಧಿಸಿ ಹೆಚ್ಚಿನ ವಿಚಾರಣೆ ನಡೆಸುವ ನಿಟ್ಟಿನಲ್ಲಿ ಸಿಸಿಬಿ ಪೊಲೀಸರು ಎಂಟು ದಿನಗಳ ಕಾಲ ಕಸ್ಟಡಿಗೆ ಪಡೆದಿದ್ದಾರೆ. ಇಬ್ಬರ ಮೊಬೈಲ್ ಫೋನ್ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಇದೀಗ ಹನಿಟ್ರ್ಯಾಪ್ ಪ್ರಕರಣದಲ್ಲಿ ಹಲವರ ವಿಡಿಯೊಗಳು ಮಂಜುಳಾ ಮೊಬೈಲ್ ನಲ್ಲಿ ಲಭ್ಯವಾದ ಬೆನ್ನಲೇ ಜಿಲ್ಲೆಯ ರಾಜಕಾರಣಿಗಳಲ್ಲಿ ಡವಡವ ಶುರುವಾಗಿದೆ.

ಅಶ್ಲೀಲ ಮೆಸೇಜ್ ರವಾನೆ

ಆರೋಪಿ ಮಂಜುಳಾ ಪಾಟೀಲ್ ಮಾಜಿ ಸಚಿವರ ಮೊಬೈಲ್ ಸಂಖ್ಯೆ ಪಡೆದು ಮೊದಲು ಗುಡ್ ಮಾರ್ನಿಂಗ್, ಗುಡ್‌ನೈಟ್, ಸಂದೇಶ ಕಳುಹಿಸುತ್ತಿದ್ದಳು, ಬಳಿಕ ಮಾಜಿ ಸಚಿವ ಅವಳ ಮೆಸೇಜ್ ಗೆ ಉತ್ತರಿಸಿದ ಬಳಿಕ ಆಕೆ ಅಶ್ಲೀಲ ಸಂದೇಶ ರವಾನೆ, ವಿಡಿಯೋ ಕಾಲ್ ಮಾಡಿದ್ದಳು ಎಂದು ತಿಳಿದುಬಂದಿದೆ. ಬಳಿಕ ಕಾಲ್ ರೆಕಾರ್ಡರ್ ಆಗಬಾರದು ಎನ್ನುವ ಉದ್ದೇಶದಿಂದ ಮಾಜಿ ಸಚಿವ ಪುತ್ರನಿಗೆ ವಾಟ್ಸಪ್ ಕಾಲ್ ಮಾಡಿದ ಆರೋಪಿ ಮಹಿಳೆ ಮಂಜುಳಾ ಪಾಟೀಲ್ 20 ಲಕ್ಷ ರುಪಾಯಿಗೆ ಬೇಡಿಕೆ ಇಟ್ಟದ್ದಳು. ಮಾಜಿ ಸಚಿವರ ಪುತ್ರ ಸಿಸಿಬಿ ನೀಡಿದ ದೂರಿನ ಹಿನ್ನೆಲೆಯಲ್ಲಿ ಮಂಜುಳಾ ಪಾಟೀಲ್ ಹಾಗೂ ಆಕೆಯ ಪತಿ ಶಿವರಾಜ್ ಪಾಟೀಲ್ ಇಬ್ಬರನ್ನೂ ಪೊಲೀಸರು ಬಂಧಿಸಿದ್ದಾರೆ.

ಒಂದು ರು.ಕಡಿಮೆ ಇದ್ರೂ ಹಣ ತೆಗೆದುಕೊಳ್ಳಲ್ಲ

ಹನಿಟ್ರ್ಯಾಪ್ ಮುಖಾಂತರ ಸಚಿವರ ಮಗನ ಮೂಲಕ ಹಣ ವಸೂಲಿಗೆ ದಂಪತಿ ಇಳಿದಿದ್ದಾರೆ. ಈ ವೇಳೆ ಮಾಜಿ ಸಚಿವರ ಮಗ ಒಂದು ಹಂತದಲ್ಲಿ ಹಣದ ಚೌಕಾಸಿಗೆ ಇಳಿದಿದ್ದರು. ಆ ವೇಳೆ ಮಂಜುಳಾ, ನಿಮ್ಮ ತಂದೆ ಮಾಡಿರುವ ಘನಂದಾರಿ ಕೆಲಸಕ್ಕೆ ಒಂದು ರು. ಕೂಡ ಕಡಿಮೆ ಮಾಡುವುದಿಲ್ಲ, ಹಣ ನೀಡದಿದ್ದರೆ ವಿಡಿಯೋ ಮತ್ತು ಚಾಟಿಂಗ್ ವೈರಲ್ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ಕಲಬುರಗಿಗೆ ಕಳಂಕ ತಂದ ಹನಿಟ್ರ್ಯಾಪ್

ಕಲಬುರಗಿ ಜಿಲ್ಲೆಯಲ್ಲಿ ಹನಿಟ್ರ್ಯಾಪ್ ಪ್ರಕರಣಗಳು ರಾಜ್ಯಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗುತ್ತಿವೆ. ಇತ್ತೀಚಿಗೆ ಜಿಲ್ಲೆಯ ಉದ್ಯಮಿಗಳನ್ನು ಹನಿ ಡ್ರಾಪ್ ಜಾಲದ ಬಲೆಯಲ್ಲಿ ಬಿಳಿಸಿ, ಲಕ್ಷಾಂತರ ರುಪಾಯಿ ವಸೂಲಿ ಮಾಡಿದ ಪ್ರಕರಣಕ್ಕೆ ಸಂಬಂಧ ಎಂಟು ಜನರನ್ನು ಬಂಧಿಸಲಾಗಿತ್ತು. ಅಲ್ಲದೇ, ಕಲಬುರಗಿಯ ಕೇಂದ್ರ ಕಾರಾಗೃಹದಲ್ಲಿ ಜೈಲು ಕೈದಿಗಳೇ ಅಧಿಕಾರಿಗಳನ್ನು ಹನಿ ಡ್ರಾಪ್ ಮಾಡುವುದಾಗಿ ಬೆದರಿಕೆ ಹಾಕಿರುವ ಪ್ರಕರಣ ಸಹ ರಾಜ್ಯಮಟ್ಟದಲ್ಲಿ ಸದ್ದು ಮಾಡಿತು. ಇದೀಗ, ಮಾಜಿ ಸಚಿವರೊಬ್ಬರಿಗೆ ಕಾಂಗ್ರೆಸ್ ನಾಯಕಿ ಮಂಜುಳಾ ಪಾಟೀಲ್ ಹನಿಟ್ರ್ಯಾಪ್ ಪ್ರಕರಣದಲ್ಲಿ ಬ್ಲಾಕ್ಮೇಲ್ ಮಾಡಿ 20 ಲಕ್ಷಕ್ಕೆ ಬೇಡಿಕೆ ಇಟ್ಟು ರೆಡ್ ಅಂಡ್ ಆಗಿ ಸಿಸಿಬಿ ಪೊಲೀಸರ ಬಲೆಗೆ ಬಿದ್ದಿದ್ದಾಳೆ. ಈ ಪ್ರಕರಣಗಳು ಜಿಲ್ಲೆಯ ಮಾನ -ಮರ್ಯಾದೆಯನ್ನು ರಾಜ್ಯಮಟ್ಟದಲ್ಲಿ ಹರಾಜು ಹಾಕಿ, ಕಳಂಕ ತಂದಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಉಪಚುನಾವಣೆ ವೇಳೆ ಮೇಲೆ ವಕ್ಫ್ ಕರಿನೆರಳು | ವಿಕೋಪಕ್ಕೆ ಹೋಗುವ ಮುನ್ನ ಎಚ್ಚೆತ್ತುಕೊಳ್ಳಬೇಕಿದೆ ಸರಕಾರ

ಮೇಲೆದ್ದ ವಕ್ಫ್ ವಿವಾದ: ಎಚ್ಚರಿಕೆ ಘಂಟೆ

ಬೆಂಗಳೂರು: ಚುನಾವಣಾ ವೇಳೆ ಎದ್ದು ನಿಲ್ಲುವ ಜಾತಿಭೂತ, ಭೂ ವಿವಾದ, ಕೋಮು ಪ್ರಚೋದನೆ ವಿಚಾರಗಳು ಉಪಚುನಾವಣೆ ಮೇಲೂ ಕರಿ ನೆರಳು ಬೀಳುವ ಸಾಧ್ಯತೆ ಇದೆ. ಸಚಿವರೊಬ್ಬರ ನಡೆಯಿಂದಾಗಿ ವಕ್ಫ್ ವಿವಾದ ತಾರಕಕ್ಕೇರುವ ಸಂಭವವಿದ್ದು ಸರಕಾರ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಿದೆ.

ವಿಜಯಪುರದಲ್ಲಿನ ರೈತರ ಜಾಗಕ್ಕೆ ಸಂಬಂಧಪಟ್ಟಂತೆ ರಾತ್ರೋರಾತ್ರಿ ವಕ್ಫ್ ಬೋರ್ಡ್‌ಗೆ ಖಾತೆ ಮಾಡಿಕೊಡುವ ವಿಚಾರ ಸಚಿವ ಜಮೀರ್ ಅಹಮದ್ ಅವರ ಪ್ರವೇಶದಿಂದಾಗಿ ಮುನ್ನೆಲೆಗೆ ಬಂದಿದೆ. ಈ ವಿಚಾರವಾಗಿ ಮಾಜಿ ಸಚಿವ ಬಸನಗೌಡ ಯತ್ನಾಳ್ ಹಾಗೂ ಸಚಿವ ಜಮೀರ್ ಮದ್ಯೆ ಮಾತಿನ ಚಕಮಕಿ ನಡೆದಿತ್ತು. ಇದೇ ವೇಳೆ ವಕ್ಫ್ ಆಸ್ತಿ ಯಾರಪ್ಪನದ್ದಲ್ಲ ಎಂದಿದ್ದ ಜಮೀರ್, ಅಪಪ್ರಚಾರ ಮಾಡಬೇಡಿ ಎಂದು ಯತ್ನಾಳ್‌ಗೆ ಸವಾಲು ಹಾಕಿದ್ದರು.

ವಿಶ್ವವಾಣಿ ವಿಶೇಷ

ಇದಕ್ಕೆ ತಿರುಗೇಟು ನೀಡಿದ್ದ ಯತ್ನಾಳ್ ವಿಜಯಪುರದಲ್ಲಿ ಬೇರೆ ಯವರಿಗೆ ಸೇರಿದ ಆಸ್ತಿ ಗೆಲ್ಲಾ ಖಾತೆ ಮಾಡಿಸಿಕೊಳ್ಳಲು ಜಮೀರ್ ಅಹಮದ್ ಬರುತ್ತಿದ್ದಾರೆ ಎಂದು ಹೇಳಿಕೆ ಸ್ಥಳೀಯವಾಗಿ ಕಾವೇರಿತ್ತು. ಇದಕ್ಕೆ ಉತ್ತರಿಸಿದ್ದ ಸಚಿವ ಜಮೀರ್, ವಕ್ಫ್ ಆಸ್ತಿ ಸರಕಾರದಿಂದ ಪಡೆದಿಲ್ಲ. ಬದಲಿಗೆ ಸರ್ಕಾರಿ ಸಂಸ್ಥೆಗಳೇ ವಕ್ಫ್ ಆಸ್ತಿ ಒತ್ತುವರಿ ಮಾಡಿವೆ. ಖಬರಸ್ಥಾನಕ್ಕೆ ಹೊರತು ಪಡಿಸಿ ವಕ್ಫ್ ಬೋರ್ಡ್‌ಗೆ ಸರಕಾರ ಜಮೀನು ಕೊಟ್ಟಿಲ್ಲ. ವಕ್ಫ್ ಆಸ್ತಿ ನಿಮ್ಮಪ್ಪನದೂ ಅಲ್ಲ, ನಮ್ಮಪ್ಪನದು ಅಲ್ಲ. ಸಮುದಾ ಯದ ಒಳಿತಿಗಾಗಿ ದಾನಿಗಳು ಕೊಟ್ಟ ದೇವರ ಆಸ್ತಿ ಎಂದಿದ್ದರು.

ತಿರುಗಿಬಿದ್ದ ಬಿಜೆಪಿ

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಬಿಜೆಪಿ, ವಕ್ಫ್ ಕಾಯಿದೆ ಹೆಸರಿನಲ್ಲಿ ರೈತರ ಜಮೀನು ಹೊಡೆದುಕೊಳ್ಳುವ ಹುನ್ನಾರ ನಡೆಯುತ್ತಿದೆ. ಸಚಿವರು ಹೇಳಿದ್ದರಿಂದ ವಿಜಯಪುರದಲ್ಲಿ ರೈತರಿಗೆ ನೋಟಿಸ್ ನೀಡಿದ್ದಾರೆ. ರೈತರು ಹಲ ದಶಕಗಳಿಂದ ಕೃಷಿ ಮಾಡುತ್ತಿದ್ದ ಜಮೀನು ಕೂಡ ವಕ್ಫ್ ಆಸ್ತಿ ಎಂದು ಅಧಿಕಾರಿಗಳ ಮೂಲಕ ನೋಟಿಸ್ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವ ಸಿದ್ದರಾಮಯ್ಯರ ಕಾಂಗ್ರೆಸ್ ಸರಕಾರದ ಬೆಂಬಲ ವಕ್ಫ್ ಬೋರ್ಡ್‌ಗೆ ಇರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದರು. ಇದೇ ವೇಳೆ ವಿಜಯನಗರದ ರೈತರು, ಸಂಸದ ಹಾಗೂ ವಕ್ಫ್ ಕಾಯಿದೆ -2024ರ ಜಂಟಿ ಸದನ ಸಮಿತಿಯ ಸದಸ್ಯರಾದ ತೇಜಸ್ವಿ ಸೂರ್ಯ ರನ್ನು ಭೇಟಿ ಮಾಡಿ ವಕ್ಫ್ ಅಕ್ರಮಗಳ ವಿರುದ್ಧ ನ್ಯಾಯ ಒದಗಿಸುವಂತೆ ಕೋರಿ ಮನವಿ ಪತ್ರ ಸಲ್ಲಿಸಿದ್ದರು. ಇದಕ್ಕೆ ರೈತರಿಗೆ ನ್ಯಾಯ ಕೊಡಿಸುವ ಭರವಸೆ ಸಂಸದರು ನೀಡಿದ್ದರು.

ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟನೆ

ವಾಕ್ಸಮರ ಹೆಚ್ಚುತ್ತಿದ್ದಂತೇ ಮಧ್ಯಪ್ರವೇಶಿಸಿದ್ದ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್, ವಕ್ಫ್ ಆಸ್ತಿ ಬರೀ 11 ಎಕರೆ. ಮಿಕ್ಕಿದ್ದು ಹೊನವಾಡ ಗ್ರಾಮದ ರೈತರದು ಎಂದರಲ್ಲದೆ 1974ರ ಗೆಜೆಟ್ ನಲ್ಲಿನ ತಪ್ಪನ್ನು 1977ರಲ್ಲಿ ಸರಿ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದ್ದರು. ಗೆಜೆಟ್‌ನಲ್ಲಿ ತಪ್ಪಾಗಿ ನಮೂದಿಸಿದ್ದರಿಂದ ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದ 1,200 ಎಕರೆ ವಕ್ಫ್ ಆಸ್ತಿ ಎನ್ನುವ ಗೊಂದಲ ಸೃಷ್ಟಿಯಾಗಿದೆ. ಇಲ್ಲಿ 11 ಎಕರೆ ಮಾತ್ರ ವಕ್ಫ್ ಗೆ ಸೇರಿದ್ದು, ಇದರಲ್ಲಿ 10 ಎಕರೆ 14 ಗುಂಟೆಯಲ್ಲಿ ಖಬರಸ್ತಾನವಿದೆ. ಉಳಿದ 24 ಗುಂಟೆಯಲ್ಲಿ ಈದ್ಗಾ, ಮಸೀದಿ ಇತ್ಯಾದಿ ಕಟ್ಟಡಗಳಿವೆ. ಉಳಿದ ಜಮೀನೆಲ್ಲ ರೈತರಿಗೆ ಸೇರಿದೆ. ಇದನ್ನು ತಹಸೀಲ್ದಾರ್ ಮತ್ತು ಜಿಲ್ಲಾಧಿಕಾರಿ ಕೂಡ ಸ್ಪಷ್ಟಪಡಿಸಿದ್ದಾರೆ ಎಂದಿದ್ದರು.

ಭಾಂಡಗೆ ಹಿಗ್ಗಾಮುಗ್ಗ ಟೀಕೆ

ಈ ವಿಚಾರಕ್ಕೆ ಭಾನುವಾರ ಮತ್ತೊಂದು ತಿರುವು ಸಿಕ್ಕಿದೆ. ಹಿಂದೂಗಳಲ್ಲೇ ಇರುವ ಕೆಲವು ನಾಲಾಯಕರು ವಕ್ಫ್ ಬೋರ್ಡ್‌ಗೆ ಬೆಂಬಲ ನೀಡುತ್ತಿದ್ದಾರೆ. ಸಚಿವ ಜಮೀರ್ ಅಹಮದ್ ನಾಲಿಗೆ ಬಿಗಿ ಹಿಡೀಬೇಕು. ಮೊನ್ನೆ ಕಾರಿಗೆ ಕಲ್ಲು ಒಗೆದಿದ್ದಾರೆ, ಆವತ್ತು ಉಳಿದಿದ್ದಾನೆ ಎಂದು ಏಕವಚನದಲ್ಲಿ ಬಿಜೆಪಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಲ್ಲದೆ ವಕ್ಫ್ ಬೋರ್ಡ್ ಯಾರದ್ದು ? ಅದು ಯಾವಾಗಿನಿಂದ ಚಾಲು ಆಗಿದ್ದು ? ಮನಮೋಹನ್ ಸಿಂಗ್ ಹೋಗುವಾಗ ಸಹಿ ಮಾಡಿ ಹೋಗಿ ವಿಶೇಷ ಸೌಲಭ್ಯ ಕೊಟ್ಟಿದ್ದಾರೆ. ಈಗ ಎಲ್ಲಿ ಹೋದಲ್ಲಿ ನಮ್ಮದೇ ಇದು ಜಾಗ ಅಂತಾರೆ. ನೋಟಿಸ್ ಕೊಟ್ಟು ಇದು ವಕ್ಫ್ ಗೆ ಸಂಬಂಧಪಟ್ಟಿದ್ದು, 20 ದಿನದಲ್ಲಿ ಖಾಲಿ ಮಾಡಬೇಕು ಅಂತಾರೆ. ಇವರೇನು ನ್ಯಾಯಾಲಯವೇ ? ಎಂದು ಪ್ರಶ್ನಿಸಿದ್ದು, ಪೂರ್ಣ ವಕ್ಫ್ ಬೋರ್ಡ್ ರದ್ದಾಗಬೇಕು. ದೇಶದಲ್ಲಿ ಅಜಾಗರಕತೆ ಉಂಟಾಗುತ್ತದೆ. ಕೇವಲ ವಿಜಯಪುರ ಮಾತ್ರ ಅಲ್ಲ, ಇದು ದೇಶದ ತುಂಬ ನಡೆದಿದೆ ಅಂತ ಬಾಗಲಕೋಟೆಯಲ್ಲಿ ಆರೋಪಿಸಿದ್ದಾರೆ.

ಈ ವಿಚಾರ ವಿಕೋಪಕ್ಕೆ ಹೋಗುವ ಮುನ್ನ ರಾಜ್ಯ ಸರಕಾರ ಎಚ್ಚೆತ್ತುಕೊಂಡು ಪರಿಸ್ಥಿತಿ ನಿಭಾಯಿಸಬೇಕಿದೆ. ಇಲ್ಲದಿದ್ದರೆ ವಿವಾದ ರಾಜ್ಯದಿಂದ ದೇಶಕ್ಕೂ ಹರಡಲೂ ಬಹುದು.

ಯಾಕೆ ವಿವಾದ ?

ಅಲ್ಪಸಂಖ್ಯಾತರಿಗೆ ಸೇರಿದ್ದ ಎನ್ನಲಾದ ಇಲ್ಲವೇ ಸಮುದಾಯದ ಒಳಿತಿಗೆ ದಾನಿಗಳು ನೀಡಿದ ಜಾಗ ಕಾಲಾನಂತರದಲ್ಲಿ ವಕ್ಫ್ ಆಸ್ತಿಯೆಂದು ಪರಿಗಣಿಸಲ್ಪಟ್ಟಿದೆ. ಇದಕ್ಕೆ ಮನಮೋಹನ್ ಸಿಂಗ್ ಸರಕಾರ ಬೋರ್ಡ್‌ನ ಮಾನ್ಯತೆ ನೀಡಿ ಹಲವು ಪ್ರದೇಶಗಳನ್ನು ಗುರುತಿಸಿತ್ತು. ಹೀಗಿದ್ದರೂ ವಕ್ಫ್ ಸೇರಿದ ಹಲವು ಆಸ್ತಿಗಳನ್ನು ಅದೇ ಸಮುದಾಯದ ಹಲವರು ದುರುಪಯೋಗ ಪಡಿಸಿಕೊಂಡಿದ್ದಲ್ಲದೆ, ಅಕ್ರಮ ನಡೆಸಿರುವ ಆರೋಪವಿದೆ. ಈ ಸಂಬಂಧ ಹಲವಾರು ವ್ಯಾಜ್ಯಗಳು ನ್ಯಾಯಾಲಯದಲ್ಲಿದೆ. ಇದೇ ವೇಳೆ ಐತಿಹಾಸಿಕ ಪ್ರಮಾದ ಸರಿಪಡಿಸುವ ನಿಟ್ಟನಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ವಕ್ಫ್ ಕಾಯಿದೆಗೆ ಶೀಘ್ರವೇ ತಿದ್ದುಪಡಿ ಮಸೂದೆ ಜಾರಿಗೆ ತರಲು ಹೊರಟಿದೆ. ಮುಂದಿನ ಚಳಿಗಾಲದ ಅಧಿವೇಶನದಲ್ಲಿ ವಕ್ಫ್ 2004 ರ ನೂತನ ನೀತಿ ಜಾರಿಯಾಗುವ ಸಾಧ್ಯತೆ ಇದೆ.

ಬಿಜೆಪಿ ಶಾಸಕ ಯತ್ನಾಳ್ ಕಟುಟೀಕೆ | ವಕ್ಫ್ ನೋಟಿಸ್ ವಿರುದ್ಧ ಹೋರಾಟಕ್ಕೆ ವಕೀಲರ ತಂಡ ರಚನೆ

ವಕ್ಫ್ ಕಾನೂನು ನೆಹರು ಮಾಡಿದ ತಪ್ಪು

ವಿಜಯಪುರ: ವಕ್ಫ್ ಕಾನೂನು ನೆಹರು ಎಸಗಿದ ದೊಡ್ಡ ತಪ್ಪು. ಕರ್ನಾಟಕದಲ್ಲಿ ಮತ್ತೊಂದು ಪಾಕಿಸ್ತಾನ ನಿರ್ಮಾಣ ಮಾಡುವುದಕ್ಕೆ ವಕ್ಫ್ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ಶಾಸಕ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಯತ್ನಾಳ್, ವಕ್ಫ್ ಮಂಡಳಿಯವರು ದೇವಸ್ಥಾನಕ್ಕೂ ಕೂಡ ನೋಟಿಸ್ ನೀಡುತ್ತಿದ್ದಾರೆ. ನಾವು ವಕ್ಫ್ ಕಾನೂನು ವಿರುದ್ಧ ಹೋರಾಟ ತೀವ್ರಗೊಳಿಸುತ್ತೇವೆ. ಅಧಿಕಾರಿಗಳು ನೋಟಿಸ್‌ಗೆ ರೈತರು ಆತಂಕ ಪಡಬಾರದು, ಕಾನೂನು ಹೋರಾಟ ಮಾಡೋಣ. ನೋಟಿಸ್ ಬಂದರೆ ನಮ್ಮ ಕಚೇರಿ ಸಂಪರ್ಕ ಮಾಡಿ ಎಂದು ಮನವಿ ಮಾಡಿದರು.

ವಿಜಯಪುರ ಸಮಸ್ಯೆಗೆ ಮೊಹಿಸಿನ್ ಕಾರಣ

ವಿಜಯಪುರ ಜಿಲ್ಲೆ ಮಾತ್ರವಲ್ಲ ಬೇರೆ ಜಿಲ್ಲೆಗಳ ರೈತರು ಸಹ ನಮ್ಮ ಕಚೇರಿ ಸಂಪರ್ಕ ಮಾಡಿ. ನೋಟಿಸ್ ನೀಡಿದ್ದರ ಬಗ್ಗೆ ಕಾನೂನು ಹೋರಾಟಕ್ಕೆ ವಕೀಲರ ತಂಡ ರಚಿಸುತ್ತೇವೆ. ರಾಜ್ಯಾದ್ಯಂತ ಪ್ರವಾಸ ಮಾಡಿ ರೈತರಿಗೆ ಜಾಗೃತಿ ಮೂಡಿಸುತ್ತೇವೆ. ರೈತರಿಗೆ ಉಚಿತ ಕಾನೂನು ನೆರವು ನೀಡುತ್ತೇವೆ. ಸಚಿವ ಜಮೀರ್ ಅಹಮ್ಮದ್ ಖಾನ್ ಪ್ರವಾಸ ಮಾಡಿದ ಜಿಲ್ಲೆಗಳಲ್ಲಿ ಕಾರ್ಯಕ್ರಮ ಮಾಡುತ್ತೇವೆ ಎಂದರು.

ವಕ್ಫ್ ಕಾನೂನು ವಿರುದ್ಧ ಹೋರಾಟ ಮಾಡಲಾಗುವುದು. ವಿಜಯಪುರ ಜಿಲ್ಲೆಯಲ್ಲಿ ರೈತರಿಗೆ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಮಾತ್ರ ಯಾವುದೇ ವಕ್ಫ್ ಆಸ್ತಿ ಆಗಿಲ್ಲ ಎನ್ನುತ್ತಾರೆ. ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ಮೊಹಮ್ಮದ್ ಮೊಹಿಸೀನ್ ರೈತರ ಜಮೀನು ಪಹಣಿಯಲ್ಲಿ ವಕ್ಫ್ ಹೆಸರು ಹಾಕಿ ಹೋಗಿದ್ದಾರೆ. ಅವರ ಮೇಲೆ ಕ್ರಮಕ್ಕಾಗಿ ಒತ್ತಾಯ ಮಾಡಿದ್ದೆ. ಆದರೆ, ನಮ್ಮವರೇ ಬಿ.ಎಸ್. ಯಡಿಯೂರಪ್ಪ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದರು.

ವಿಜಯೇಂದ್ರ ವಿರುದ್ಧ ಟೀಕೆ: ಹಿಂದೆ 17 ಶಾಸಕರು ಬಿಜೆಪಿಗೆ ಬಂದು ಯಡಿಯೂರಪ್ಪ ಸಿಎಂ ಆಗಲು ಕಾರಣ ಯೋಗೇಶ್ವರ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ವಿಜಯೇಂದ್ರ ಆಗಿರಲಿಲ್ಲ, ಪೌಡರ್ -ಸ್ನೋ ಹೊಡಕೊಂಡು ಓಡಾಡುತ್ತಿದ್ದರು. ಅವರನ್ನು ಈಗ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇಂಥ ಹೊಂದಾಣಿಕೆಗಳದ್ದೇ ಈಗ ಕಾಲ ಎಂದು ಅಸಮಾಧಾನ ಹೊರಹಾಕಿದರು.

ಯತ್ನಾಳ ತಮ್ಮ ಪಕ್ಷದವರ ವಿರುದ್ಧ ಮಾತನಾಡು ತ್ತಾರೆಂದು ಮಾಧ್ಯಮದ ವರು ಸುದ್ದಿ ಮಾಡುತ್ತಾರೆ. ನಾನು ಎಲ್ಲಿಯೂ ಹಾಗೇ ಹೇಳಿಲ್ಲಾ, ಸುಮ್ಮನೆ ಹಾಕುತ್ತೀರಿ. ನ್ಯಾಯಾಲಯಗಳು ಇವೆ ಎಂದು ನಾನು ಉಳಿದಿದ್ದೇನೆ. ಮಾಧ್ಯಮದರು, ಪೊಲೀಸರು ಹಾಕುವ ಕೇಸ್ ನೋಡಿದರೆ ನಾನು ಜೈಲಿನಲ್ಲಿ ಕಾಯಂ ಇರಬೇಕು. ನಾನೂ ಲಾರೆನ್ಸ್ ಬಿಷ್ಣೋಯಿ ಆಗಿರಬೇಕಿತ್ತು.

-**ಬಸನಗೌಡ ಪಾಟೀಲ್ ಯತ್ನಾಳ್,** ಬಿಜೆಪಿ ಶಾಸಕ

ಶಿಗ್ಗಾವಿಯಲ್ಲಿ ಬಿಜೆಪಿ ಜಯ ಖಚಿತ

ಶಿಗ್ಗಾವಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದು ಖಚಿತ. ಅಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ಹೋರಾಟ. ಪಂಚಮಸಾಲಿ ಎಂದಲ್ಲ. ಹಿಂದೂ ಬಚೇಗಾತೋ ಹಮ್ ಬಚೇಗಾ, ಇಲ್ಲವಾದರೆ ಯಾವ ರೆಡ್ಡಿ, ಪಂಚಮಸಾಲಿ, ಗಾಣಿಗ, ದಲಿತರು ಯಾರೂ ಉಳಿಯಲ್ಲ. ಈಗ ವಕ್ಫ್ ವಿಚಾರ ನೋಡುತ್ತಿದ್ದೀರಲ್ಲ. ನಾವು ಜಗಳವಾಡುತ್ತಾ ಹೋದರೆ ಸಬ್ ಹಮಾರಾ ಹೈ ಎನ್ನುತ್ತಾರೆ. ಯಾವೋ ಒಬ್ಬ ಮುಲ್ಲಾ ನಾಲ್ಕೈದು ರಾಜ್ಯದಲ್ಲಿ ಮುಸ್ಲಿಮರು ಬಹುಸಂಖ್ಯಾತರಾಗಿದ್ದೇವೆ. ಹಿಂದೂಗಳು ಖಾಲಿಮಾಡಿ ಎಂದಿದ್ದಾನೆ. ಬಾಂಗ್ಲಾದಲ್ಲಿ ಹೇಗಾಗುತ್ತಿದೆ ಹಾಗಾಗಿ ನಾವು ಜಾತಿ ಬೇಧ -ಭಾವ ಬಿಟ್ಟು ಒಂದಾಗಬೇಕು. ಈಗ ಜಾತಿ ಹೋಗಿದೆ ,ಕೇವಲ ಹಿಂದೂ ಎಂದಾಗಿದೆ ಎಂದು ಯತ್ನಾಳ ಸ್ಪಷ್ಟವಾಗಿ ಹೇಳಿದರು.

ವಕ್ಫ್ ವಿವಾದಕ್ಕೆ ತೆರೆ ಎಳೆದ ಸಚಿವ ಎಂಬಿಪಿ

ವಿಜಯಪುರ : ರೈತರ ಒಂದೇ ಒಂದು ಎಕರೆ ಜಮೀನು ವಕ್ಫ್ ಮಂಡಳಿಗೆ ವರ್ಗಾವಣೆಯಾಗಿಲ್ಲ, ಈ ವಿಷಯವಾಗಿ ಒಬ್ಬರೇ ಒಬ್ಬ ರೈತರಿಗೂ ನೋಟಿಸ್ ಜಾರಿಯಾಗಿಲ್ಲ, ವಿನಾಕಾರಣ ಯಾರೂ ಸಹ ಈ ವಿಷಯವಾಗಿ ಗೊಂದಲ ಕ್ಕೊಳಗಾಗಬಾರದು, ಕೆಲವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವಕ್ಫ್ ವಿಷಯವಾಗಿ ಸುಳ್ಳು ವಿಷಯಗಳನ್ನು ಹರಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಹೊನವಾಡ ಮೊದಲಾದ ರೈತರ ಜಮೀನುಗಳು ವಕ್ಫ್ ಗೆ ಸೇರಲಿವೆ ಎಂಬ ವಿಚಾರಗಳು ಪ್ರತಿಧ್ವನಿ ಸುತ್ತಿರುವ ಬೆನ್ನಲ್ಲೇ ಈ ವಿಷಯವನ್ನು ಮೊದಲ ದಿನವೇ ಗಂಭೀರವಾಗಿ ಪರಿಗಣಿಸಿದ್ದ ಸಚಿವ ಡಾ.ಎಂ.ಬಿ. ಪಾಟೀಲ ರೈತರೊಡನೆ ಸಭೆ ನಡೆಸಿ ವಿವಾದ ಪರಿಹರಿಸಿದ್ದರು.

ಆದರೂ ಸಹ ಈ ವಿಷಯ ಪುನ: ಪ್ರಸ್ತಾಪವಾಗುತ್ತಿರುವ ಹಿನ್ನೆಲೆಯಲ್ಲಿ ಭಾನುವಾರ ಸಹ ಜಿಲ್ಲಾಧಿಕಾರಿ, ಆಯಾ ಉಪವಿಭಾಗಾಧಿಕಾರಿ, ವಕ್ಫ್ ಇಲಾಖೆಯ ಅಧಿಕಾರಿಗಳೊಂದಿಗೆ ಸುದೀರ್ಘ ಸಮಾ ಲೋಚನಾ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಸಚಿವರು ಈ ಕುರಿತಾದ ಗೊಂದಲಗಳಿಗೆ ವಿವರಣೆ ನೀಡುವ ಮೂಲಕ ತೆರೆ ಎಳೆದರು.

ಟಾಸ್ಕ್ ಫೋರ್ಸ್ ರಚನೆ:

ವಕ್ಫ್ ಗೆ ಸಂಬಂಧಿಸಿದಂತೆ ಸಮಗ್ರವಾದ ಕಾರ್ಯ ಯೋಜನೆ ರೂಪಿಸಿ ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಹಾಗೂ ಯಾವ ರೀತಿಯ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗುವುದುಉಪವಿಭಾಗಾಧಿಕಾರಿಗಳು, ತಹಶೀಲ್ದಾರರು ಸೇರಿದಂತೆ ಹಲವಾರು ಅಧಿಕಾರಿಗಳು ವಕ್ಫ್ ನೋಟಿಫಿಕೇಷನ್ ಮುಂಚಿನ ಭೂದಾಖಲೆಗಳನ್ನು ಅಧ್ಯಯನ, ಪರಿಶೀಲನೆ ಮಾಡಲಿದೆ ಎಂದರು.

ಇಂದು ಸಿಎಂ, ಸಚಿವರಿಂದ ದೇವಿ ದರ್ಶನ

ಹಾಸನಾಂಬೆ ದರ್ಶನಕ್ಕೆ ಸಾಗರೋಪಾದಿ ಭಕ್ತರು

ಹಾಸನ: ಹಾಸನಾಂಬ ದೇವಿ ದರ್ಶನಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಭಾನುವಾರ ಭಕ್ತರು ಸಾಗರೋಪಾದಿಯಲ್ಲಿ ಹರಿದು ಬಂದಿದ್ದರಿಂದ ಮಧ್ಯರಾತ್ರಿಯಿಂದಲೇ ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆಯಬೇಕಾಯಿತು.

ರಜಾ ದಿನವಾದ್ದರಿಂದ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ನೂಕುನುಗ್ಗಲಿನಲ್ಲೇ ದೇವಿಯ ದರ್ಶನ ಪಡೆದರು. 300ರೂ. ಹಾಗೂ 1 ಸಾವಿರ ರೂ. ಟಿಕೆಟ್ ಸರದಿ ಸಾಲುಗಳು ಬೆಳಗ್ಗೆ ಸಾಧಾರಣವಾಗಿತ್ತು. ಮಧ್ಯಾಹ್ನ ಟಿಕೆಟ್ ಕೌಂಟರ್ ಗಳಲ್ಲೂ ಜನದಟ್ಟಣೆ ಕಂಡು ಬಂತು. ಭಕ್ತರಿಗೆ ತೊಂದರೆಯಾಗದಂತೆ ಜಿಲ್ಲಾಡಳಿತ ಕೈಗೊಂಡಿದೆ. ಬಿಸಿಲಿನ ತಾಪ ತಣಿಸಲು ಟೆಂಟ್ ವ್ಯವಸ್ಥೆ, ಫ್ಯಾನ್, ಕ್ಯೂನಲ್ಲಿ ತೆರಳುವವರಿಗೆ ನೀರು, ಮಜ್ಜಿಗೆ ವ್ಯವಸ್ಥೆ ಇತ್ತು.

ಗರ್ಭಗುಡಿ ಪ್ರವೇಶ ನಿಷೇಧ: ಹಾಸನಂಬ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಆಗಮಿಸುತ್ತಿದ್ದು ದೇವಾಲಯದ ಗರ್ಭಗುಡಿ ಪ್ರವೇಶ ಮತ್ತು ಶಿಷ್ಟಾಚಾರ ವ್ಯವಸ್ಥೆ ರದ್ದುಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಮಾರುತಿ ಆದೇಶ ಹೊರಡಿಸಿದ್ದಾರೆ. ಕಳೆದ ಮೂರು ದಿನಗಳಿಂದ ಶಿಷ್ಟಾಚಾರ ಪಾಲನೆ ಮತ್ತು ಗರ್ಭಗುಡಿಗೆ ಕೆಲವರನ್ನು ಬಿಡಲಾಗುತ್ತಿತ್ತು. ಆದರೆ, ಭಕ್ತರ ಹಿತದೃಷ್ಟಿಯಿಂದ ಗರ್ಭಗುಡಿ ಪ್ರವೇಶ ರದ್ದುಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸಾದ ಸೇವಿಸಿದ ನ್ಯಾಯಾಧೀಶರು: ಹಾಸನಂಬ ದೇವಿಯ ದರ್ಶನ ಪಡೆಯಲು ಆಗಮಿಸಿದ್ದ ಹೆತ್ತೂರಿನವರಾದ ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಕುಟುಂಬ ಸದಸ್ಯರೊಂದಿಗೆ ದೇವಿಯ ದರ್ಶನ ಪಡೆದು, ಪ್ರಸಾದ ಸೇವಿಸಿದರು.

ಎಚ್ಡಿಕೆ ಸೇರಿ ಹಲವು ಗಣ್ಯರು ದರ್ಶನ

ದರ್ಶನೋತ್ಸದ ನಾಲ್ಕನೇ ದಿನವಾದ ಭಾನುವಾರ ಕೇಂದ್ರ ಸಚಿವ ಕುಮಾರಸ್ವಾಮಿ, ಪತ್ನಿ ಅನಿತಾ ಕುಮಾರಸ್ವಾಮಿ, ಹೈಕೋರ್ಟ್‌ನ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್, ಮಾಜಿ ಸಂಸದ ಪ್ರತಾಪ್‌ಸಿಂಹ, ಶಾಸಕ ಸಿ.ಎನ್.ಬಾಲಕೃಷ್ಣ, ಅವಧೂತ ವಿನಯ್ ಗುರೂಜಿ, ನಿರ್ದೇಶಕ ತರುಣ್ ಸುಧೀರ್ ದಂಪತಿ, ಶಾಸಕಿ ನಯನಾ ಮೋಟಮ್ಮ, ಮಾಜಿ ಶಾಸಕ ರಾಜುಗೌಡ ಸೇರಿ ಹಲವರು ದರ್ಶನ ಪಡೆದರು.

ಇಂದು ಸಿಎಂ ಆಗಮನ

ಹಾಸನಾಂಬೆ ದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ಸೋಮವಾರ ಆಗಮಿಸಲಿದ್ದಾರೆ. ಸಚಿವ ಸಂಪುಟ ಸಭೆ ಮುಗಿದ ಬಳಿಕ ಹೆಲಿಕಾಪ್ಟರ್ ಮೂಲಕ ಮಧ್ಯಾಹ್ನ 3 ಗಂಟೆಗೆ ಆಗಮಿಸಲಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆ; ಅಭ್ಯರ್ಥಿಗಳ ತೋಳಿಗೆ ಕತ್ತರಿ



ಕೊಪ್ಪಳ: ಜಿಲ್ಲೆಯ ವಿವಿಧ ಕೇಂದ್ರದಲ್ಲಿ ನಡೆದ ಗ್ರಾಮ ಆಡಳಿತಾಧಿಕಾರಿ ಪರೀಕ್ಷೆಗೆ ಹಾಜರಾದ ಅಭ್ಯಾರ್ಥಿಗಳ ತೋಳಿಗೆ ಅಧಿಕಾರಿಗಳು ಕತ್ತರಿ ಹಾಕಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿಯಮ ಮೀರಿ, ತುಂಬು ತೋಳಿನ ಶರ್ಟ್ ಧರಿಸಿ ಬಂದಿದ್ದ ಅಭ್ಯರ್ಥಿಗಳಿಗೆ ಅಧಿಕಾರಿಗಳು ಶಾಕ್ ನೀಡಿದ್ದಾರೆ. ತೋಳಿನ ಅರ್ಧ ಭಾಗ ಕತ್ತರಿಸಿ, ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಿದ್ದಾರೆ.

ಶನಿವಾರ ಮತ್ತು ಭಾನುವಾರ ಜಿಲ್ಲೆಯ 35 ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆದಿವೆ. ಕೆಎಇ ನಿಯಮದಂತೆ ಅಭ್ಯರ್ಥಿಗಳು ತುಂಬು ತೋಳಿನ ಶರ್ಟ್ ಮತ್ತು ಜೀನ್ಸ್ ಧರಿಸುವಂತಿಲ್ಲ. ಆದರೆ, ಕೆಲವರು ವಿವಿಧ ಕೇಂದ್ರದಲ್ಲಿ ತುಂಬು ತೋಳಿನ ಶರ್ಟ್ ಧರಿಸಿ ಆಗಮಿಸಿದರು. ಈ ವೇಳೆ ನಿಯಮ ಪಾಲಿಸಿದ ಅಧಿಕಾರಿಗಳು ತುಂಬು ತೋಳಿಗೆ ಕತ್ತರಿ ಪ್ರಯೋಗ ಮಾಡಿದರು. ಶರ್ಟ್ ತೋಳು ಕಟ್ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಆಫ್ ಶರ್ಟ್ ಧರಿಸಬೇಕೆಂದು ಸೂಚಿಸಿದರು. ಕೆಲ ಅಭ್ಯರ್ಥಿಗಳು ಅಂಗಿ ಬದಲಾಯಿಸಿಕೊಂಡರು. ಇನ್ನು ಕೆಲವರು ಅನಿವಾರ್ಯವಾಗಿ ತುಂಬು ತೋಳು ಶರ್ಟ್ ಕತ್ತರಿಸಿಕೊಂಡು ಪರೀಕ್ಷೆಗೆ ಹಾಜರಾಗಬೇಕಾಯಿತು.

ಟ್ವೀಟೂ-ಖಾರಾ

ಎಂ.ಬಿ.ಪಾಟೀಲ್, ಸಚಿವ

ವಕ್ಫ್ ದಾಖಲೆಯ ಮೂಲ ದಿನಾಂಕ ಮತ್ತು ಮುದ್ರಿತ ದಿನಾಂಕದ ಬಗ್ಗೆ ನಮ್ಮ ಬುದ್ಧಿವಂತ ಎಂ.ಪಿ ತೇಜಸ್ವಿ ಸೂರ್ಯ ಅವರಿಗೆ ಗೊತ್ತಿಲ್ಲದಿರುವುದು ದುರದೃಷ್ಟಕರ. ಈ ದಾಖಲೆಯ ದಿನಾಂಕ 2022ರ ಏಪ್ರಿಲ್ 18 ರ ವೇಳೆ ಅಧಿಕಾರಲ್ಲಿದ್ದ ಬಿಜೆಪಿ ರಾಜ್ಯದ ಅಭಿವೃದ್ಧಿ ಕಡೆಗೆ ಗಮನ ಕೊಡುವುದು ಬಿಟ್ಟು ಹಿಜಾಬ್, ಹಲಾಲ್ ಮತ್ತು ಉರಿಗೌಡ-ನಂಜೇಗೌಡ ಮೊದಲಾದ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಿತ್ತು. ಆದರೆ ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವುದರೊಂದಿಗೆ ರಾಜ್ಯ ಮತ್ತೆ ಅಭಿವೃದ್ಧಿ ಪಥದತ್ತ ಸಾಗಿದೆ.

ವಿಮಲ್ ಲಖೋಟಿಯಾ, ಗ್ಯಾಂಗ್ಟಕ್ (ಸಿಕ್ಕಿಂ)

ನಾನು ಬಿಜೆಪಿಯನ್ನು ಬೆಂಬಲಿಸುವುದಿಲ್ಲ. ಆದರೆ, ಧಾರ್ಮಿಕ ಕ್ಷೇತ್ರವೊಂದಕ್ಕೆ 1200 ಎಕರೆ ಜಮೀನು ಏಕೆ ಬೇಕೆಂಬುದನ್ನು ಅರ್ಥಮಾಡಿಕೊಳ್ಳಲಾಗುತ್ತಿಲ್ಲ..!

ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್ ಗ್ಯಾರಂಟಿ ಯೋಜನೆ ತಾತ್ಕಾಲಿಕ

ಹಾವೇರಿ: ಕಾಂಗ್ರೆಸ್ ಸರ್ಕಾರ ಕೊಟ್ಟಿರುವ ಗ್ಯಾರಂಟಿ ಯೋಜನೆಗಳು ತಾತ್ಕಾಲಿಕ. ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ ನೀಡಿರುವುದು ಶಾಶ್ವತ ಗ್ಯಾರಂಟಿ ಎಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಭರತ್ ಬೊಮ್ಮಾಯಿ ಹೇಳಿದರು. ಮಣ್ಣೂರಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದ ಬಳಿಕ ಮಾತನಾಡಿದರು. ನಾವು ಕ್ಷೇತ್ರದಲ್ಲಿ 5 ಸಾವಿರ ಹೆಣ್ಣು ಮಕ್ಕಳಿಗೆ ಕೆಲಸ ಕೊಟ್ಟಿದ್ದೇವೆ, ಇದು ಶಾಶ್ವತ ಗ್ಯಾರಂಟಿ. ಇದನ್ನು ಯಾರೂ ಕಿತ್ತುಕೊಳ್ಳೋಕೆ ಆಗಲ್ಲ. ಅಧಿಕಾರಕ್ಕೆ ಬರಲು ಕಾಂಗ್ರೆಸ್ ನೀಡಿದ ಗ್ಯಾರಂಟಿಗಳು ತಾತ್ಕಾಲಿಕ ಎಂದು ತಿರುಗೇಟು ನೀಡಿದರು. ಹಿಂದೆ 2018, 2023ರಲ್ಲಿ ಎಲ್ಲಾ ಊರು, ಪಟ್ಟಣಗಳಲ್ಲಿ ಓಡಾಡಿ ತಂದೆಯ ಪರ ಪ್ರಚಾರ ಮಾಡಿದ್ದೆ. ಈಗ ನನಗೆ ಆಶೀರ್ವಾದ ಮಾಡಿ. ತಂದೆಯವರ ಮೂರ್ನಾಲ್ಕು ಕನಸಿದೆ, ಅದನ್ನು ನನಸು ಮಾಡುವೆ. ಯುವಕನಾಗಿ ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡುವೆ. ನಮ್ಮ ತಂದೆ ರಾಷ್ಟ್ರೀಯ ಸಂಸದಿಯ ಕೌಶಲ್ಯಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಶಿಗ್ಗಾವಿಯಲ್ಲಿ ಇನ್ನಷ್ಟು ಕೈಗಾರಿಕೆಗಳನ್ನು ತರುವ ಉದ್ದೇಶ ತಮಗಿದೆ ಎಂದು ಭರತ್ ನುಡಿದರು.

ಯಾಸೀರ್ ಪಠಾಣ್ ಭರ್ಜರಿ ಪ್ರಚಾರ

ಶಿಗ್ಗಾವಿ: ಉಪಚುನಾವಣೆ ಅಖಾಡ ಶಿಗ್ಗಾವಿಯಲ್ಲಿ ರಂಗೇರಿದ್ದು ಕಾಂಗ್ರೆಸ್ ಅಭ್ಯರ್ಥಿ ಯಾಸೀರಖಾನ್ ಪಠಾಣ ವಿವಿಧ ಗ್ರಾಮಗಳಲ್ಲಿ ರವಿವಾರ ಭರ್ಜರಿ ಪ್ರಚಾರ ನಡೆಸಿದರು. ಬಸವನಾಳ, ಪಾಣಿಗಟ್ಟಿ, ಬೆಳವಲಕೊಪ್ಪ, ಸುರಪಗಟ್ಟಿ, ಕೆಂಗಾಪುರ, ಬನ್ನಿಕೊಪ್ಪ, ಗಂಜಿಗಟ್ಟಿ, ಚಿಕ್ಕಮಣಕಟ್ಟಿ ಹಾಗೂ ಬೆಳಗಲಿ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ್ ಭರ್ಜರಿ ಪ್ರಚಾರ ಸಭೆಗಳನ್ನುದ್ದೇಶಿಸಿ ಅವರು ಮಾತನಾಡಿದರು. ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು. ಧಾರವಾಡ ಗ್ರಾಮೀಣ ಯುವ ಕಾಂಗ್ರೆಸ್ ಅಧ್ಯಕ್ಷ ವಿನೋದ ಅಸೂಟಿ ಸಾಥ್ ನೀಡಿದರು.

ಕೈ ಅಭ್ಯರ್ಥಿ ಅನ್ನಪೂರ್ಣ ಬಿರುಸಿನ ಮತಬೇಟೆ

ಸಂಡೂರು: ತಾಲ್ಲೂಕಿನ ಚೋರನೂರು ಹೋಬಳಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಚುನಾವಣಾ ಪ್ರಚಾರ ಮಾಡಿದರು. ನಿಡಗುರ್ತಿ, 72 ಮಲ್ಲಾಪುರ, ಕೊಂಡಾಪುರ ಸೇರಿದಂತೆ ಹತ್ತಾರು ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಸಚಿವ ಸಂತೋಷ್ ಲಾಡ್ ಹಾಗೂ ಸಂಸದ ಇ.ತುಕಾರಾಂ ಅವರು ಕಳೆದ 20 ವರ್ಷಗಳಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಮುಂದೆಯೂ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ. 371(ಜೆ) ವಿಶೇಷ ಮೀಸಲಾತಿ ಮೂಲಕ ಈ ಭಾಗದಲ್ಲಿ ಉದ್ಯೋಗ, ವಿದ್ಯಾಭ್ಯಾಸಕ್ಕೆ ವಿಶೇಷ ಪ್ರಾತಿನಿಧ್ಯ ನೀಡಿದ್ದು ಕಾಂಗ್ರೆಸ್. ಗ್ಯಾರಂಟಿ ಯೋಜನೆಗಳ ಮೂಲಕ ನಾಡಿನ ಜನರಿಗೆ ಭರವಸೆಯ ಆಡಳಿತ ನೀಡುತ್ತಿದೆ. ಕಾಂಗ್ರೆಸ್‌ಗೆ ಮತ ನೀಡುವ ಮೂಲಕ ಬೆಂಬಲಿಸಬೇಕು ಎಂದು ಮನವಿ ಮಾಡಿದರು.



ಹೈವೋಲ್ಟೇಜ್ ಕ್ಷೇತ್ರದಲ್ಲಿ ಹೆಚ್ಚಿದ ಪ್ರಚಾರದ ಭರಾಟೆ | ಯೋಗೇಶ್ವರ್-ನಿಖಿಲ್ ತೀವ್ರ ಹಣಾಹಣಿ

ಭದ್ರಕೋಟೆ ಉಳಿಸಿಕೊಳ್ಳಲು ಜೆಡಿಎಸ್-ಬಿಜೆಪಿ ಹರಸಾಹಸ | ಬೊಂಬೆನಾಡಿನ ವಶಕ್ಕೆ ಕಾಂಗ್ರೆಸ್ ತಂತ್ರ

ಉಪಚುನಾವಣೆ: ರಂಗೇರಿದ ಚನ್ನಪಟ್ಟಣ ಕಣ

ಡಿ.ಟಿ.ತಿಲಕ್‌ರಾಜ್, ರಾಮನಗರ

ಉಪಚುನಾವಣೆ ನಡೆಯುತ್ತಿರುವ ವಿಧಾನಸಭಾ ಕ್ಷೇತ್ರಗಳ ಪೈಕಿ ಹೈವೋಲ್ಟೇಜ್ ಕ್ಷೇತ್ರ ಎನಿಸಿಕೊಂಡಿರುವ ಬೊಂಬೆನಾಡು ಚನ್ನಪಟ್ಟಣದಲ್ಲಿ ಚುನಾವಣಾ ಕಣ ರಂಗೇರಿದೆ. ಇಬ್ಬರು ಪ್ರಬಲ ನಾಯಕರ ನಡುವೆ ನಡೆಯುತ್ತಿರುವ ಹಣಾಹಣಿ, ಹೊಸ ಇತಿಹಾಸ ಸೃಷ್ಟಿಸುವತ್ತ ದಾಪುಗಾಲು ಹಾಕುತ್ತಿದೆ.

ಆಡಳಿತ ಪಕ್ಷ ಕ್ಷೇತ್ರವನ್ನು ತನ್ನ ವಶಕ್ಕೆ ಪಡೆಯಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದರೆ, ಕ್ಷೇತ್ರ ಉಳಿಸಿಕೊಳ್ಳಲು ಜೆಡಿಎಸ್ ಪ್ರಬಲ ಪೈಪೋಟಿ ನೀಡುತ್ತಿದೆ. ಚುನಾವಣೆಗೆ ಮೊದಲು ಬಿಜೆಪಿಯಿಂದ ಜಿಗಿದು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ.ಪಿ.ಯೋಗೇಶ್ವರ್‌ಗೆಸಿಎಂ, ಡಿಸಿಎಂ, ಪಕ್ಷದ ಶಾಸಕರು, ಸಚಿವರು ಸಾಥ್ ನೀಡುತ್ತಿದ್ದರೆ, ಇತ್ತ ಕ್ಷೇತ್ರಾಂತರಿ, ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲುವಿಗಾಗಿ ಜೆಡಿಎಸ್ ಸಹ ತನ್ನೆಲ್ಲ ಶಾಸಕರ ಜೊತೆಗೆ ಮೈತ್ರಿ ಪಕ್ಷ ಬಿಜೆಪಿಯ ಘಟಾನುಘಟಿ ನಾಯಕರನ್ನು ಹಳ್ಳಿಗಳಿಗೆ ರವಾನಿಸಿದೆ.

ಕಾಂಗ್ರೆಸ್‌ನಿಂದ ವ್ಯಾಪಕ ಪ್ರಚಾರ: ಕಾಂಗ್ರೆಸ್ ಸಮನ್ವಯ ಸಮಿತಿ ಸಭೆಯ ಮೂಲಕ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಚಾರ ಆರಂಭ ಮಾಡಿದೆ, ಮಾಜಿ ಸಂಸದ ಡಿ.ಕೆ.ಸುರೇಶ್, ಪರಿಷತ್ ಸದಸ್ಯರಾದ ಪುಟ್ಟಣ್ಣ, ಎಸ್.ರವಿ, ಶಾಸಕರಾದ ಬಾಲಕೃಷ್ಣ, ಕೆ.ಎಂ.ಉದಯ್ ಯೋಗೇಶ್ವರ್ ಬೆನ್ನಿಗೆ ನಿಂತು ಪಕ್ಷದ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ.

ಆದರೆ, ಪ್ರಚಾರ ವಿಚಾರದಲ್ಲಿ ಜೆಡಿಎಸ್ ಸಹ ಹಿಂದೆ ಉಳಿದಿಲ್ಲ, ತಾಲೂಕಿನ ಮಾಕಳಿ ಗ್ರಾಮದಿಂದ ನಿಖಿಲ್ ಕುಮಾರಸ್ವಾಮಿ ಮತದಾರರ ಮನಗೆಲ್ಲಲು ಮುಂದಾಗಿದ್ದಾರೆ. ಅವರಿಗೆ ಸ್ಥಳೀಯ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಸಾಥ್ ನೀಡುತ್ತಿದ್ದಾರೆ.

ನಿಖಿಲ್‌ಗೆ ಅನುಕಂಪದ ಅಲೆ ವಿಶ್ವಾಸ: ಜೆಡಿಎಸ್ ಅಭ್ಯರ್ಥಿ ನಿಖಿಲ್‌ಕುಮಾರಸ್ವಾಮಿ ಎರಡು ಬಾರಿ ಈಗಾಗಲೇ ಸೋಲನುಭವಿಸಿದ್ದಾರೆ, ಇದು ಅವರಿಗೆ ಮೂರನೇ ಅದೃಷ್ಟ ಪರೀಕ್ಷೆ. ಮಂಡ್ಯ ಲೋಕಸಭಾ ಕ್ಷೇತ್ರ, ರಾಮನಗರ ವಿಧಾನಸಭಾ ಕ್ಷೇತ್ರದಿಂದ ಪರಾಭವಗೊಂಡಿದ್ದ ನಿಖಿಲ್ ನಂತರ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು, ಇದೀಗ ಚನ್ನಪಟ್ಟಣದಿಂದ ಸ್ಪರ್ಧಿಸಿದ್ದಾರೆ. ಜೊತೆಗೆ ಅವರ ತಂದೆ ಎಚ್.ಡಿ. ಕುಮಾರಸ್ವಾಮಿ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರವಾಗಿದ್ದರಿಂದ ಸಹಜವಾಗಿ ಅನುಕಂಪ ಜನರಲ್ಲಿದೆ.

ಕಾಂಗ್ರೆಸ್ ಸಾಧನೆ ನೆಚ್ಚಿಕೊಂಡ ಸೈನಿಕ: ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಸಹ ಎರಡು ಬಾರಿ ಸೋಲನುಭವಿಸಿದವರು. ಎಚ್.ಡಿ.ಕುಮಾರಸ್ವಾಮಿ ಕ್ಷೇತ್ರಕ್ಕೆ ಬರುವವರೆಗೂ ಅವರದ್ದೇ ಪಾರುಪತ್ಯ ಆಗಿತ್ತು, ಬದಲಾದ ಸನ್ನಿವೇಶದಲ್ಲಿ ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದರಿಂದ ಸತತವಾಗಿ ಎರಡು ಬಾರಿ ಯೋಗೇಶ್ವರ ಸೋಲು ಅನುಭವಿಸಿದ್ದಾರೆ, ಇದು ಅವರಿಗೆ ಮೂರನೇ ಸ್ಪರ್ಧೆ, ಅನುಕಂಪದ ಜೊತೆಗೆ ನೀರಾವರಿ, ಸರ್ಕಾರದ ಗ್ಯಾರಂಟಿ ನೆಚ್ಚಿಕೊಂಡಿರುವ ಅವರು ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಯೋಗೇಶ್ವರ್ 1999ರಲ್ಲಿ ಪಕ್ಷೇತರರಾಗಿ, 2004, 2008ರಲ್ಲಿ ಕಾಂಗ್ರೆಸ್‌ನಿಂದ, 2011ರಲ್ಲಿ ಬಿಜೆಪಿಯಿಂದ, 2013ರಲ್ಲಿ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

ಈ ಚುನಾವಣೆ ಎಚ್.ಡಿ.ಕುಮಾರಸ್ವಾಮಿ ಅವರ ನಾಯಕತ್ವಕ್ಕೆ ಅಗ್ನಿಪರೀಕ್ಷೆ, ನಾವು ಕುತಂತ್ರ ಮಾಡಿ ರಾಜಕಾರಣ ಮಾಡಿದವರಲ್ಲ, ಇಲ್ಲಿ ನಿಖಿಲ್ ಅಭ್ಯರ್ಥಿಯಲ್ಲ, ಕಾರ್ಯಕರ್ತರೇ ಅಭ್ಯರ್ಥಿಗಳು, ಈ ಕ್ಷೇತ್ರಕ್ಕೆ ಎಚ್.ಡಿ.ದೇವೇಗೌಡರು, ಎಚ್.ಡಿ. ಕುಮಾರಸ್ವಾಮಿ ಅವರ ಕೊಡುಗೆ ಅಪಾರವಾಗಿದೆ, ನನ್ನ ಕೊನೆಯ ಉಸಿರು ಇರುವವರೆಗೂ ನಿಮ್ಮ ಜೊತೆ ಇರುತ್ತೇನೆ, ನನಗೆ ಒಂದು ಅವಕಾಶ ಕೊಡಿ.
-**ನಿಖಿಲ್ ಕುಮಾರಸ್ವಾಮಿ,** ಎನ್‌ಡಿಎ ಅಭ್ಯರ್ಥಿ

ಎನ್‌ಡಿಎ ನಿಂದ ತಮ್ಮ ಮಗನನ್ನು ಚುನಾವಣೆಯಲ್ಲಿ ನಿಲ್ಲಿಸಲು ಎಚ್.ಡಿ.ಕುಮಾರಸ್ವಾಮಿ ಅವರು ನನಗೆ ಟಿಕೆಟ್ ತಪ್ಪಿಸಿದರು, ನಾನು ಮರಳಿ ಮಾತೃಪಕ್ಷಕ್ಕೆ ಬಂದಿದ್ದೇನೆ, ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡುವ ಇರಾದೆ ನನ್ನದು, ಈಗಾಗಲೇ ನೀರಾವರಿಯಲ್ಲಿ ಯಶಸ್ಸು ಕಂಡಿದ್ದೇನೆ, ಚನ್ನಪಟ್ಟಣ ತಾಲೂಕಿನ ಜನತೆ ನನ್ನ ಪರಿಶ್ರಮಕ್ಕೆ ತಕ್ಕ ಪ್ರತಿಫಲ ನೀಡುತ್ತಾರೆ ಎಂಬ ವಿಶ್ವಾಸವಿದೆ.
-**ಸಿ.ಪಿ.ಯೋಗೇಶ್ವರ್,** ಕಾಂಗ್ರೆಸ್ ಅಭ್ಯರ್ಥಿ.

ಮತಗಳ ವಿವರ

ಪುರುಷ ಮತದಾರರು: **1,11,170**
ಮಹಿಳಾ ಮತದಾರರು: **1,19.197**
ಇತರ ಮತದಾರರು: **08**
ಒಟ್ಟು: **2,30,375**

2023ರ ಫಲಿತಾಂಶ

ಜೆಡಿಎಸ್ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಪಡೆದ ಮತ: **96,592**
ಬಿಜೆಪಿ ಅಭ್ಯರ್ಥಿ ಯೋಗೇಶ್ವರ್ ಪಡೆದ ಮತ: **80,677**
ಕಾಂಗ್ರೆಸ್ ಅಭ್ಯರ್ಥಿ ಎಸ್.ಗಂಗಾಧರ್ ಪಡೆದ ಮತ: **15,374**

ಸರಕಾರ VS ಕುಮಾರಸ್ವಾಮಿ

ಚನ್ನಪಟ್ಟಣ ಉಪಚುನಾವಣಾ ಕಣ ಸಧ್ಯ ಸರ್ಕಾರ ವರ್ಸಸ್ ಎಚ್.ಡಿ.ಕುಮಾರಸ್ವಾಮಿ ಎನ್ನುವಂತಾಗಿದೆ. ರಾಮನಗರ ಜಿಲ್ಲೆಯಿಂದ ಜೆಡಿಎಸ್‌ಗೆ ಗೇಟ್‌ಪಾಸ್ ಕೊಡಬೇಕೆಂದು ಸಿಎಂ, ಡಿಸಿಎಂ ಜಿದ್ದಿಗೆ ಬಿದ್ದಿದ್ದಾರೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಯೋಗೇಶ್ವರ್ ಬೆನ್ನಿಗೆ ನಿಂತಿದ್ದು, ಇವರ ಜೊತೆಗೆ ಕುಮಾರಸ್ವಾಮಿ ಅವರ ಹಳೆಯ ಮಿತ್ರರು, ಸಚಿವರಾದ ಜಮೀರ್ ಅಹಮ್ಮದ್, ಚಲುವರಾಯಸ್ವಾಮಿ, ಶಾಸಕ ಬಾಲಕೃಷ್ಣ ಸಹಕಾರ ನೀಡುತ್ತಿದ್ದಾರೆ. ಶತಾಯಗತಾಯ ಕ್ಷೇತ್ರವನ್ನು ಪಡೇ ತೀರಲು ಕಾಂಗ್ರೆಸ್ ತನ್ನ ಇಡೀ ತಂತ್ರಗಳನ್ನು ಈ ಚುನಾವಣೆಯಲ್ಲಿ ಬಳಕೆ ಮಾಡುತ್ತಿದ್ದು, ಅನ್ಯಪಕ್ಷದ ಮುಖಂಡರು, ಕಾರ್ಯಕರ್ತರನ್ನು ಸೆಳೆಯಲು ರಾತ್ರಿ ಕಾರ್ಯಾಚರಣೆಯೂ ನಿರಾತಂಕವಾಗಿ ಸಾಗಿದೆ.

ಜೆಡಿಎಸ್ ಪ್ರತಿತಂತ್ರ

ಆದರೆ, ಕ್ಷೇತ್ರ ಉಳಿಸಿಕೊಳ್ಳಲು ಜೆಡಿಎಸ್ ಸಹ ಪ್ರತಿತಂತ್ರ ಹೆಣೆಯುತ್ತಿದೆ. ಜೆಡಿಎಸ್ ಮುಳುಗಿಹೋಗುತ್ತಿದೆ ಎನ್ನುವ ಪರಿಸ್ಥಿತಿ ಬಂದ ಸಂದರ್ಭದಲ್ಲಿ ಫೀನಿಕ್ಸ್‌ನಂತೆ ಮೇಲೆದ್ದು, ಕೇಂದ್ರ ಸಚಿವ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿರುವ ಎಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರವನ್ನು ಬಿಟ್ಟುಕೊಡಲು ಸುಲಭವಾಗಿ ಬಿಟ್ಟುಕೊಡಲು ಸಿದ್ದರಿಲ್ಲ. ಅವಶ್ಯವಿರುವ ಎಲ್ಲ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಜೆಡಿಎಸ್‌ಗೆ ತನ್ನ ಶಾಸಕರು, ಮುಖಂಡರ ಜೊತೆಗೆ ಮಿತ್ರ ಪಕ್ಷ ಬಿಜೆಪಿಯ ಘಟಾನುಘಟಿ ನಾಯಕರು ಸಾಥ್ ನೀಡುತ್ತಿದ್ದಾರೆ. ಮಾಜಿ ಸಿಎಂಗಳಾದ ಬಿ.ಎಸ್.ಯಡಿಯೂರಪ್ಪ, ಸದಾನಂದಗೌಡ, ಪ್ರತಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಡಿಸಿಎಂ ಅಶ್ವತ್ಥ್‌ನಾರಾಯಣ, ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಸಧ್ಯದ ಪಾಲಿಗೆ ಜೆಡಿಎಸ್ ಬೆನ್ನಿಗಿದ್ದಾರೆ. ಎರಡೂ ಪಕ್ಷಗಳ ನಾಯಕರು ನಿಖಿಲ್ ಗೆಲುವಿಗೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಒಟ್ಟಾರೆ, ಕ್ಷೇತ್ರದಲ್ಲಿ ಗೆಲುವಿಗಾಗಿ ಎರಡೂ ಪಕ್ಷಗಳು ಜಿದ್ದಾಜಿದ್ದಿ ನಡೆಸುತ್ತಿವೆ, ಪ್ರಚಾರ ಆರಂಭದಲ್ಲೇ ಭರ್ಜರಿ ಎನಿಸಿಕೊಂಡಿದ್ದು, ಮುಂದಿನ ದಿನಗಳಲ್ಲಿ ಇದು ಯಾವ ಹಂತಕ್ಕೆ ತಲುಪುತ್ತದೆ ಎಂಬುದನ್ನು ಕಾದುನೋಡಬೇಕಿದೆ.

ಬಿಜೆಪಿಗೆ ಸಾಮೂಹಿಕ ರಾಜೀನಾಮೆ

ಚನ್ನಪಟ್ಟಣ: ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಪಕ್ಷ ಸೇರ್ಪಡೆ ಬೆನ್ನಲ್ಲೇ ಅವರ ಬೆಂಬಲಿಗರ ವಲಸೆ ಪರ್ವ ಶುರುವಾಗಿದೆ. ಬಿಜೆಪಿಯ ಎಸ್ಸಿ ಮೋರ್ಚಾದ ಚನ್ನಪಟ್ಟಣ ನಗರ, ಗ್ರಾಮಾಂತರ ಹಾಗೂ ಮಹಿಳಾ ಘಟಕಗಳ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡಿ ಯೋಗೇಶ್ವರ್‌ರನ್ನು ಹಿಂಬಾಲಿಸಿದ್ದಾರೆ.

ತಾಲೂಕು ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಎನ್.ಬಿ. ಸಿದ್ದರಾಮಯ್ಯ ಹಾಗೂ ಇತರರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದು, ಯೋಗೇಶ್ವರ್ ನಿಲುವನ್ನು ಬೆಂಬಲಿಸಿ ಕಾಂಗ್ರೆಸ್ ಸೇರುತ್ತಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ನಿರ್ಲಕ್ಷ್ಯ: ಯೋಗೇಶ್ವರ್ ಕಾಂಗ್ರೆಸ್ ಪಕ್ಷ ಸೇರಿದ ನಂತರ ನಾವು ಬಿಜೆಪಿ ಪದಾಧಿಕಾರಿಗಳಾಗಿದ್ದರೂ ನಮ್ಮನ್ನು ಜಿಲ್ಲಾ ಅಥವಾ ತಾಲ್ಲೂಕು ಘಟಕದ ಪದಾಧಿಕಾರಿಗಳು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಈ ನಿರ್ಲಕ್ಷ್ಯದಿಂದಮಾಡಿದ್ದಾರೆ. ಇ ನಮಗೆ ಬೇಸರವಾಗಿದೆ ಎಂದು ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಎಸ್. ಸದಾನಂದ ತಿಳಿಸಿದರು.

ಗ್ರಾಮಾಂತರ ಬಿಜೆಪಿಯ ಎಸ್ಸಿ ಮೋರ್ಚಾದ ಉಪಾಧ್ಯಕ್ಷ ಬಸವರಾಜು, ಗೋವಿಂದ, ಸಿದ್ದರಾಮು, ಪ್ರಧಾನ ಕಾರ್ಯದರ್ಶಿಗಳಾದ ಟಿ.ಎಸ್. ಕೃಷ್ಣ, ಬಸವರಾಜು, ಕಾಳ ಬಸವರಾಜ, ಕಾರ್ಯದರ್ಶಿ ಪ್ರದೀಪ್ ನಾಯಕ್, ನಗರ ಮಂಡಲದ ಅಧ್ಯಕ್ಷ ವೆಂಕಟೇಶ್ ಮೂರ್ತಿ, ಉಪಾಧ್ಯಕ್ಷ ಎಲೇಕೇರಿ ಗೋಪಿನಾಥ್, ಶೆಟ್ಟಿಹಳ್ಳಿ ಚಂದ್ರು, ಮಂಗಳವಾರಪೇಟೆ ಲೋಕೇಶ್, ಪ್ರಧಾನ ಕಾರ್ಯದರ್ಶಿಗಳಾದ ದುರ್ಗೇಶ್, ಅಂಬೇಡ್ಕರ್ ನಗರ ಶಾಮ್, ಕಾರ್ಯದರ್ಶಿ ಜೈ ಗಣೇಶ್, ಸುರೇಶ್, ಕೇಶವ, ಶಂಕರ್ ಅಂಬೇಡ್ಕರ್ ನಗರ, ಧನಂಜಯ ಎಲೇಕೇರಿ, ಖಜಾಂಚಿ ಎಲೇಕೇರಿ ನವೀನ್, ಮಹಿಳಾ ಘಟಕದ ಅಧ್ಯಕ್ಷೆ ಎ.ಜಿ.ತನುಜಾ, ಉಪಾಧ್ಯಕ್ಷೆ ಅಶ್ವಿನಿ ಹಾಜರಿದ್ದರು.

ಚನ್ನಪಟ್ಟಣ ತಾಲೂಕು ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಎನ್.ಬಿ. ಸಿದ್ದರಾಮಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪೊಲೀಸ್ ಪಡೆಗಳ ಪಥ ಸಂಚಲನ

ಚನ್ನಪಟ್ಟಣ: ಉಪ ಚುನಾವಣೆ ಕಣವಾಗಿರುವ ತಾಲ್ಲೂಕಿನಲ್ಲಿ ಪೊಲೀಸರು ಮತ್ತು ಅರೆ ಸೇನಾಪಡೆ ಭಾನುವಾರ ಪಥ ಸಂಚಲನ ನಡೆಸಿದರು.ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಚಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಹೊಂಗನೂರು, ತಗಚಗೆರೆ, ಕೋಡಂಬಳ್ಳಿ ಹಾಗೂ ಮೊಳೆದೊಡ್ಡಿ ಗ್ರಾಮಗಳಲ್ಲಿ ಪಥ ಸಂಚಲನ ನಡೆಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ. ಸುರೇಶ್, ಚನ್ನಪಟ್ಟಣ ಡಿವೈಎಸ್ಪಿ ಕೆ.ಸಿ. ಗಿರಿ ಸೇರಿದಂತೆ ಸ್ಥಳೀಯ ಇನ್ಸ್ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಗಳು ಭಾಗವಹಿಸಿದ್ದರು.

ನಿಖಿಲ್‌ರನ್ನು ಹೊತ್ತು ಕುಣಿದ ಬೆಂಬಲಿಗರು: ಚನ್ನಪಟ್ಟಣ (ರಾಮನಗರ): ಕ್ಷೇತ್ರದ ಉಪ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಭಾನುವಾರ ಬೆಳಿಗ್ಗೆಯಿಂದಲೇ ಗ್ರಾಮೀಣ ಭಾಗದಲ್ಲಿ ಪ್ರಚಾರ ಆರಂಭಿಸಿದರು.

ಗ್ರಾಮ್ ಪಂಚಾಯಿತಿ ಕೇಂದ್ರವಾದ ತಾಲ್ಲೂಕಿನ ಮಾಕಳಿ ಗ್ರಾಮದಿಂದ ಬೆಳಿಗ್ಗೆ ಪ್ರಚಾರಕ್ಕೆ ಬಂದ ಅವರನ್ನು ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಹೂವಿನ ಹಾರ ಹಾಕಿ ಘೋಷಣೆ ಕೂಗಿ ಹೆಗಲ ಮೇಲೆ ಹೊತ್ತು ಕುಣಿದರು.

ಮಾಕಳಿ ಮಾಜಿ ಶಾಸಕ ಹಾಗೂ ಕಾಂಗ್ರೆಸ್ ಮುಖಂಡ ಎಂ.ಸಿ. ಅಶ್ವತ್ ಅವರ ಊರಾಗಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎ. ಮಂಜುನಾಥ್, ತಾಲ್ಲೂಕು ಅಧ್ಯಕ್ಷ ಎಚ್.ಸಿ. ಜಯಮುತ್ತು ಸೇರಿದಂತೆ ಸ್ಥಳೀಯ ಮುಖಂಡರು ಇದ್ದರು.

ಡಿಕೆಶಿಗೆ ಸಿಎಂ ಆಗುವ ಅವಕಾಶ: ಪುಟ್ಟಣ್ಣ | ಕಾಂಗ್ರೆಸ್ ಅಭ್ಯರ್ಥಿ ಪರ ಬಿರುಸಿನ ಪ್ರಚಾರ

ಯೋಗಿ ಗೆಲ್ಲಿಸಿದರೆ ಡಿ.ಕೆ.ಶಿವಕುಮಾರ್‌ಗೆ ಶಕ್ತಿ

ರಾಮನಗರ: ಕ್ಷೇತ್ರದಲ್ಲಿ ಸಿ.ಪಿ.ಯೋಗೇಶ್ವರ್‌ರನ್ನು ಗೆಲ್ಲಿಸಿದರೆ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಶಕ್ತಿ ತುಂಬಿದಂತಾಗುತ್ತದೆ. ಸಿಎಂ ಸಿದ್ದರಾಮಯ್ಯ ಅವರ ಬಳಿಕ ಮುಖ್ಯಮಂತ್ರಿ ಆಗುವ ಎಲ್ಲಾ ಅವಕಾಶಗಳೂ ಡಿ.ಕೆ. ಶಿವಕುಮಾರ್‌ಗೆ ಇದೆ ಎಂದು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದರು.

ಚನ್ನಪಟ್ಟಣ ತಾಲೂಕಿನ ಕೋಡಂಬಹಳ್ಳಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾತನಾಡಿ, ಎಚ್.ಡಿ. ಕುಮಾರಸ್ವಾಮಿ ಟೂರಿಂಗ್ ಟಾಕೀಸ್ ಇದ್ದಂತೆ ಎಲ್ಲಿಯೂ ನಿಲ್ಲುವುದಿಲ್ಲ, ಅವರ ಮನೆಯವರಿಗೆ ಬಿಟ್ಟು ಬೇರೆ ಯಾರಿಗೂ ಅವರು ಟಿಕೆಟ್ ಕೊಡುವುದಿಲ್ಲ, ಯೋಗೇಶ್ವರ್ ಕ್ಷೇತ್ರಕ್ಕೆ ನೀರು ಕೊಟ್ಟಿದ್ದಾರೆ. ಸರ್ಕಾರ ಇನ್ನೂ ಮೂರು ವರ್ಷ ಇರುತ್ತದೆ, ಯೋಗೇಶ್ವರ್ ಗೆದ್ದರೆ ಹೆಚ್ಚಿನ ಅನುದಾನ ತಂದು ಕ್ಷೇತ್ರ ಅಭಿವೃದ್ಧಿ ಮಾಡುತ್ತಾರೆ ಅವರನ್ನು ಗೆಲ್ಲಿಸಿ ಕ್ಷೇತ್ರದ ಅಭಿವೃದ್ದಿಗೆ ಸಹಕಾರ ನೀಡಬೇಕೆಂದರು.

ಎಚ್‌ಡಿಕೆ ಕುಟುಂಬದ ವಿರುದ್ಧ ಯೋಗಿ ವಾಗ್ದಾಳಿ: ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾತನಾಡಿ, ಎಚ್.ಡಿ.ಕುಮಾರಸ್ವಾಮಿಯ ರಾಜಕೀಯ ಮಹತ್ವಾಕಾಂಕ್ಷೆಯಿಂದ ಉಪಚುನಾವಣೆ ಬಂದಿದೆ, ಕ್ಷೇತ್ರಕ್ಕೆ ಕುಮಾರಸ್ವಾಮಿ ಬಂದರು, ಅವರ ಪತ್ನಿ ಬಂದರು, ಈಗ ಮಗ ಬಂದಿದ್ದಾರೆ. ನನ್ನ ಮೇಲೆ ಯಾಕೆ ಅವರ ಮನೆಯವರು ಮುಗಿಬೀಳುತ್ತಿದ್ದಾರೋ ಗೊತ್ತಿಲ್ಲ, ನಾನೇನು ತಪ್ಪು ಮಾಡಿದ್ದೇನೆ ಎಂಬುದು ತಿಳಿಯುತ್ತಿಲ್ಲ ಎಂದರು.

ಕ್ಷೇತ್ರದ ಅಭಿವೃದ್ಧಿಗೆ ಪಕ್ಷಾಂತರ: ನನ್ನನ್ನು ಎಲ್ಲರೂ ಪಕ್ಷಾಂತರಿ ಎನ್ನುತ್ತಾರೆ, ಯಾಕೆ ಕಾಂಗ್ರೆಸ್ ಬಿಟ್ಟು ಹೋಗಿದ್ದಿರಿ ಎಂದು ಕೇಳುತ್ತಾರೆ. ಅಂದು ನೀರಾವರಿ ಯೋಜನೆಗಾಗಿ ಪಕ್ಷ ಬಿಟ್ಟು ಹೋಗಿದ್ದೆ. ಕ್ಷೇತ್ರದ ಅಭಿವೃದ್ಧಿಗಾಗಿ ನಾನು ಪಕ್ಷಾಂತರ ಮಾಡಿದ್ದೇನೆ ಹೊರತು ಸ್ವಹಿತಾಸಕ್ತಿಗಲ್ಲ ಎಂದ ಯೋಗೇಶ್ವರ್, ಕುಮಾರಸ್ವಾಮಿಗೆ ಚನ್ನಪಟ್ಟಣದಲ್ಲಿ ಎಷ್ಟು ಕೆರೆ ಇವೆ ಎಂಬುದೇ ಗೊತ್ತಿಲ್ಲ. ಎರಡು ಬಾರಿ ಗೆದ್ದರೂ ಒಂದು ಕೆರೆ ತುಂಬಿಸಲಿಲ್ಲ ಎಂದು ವ್ಯಂಗ್ಯವಾಡಿದರು.

ಪುತ್ರನಿಗಾಗಿ ಎಚ್‌ಡಿಕೆ ನಾಟಕ: ಶಾಸಕ ಶಿವಲಿಂಗೇಗೌಡ ಮಾತನಾಡಿ, ತಮ್ಮ ಮಗನನ್ನು ಚುನಾವಣೆಗೆ ನಿಲ್ಲಿಸಲು ಕುಮಾರಸ್ವಾಮಿ ಇಷ್ಟೆಲ್ಲಾ ನಾಟಕ ಮಾಡಿದ್ದಾರೆ, ಪುತ್ರ ಎರಡು ಬಾರಿ ಸೋತಿದ್ದಾನೆ, ಅವನಿಗೆ ಪುನರ್ಜನ್ಮ ಬೇಕು ಎಂದು ಚನ್ನಪಟ್ಟಣಕ್ಕೆ ತಂದು ನಿಲ್ಲಿಸಿದ್ದಾರೆ. ನಾಟಕ, ಸ್ವಾರ್ಥಕ್ಕೆ ಜನತೆ ಮತ ಕೊಡಬೇಡಿ, ಸ್ವಾಭಿಮಾನಕ್ಕೆ ಮತ ಕೊಡಿ, ಯೋಗೇಶ್ವರ್ ಗೆಲ್ಲಿಸುವ ಮುಖಾಂತರ ನಿಮ್ಮ ಸ್ವಾಭಿಮಾನ ಉಳಿಸಿಕೊಳ್ಳಿ ಎಂದು ಮನವಿ ಮಾಡಿದರು.

ಚನ್ನಪಟ್ಟಣ ತಾಲೂಕಿನ ಕೋಡಂಬಹಳ್ಳಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕ ಶಿವಲಿಂಗೇಗೌಡ ಮತ್ತಿತರರಿದ್ದರು.

ಸ್ವಾಭಿಮಾನ ಬೆಳೆಸಿಕೊಳ್ಳಿ: ಶಾಸಕ ಬಾಲಕೃಷ್ಣ

ಶಾಸಕ ಎಚ್.ಸಿ.ಬಾಲಕೃಷ್ಣ ಮಾತನಾಡಿ, ದುರ್ಯೋಧನ ಕುಮಾರಸ್ವಾಮಿ ಅವರ ಮನೆದೇವರು, ಅವರ ಲಾಂಛನ ನಾಗರಹಾವು. ಇದನ್ನ ಹೇಳಿದ್ದು ಬಿ.ಎಸ್. ಯಡಿಯೂರಪ್ಪ, ಈಗ ಕಚ್ಚಿಸಿಕೊಳ್ಳೋಕೆ ಜೊತೆಗೆ ಕರೆದುಕೊಂಡಿದ್ದಾರೆ. ಕುಮಾರಸ್ವಾಮಿ ಯಾರನ್ನೂ ಬೆಳೆಸುವ ಕೆಲಸ ಮಾಡಿಲ್ಲ, ಎಲ್ಲೆಡೆ ಅವರ ಕುಟುಂಬದರನ್ನು ಪ್ರತಿಷ್ಠಾಪಿಸುತ್ತಾರೆ. ತಾಲೂಕಿಗೆ ನೀರು ಕೊಟ್ಟ ಯೋಗೇಶ್ವರ್‌ರನ್ನು ಎರಡು ಬಾರಿ ಸೋಲಿಸಿದ್ದೀರಿ, ಈಗ ಸ್ವಾಭಿಮಾನ ಬೆಳೆಸಿಕೊಳ್ಳಿ ,ಅವರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು. ಪ್ರಚಾರ ಕಾರ್ಯದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕರಾದ ಶ್ರೀನಿವಾಸ್, ಎಸ್.ರವಿ, ಪುಟ್ಟಣ್ಣ, ಮಾಜಿ ಶಾಸಕ ಎಂ.ಸಿ. ಅಶ್ವಥ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ದುಂತೂರು ವಿಶ್ವನಾಥ್, ಜಿಲ್ಲಾಧ್ಯಕ್ಷ ಎಸ್. ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್, ಸುನೀಲ್‌ಕುಮಾರ್, ಸಿಂಗರಾಜಪುರ ರಾಜಣ್ಣ, ಎ.ಸಿ.ವೀರೇಗೌಡ, ಶಿವಮಾದು, ಚೇತನ್ ಕೀಕರ್ ಎಸ್.ಲಿಂಗೇಶ್‌ಕುಮಾರ್, ಪವಿತ್ರ ಪ್ರಭಾಕರ್ ರೆಡ್ಡಿ ಮೊದಲಾದವರು ಪಾಲ್ಗೊಂಡಿದ್ದರು.

ಕುಮಾರಸ್ವಾಮಿ ಕಳಕಳಿ ನನಗಾಗಿ ಅಲ್ಲ: ಮೈತ್ರಿ ಅಭ್ಯರ್ಥಿ ನಿಖಿಲ್ ಸ್ಪಷ್ಟನೆ

ಎಚ್‌ಡಿಕೆ ಕಣ್ಣೀರು ಹಾಕುವುದು ರೈತರಿಗಾಗಿ

ರಾಮನಗರ: ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ಕಣ್ಣೀರಾಕುವುದು ರೈತರು, ನಾಡಿನ ಜನರ ಪರಿಸ್ಥಿತಿ ನೆನೆದುಕೊಂಡೇ ಹೊರತು ನನಗಾಗಿ ಅಥವಾ ಚುನಾವಣೆ ಸಂದರ್ಭದಲ್ಲಿ ಅಲ್ಲ, ಜನವಿರೋಧಿಗಳಿಗೆ ಇದು ಅರ್ಥವಾಗುವುದಿಲ್ಲ ಎಂದು ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಮಾಕಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿ, ಜನತೆ ಕಷ್ಟವನ್ನು ನಮ್ಮ ಕಷ್ಟ ಎಂದು ಭಾವಿಸುವ ಮನಸ್ಸು ನಮ್ಮದು, ವಿರೋಧಿಗಳು ಇದನ್ನು ಭಾವನಾತ್ಮಕವಾಗಿ ಮರಳು ಮಾಡುವ ತಂತ್ರ ಎನ್ನುತ್ತಾರೆ ಎಂದು ಜರಿದರು.

ದೇವೇಗೌಡ ಅವರು ಇಗ್ಗಲೂರು ಜಲಾಶಯ ನಿರ್ಮಾಣ ಮಾಡಿದ್ದಾರೆ, ತಾಲೂಕಿನ ನೀರಾವರಿ ಯೋಜನೆಗೆ ಅವರ ಕೊಡುಗೆ ಶಾಶ್ವತವಾಗಿದೆ. ನೀರಾ ಚಳವಳಿ ವೇಳೆ ಚನ್ನಪಟ್ಟಣದಿಂದ ಬೆಂಗಳೂರುವರೆಗೂ ಪಾದಯಾತ್ರೆ ಮಾಡಿದ್ದರು. ಚನ್ನಪಟ್ಟಣಕ್ಕೆ ಎಚ್.ಡಿ. ಕುಮಾರಸ್ವಾಮಿ ದೊಡ್ಡ ಮಟ್ಟದ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಅದನ್ನು ಜನತೆ ಮರೆತಿಲ್ಲ ಎಂದು ಹೇಳಿದರು.

ನನ್ನ ಸ್ಪರ್ಧೆ ಅನಿರೀಕ್ಷಿತ: ನನ್ನ ಸ್ಪರ್ಧೆ ಅನಿರೀಕ್ಷಿತ, ಕ್ಷೇತ್ರದ ಕಾರ್ಯಕರ್ತರ ಒತ್ತಡಕ್ಕೆ ಮಣಿದು ಸ್ಪರ್ಧೆ ಮಾಡಿದ್ದೇನೆ, ಒಬ್ಬ ವ್ಯಕ್ತಿ ತೆಗೆದುಕೊಂಡ ತೀರ್ಮಾನ, ಇಡೀ ಸಚಿವ ಸಂಪುಟ ಇಲ್ಲಿ ಬೀಡು ಬಿಟ್ಟಿದ್ದರಿಂದ ಕಾರ್ಯಕರ್ತರು ನನ್ನ ಸ್ಪರ್ಧೆಗೆ ಒತ್ತಾಯ ಮಾಡಿದರು. ಆತ್ಮವಿಶ್ವಾಸ ತುಂಬಿ ದೇವೇಗೌಡ ಅವರು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ಯುವಕರ ಧ್ವನಿಯಾಗಿ ಕೆಲಸ ಮಾಡುತ್ತೇನೆ, ಕ್ಷೇತ್ರದ ಜನತೆ ಅವಕಾಶ ಮಾಡಿಕೊಡಿ ಎಂದು ನಿಖಿಲ್ ಮನವಿ ಮಾಡಿದರು.

ಮಾಕಳಿ ಗ್ರಾಮದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತಯಾಚನೆ ಮಾಡಿದರು.

ಎಚ್‌ಡಿಕೆಗೆ ಅಗ್ನಿಪರೀಕ್ಷೆ

ಸಾಮಾನ್ಯ ಕಾರ್ಯಕರ್ತನಾಗಿ ಬದಲಾವಣೆ ಚುನಾವಣೆ ಎದುರಿಸುತ್ತಿದ್ದೇನೆ, ಕಳೆದ ಎರಡು ಚುನಾವಣೆಯಲ್ಲಿ ಸೋತಿದ್ದೇನೆ, ನಾವು ಕುತಂತ್ರ ಮಾಡಿ ರಾಜಕಾರಣ ಮಾಡಿದವರಲ್ಲ, ನನ್ನನ್ನು ಕುತಂತ್ರದಿಂದ ಸೋಲಿಸಿದರು. ಕುಮಾರಸ್ವಾಮಿ ಅವರ ನಾಯಕತ್ವಕ್ಕೆ ಇದು ಅಗ್ನಿ ಪರೀಕ್ಷೆ, ನಿಖಿಲ್ ಪ್ರಶ್ನೆ ಅಲ್ಲ ನೀವೇ ನಿರ್ಧಾರ ಮಾಡಿ ಎಂದರು. ಪ್ರಚಾರ ಸಂದರ್ಭದಲ್ಲಿ ಪರಿಷತ್ ಸದಸ್ಯ ಜವರಾಯಿಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಎ. ಮಂಜುನಾಥ್, ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಎನ್. ಆನಂದಸ್ವಾಮಿ ಮೊದಲಾದ ಮುಖಂಡರು ಹಾಜರಿದ್ದರು.

ಯೋಗೇಶ್ವರ್ ಗೆಲುವು ನಿಶ್ಚಿತ

ನಾಗಮಂಗಲ: ನಿಖಿಲ್‌ರನ್ನು 3ನೇ ಬಾರಿಗೆ ಆಹುತಿ ಮಾಡುತ್ತಿದ್ದಾರೆ. ಕುಮಾರಸ್ವಾಮಿಯೇ ಕಣಕ್ಕಿಳಿದರೂ ಚನ್ನಪಟ್ಟಣದಲ್ಲಿ ಏನೂ ಮಾಡಲು ಸಾಧ್ಯವಿಲ್ಲ. ಚನ್ನಪಟ್ಟಣದ ಜನ ದಡ್ಡರಲ್ಲ. ಯೋಗೇಶ್ವರ್ ಗೆಲುವು ನಿಶ್ಚಿತ ಎಂದು ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಮಾತನಾಡಿದ ಅವರು, ಈ ಹಿಂದೆ ವಕೀಲ ಗಂಗಾಧರಮೂರ್ತಿಯ ನನ್ನ ವಿರುದ್ಧ ಕೊಲೆ ಪ್ರಕರಣ ಹಾಕಿಸುವ ಮೂಲಕ ತೇಜೋವಧೆಗೆ ಪ್ರಯತ್ನಿಸಿದ್ದರು. ಲೋಕಸಭೆಯ ಉಪಚುನಾವಣೆಯಲ್ಲಿ ಟಿಕೆಟ್ ಕೊಡುವ ನೆಪದಲ್ಲಿ ಮುಂದಿನ ಸಾರ್ವತ್ರಿಕ ಲೋಕಸಭೆ ಚುನಾವಣೆಗೆ ನನ್ನ ಬಳಸಿಕೊಂಡರು. ಈಗಾಗಲೇ ಹಾಸನದ ಜನ ಇವರನ್ನು ಓಡಿಸಿದ್ದಾರೆ. ಅಲ್ಲಿಯ ಜನ ಪಾಠ ಕಲಿಸಿದ್ದಾರೆ. ಆದರೆ ಮಂಡ್ಯ ಜಿಲ್ಲೆಯ ಎಲ್ಲಾ ಪಕ್ಷಗಳ ಮುಖಂಡರು ನರಸತ್ತವರಾ ಗಿದ್ದಾರೆ. ಹಾಸನದಿಂದ ಕರೆದುಕೊಂಡು ಬಂದು ಯಾರನ್ನೋ ಗಂಡಸು ಮಾಡುವ ಬದಲಿಗೆ ನಮ್ಮ ಜಿಲ್ಲೆಯ ಮುಖಂಡರೇ ರಾಜಕೀಯವಾಗಿ ಗಂಡಸರಾಗಬೇಕಿದೆ ಎಂದರು.

ಬಿಜೆಪಿಗೆ ರಾಜೀನಾಮೆ: ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ಈಗಾಗಲೇ ರಾಜಿನಾಮೆ ನೀಡಿದ್ದೇನೆ. ಮೈತ್ರಿಯ ನೆಪದಿಂದ ಮೈಸೂರು ಭಾಗದಲ್ಲಿ ಬಿಜೆಪಿ ನೆಲ ಕಚ್ಚಿದೆ. ಆದ್ದರಿಂದ ನಾನು ಮತ್ತು ನನ್ನ ಮಗ ಚೇತನ್ ಮಾತೃಪಕ್ಷ ಕಾಂಗ್ರೆಸ್ ಸೇರಲಿದ್ದೇವೆ. ಈಗಾಗಲೆ ಸಚಿವ ಚಲುವರಾಯಸ್ವಾಮಿ ಜತೆ ಮಾತುಕತೆ ನಡೆಸಲಾಗಿದೆ. ಪಕ್ಷ ಸೇರುವ ದಿನಾಂಕ ಮಾತ್ರ ನಿಗದಿಯಾಗಬೇಕಿದೆ ಎಂದು ಸ್ಪಷ್ಟಪಡಿಸಿದರು.

ಕುಮಾರಸ್ವಾಮಿ ನಾಟಕ

ಪೂರ್ವನಿಯೋಜಿತವಾಗಿ ತಮ್ಮ ಮಗನನ್ನು ಅಭ್ಯರ್ಥಿಯಾಗಿಸಲು ತೀರ್ಮಾನಿಸಿದ್ದ ಕುಮಾರಸ್ವಾಮಿ, ಯೋಗೇಶ್ವರ್‌ಗೆ ಅಥವ ಪಕ್ಷದ ಕಾರ್ಯಕರ್ತರೊಬ್ಬರಿಗೆ ಟಿಕೆಟ್ ನೀಡುವ ನಾಟಕವಾಡಿದ್ದಾರೆ. ಇಂತಹ ನಾಟಕ ಹೆಚ್ಚು ದಿನ ನಡೆಯಲ್ಲ. ಚನ್ನಪಟ್ಟಣದ ಜನ ಈಗಾಗಲೇ ತೀರ್ಮಾನಿಸಿದ್ದಾರೆ. ಒಂದು ಲಕ್ಷಕ್ಕೂ ಅಧಿಕ ಮತಗಳ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದಲಿತರ ಹಣ ಕಬಳಿಸಿದ ನಾಗೇಂದ್ರ: ಶ್ರೀರಾಮುಲು

ಸಂಡೂರು: ರಾಜ್ಯದ ದಲಿತ ಹಾಗೂ ಶೋಷಿತರ ಅಭಿವೃದ್ಧಿಗಾಗಿ ಮೀಸಲಿಟ್ಟ ಕಲ್ಯಾಣದ ಹಣವನ್ನು ಬಳ್ಳಾರಿಜಿಲ್ಲೆಯ ಮಂತ್ರಿಯಾಗಿದ್ದ ನಾಗೇಂದ್ರ ನುಂಗಿ ನೀರು ಕುಡಿದಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ವಾಗ್ದಾಳಿ ನಡೆಸಿದರು.

ಸಂಡೂರು ಉಪ ಚುನಾವಣೆ ಹಿನ್ನೆಲೆಯಲ್ಲಿ ಕೃಷ್ಣನಗರ, ದೌಲತ್‌ಪುರ, ವೆಂಕಟಗಿರಿ, ಜೈಸಿಂಗ್ ನಗರ ಗ್ರಾಮಗಳಿಗೆ ತೆರಳಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಪರ ಪ್ರಚಾರ ನಡೆಸಿ, ಮತಯಾಚಿಸಿದರು.

ಬಡವರ, ಶೋಷಿತರ, ಪರಿಶಿಷ್ಟ ಪಂಗಡಗಳ ಸಮುದಾಯದ ಅಭಿವೃದ್ಧಿಯ ಕಲ್ಯಾಣದ ಹಣವನ್ನು ಲೂಟಿಮಾಡಿ ತಪ್ಪೇ ಮಾಡಿಲ್ಲ ಎನ್ನುತ್ತಾರೆ ಎಂದರೆ ನಾಚಿಕೆಗೇಡಿನ ಸಂಗತಿ ಎಂದು ಕುಟುಕಿದರು.

ಅಧಿಕಾರದ ದರ್ಪ ತಲೆಗೇರಿ ಬಡವರಿಗೆ ಜಮೀನು ಕೊಡಿಸುವ ಹಣ, ಬಡವರಿಗೆ ಮನೆಗಳನ್ನು ಕಟ್ಟಿಕೊಡಬೇಕಾದ ಹಣ, ದಲಿತರ ಮಕ್ಕಳ ವಿದ್ಯಾರ್ಥಿ ವೇತನ ಹಣ, ಬಡವರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಹಾಕಬೇಕಾದ ಹಣ, ಜಿಲ್ಲಾ ಮಂತ್ರಿಯಾಗಿದ್ದ ನಾಗೇಂದ್ರ, ನಿಮ್ಮೆಲ್ಲರ ಕೋಟಿಗಟ್ಟಲೇ ಹಣ ದುರುಪಯೋಗ ಪಡೆಸಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ಮಾಜಿ ಸಚಿವ, ಹಾಲಿ ಶಾಸಕ ಗಾಲಿ ಜನಾರ್ದನರೆಡ್ಡಿ, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು, ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಸಂಡೂರು ತಾಲೂಕು ಮಂಡಲ ಅಧ್ಯಕ್ಷ ನಾನಾಸಾಬ್ ನಿಕ್ಕಮ್, ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಮುಖಂಡರು, ಸ್ಥಳೀಯ ನಾಯಕರು, ಕಾರ್ಯಕರ್ತರು ಇದ್ದರು.



ಸಂಡೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಪರ ಮಾಜಿ ಶ್ರೀರಾಮುಲು ಪ್ರಚಾರ

ಶಿಗ್ಗಾವಿ: ಕೈ ಅಭ್ಯರ್ಥಿ ಗೆಲ್ಲಿಸಲು ಪಣ

ಶಿಗ್ಗಾವಿ: 20 ವರ್ಷಗಳಿಂದ ಬಿಜೆಪಿ ತೆಕ್ಕೆಯಲ್ಲಿರುವ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿ ಗೆಲ್ಲಿಸಲು ಪಣ ತೊಟ್ಟಿರುವ ಕಾಂಗ್ರೆಸ್ ಹೈಕಮಾಂಡ್, ಚುನಾವಣೆ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಗೊಬ್ಬ ಸಚಿವರನ್ನು ನೇಮಿಸಿ ಪ್ರಚಾರದ , ಜವಾಬ್ದಾರಿ ವಹಿಸಿದೆ.

ಶಿಗ್ಗಾವಿ ಕ್ಷೇತ್ರದಲ್ಲಿ 6 ಜಿ.ಪಂ.ಕ್ಷೇತ್ರಗಳು, 23 ತಾ.ಪಂ.ಕ್ಷೇತ್ರಗಳು ಹಾಗೂ 3 ಪುರಸಭೆಗಳಿವೆ. ಪ್ರತಿ ಕ್ಷೇತ್ರದಲ್ಲೂ ಮತದಾರರನ್ನು ನೇರ ಭೇಟಿಯಾಗಿ ಮತಯಾಚಿಸುವಂತೆ ಸಚಿವರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೂಚಿಸಿದ್ದಾರೆ.

ತಾ.ಪಂ. ಗೆ ಶಾಸಕ: ಶಿಗ್ಗಾವಿ ತಾಲ್ಲೂಕಿನಲ್ಲಿ 14 ಹಾಗೂ ಸವಣೂರು ತಾಲ್ಲೂಕಿನಲ್ಲಿ 9 ತಾ. ಪಂ. ಕ್ಷೇತ್ರಗಳಿವೆ. ತಾಲ್ಲೂಕು ಪಂಚಾಯಿತಿಗೊಬ್ಬ ಶಾಸಕರನ್ನು ನಿಯೋಜಿಸಲಾಗಿದೆ. ಮುಖ್ಯಮಂತ್ರಿ-ಉಪ ಮುಖ್ಯಮಂತ್ರಿ ಸೂಚನೆಯಂತೆ ರಾಜ್ಯ ಸರಕಾರದ 9 ಸಚಿವರು ಹಾಗೂ 23 ಶಾಸಕರು, ಶಿಗ್ಗಾವಿ ಕ್ಷೇತ್ರದಲ್ಲಿಯೇ ಮೊಕ್ಕಾಂ ಹೂಡಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರಲು ಮನೆ ಮನೆಗೆ ತೆರಳಿ ಪ್ರಚಾರ ಕೈಗೊಂಡಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಆತ್ಮಾವಲೋಕನಕ್ಕಿದು ಸಕಾಲ

ಫಿಲಿಪೈನ್ಸ್‌ನಲ್ಲಿ ಟ್ರಾಮಿ ಚಂಡಮಾರುತದ ಹಾವಳಿಯಿಂದಾಗಿ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಮತ್ತು ಭೂಕುಸಿತ ಪ್ರಕರಣಗಳಲ್ಲಿ ಸತ್ತವರ ಸಂಖ್ಯೆಯು 100ನ್ನು ದಾಟಿರುವುದು ಕಳವಳಕಾರಿ ಸಂಗತಿ. ಮತ್ತೊಂದೆಡೆ, ಡಾನಾ ಚಂಡಮಾರುತದ ರುದ್ರನರ್ತನದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಸತ್ತವರ ಸಂಖ್ಯೆ 4ಕ್ಕೆ ಮುಟ್ಟಿದೆ. ಸಾಲದೆಂಬಂತೆ ಒಡಿಶಾ ರಾಜ್ಯದಲ್ಲಿ 1.75 ಲಕ್ಷ ಎಕರೆಗಳಷ್ಟು ಬೆಳೆ ನಾಶವಾಗಿದೆ ಮತ್ತು 2.80 ಲಕ್ಷ ಎಕರೆಗಳಷ್ಟು ಕೃಷಿಭೂಮಿ ನೀರಿನಲ್ಲಿ ಮುಳುಗಿ ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ. ಇದು ಪ್ರಕೃತಿ ವಿಕೋಪದ ಕಥೆಯಾಯಿತು. ಇನ್ನು ಮಾನವ ನಿರ್ಮಿತ ಎಡವಟ್ಟುಗಳ ಕಡೆಗೆ ಗಮನ ಹರಿಸೋಣ. ಗಾಜಾಪಟ್ಟಿ, ಲೆಬನಾನ್, ಸಿರಿಯಾಗಳ ಮೇಲೆ ಯುದ್ಧದ ನೆಪದಲ್ಲಿ ಕೆಂಡದುಂಡೆಗಳನ್ನು ಉಗುಳಿದ ಇಸ್ರೇಲ್ ಈಗ ಇರಾನ್ ಮೇಲೆ ದಾಳಿಗಿಳಿದಿದೆ. ಇಸ್ರೇಲ್‌ನ 100ಕ್ಕೂ ಹೆಚ್ಚು ಯುದ್ಧವಿಮಾನಗಳು ಮೊನ್ನೆ ಶನಿವಾರ ಬೆಳ್ಳಂಬೆಳಗ್ಗೆಯೇ ಆಕ್ರಮಣಕ್ಕೆ ಮುಂದಾಗಿ ಇರಾನ್‌ನ 20ಕ್ಕೂ ಹೆಚ್ಚು ಸೇನಾನೆಲೆಗಳ ಮೇಲೆ ತೀವ್ರದಾಳಿ ನಡೆಸಿ, ಅಲ್ಲಿನ ಶಸ್ತ್ರಾಸ್ತ್ರ ಸಂಗ್ರಹವನ್ನು ಹುಡಿಗಟ್ಟಿವೆ. ಅಕ್ಟೋಬರ್ 1ರಂದು ಇಸ್ರೇಲ್ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿಗಳ ದಾಳಿ ನಡೆಸಿದ್ದಕ್ಕೆ ಇದು ಪ್ರತೀಕಾರ ವಂತೆ. ಇದರಿಂದ ಕೆರಳಿರುವ ಇರಾನ್ ಆಡಳಿತವು, ಇಸ್ರೇಲ್ ವಿರುದ್ಧ ಇನ್ನಷ್ಟು ದೊಡ್ಡ ಪ್ರಮಾಣದ ಆಕ್ರಮಣವನ್ನು ಸಂಘಟಿಸುವುದಾಗಿ ಘೋಷಿಸಿದೆ. ಒಟ್ಟಿನಲ್ಲಿ, 'ನನ್ನ ಒಂದು ಕಣ್ಣು ಹೋದರೂ ಪರವಾಗಿಲ್ಲ, ಶತ್ರುವಿನ ಎರಡೂ ಕಣ್ಣು ನಾಶವಾಗಬೇಕು' ಎಂಬ ಪಿಪಾಸುತನ ಇಲ್ಲಿ ಮಡುಗಟ್ಟಿರುವುದು ಸ್ಪಷ್ಟವಾಗಿದೆ. ಅದು ಪ್ರಕೃತಿ ವಿಕೋಪವೇ ಇರಲಿ, ಮಾನವರ ಸ್ವಯಂಕೃತಾಪರಾಧದ ಫಲವಾಗಿ ನಡೆಯುವ ಇಂಥ ಯುದ್ಧಗಳು-ರಕ್ತಪಾತಗಳೇ ಆಗಿರಲಿ, ಜೀವಹಾನಿ ಮತ್ತು ಸ್ವತ್ತುನಷ್ಟಗಳು ಅಂತಿಮ ಫಲಶ್ರುತಿ ಎನಿಸಿಕೊಳ್ಳುತ್ತವೆ. ಪ್ರಕೃತಿ ವಿಕೋಪವನ್ನು ತಡೆಯುವುದು ನಮ್ಮ ಕೈಯಲ್ಲಿಲ್ಲ; ಆದರೆ ಮಾನವನಿರ್ಮಿತ ಎಡವಟ್ಟುಗಳಿಗೆ ಕಡಿವಾಣ ಹಾಕಲು, ತನ್ಮೂಲಕ ಈ ಭೂಮಿಯನ್ನು ಶಾಂತಿ-ನೆಮ್ಮದಿಗಳ ಗೂಡಾಗಿ ಪರಿವರ್ತಿಸಲು ಸಾಧ್ಯವಿದೆ. ಭಾರಿ ಪ್ರಮಾಣದ ಮಾನವ ಪರಿಶ್ರಮ ಮತ್ತು ಹಣಕಾಸು ವೆಚ್ಚವನ್ನು ಅಪೇಕ್ಷಿಸುವ ಯುದ್ಧಗಳೆಂಬ ಪೆಡಂಭೂತಗಳನ್ನು ಅಪ್ಪಲು ಮುಂದಾಗುವವರು ಇದನ್ನರಿತು, ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳಲಿ.

ಸೊಂಪಾದಕೀಯ

ರಾಹುಲ್‌ಗೆ ರಾಹುಕಾಲ

ಭಾರತೀಯ ಕ್ರಿಕೆಟ್ ತಂಡದಲ್ಲಿ ಆಯ್ಕೆಯ ವಿಷಯ ಬಂದರೆ ಅದು ತುಂಬಾ ಸಂಕೀರ್ಣವಾದ ಸಮಸ್ಯೆ ಎಂಬುದೇ ಎಲ್ಲರ ಅನಿಸಿಕೆ. ಅದರಲ್ಲೂ ದಕ್ಷಿಣ ಭಾರತದ, ಅದರಲ್ಲೂ ಕರ್ನಾಟಕದ ಆಟಗಾರರ ವಿಷಯಕ್ಕೆ ಬಂದರೆ ಅವರು ರಾಷ್ಟ್ರೀಯ ತಂಡಕ್ಕೆ ಆಯ್ಕೆ ಆಗೋದು ಸುಲಭದ ವಿಷಯ ಅಲ್ಲ. ಅಪ್ಪಿ ತಪ್ಪಿ ಹರಸಾಹಸ ಪಟ್ಟು ಆಯ್ಕೆ ಆದರೂ ಅಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳೋದು ಕೂಡಾ ಮುಳ್ಳಿನ ತಂತಿಯ ಮೇಲೆ ನಡೆದಂಥ ಅನುಭವ. ಇಷ್ಟೆಲ್ಲಾ ಕಷ್ಟಗಳ ನಡುವೆಯೂ ಮೊದಲೆಲ್ಲಾ ಭಾರತೀಯ ತಂಡದಲ್ಲಿ ಕರ್ನಾಟಕದ ಅನೇಕ ಆಟಗಾರರು ಇರುತ್ತಿದ್ದರು. ಮೊಹಮ್ಮದ್ ಅಜರುದ್ದೀನ್ ನಾಯಕರಾಗಿದ್ದ ಕಾಲದ, ಒಂದು ಸಮಯದಲ್ಲಿ ಇರೋ 11 ಆಟಗಾರರಲ್ಲಿ 6 ಜನ ಕರ್ನಾಟಕದ ಆಟಗಾರರು ಇದ್ದಿದ್ದನ್ನೂ ನಾವು ನೋಡಿದ್ದೇವೆ. ಆದರೆ ಅದೆಲ್ಲಾ ಸುವರ್ಣ ಯುಗ. ದ್ರಾವಿಡ್, ಶ್ರೀನಾಥ್, ಕುಂಬ್ಳೆ, ಪ್ರಸಾದ್ ಅವರ ನಂತರ ಈಗೀಗ ಕರ್ನಾಟಕದ ಆಟಗಾರರ ಸಂಖ್ಯೆ ಭಾರತೀಯ ತಂಡದಲ್ಲಿ ಕಮ್ಮಿ ಆಗುತ್ತಿದೆ. ಈಗಂತೂ ಕೆ.ಎಲ್ ರಾಹುಲ್ ಒಬ್ಬರೇ ಕರ್ನಾಟಕದ ಪಾಲಿನ ಆಶಾಕಿರಣ. ಇತ್ತೀಚೆಗೆ ಮಯಾಂಕ್ ಅಗರ್ವಾಲ್ ಕೆಲ ಕಾಲ ತಂಡದಲ್ಲಿದ್ದರು. ಕರುಣ್ ನಾಯರ್ ಅಂಥವರು ತ್ರಿಶತಕ ಬಾರಿಸಿದರೂ ಬಂದು ಹೋದವರ ಪಟ್ಟಿಗೆ ಸೇರಿಕೊಂಡುಬಿಟ್ಟರು. ಈಗ ಈ ನಡುವೆ ರಾಹುಲ್ ಅವರ ಸ್ಥಾನಕ್ಕೂ ಕುತ್ತು ಬರುವ ಲಕ್ಷಣಗಳು ಕಾಣುತ್ತಿವೆ. ಈಗ ನಡೆಯುತ್ತಿರುವ ಇಂಡಿಯಾ ನ್ಯೂಜಿಲ್ಯಾಂಡ್ ನಡುವಿನ ಟೆಸ್ಟ್ ಸರಣಿಯಲ್ಲಿ ಮೊದಲ ಪಂದ್ಯದ ವೈಫಲ್ಯದ ನಂತರ ರಾಹುಲ್ ಅವರನ್ನು ತಂಡದಿಂದ ಬಿಡಬೇಕು ಅನ್ನೋ ಕೂಗು ಕೇಳಿಬರುತ್ತಿದೆ. ಎರಡನೇ ಪಂದ್ಯಕ್ಕೆ ಬಿಟ್ಟಿದ್ದೂ ಆಗಿದೆ. ಇದಕ್ಕೆ ರಾಹುಲ್ ಅವರ ಬ್ಯಾಟಿಂಗ್ ನಿರೀಕ್ಷಿತ ಮಟ್ಟದಲ್ಲಿಲ್ಲ ಅನ್ನೋದೂ ಕಾರಣ ಆಗಿದೆ. ಹಾಗಾಗಿ ಕನ್ನಡಿಗರೇ ರಾಹುಲ್ ಆಡೋದನ್ನು ನೋಡಿ ಅವರಿಗೆ ರಾಹುಕಾಲ ಬಂದಿದೆ ಅಂತ ಆಡಿಕೊಳ್ಳುತ್ತಿದ್ದಾರೆ. ಇದರ ನಡುವೆಯೂ ರಾಹುಲ್ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್- ಗವಾಸ್ಕರ್ ಟೆಸ್ಟ್ ಸರಣಿಗೆ ಆಯ್ಕೆ ಆಗಿದ್ದಾರೆ. ಆದರೂ ಒಂದು ಲೆಕ್ಕದಲ್ಲಿ ನೋಡಿದರೆ ಕೆ.ಎಲ್.ರಾಹುಲ್ ಅವರ ಕ್ರಿಕೆಟ್ ಕೆರಿಯರ್ ಬಾರ್ಡರ್‌ನಲ್ಲಿದೆ ಅನ್ನೋದೇ ಕ್ರಿಕೆಟ್ ಪಂಡಿತರ ಅನಿಸಿಕೆ ಆಗಿದೆ.

ಸಂಪಾದಕರ ಸದ್ಯಶೋಧನೆ

ಕೊರಿಯನ್ ಮನೆಯಲ್ಲಿ ಕಂಡಿದ್ದು

ನಾನು ವಾಸಿಸುವ ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿ ದಕ್ಷಿಣ ಕೊರಿಯಾ ಮೂಲದ ದಂಪತಿಗಳು ದೊಡ್ಡ (ಬಾಡಿಗೆ) ಮನೆಯೊಂದರಲ್ಲಿ ವಾಸವಾಗಿದ್ದಾರೆ. ಅವರು ಸಿಯೋಲ್ ಮೂಲದ ಖಾಸಗಿ ಕಂಪನಿಯೊಂದರ ಬೆಂಗಳೂರು ಶಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಇತ್ತೀಚೆಗೆ ನಾನು ಅವರ ಮನೆಗೆ ಹೋದಾಗ, ನಮ್ಮ ಮತ್ತು ಅವರ ಸಂಸ್ಕೃತಿ, ಸಂಪ್ರದಾಯಗಳಿಗೆ ಕೆಲವು ಸಾಮ್ಯವಿರುವುದು ಅರಿವಿಗೆ ಬಂತು. ಅಷ್ಟು ದೊಡ್ಡ ಮನೆಯಿದ್ದರೂ ಅವರ ಮನೆಯಲ್ಲಿ ಹೆಚ್ಚು ಫರ್ನಿಚರುಗಳು ಇರಲಿಲ್ಲ, ಅಲ್ಲಲ್ಲಿ ಚಾಪೆ, ದಿಂಬು, ಜಮಖಾನ, ಗಾಶಿಗಳನ್ನು ಹಾಸಿದ್ದರು. 'ನಾವು ಫರ್ನಿಚರ್‌ಗಿಂತ ನೆಲದ ಮೇಲೆ ಕುಳಿತುಕೊಳ್ಳುವುದನ್ನು ಇಷ್ಟಪಡುತ್ತೇವೆ' ಎಂದು ನನ್ನ ಪರಿಚಿತರ ಪತ್ನಿ ಹೇಳಿದರು. 'ನೆಲದ ಮೇಲೆ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡರೆ ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು' ಎಂದು ಹೇಳಿ ನಕ್ಕರು. ಅಲ್ಲಿದ್ದ ಮುಕ್ಕಾಲು ಗಂಟೆ ಅವಧಿಯಲ್ಲಿ ಅವರು ಹೇಳಿದ ಕೆಲವು ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ... ● ಮನೆಯಲ್ಲಿದ್ದಾಗ ಚಪ್ಪಲಿಯನ್ನು ಧರಿಸಬಾರದು. ಬೇರೆಯವರ ಮನೆಗೆ ಹೋದಾಗಲೂ ಚಪ್ಪಲಿ ಧರಿಸಿ ಒಳಗೆ ಹೋಗಬಾರದು. ನಮ್ಮ ಚಪ್ಪಲಿ ಎಷ್ಟೇ ಸ್ವಚ್ಛವಾಗಿದ್ದರೂ, ಹೊರಗಿನ ನೆಲ ಗಲೀಜಾಗಿರುತ್ತದೆ. ನಮ್ಮ ಕಾಲನ್ನು ಸ್ವಚ್ಛವಾಗಿಟ್ಟುಕೊಳ್ಳಲು, ನಮ್ಮ ಮನೆಯನ್ನು ಕೊಳೆ ಮಾಡಿಕೊಳ್ಳಬಾರದು. ● ಮನೆಯಲ್ಲಿ ಎಷ್ಟು ಕಡಿಮೆ ಸಾಮಾನು ಇರುತ್ತದೋ, ಅಷ್ಟು ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುತ್ತೀರಿ. ಮನೆಯಲ್ಲಿ ಹೆಚ್ಚು ಸಾಮಾನುಗಳು ತುಂಬಿಕೊಂಡರೆ, ಅವು ನಿಮ್ಮ ಚಲನೆಯ ಮೇಲೆ ಕಡಿವಾಣ ಹೇರುತ್ತವೆ. ಮನೆಯಲ್ಲಿ ಪೀಠೋಪಕರಣಗಳಿಲ್ಲದೇ ಬದುಕಬಹುದು. ನಾವು ಮನೆಗೆ ಬರುವ ಅತಿಥಿಗಳಿಗಾಗಿ ಫರ್ನಿಚರ್ ಇಟ್ಟಿದ್ದೇವೆ. ನಾವು ಫರ್ನಿಚರ್ ಬಳಸುವುದಿಲ್ಲ. ● ಮನೆಯ ಕಿಟಕಿಗಳನ್ನು ಯಾವತ್ತೂ ತೆರೆದಿಡಬೇಕು. ಯಾವತ್ತೂ ತಾಜಾಗಾಳಿ ಮನೆಯೊಳಗೆ ಬರುತ್ತಿರಬೇಕು. ಹೊರಗಿನ ಗಾಳಿ ಮನೆಯೊಳಗೆ ಬರುವಾಗ ತಾಜಾತನವನ್ನು ತರುತ್ತದೆ. ● ಯಾವತ್ತೂ ಮನೆಯಲ್ಲಿ ಒಂದು ಪಾತ್ರೆಯಲ್ಲಿ ಹೂವಿನ ಪಕಳೆಗಳನ್ನು ಹಾಕಿಡಬೇಕು ಅಥವಾ ತಾಜಾ ಹೂವನ್ನು ಹೂಜಿಯಲ್ಲಿ ಇಟ್ಟಿರಬೇಕು. ಮನೆಯಲ್ಲಿಟ್ಟ ಹೂವು ಯಾವತ್ತೂ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ● ಪ್ರತಿ ಗೋಡೆಯನ್ನು ಬೋಳಾಗಿ ಬಿಡಬಾರದು. ಒಂದು ಗೋಡೆಗೆ ಅರ್ಥ ಬರಬೇಕೆಂದರೆ, ಅದಕ್ಕೊಂದು ಪೇಂಟಿಂಗ್ ನೇತು ಹಾಕಬೇಕು. ಸಾಧ್ಯವಾದಷ್ಟು ನಿಸರ್ಗದ ಫೋಟೋಗಳು ಮನೆಯಲ್ಲಿ ಶಾಂತತೆಯನ್ನು ತಮ್ಮಷ್ಟಕ್ಕೆ ಮೂಡಿಸುತ್ತವೆ. ● ಸಾಧ್ಯವಾದಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಮರದಿಂದ ಮಾಡಿದ ಸಾಮಾನುಗಳನ್ನು ಬಳಸಬೇಕು. ● ಮನೆಯಲ್ಲಿರುವ ಎಲ್ಲರಿಗೂ ಟೀ, ಕಾಫಿ ಮಾಡುವುದನ್ನು ಕಲಿಸಬೇಕು. ಮನೆಯಲ್ಲಿ ಅಮ್ಮ ಇಲ್ಲದಿದ್ದರೂ ಅಡುಗೆ ಮಾಡುವುದನ್ನು ಗಂಡಸರು ಕಲಿತಿರಬೇಕು. ● ಮನೆ ಎಷ್ಟೇ ಸ್ವಚ್ಛವಾಗಿದ್ದರೂ ಧೂಳಿನ ಕಣಗಳು ಬಂದು ಕುಳಿತುಕೊಳ್ಳುತ್ತವೆ. ಪ್ರತಿದಿನವೂ ಮನೆಯನ್ನು ಸ್ವಚ್ಛಗೊಳಿಸಲೇಬೇಕು. ಹೆಚ್ಚು ಕೊಳೆಯಾಗುವುದು ಮನೆಯಲ್ಲಿರುವ ಬಾತ್‌ರೂಮ್. ಅದನ್ನು ನಿತ್ಯವೂ ಕ್ಲೀನ್ ಮಾಡಬೇಕು. ● ಮನೆಯಲ್ಲಿ ನಾಯಿ, ಬೆಕ್ಕು ಸಾಕುವುದು ಒಳ್ಳೆಯದೇ. ಆದರೆ ಅವುಗಳಿಗೆ ಸಮಯ ಕೊಡಬೇಕು. ಹೇಗಿದ್ದರೂ ಬಿದ್ದಿರುತ್ತವೆ ಎಂದು ಭಾವಿಸಿ ಅವುಗಳನ್ನು ಸಾಕಬಾರದು. ● ಒಮ್ಮೆ ಮನೆಯಿಂದ ಹೊರಗೆ ಹಾಕಿಕೊಂಡು ಬಂದ ಶರ್ಟು, ಪ್ಯಾಂಟನ್ನು ಮತ್ತೊಮ್ಮೆ ಧರಿಸಬಾರದು. ಹೊರಗಿನ ಧೂಳುಗಳು ನಮ್ಮ ಬಟ್ಟೆಯ ಮೇಲೆ ಬಿದ್ದಿರುತ್ತವೆ. ಮೇಲ್ನೋಟಕ್ಕೆ ಸ್ವಚ್ಛವಾಗಿದ್ದರೂ ಅವು ನಮ್ಮ ಬೆವರಿನಿಂದ ಮಲಿನವಾಗಿರುತ್ತವೆ. ನಮ್ಮ ಬೆವರೂ ಸಹ್ಯವಲ್ಲ. ನಾನು ಆ ದಂಪತಿಗಳ ಮಾತುಗಳನ್ನು ಧ್ಯಾನಾಸಕ್ತನಾಗಿ ಕೇಳುತ್ತಿದ್ದೆ. ಅವರ ಮಾತುಗಳು, ಮನೆಯ ವಾತಾವರಣ ಇಷ್ಟವಾದವು.

ಮೂರು ಕ್ಷೇತ್ರಗಳ ಎಫ್‌ಐಆರ್ ಕಾಪಿ



ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ಶಿಗ್ಗಾಂವಿಯ ಮಾಜಿ ಶಾಸಕ ಮಂಜುನಾಥ ಕುನ್ನೂರು ವಿಧಾನಸಭೆಯ ಮೊಗಸಾಲೆಗೆ ಬಂದಿದ್ದರು. ಹೀಗೆ ಬಂದವರು ಕಾಂಗ್ರೆಸ್ಸಿನ ಕೆಲ ನಾಯಕರ ಮುಂದೆ ತಮ್ಮ ನೋವು ತೋಡಿಕೊಂಡಿದ್ದರು.

''ಸರ್, ನಮ್ಮ ಶಿಗ್ಗಾಂವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುವುದು ಸುಲಭ. ಈ ಗೆಲುವಿಗೆ ಅಗತ್ಯವಾದ ಒಂದೇ ಮಾನದಂಡವೆಂದರೆ ಪಂಚಮಸಾಲಿ ಲಿಂಗಾಯತರಿಗೆ ಟಿಕೆಟ್ ಕೊಡುವುದು. ಆದರೆ ಇದು ಗೊತ್ತಿದ್ದರೂ ಕ್ಷೇತ್ರದಲ್ಲಿ ಉದ್ದೇಶಪೂರ್ವಕವಾಗಿ ಪಂಚಮಸಾಲಿಗಳಿಗೆ ಟಿಕೆಟ್ ತಪ್ಪಿಸಲಾಗುತ್ತಿದೆ. ಅದರಲ್ಲೂ ಬಿಜೆಪಿಯ ಬಸವರಾಜ ಬೊಮ್ಮಾಯಿ ಅವರ ಗೆಲುವಿಗೆ ಅನುಕೂಲ ಮಾಡಿಕೊಡಲು ಮುಸ್ಲಿಮರಿಗೆ ಟಿಕೆಟ್ ಕೊಡಲಾಗುತ್ತಿದೆ. ಅರವತ್ತು ಸಾವಿರದಷ್ಟಿರುವ ಪಂಚಮಸಾಲಿ ಸಮುದಾಯಕ್ಕೆ ಟಿಕೆಟ್ ತಪ್ಪಿಸಿ, ಮುಸ್ಲಿಮರಿಗೆ ಟಿಕೆಟ್ ಕೊಡುತ್ತಿರುವುದರಿಂದ ಕಾಂಗ್ರೆಸ್ ಗೆಲುವು ಗಳಿಸಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಮುಸ್ಲಿಮರ ವೋಟು ಗಣನೀಯ ಸಂಖ್ಯೆಯಲ್ಲಿ ಸಿಕ್ಕರೂ ಹಿಂದುಳಿದ, ದಲಿತ ಸಮುದಾಯಗಳ ಮತಬ್ಯಾಂಕನ್ನು ಕ್ರೋಡೀಕರಿಸಲು ಕಾಂಗ್ರೆಸ್ಸಿಗೆ ಸಾಧ್ಯವಾಗುತ್ತಿಲ್ಲ. ಆದರೆ ಅದೇ ಕಾಲಕ್ಕೆ ಬೊಮ್ಮಾಯಿ ಅವರು ಪಂಚಮಸಾಲಿ ಲಿಂಗಾಯತರು, ವಾಲ್ಮೀಕಿಗಳು, ಸಾದ ಲಿಂಗಾಯತರ ಮತಗಳನ್ನು ಕನ್‌ಸಾಲಿಡೇಟ್ ಮಾಡುತ್ತಾರೆ. ಉಳಿದಂತೆ ಕುರುಬರು, ಮುಸ್ಲಿಮರು, ದಲಿತರ ಮತಬ್ಯಾಂಕಿನಲ್ಲೂ ಒಂದಷ್ಟು ಮತ ಸೆಳೆದು ಗೆಲ್ಲುತ್ತಿದ್ದಾರೆ. ಈ ಸತ್ಯ ನಮ್ಮ ಪಕ್ಷದ ಟಾಪ್ ಲೀಡರುಗಳಿಗೆ ಗೊತ್ತಿಲ್ಲ ಅಂತಲ್ಲ, ಆದರೆ ಅವರು ಬೇಕು ಅಂತಲೇ ಬಸವರಾಜ ಬೊಮ್ಮಾಯಿ ಅವರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಈಗ ಬಸವರಾಜ ಬೊಮ್ಮಾಯಿ ಲೋಕಸಭೆ ಚುನಾವಣೆಯಲ್ಲಿ ಗೆದ್ದಿರುವುದರಿಂದ ಸದ್ಯದಲ್ಲೇ ಶಿಗ್ಗಾಂವಿ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಲಿದೆ. ಹೀಗಾಗಿ ಈ ಸಲವಾದರೂ ಪಂಚಮಸಾಲಿ ಸಮುದಾಯದವರಿಗೆ ಪಕ್ಷದ ಟಿಕೆಟ್ ಕೊಡುವಂತಾಗಬೇಕು. ನನ್ನ ಮಗ ರಾಜು ಕುನ್ನೂರ್‌ಗೆ ಟಿಕೆಟ್ ಕೊಡಿ ಅಂತ ಕೇಳಲು ನಾನು ಇವತ್ತು ಬಂದಿದ್ದೇನೆ. ಹಾಗಂತ ನನ್ನ ಮಗನಿಗೇ ಟಿಕೆಟ್ ಆಗುತ್ತದೆ ಅಂತಲ್ಲ. ಆದರೆ ಯಾವ ಕಾರಣಕ್ಕೂ ಪಂಚಮಸಾಲಿಗಳನ್ನು ಬಿಟ್ಟು ಬೇರೆಯವರಿಗೆ ಟಿಕೆಟ್ ಕೊಡಬಾರದು. ಹೀಗೆ ಪಂಚಮಸಾಲಿಗಳಿಗೆ ಟಿಕೆಟ್ ಕೊಟ್ಟರೆ, ಆ ಸಮುದಾಯದ ಮತಗಳ ಜತೆ ಅಹಿಂದ ವರ್ಗಗಳ ಮತಬ್ಯಾಂಕ್ ಸೇರಿ ಕಾಂಗ್ರೆಸ್ ಸುಲಭವಾಗಿ ಗೆಲ್ಲುತ್ತದೆ. ಹಾಗಂತ ಸಿಎಂ ಮತ್ತು ಡಿಸಿಎಂ ಅವರಿಗೆ ನೀವು ಒಂದು ಮಾತು ಹೇಳಬೇಕು ಸರ್. ಒಂದು ವೇಳೆ ಇಷ್ಟೆಲ್ಲ ಹೇಳಿಯೂ ಈ ಸಲ ಶಿಗ್ಗಾಂವಿ ಟಿಕೆಟ್ಟನ್ನು ಪಂಚಮಸಾಲಿಗಳಿಗೆ ಕೊಟ್ಟಿಲ್ಲ ಅಂದ್ರೆ, ಯಥಾಪ್ರಕಾರ ಬಿಜೆಪಿ ಗೆಲ್ಲುತ್ತದೆ, ನಾವು ಕೈ ಕೈ ಹಿಸುಕಿಕೊಂಡು ತಿರುಗಾಡಬೇಕಾಗುತ್ತದೆ'' ಅಂತ ಮಂಜುನಾಥ್ ಕುನ್ನೂರ್ ಹೇಳುತ್ತಿದ್ದರೆ, ಕೇಳುತ್ತಿದ್ದ ಕಾಂಗ್ರೆಸ್ ನಾಯಕರು ಅವತ್ತು ಬೆರಗಾಗಿದ್ದರು.

ಭರತ್ ಬೊಮ್ಮಾಯಿ ಗೆಲ್ಲೋದು ಸುಲಭವಲ್ಲ: ಅಂದ ಹಾಗೆ, ಈ ಬೆಳವಣಿಗೆ ನಡೆದು ಕೆಲವೇ ಕಾಲದಲ್ಲಿ ಶಿಗ್ಗಾಂವಿ ಕ್ಷೇತ್ರದ ಉಪಚುನಾವಣೆ ಎದುರಾಗಿದೆ. ಈ ಸಲ ಬಿಜೆಪಿಯಿಂದ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಕಣಕ್ಕಿಳಿದಿದ್ದಾರೆ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ಯಾಸಿರ್ ಅಹ್ಮದ್ ಖಾನ್ ಪಠಾಣ್ ಕಣಕ್ಕಿಳಿದಿದ್ದಾರೆ.

ಹೀಗೆ ಮೇಲ್ನೋಟಕ್ಕೆ ನೋಡಿದರೆ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಗೆಲ್ಲುವುದು ಸುಲಭ ಎಂಬ ಭಾವನೆ ಹಲವರಲ್ಲಿದೆ. ಕಾರಣ? ಯಥಾಪ್ರಕಾರ ಕಾಂಗ್ರೆಸ್ ಪಕ್ಷದ ಟಿಕೆಟ್ಟನ್ನು ಮುಸ್ಲಿಮರಿಗೆ ನೀಡಲಾಗಿದೆ. ಹೀಗಾಗಿ ಎಂದಿನಂತೆ ಬಲಿಷ್ಠ ವರ್ಗದ ಬೆಂಬಲವಿಲ್ಲದೆ, ಅಹಿಂದ ವರ್ಗಗಳ ಮತಗಳನ್ನು ಕನ್‌ಸಾಲಿಡೇಟ್ ಮಾಡಲು ಸಾಧ್ಯವಾಗದೆ ಕಾಂಗ್ರೆಸ್ ಸೋಲುವುದು ಗ್ಯಾರಂಟಿ ಎಂಬುದು ಇಂಥವರ ಲೆಕ್ಕಾಚಾರ.

ಆದರೆ ಶಿಗ್ಗಾಂವಿಯ ಮತಬ್ಯಾಂಕುಗಳನ್ನು ಸ್ಪರ್ಶಿಸುತ್ತಾ ಹೋದರೆ, ''ಯೇ ಅಷ್ಟು ಸುಲಭವಾಗಿ ಭರತ್ ಬೊಮ್ಮಾಯಿ ಗೆಲ್ಲಲು ಸಾಧ್ಯವಿಲ್ಲ'' ಎಂಬ ಮಾತುಗಳು ಕೇಳಿಬರುತ್ತವೆ. ಅದರ ಪ್ರಕಾರ, ಈ ಸಲ ಕಾಂಗ್ರೆಸ್ ಪಕ್ಷ ತಮ್ಮವರಿಗೆ ಟಿಕೆಟ್ ಕೊಡದೆ ಇರುವುದರಿಂದ ಪಂಚಮಸಾಲಿ ಸಮುದಾಯಕ್ಕೆ ಅಸಮಾಧಾನವಾಗಿದೆ ಎಂಬುದೇನೋ ನಿಜ. ಆದರೆ ಇದೊಂದೇ ಕಾರಣಕ್ಕೆ ಪಂಚಮಸಾಲಿ ಮತದಾರರು ಭರತ್ ಬೊಮ್ಮಾಯಿ ಜತೆ ನಿಲ್ಲುತ್ತಾರೆ ಅಂತಲ್ಲ. ಕಾರಣ? ತಮ್ಮ ಸಮುದಾಯದವರೊಬ್ಬರು ಶಾಸಕರಾಗಿ ದಶಕಗಳೇ ಕಳೆದಿವೆ. ಹೀಗಿರುವಾಗ ಈ ಸಲ ಬೊಮ್ಮಾಯಿ ಕುಟುಂಬದ ಕುಡಿಯ ಜತೆ ನಿಂತರೆ ಮುಂದೆ ಇನ್ನಷ್ಟು ಕಾಲ ಪಂಚಮಸಾಲಿಗಳಿಗೆ ಅನ್ಯಾಯವಾಗುವುದು ಗ್ಯಾರಂಟಿ. ಹೀಗಾಗಿ ಇಂಥ ಅಪಾಯ ತಪ್ಪಬೇಕು ಎಂದರೆ ಈ ಸಲ ಕಾಂಗ್ರೆಸ್ ಜತೆ ನಿಂತು ಭರತ್ ಬೊಮ್ಮಾಯಿ ಅವರನ್ನು ಸೋಲಿಸಬೇಕು ಎಂಬ ಭಾವನೆ ಪಂಚಮಸಾಲಿ ಸಮುದಾಯದಲ್ಲಿದೆ.

ಇನ್ನು ಕ್ಷೇತ್ರದಲ್ಲಿರುವ ಸಾದ ಲಿಂಗಾಯತರಲ್ಲೂ ಬೊಮ್ಮಾಯಿ ಪಾಲಿಟಿಕ್ಸ್ ಬಗ್ಗೆ ಅಸಮಾಧಾನವಿದೆ. ಯಾಕೆಂದರೆ ಇತ್ತೀಚಿನ ವರ್ಷಗಳಲ್ಲಿ ಸಾದ ಲಿಂಗಾಯತರಿಗೆ ಬಸವರಾಜ ಬೊಮ್ಮಾಯಿ ಅವರಿಂದಾದ ಅನುಕೂಲ ಅಷ್ಟಕ್ಕಷ್ಟೇ. ''ಯೇ ಬಿಡ್ರೀ. ನಾವು ಅವರ ಮನೆ ಹತ್ರಾನೇ ಹೋಗೋದಿಲ್ಲ. ಕ್ಷೇತ್ರದಲ್ಲಿನ ಕಂಟ್ರಾಕ್ಟು ಕೆಲಸಗಳಿಂದ ಹಿಡಿದು ಯಾವ ಕೆಲಸವೇ ಇದ್ದರೂ ಅವರು ನಮಗೆ ಪ್ರಾಮಿನೆನ್ಸು ಕೊಡುವುದಿಲ್ಲ. ಹೀಗಿರುವಾಗ ನಾವೇಕೆ ಅವರ ಜತೆ ಹೋಗಬೇಕು?'' ಎಂಬ ಮಾತು ಈ ಕ್ಯಾಂಪಿನಲ್ಲಿ ಕೇಳುತ್ತದೆ. ಅರ್ಥಾತ್, ಈವರೆಗೂ ಬೊಮ್ಮಾಯಿ ಅವರ ಕೈ ಹಿಡಿಯುತ್ತಿದ್ದ ಲಿಂಗಾಯತ ಮತಬ್ಯಾಂಕ್ ಈ ಸಲ ಅಷ್ಟು ಸಾಲಿಡ್ಡಾಗಿ ಭರತ್ ಬೊಮ್ಮಾಯಿ ಜತೆ ನಿಲ್ಲುವುದಿಲ್ಲ.

ಇದೇ ರೀತಿ ಮುಸ್ಲಿಂ, ಕುರುಬ ಮತಬ್ಯಾಂಕಿನ ಮೇಲೆ ಪ್ರಭಾವ ಬೀರಿ 10-12 ಪರ್ಸೆಂಟಿನಷ್ಟು ಮತ ಕೀಳುತ್ತಿದ್ದ ಬೊಮ್ಮಾಯಿಯವರಿಗೆ ಈ ಬಾರಿ ನಿರಾಸೆ ಕಾದಿದೆ. ಕಾರಣ? ಈ ಮತಬ್ಯಾಂಕಿನ ಮೇಲೆ ಸಿಎಂ ಸಿದ್ದರಾಮಯ್ಯ ಅವರಿಗಿರುವ ಪ್ರಭಾವ ಕೈ ಅಭ್ಯರ್ಥಿಗೆ ಪ್ಲಸ್ ಆಗಿ, ಬಿಜೆಪಿ ಅಭ್ಯರ್ಥಿಗೆ ಮೈನಸ್ ಆಗಲಿದೆ ಎಂಬುದು ಖುದ್ದು ಕಾಂಗ್ರೆಸ್ಸಿಗರ ವಾದ. ಆ ದೃಷ್ಟಿಯಿಂದ ನೋಡಿದರೆ ಭರತ್ ಬೊಮ್ಮಾಯಿ ಗೆಲುವು ಕಷ್ಟ ಅನ್ನಿಸುವುದು ಸಹಜ.

ಮ್ಯಾಜಿಕ್ ಮಾಡಲಿದ್ದಾರೆ ಬಸಣ್ಣ: ಹೀಗೆ ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರ ಮೈನಸ್ಸು, ಕಾಂಗ್ರೆಸ್ ಅಭ್ಯರ್ಥಿ ಪಠಾಣ್ ಅವರಿಗಿರುವ ಪ್ಲಸ್ ಪಾಯಿಂಟುಗಳ ಬಗ್ಗೆ ಏನೇ ಮಾತುಗಳಿರಲಿ, ಕ್ಷೇತ್ರದಲ್ಲಿ ಬಸವರಾಜ ಬೊಮ್ಮಾಯಿ ತೋರಿಸಲಿರುವ ಮ್ಯಾಜಿಕ್ಕಿನ ಬಗ್ಗೆ ಹಲವರಿಗೆ ಕುತೂಹಲವಿದೆ. ಬೊಮ್ಮಾಯಿ ಮ್ಯಾಜಿಕ್ಕಿನ ಬಗ್ಗೆ ಹೇಳುವವರು, ಭರತ್ ಬೊಮ್ಮಾಯಿ ಗೆಲ್ಲುವುದು ನಿಶ್ಚಿತ ಎನ್ನುತ್ತಾರೆ. ಅವರ ಪ್ರಕಾರ, ಕ್ಷೇತ್ರದ ಪಂಚಮಸಾಲಿ ಮತಬ್ಯಾಂಕು ಭರತ್ ಬೊಮ್ಮಾಯಿ ಜತೆ ನಿಲ್ಲುವುದು ಶತಸ್ಸಿದ್ಧ. ಕಾರಣ? ಕ್ಷೇತ್ರದಲ್ಲಿ ನಡೆಯುವ ಬಹುತೇಕ ಕಾಮಗಾರಿಗಳ ಕಂಟ್ರಾಕ್ಟುಗಳಲ್ಲಿ ಪಂಚಮಸಾಲಿಗಳಿಗೆ ಹೆಚ್ಚು ಆದ್ಯತೆ ಸಿಗುತ್ತಿದೆ. ಇದೇ ರೀತಿ ಆ ಸಮುದಾಯದ ಹೆಣ್ಣುಮಗಳೊಬ್ಬರನ್ನು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಸ್ಥಾನದಲ್ಲಿ ಕೂರಿಸಿದವರು ಬೊಮ್ಮಾಯಿ. ಹೀಗೆ ನೋಡುತ್ತಾ ಹೋದರೆ ಪಂಚಮಸಾಲಿ ಸಮುದಾಯದ ಶಾಸಕರಿದ್ದರೆ ಆ ಕ್ಷೇತ್ರದ ಪಂಚಮಸಾಲಿಗಳಿಗೆ ಎಷ್ಟು ಅನುಕೂಲವಾಗುತ್ತಿತ್ತೋ ಅದಕ್ಕಿಂತ ಹೆಚ್ಚಿನ ಅನುಕೂಲ ಬಸವರಾಜ ಬೊಮ್ಮಾಯಿ ಅವರಿಂದಾಗಿದೆ. ಹೀಗಾಗಿ ಬೊಮ್ಮಾಯಿ ಆಳ್ವಿಕೆಯಲ್ಲಿ ಕ್ಷೇತ್ರದ ಪಂಚಮಸಾಲಿ ಲಿಂಗಾಯತರಿಗೆ ಹೆಚ್ಚು ಅನುಕೂಲವಾಗಿದೆ. ಇದೇ ರೀತಿ ತಮಗಿಂತ ಪಂಚಮಸಾಲಿ ಸಮುದಾಯಕ್ಕೇ ಬೊಮ್ಮಾಯಿ ಆದ್ಯತೆ ಕೊಡುತ್ತಾರೆ ಎಂಬ ಭಾವನೆ ಸಾದ ಲಿಂಗಾಯತರಲ್ಲಿದ್ದರೂ, ಅದು ಭರತ್ ಬೊಮ್ಮಾಯಿ ವಿರುದ್ಧ ಕಾಂಗ್ರೆಸ್ ಜತೆ ನಿಲ್ಲುವ ಮಟ್ಟದಲ್ಲಿಲ್ಲ. ಇನ್ನು ಬೊಮ್ಮಾಯಿ ಜನತಾ ಪರಿವಾರದ ಹಿನ್ನೆಲೆಯಿಂದ ಬಂದವರಾದ್ದರಿಂದ ಸೆಕ್ಯುಲರ್ ಫೇಸ್ ಕಟ್ಟನ್ನು ಉಳಿಸಿಕೊಂಡು ಬಂದಿದ್ದಾರೆ. ಹೀಗಾಗಿ ಮುಸ್ಲಿಂ ಮತಬ್ಯಾಂಕಿನಲ್ಲೂ ಪಾಲು ಪಡೆಯುವ ಚಾಕಚಕ್ಯತೆ ಅವರಿಗಿದೆ. ಇದೇ ರೀತಿ, ಕ್ಷೇತ್ರದಲ್ಲಿರುವ ವಾಲ್ಮೀಕಿ ಮತದಾರರು ಅವರ ಜತೆ ದೊಡ್ಡ ಮಟ್ಟದಲ್ಲಿ ನಿಂತಿದ್ದಾರೆ. ಹೀಗಾಗಿ ಅವರ ಈ ಮ್ಯಾಜಿಕ್ಕು ಭರತ್ ಬೊಮ್ಮಾಯಿ ಅವರಿಗೆ ಪ್ಲಸ್ ಆಗುವುದು ನಿಶ್ಚಿತ ಎಂಬುದು ಬಹುತೇಕರ ಮಾತು.

ಸಂಡೂರಿನಲ್ಲಿ ಸಂತೋಷ್ ಲಾಡ್ ಪವರ್: ಈ ಮಧ್ಯೆ, ಉಪಚುನಾವಣೆ ನಡೆಯುವ ಮತ್ತೊಂದು ವಿಧಾನಸಭಾ ಕ್ಷೇತ್ರವಾದ ಸಂಡೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ಮುಂದಿದ್ದಾರೆ. ಕಣದಲ್ಲಿರುವ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಅವರು ಕ್ಷೇತ್ರದ ಲಿಂಗಾಯತ, ವಾಲ್ಮೀಕಿ ಮತಬ್ಯಾಂಕನ್ನು ಕ್ರೋಡೀಕರಿಸಿ ಗೆಲ್ಲುತ್ತಾರೆ ಎಂಬ ಲೆಕ್ಕಾಚಾರ ಕಮಲ ಪಾಳಯದಲ್ಲಿದ್ದರೂ ಅದು ಸರಳವಾಗಿಲ್ಲ. ಇದಕ್ಕೆ ಕಾರಣ- ಕ್ಷೇತ್ರದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಹವಾ; ಅದು ಹೇಗಿದೆ ಎಂದರೆ ಅದರ ಬಿರುಸಿಗೆ ಬಿಜೆಪಿ ಸುಸ್ತೆದ್ದು ಹೋಗಿದೆ. ಕ್ಷೇತ್ರದಲ್ಲಿ ಲಿಂಗಾಯತ, ವಾಲ್ಮೀಕಿ, ಮುಸ್ಲಿಂ ಸೇರಿದಂತೆ ಎಲ್ಲ ವರ್ಗದ ಮತದಾರರಲ್ಲಿ ಲಾಡ್ ಪರ ಒಲವಿದ್ದು, ಈ ಅಂಶವೇ ಕಾಂಗ್ರೆಸ್ ಅಭ್ಯರ್ಥಿಯ ಪಾಲಿಗೆ ಪ್ಲಸ್ ಆಗಲಿದೆ. ಈ ಮಧ್ಯೆ, ಬಿಜೆಪಿ ಪಾಳಯದಲ್ಲೇ ಹೇಳಿಕೊಳ್ಳುವಂಥ ಒಗ್ಗಟ್ಟು ಕಾಣುತ್ತಿಲ್ಲ. ಮೊದಲನೆಯದಾಗಿ ಅಭ್ಯರ್ಥಿ ಬಂಗಾರು ಹನುಮಂತು ಹಿಂದೆ ಗಣಿಧಣಿ ಜನಾರ್ದನ ರೆಡ್ಡಿ ನಿಂತಿರುವುದರಿಂದ ಮಾಜಿ ಸಚಿವ ಬಿ.ಶ್ರೀರಾಮುಲು ತಟಸ್ಥರಾಗಿದ್ದಾರೆ. ಇದೇ ರೀತಿ ಪಕ್ಷದ ಟಿಕೆಟ್ಟನ್ನು ದೇವೇಂದ್ರಪ್ಪ ಅವರಿಗೆ ನೀಡದಿರುವುದರಿಂದ ಮುನಿಸಿಕೊಂಡ ಕಾರ್ತಿಕ್ ಘೋರ್ಪಡೆ ದೂರ ಉಳಿದಿದ್ದಾರೆ. ಪರಿಣಾಮ? ಅವರ ಕಾರ್ಖಾನೆಯಲ್ಲಿ ಕೆಲಸ ಮಾಡುವ ಮೂವತ್ತು ಸಾವಿರದಷ್ಟು ಮತಗಳು ಏನಾಗಲಿವೆ ಎಂಬ ಆತಂಕ ಬಿಜೆಪಿ ಪಾಳಯದಲ್ಲಿದೆ.

ಈ ಮಧ್ಯೆ ಸಂಡೂರಿನ ಮತದಾರರು 'ಸ್ಥಳೀಯರಿಗೆ ಪ್ರಾಮಿನೆನ್ಸು' ಎಂಬ ಮನಸ್ಥಿತಿಯಲ್ಲಿದ್ದು ಈ ಅಂಶವೇ ಬಂಗಾರು ಹನುಮಂತು ಅವರಿಗೆ ಕಿರಿಕಿರಿ ಮಾಡುವ ಲಕ್ಷಣಗಳಿವೆ. ಕಾರಣ? ಬಂಗಾರು ಹನುಮಂತು ವಿಜಯನಗರ ಜಿಲ್ಲೆಯವರು. ಎಲ್ಲಕ್ಕಿಂತ ಮುಖ್ಯವಾಗಿ ಸಂಡೂರಿನ ಗಣಿ ಲಾಬಿಗೆ ಈ ಹಿಂದೆ ಬಿಜೆಪಿ ಅವಧಿಯಲ್ಲಾದ ಕಹಿನೆನಪು ಮಾಸಿಲ್ಲ. ಇನ್ನು ಸ್ಥಳೀಯ ಕಂಟ್ರಾಕ್ಟರುಗಳ ವಿಷಯದಲ್ಲಿ ಸಚಿವ ಸಂತೋಷ್ ಲಾಡ್ ಸದಾಕಾಲ ಮೃದುವಾಗಿದ್ದಾರೆ. ಈ ಮಧ್ಯೆ ಸಿದ್ದರಾಮಯ್ಯ ಸರಕಾರದ ಗ್ಯಾರಂಟಿ ಯೋಜನೆಗಳು ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗಿದ್ದು, ಈ ಅಂಶ ಕಾಂಗ್ರೆಸ್ಸಿನ ಅಭ್ಯರ್ಥಿ ಅನ್ನಪೂರ್ಣ ಅವರಿಗೆ ಪ್ಲಸ್ ಆಗುವ ಲಕ್ಷಣಗಳು ಹೆಚ್ಚಿವೆ. ಇಷ್ಟೆಲ್ಲದರ ನಡುವೆ ಜಾತಿ ಸಮೀಕರಣವನ್ನು ಬಳಸಿಕೊಂಡು ಗೆಲ್ಲುವ ಲೆಕ್ಕಾಚಾರ ಬಿಜೆಪಿಯಲ್ಲಿದ್ದರೂ ಅದು ಸರಳ ಅನ್ನಿಸುತ್ತಿಲ್ಲ.

ವಿಜಯೇಂದ್ರ ಲೆಮನ್ ಟೆಕ್ನಿಕ್?: ಈ ಮಧ್ಯೆ ಚನ್ನಪಟ್ಟಣದ ಕಣದಲ್ಲಿ 'ಕೆ.ಆರ್.ಪೇಟೆ ಲೆಮನ್ ಟೆಕ್ನಿಕ್' ಬಳಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಿರ್ಧರಿಸಿದ್ದಾರಂತೆ. ಇದಕ್ಕೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಲೇಟೆಸ್ಟ್ ರಿಪೋರ್ಟು ಕಾರಣ. ಅದರ ಪ್ರಕಾರ, ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ತಮ್ಮ ಪ್ರತಿಸ್ಪರ್ಧಿ ನಿಖಿಲ್ ಕುಮಾರಸ್ವಾಮಿ ಅವರಿಗಿಂತ ಮುಂದಿದ್ದಾರೆ. ಕ್ಷೇತ್ರದಲ್ಲಿರುವ ಗಣನೀಯ ಸಂಖ್ಯೆಯ ಒಕ್ಕಲಿಗ ಮತಗಳ ಜತೆ ಮುಸ್ಲಿಂ, ದಲಿತ, ಕುರುಬ ಮತಗಳನ್ನು ಕನ್‌ಸಾಲಿಡೇಟ್ ಮಾಡಿದರೆ ಯೋಗೇಶ್ವರ್ ಗೆಲುವು ಸಾಧಿಸುವುದು ಸುಲಭ ಎಂಬುದು ಈಗಿನ ಲೆಕ್ಕಾಚಾರ. ಈ ಹಿನ್ನೆಲೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸಲು ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ನಾಯಕರು ಬೇರೆ ಬೇರೆ ಟೆಕ್ನಿಕ್ಕುಗಳನ್ನು ಹುಡುಕುತ್ತಿದ್ದಾರೆ. ದೇವೇಗೌಡ-ಕುಮಾರಸ್ವಾಮಿ ಅವರ ಲೆಕ್ಕಾಚಾರ ಒಂದು ಬಗೆಯಲ್ಲಿದ್ದರೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತೊಂದು ಲೆಕ್ಕಾಚಾರದಲ್ಲಿದ್ದಾರೆ. ಅರ್ಥಾತ್, ಚುನಾವಣಾ ಕಣದಲ್ಲಿ ಕೆ.ಆರ್.ಪೇಟೆ ಲೆಮನ್ ಟೆಕ್ನಿಕ್ ಬಳಸಲು ಅವರು ನಿರ್ಧರಿಸಿದ್ದಾರೆ. ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಕೆ.ಆರ್.ಪೇಟೆ ಕ್ಷೇತ್ರದ ಉಪಚುನಾವಣೆ ನಡೆಯಿತಲ್ಲ? ಆ ಸಂದರ್ಭದಲ್ಲಿ ಸಣ್ಣ-ಪುಟ್ಟ ಜಾತಿಗಳ ಮತಗಳನ್ನು ಕ್ರೋಡೀಕರಿಸಿ ಪಕ್ಷದ ಕ್ಯಾಂಡಿಡೇಟನ್ನು ಗೆಲ್ಲಿಸಿದ್ದೇ ವಿಜಯೇಂದ್ರ ಅವರ ಲೆಮನ್ ಟೆಕ್ನಿಕ್. ಈಗ ಚನ್ನಪಟ್ಟಣದ ಕಣದಲ್ಲಿ ಅದನ್ನು ಜಾರಿ ಮಾಡುವುದು ವಿಜಯೇಂದ್ರರ ಥಿಂಕಿಂಗು.

ಸಾಂಸ್ಕೃತಿಕ ಮಾರ್ಕ್ಸ್‌ವಾದದ ರಾಜಕಾರಣ

ಚರ್ಚಾವೇದಿಕೆ
ಜನಮೇಜಯ ಉಮರ್ಜಿ
vveditoped@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮೋಹನ್ ಭಾಗವತ್ ಅವರು ಇತ್ತೀಚಿನ ವಿಜಯದಶಮಿ ದಿನದಂದು ನೀಡಿದ ಸಂದೇಶದಲ್ಲಿ, ಸಾಂಸ್ಕೃತಿಕ ಮಾರ್ಕ್ಸ್‌ವಾದವು ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಹೇಗೆ ಅಪಾಯಕಾರಿ ಎಂಬುದರ ಕುರಿತು ಹೇಳಿದ್ದರು. ಯಾವುದೇ ದೇಶದ ಆಡಳಿತ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಇದ್ದೇ ಇರುತ್ತವೆ. ಯಾರೋ ಒಬ್ಬರು ಅಧಿಕಾರಕ್ಕೆ ಬರುತ್ತಾರೆ. ಇದು ಇಷ್ಟು ಸರಳ ಅಂದುಕೊಂಡರೆ ಅಲ್ಲ. 'ಪರ್ಯಾಯ ರಾಜಕಾರಣ' ಎಂಬ ಹೆಸರಿನ ಮೂರನೇ ಆಟಗಾರರೂ ಇರುತ್ತಾರೆ. ಇದರ ಕಥೆ, ಚಿತ್ರಕಥೆ ಎಲ್ಲವೂ ಸಾಂಸ್ಕೃತಿಕ ಮಾರ್ಕ್ಸ್‌ವಾದದ್ದು. ಜಾತಿ, ಮತ, ಪ್ರಾದೇಶಿಕತೆಯ ಆಧಾರದಲ್ಲಿ ವಿಭಜನೆ, ಪ್ರತ್ಯೇಕತೆಯ ಚಿಂತನೆ, ಅರಾಜಕತೆಗಳ ಮೂಲಕ ಅಧಿಕಾರ ಬದಲಾವಣೆ ಇದು ಮೂರನೆಯ ಆಟಗಾರರ ವಿಧಾನ. ಇವರ ಸೋಲು ದೇಶದ ಗೆಲುವು. ಯುರೋಪಿನ ದೇಶಗಳು ಇದರಿಂದ ತ್ರಸ್ತರಾಗಿರುವುದರ ಬಗ್ಗೆ ಪುಸ್ತಕಗಳು ಬರುತ್ತಿವೆ.

ಶ್ರೀಲಂಕಾ ದಿವಾಳಿಯಾಗುವಂತಾಗಿದ್ದಕ್ಕೆ, ಬಾಂಗ್ಲಾದೇಶದ ಇತ್ತೀಚಿನ ವಿದ್ಯಮಾನಗಳ ಹಿಂದೆ ಮೂರನೆಯ ಆಟಗಾರರಿದ್ದಾರೆ ಎಂದರೆ ಕಾಕತಾಳೀಯವೇನಲ್ಲ. ಬಾಂಗ್ಲಾದೇಶದಲ್ಲಿನ ಹಿಂದೂಗಳ ಪರಿಸ್ಥಿತಿ ಹೇಳತೀರದು. ಅದು ಸ್ವತಂತ್ರವಾಗುವ ಸಮಯದಲ್ಲಿ ಜನರಿಗೆ ಊಟ-ವಸತಿ ನೀಡಿದ ಸಂಸ್ಥೆಗಳೂ ಈಗ ದಾಳಿಗೆ ಗುರಿಯಾದವು. ಕರ್ನಾಟಕದಲ್ಲಿಯೂ ನಾಯಕರೊಬ್ಬರು 'ಬಾಂಗ್ಲಾದೇಶದ ಪರಿಸ್ಥಿತಿ ಉಂಟಾಗಬಹುದು' ಎಂದು ಹೇಳಿದ್ದು ಸುದ್ದಿಯಾಗಿತ್ತು. ದೇಶದ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಕಾರಣಕ್ಕೆ ನಡೆಯುತ್ತಿರುವ ಕೆಲವು ಪ್ರತಿಭಟನೆಗಳ ಸ್ವರೂಪ, ಗಣೇಶ ಮೆರವಣಿಗೆ, ದುರ್ಗಾಪೂಜಾ ಪೆಂಡಾಲುಗಳ ಮೇಲೆ ನಡೆದ ಕಲ್ಲುತೂರಾಟದ ಘಟನೆಗಳು ಆತಂಕಕಾರಿಯಾಗಿವೆ. ಹುಬ್ಬಳ್ಳಿಯಲ್ಲಿ, ಬೆಂಗಳೂರಿನ ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿಗಳಲ್ಲಿ ಹಿಂದೆ ನಡೆದ ದಾಂಧಲೆಗಳ ಸ್ವರೂಪವು ಕಾನೂನು-ಸುವ್ಯವಸ್ಥೆಯನ್ನು ಅಸ್ವಸ್ಥಗೊಳಿಸುವಂಥದ್ದು. ಇಂಥ ಘಟನೆಗಳು ಸಂಧಿಸುವ ಅರಾಜಕತೆಯ ವ್ಯಾಕರಣವನ್ನು ಡಾ.ಬಾಬಾಸಾಹೇಬ್ ಅಂಬೇಡ್ಕರರು ಸಂವಿಧಾನ ಸಭೆಯಲ್ಲಿ ಮಾಡಿದ ಎರಡು ಭಾಷಣಗಳಲ್ಲಿ ಪ್ರಸ್ತಾಪಿಸಿದ್ದನ್ನು ಸರಸಂಘಚಾಲಕರು ಉಲ್ಲೇಖಿಸಿದರು.

ಆರ್ಥಿಕ ವಿಚಾರಗಳ ಮಾರ್ಕ್ಸ್‌ವಾದವು ಜಗತ್ತಿನಾದ್ಯಂತ ಸರ್ವಾಧಿಕಾರವಾಗಿ ಬದಲಾಗುತ್ತಾ ಬಂದಂತೆ ಜನರ ವಿಶ್ವಾಸವನ್ನು ಕಳೆದುಕೊಂಡಿದೆ. ಈಗ ಸಾಂಸ್ಕೃತಿಕ ಮಾರ್ಕ್ಸ್‌ವಾದ ಎಂಬುದು ಪ್ರವರ್ಧಮಾನಕ್ಕೆ ಬರುತ್ತಲಿದೆ. ಇಲ್ಲಿ ನೇರಯುದ್ಧವಿಲ್ಲ, ಏನಿದ್ದರೂ ಆಂತರಿಕವಾಗಿ ಸಂಸ್ಕೃತಿಯನ್ನು ಶಿಥಿಲ ಮಾಡುವುದು, ತನ್ಮೂಲಕ ದೇಶವನ್ನೂ. ಮಾತ್ರವಲ್ಲದೆ, ಧಾರ್ಮಿಕ ಆಚರಣೆಗಳಲ್ಲಿ ಅಪನಂಬಿಕೆ ಹುಟ್ಟಿಸುವುದು, ಅನುಯಾಯಿಗಳಲ್ಲಿಯೇ ಜಗಳ ಹಚ್ಚುವುದು, ಸಂಸ್ಕೃತಿ, ಧರ್ಮ, ಕುಟುಂಬ, ಶಿಕ್ಷಣ ವ್ಯವಸ್ಥೆ, ಮಾಧ್ಯಮಗಳನ್ನು ಬಳಸಿಕೊಂಡು ಒಡೆಯುವ, ಪರಸ್ಪರ ವೈರಭಾವ ಬೆಳೆಸುವ ಕೆಲಸವನ್ನು ಇದು ಮಾಡುತ್ತದೆ.

ಹೀಗೆ ಪಾರಂಪರಿಕ ಮೌಲ್ಯಗಳು ಕುಸಿದಾಗ, ಸಾಮಾಜಿಕ ಸ್ಥಿರತೆಯ ಅಧಃಪತನವಾಗುತ್ತದೆ. ಕಾನೂನುಗಳ ವಿರುದ್ಧ ಜನರನ್ನು ಎತ್ತಿಕಟ್ಟುವುದೂ ಇದರ ಒಂದು ಭಾಗ. ಇದು ಅಸ್ಥಿರತೆಯನ್ನು ತರುತ್ತದೆ, ಅರಾಜಕತೆಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಮಾರ್ಕ್ಸ್‌ವಾದ ಏನು, ಎತ್ತ? ಮಾರ್ಕ್ಸ್‌ವಾದದ ಬಗ್ಗೆ ಅಂಬೇಡ್ಕರರಿಗೆ ಇದ್ದ ಅಭಿಪ್ರಾಯವೇನು ಎಂಬುದರ ಬಗ್ಗೆ ನೋಡೋಣ. 'ಭಾರತ ರತ್ನ' ಡಾ. ಬಾಬಾಸಾಹೇಬ್ ಅಂಬೇಡ್ಕರರು ಭಾರತವನ್ನು ಚೆನ್ನಾಗಿ ಅರಿತಿದ್ದರು. ಭಾರತದ ಶಕ್ತಿ ಯಾವುದು? ಕೊರತೆ ಎಲ್ಲಿದೆ? ನ್ಯೂನತೆಯ ಕಾರಣಗಳಾವುವು? ಪರಿಹಾರ ಏನು? ಎಂಬುದರ ಬಗ್ಗೆ ಅವರಿಗೆ ಸ್ಪಷ್ಟತೆ ಇತ್ತು. ಧರ್ಮಶಾಸ್ತ್ರ, ನ್ಯಾಯಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ಅವರು, ಜಗತ್ತಿನ ಇತಿಹಾಸ, ಸಾಮಾಜಿಕ ವ್ಯವಸ್ಥೆ ಮತ್ತು ಸಂಪ್ರದಾಯಗಳ ಬಗ್ಗೆ ತಿಳಿದುಕೊಂಡಿದ್ದರು. ಭಾರತದ ಹಿತಕ್ಕೆ ಯಾವುದು ಪೂರಕ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನವನ್ನು ರೂಪಿಸಿದ್ದರು. ಪ್ರಜಾಪ್ರಭುತ್ವದ ಪ್ರಬಲ ಪ್ರತಿಪಾದಕರಾಗಿದ್ದ ಅವರು, ಕಾನೂನು ಮತ್ತು ಸಾಂವಿಧಾನಿಕ ವಿಧಾನಗಳ ಮೂಲಕವೇ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳನ್ನು ಸಾಧಿಸುವಲ್ಲಿ ಪೂರ್ಣ ನಂಬಿಕೆ ಇಟ್ಟಿದ್ದರು. ಸಾಮಾಜಿಕ ನ್ಯಾಯಕ್ಕೆ ಆಳವಾಗಿ ಬದ್ಧರಾಗಿದ್ದರೂ, ಕಮ್ಯುನಿಸಂ ಕ್ರಾಂತಿ ಮತ್ತು ಬದಲಾವಣೆಯನ್ನು ಸಾಧಿಸುವ ಅದರ ಸರ್ವಾಧಿಕಾರಿ ವಿಧಾನಗಳು ಪ್ರಜಾಪ್ರಭುತ್ವಕ್ಕೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಅವರು ಭಾವಿಸಿದ್ದರು. ''ರಾಜಕೀಯದಲ್ಲಿ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಶ್ರಮಿಸುತ್ತಿರುವ ಯಾವುದೇ ಸಮಾಜದಲ್ಲಿ, ಸರ್ವಾಧಿಕಾರಕ್ಕೆ ಸ್ಥಾನವಿಲ್ಲ ಎಂಬುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ'' ಎಂದು ಅಂಬೇಡ್ಕರ್ ಹೇಳಿದ್ದರು.

ಸಂವಿಧಾನದೆಡೆಗಿನ ನಿಷ್ಠೆ ಮತ್ತು ಶ್ರದ್ಧೆ: ಅಂತಿಮವಾಗಿ ಸಂವಿಧಾನವನ್ನು ಅಂಗೀಕರಿಸುವ ಸಂದರ್ಭದಲ್ಲಿ, ಅಂಬೇಡ್ಕರ್ ಅವರು 1949ರ ನವೆಂಬರ್ 25ರಂದು ಮಾಡಿದ ಭಾಷಣದಲ್ಲಿ, ಅರಾಜಕತೆಯ ಕುರಿತು ಎಚ್ಚರಿಸಿದ್ದಾರೆ. ''ಸಂವಿಧಾನವು ಸರಿಯಾದ ಜನರ ಕೈಗಳಲ್ಲಿ ಸಿಕ್ಕರೆ, ಅದು ಉತ್ತಮವಾಗಿರುತ್ತದೆ; ಒಂದೊಮ್ಮೆ ಕೆಟ್ಟ ಜನರ ಕೈಗಳಿಗೆ ಸಿಕ್ಕಿದರೆ ಅದು ಕುಸಿದುಹೋಗಬಹುದು'' ಎಂಬ ಅವರ ಮಾತು, ಪ್ರಜಾಪ್ರಭುತ್ವದ ಯುಕ್ತಿ ಮತ್ತು ಸಮತೋಲನವನ್ನು ಕಾಪಾಡಿಕೊಳ್ಳಲು ಕಾನೂನಿನ ಗೌರವ ಅತ್ಯಗತ್ಯವೆಂಬ ಸಂದೇಶವನ್ನು ಸಾರುತ್ತದೆ. ''ಸಂವಿಧಾನವು ಏನನ್ನಾದರೂ ಮಾಡಬಲ್ಲದು, ಆದರೆ ಇದು ಜನರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವುದರ ಮೇಲೆ ಅವಲಂಬಿತವಾಗಿದೆ. ಕಾನೂನಿನ ಮೇಲೆ ನಂಬಿಕೆಯಿಲ್ಲದಿದ್ದರೆ ಅರಾಜಕತೆಯ ಸ್ಥಿತಿ ಉಂಟಾಗಬಹುದು'' ಎನ್ನುವ ಮೂಲಕ ಅಂಬೇಡ್ಕರ್ ಅವರು ಸಂವಿಧಾನವು ಕೇವಲ ಕಾಗದದಲ್ಲಿ ಉಳಿಯಬಾರದು, ಅದನ್ನು ಅನುಸರಿಸುವ ನಿಷ್ಠೆಯ ಅಗತ್ಯವಿದೆ ಎಂಬುದನ್ನು ಒತ್ತಿಹೇಳಿದ್ದಾರೆ.

ಪ್ರಜಾಪ್ರಭುತ್ವ ಮತ್ತು ಅರಾಜಕತೆಯ ಭೀತಿ: ಅಂಬೇಡ್ಕರ್ ಅವರು ದೇಶದ ಪ್ರಜಾಪ್ರಭುತ್ವದ ಪರಿಪೂರ್ಣತೆಗಾಗಿ 1949ರ ನವೆಂಬರ್ 4ರಂದು ನೀಡಿದ ಉಪನ್ಯಾಸದಲ್ಲಿ ಅರಾಜಕತೆಯ ಭೀತಿಯ ಕುರಿತು ಅತ್ಯಂತ ಸ್ಪಷ್ಟವಾಗಿಯೇ ಹೀಗೆ ಹೇಳಿದ್ದಾರೆ: ''ಪ್ರಜಾಪ್ರಭುತ್ವದ ಸಿದ್ಧಾಂತಗಳು ಕೇವಲ ಪುಸ್ತಕಗಳಲ್ಲೇ ಉಳಿದರೆ ಅದು ಜನರಿಗೆ ಉಪಯೋಗವಾಗುವುದಿಲ್ಲ. ಸಂವಿಧಾನವು ಸರಕಾರಕ್ಕೆ ಮಾತ್ರವೇ ಬಾಧ್ಯವಲ್ಲ, ಅದು ಪ್ರಜೆಗಳ ಪ್ರಜ್ಞೆಯಲ್ಲಿಯೂ ಬೇರೂರಿರಬೇಕು. ಹಕ್ಕು ಮತ್ತು ಕರ್ತವ್ಯಗಳು ಒಂದೇ ಬಂಡಿಯ 2 ಗಾಲಿಗಳು. ಕಾನೂನಿನ ಗೌರವವಿಲ್ಲದೆ ದೇಶವು ಪ್ರಜಾಪ್ರಭುತ್ವಕ್ಕೆ ತಕ್ಕಂತೆ ನಡೆಯಲಾರದು. ಕಾನೂನುಬದ್ಧ ಕಾಯಕಗಳು ಮತ್ತು ಪ್ರಜೆಯ ಕರ್ತವ್ಯಗಳ ಪಾಲನೆ ಇಲ್ಲದಿದ್ದರೆ, ರಾಜಕೀಯ ವ್ಯವಸ್ಥೆಯು ಅರಾಜಕತೆಯತ್ತ ಸಾಗಬಹುದು''.



ಅಂಬೇಡ್ಕರರು ಹೇಳಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ತಥಾಕಥಿತ 'ಅರಬ್‌ಸ್ಪ್ರಿಂಗ್'ನಿಂದ ಪ್ರಾರಂಭಿಸಿ, ನೆರೆಯ ಬಾಂಗ್ಲಾದೇಶದಲ್ಲಿ, ಶ್ರೀಲಂಕಾದಲ್ಲಿ ಏನಾಯಿತು, ನೇಪಾಳದಲ್ಲಿ ಯಾರ ಸರಕಾರ ಬಂತು, ಮಾಲ್ಡೀವ್ಸ್ ಹೇಗೇಗೋ ಆಡುತ್ತಿರುವುದೇಕೆ ಎಂಬುದನ್ನು ಹಾಗೂ ಸಿಎಎ, ಶಹೀನ್‌ಬಾಗ್, ಕೆಂಪುಕೋಟೆಯಲ್ಲಿ ನಡೆದಿದ್ದು ಎಲ್ಲವನ್ನೂ ಪುನರವಲೋಕಿಸಿದಾಗ ವಾಸ್ತವತೆ ಅರಿವಿಗೆ ಬರುತ್ತದೆ. ಭಾರತ ದಾದ್ಯಂತ ನಾಲ್ಕೂ ದಿಕ್ಕುಗಳಲ್ಲಿ, ವಿಶೇಷವಾಗಿ ಗಡಿಪ್ರದೇಶ ಮತ್ತು ಬುಡಕಟ್ಟು ಕೇಂದ್ರಿತ ಪ್ರದೇಶಗಳಲ್ಲಿ ಇಂಥ ದುಷ್ಟಪ್ರಯತ್ನಗಳನ್ನು ನಾವು ನೋಡುತ್ತಿದ್ದೇವೆ. ಚುನಾಯಿತ ಸರಕಾರದ ನೀತಿಗಳನ್ನು, ಕಾನೂನನ್ನು ಗಾಳಿಗೆ ತೂರಿ ಪ್ರತಿಭಟಿಸುವ ವಿಧಾನಗಳು ತೆರೆದುಕೊಳ್ಳುತ್ತಿರುವುದು, ದೇಶದ ಕಾನೂನು-ಸುವ್ಯವಸ್ಥೆ ಮತ್ತು ಅಖಂಡತೆಯನ್ನು ಗುರಿಯಾಗಿಸಿ ನಡೆಯುತ್ತಿರುವ ಪ್ರಯತ್ನಗಳು ಕಳವಳಕಾರಿ. ಅಂತಾರಾಷ್ಟ್ರೀಯ ಶಕ್ತಿಗಳು, ಮಾಧ್ಯಮಗಳು ದೇಶದ ಆಂತರಿಕ ವಿಚಾರಗಳಿಗೆ ಇನ್ನಿಲ್ಲದ ಪ್ರಚಾರ ಕೊಡುವುದು, ದೇಶದ ಹಿತಕ್ಕೆ, ಮಾನವತೆಗೆ ಮಾರಕ. ಇದನ್ನೆಲ್ಲಾ ಕೇಳಿದಾಗ ಆಶ್ಚರ್ಯವೆನಿಸಬಹುದು, ಆದರೆ ಇದು ಸತ್ಯ.

ನಮ್ಮ ರಾಷ್ಟ್ರೀಯ ಜೀವನವು ಸಾಂಸ್ಕೃತಿಕ ಏಕಾತ್ಮಕತೆ ಮತ್ತು ಶ್ರೇಷ್ಠ ನಾಗರಿಕತೆಯ ಸದೃಢ ಅಡಿಪಾಯದ ಮೇಲೆ ನಿಂತಿದೆ. ನಮ್ಮ ಸಾಮಾಜಿಕ ಜೀವನವು ಉದಾತ್ತ ಮೌಲ್ಯಗಳಿಂದ ಪ್ರೇರಿತವಾಗಿದೆ, ಪಾಲಿಸಿ ಪೋಷಿಸಲ್ಪಟ್ಟಿದೆ. ಆದರೂ ಈ ಮಾಯಾಯುದ್ಧದ ಎಚ್ಚರದಲ್ಲಿ ಇರಬೇಕಾದ ಅವಶ್ಯಕತೆ ಇದೆ. ಅಂಬೇಡ್ಕರರು ಹೇಳುವ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಉಪಾಯಗಳಿಂದ ಬಾಳಬೇಕು ಮತ್ತು ಏಳ್ಗೆ ಕಾಣಬೇಕು. ಇದನ್ನರಿತು, ವೈಚಾರಿಕ ಮತ್ತು ಸಾಂಸ್ಕೃತಿಕ ಮಾಲಿನ್ಯವನ್ನು ಹರಡುವ ಷಡ್ಯಂತ್ರಗಳಿಂದ ಈ ಸಮಾಜವನ್ನು ಸಂರಕ್ಷಿಸುವುದು ಇಂದಿನ ಅಗತ್ಯವಾಗಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಗಂಭೀರವಾಗಿ ಪರಿಗಣಿಸಿ

ಹದಿನೆಂಟು ವರ್ಷ ವಯಸ್ಸಿಗಿಂತಲೂ ಚಿಕ್ಕವರಿಗೆ ಮದ್ಯಪಾನ ಮತ್ತು ತಂಬಾಕು ಸೇವನೆಗೆ ನಿಷೇಧ ಹೇರಲಾಗಿದೆ. ಆದರೂ ಹಲವು ಅಂಗಡಿಗಳಲ್ಲಿ ದುಡ್ಡಿನ ಆಸೆಗಾಗಿ ಅವುಗಳನ್ನು ಅಪ್ರಾಪ್ತರಿಗೆ ಮಾರುವ ಚಾಳಿ ವ್ಯಾಪಕವಾಗಿದೆ. ಹೀಗಾಗಿ ಈಗಾಗಲೇ ಗಣನೀಯ ಸಂಖ್ಯೆಯ ಕಿರಿಯರು ಈ ಅಮಲುಕಾರಕಗಳ ಚಟಕ್ಕೆ ಬೀಳುವಂತಾಗಿದೆ. ದೇಹವು ಬೆಳೆಯುವ ಈ ವಯೋಮಾನದಲ್ಲಿ ಮದ್ಯ ಹಾಗೂ ತಂಬಾಕಿನ ರಾಸಾಯನಿಕಗಳು ಅಪ್ರಾಪ್ತರ ಬೆಳವಣಿಗೆಯನ್ನು ಕುಂಠಿತಗೊಳಿಸುವುದರ ಜತೆಗೆ, ವಿವಿಧ ರೋಗಗಳಿಗೆ ಬೇಗನೆ ತುತ್ತಾಗುವಂತೆ ಮಾಡುತ್ತವೆ. ದುಶ್ಚಟಗಳಿಗೆ ದಾಸರಾದ ಇಂಥವರು ಅದರ ಅಮಲಿನಲ್ಲಿ ಹೆತ್ತವರನ್ನೇ ಕೊಲೆಗೈದಿರುವಂಥ ಅನೇಕ ಉದಾಹರಣೆಗಳಿವೆ. ಅಭಿವೃದ್ಧಿಯ ಪಥದಲ್ಲಿರುವ ನಮ್ಮ ದೇಶಕ್ಕೆ ಹಾಗೂ ಸಮಾಜಕ್ಕೆ ಇದು ಬಹುದೊಡ್ಡ ಪೆಟ್ಟು. ಆದ್ದರಿಂದ, ಸರಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕಠಿಣ ನೀತಿ-ನಿಯಮಗಳನ್ನು ರೂಪಿಸಿ, ಅವುಗಳು ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ಇನ್ನು, ಬೆಂಗಳೂರಿನ ಜೀವನದಿಯಾಗಿದ್ದ ವೃಷಭಾವತಿ ಇಂದು 'ಕೆಂಗೇರಿ ಮೋರಿ' ಆಗಿರುವುದು ದುರಂತ. ಕಸ ಮತ್ತು ಇತರ ಘನತ್ಯಾಜ್ಯಗಳು ಇದರ ಮಡಿಲಲ್ಲಿ ಕಟ್ಟಿಕೊಂಡಿರುವುದರ ಪರಿಣಾಮವಿದು. ಬೆಂಗಳೂರಿನಲ್ಲಿ ಭಾರಿ ಮಳೆಯಾದಾಗಲೆಲ್ಲ ಸಂಭವಿಸುವ ಅಸ್ತವ್ಯಸ್ತತೆ ಮತ್ತು ದುರಂತಗಳಿಗೆ, ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆಯಿಲ್ಲದಿರುವುದೇ ಮುಖ್ಯಕಾರಣ. ಆದ್ದರಿಂದ, ವೃಷಭಾವತಿ ನದಿಯ ಪುನರುಜ್ಜೀವನ ಯೋಜನೆಯನ್ನು ಸರಕಾರವು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕು.

-ಅರ್ಚನಾ ಎಸ್., ಬೆಂಗಳೂರು

ಇದು ದಿವಾಳಿ ಅಲ್ಲ!

ಸಂಭ್ರಮದ ಹಬ್ಬವಾದ 'ದೀಪಾವಳಿ'ಗೆ ಉತ್ತರ ಭಾರತೀಯರು 'ದಿವಾಳಿ' ಎಂದು ಕರೆಯುತ್ತಾರೆ. ಉತ್ತರ ಭಾರತದಿಂದ ಕರ್ನಾಟಕಕ್ಕೆ ಲಗ್ಗೆಯಿಟ್ಟ ವಲಸಿಗರ ಪ್ರಭಾವವೋ ಏನೋ, ಈಚೀಚೆಗೆ ಕರ್ನಾಟಕದಲ್ಲೂ 'ದೀಪಾವಳಿ'ಯನ್ನು 'ದಿವಾಳಿ' ಎಂದು ಕರೆಯುವ ಚಾಳಿ ಶುರುವಾಗಿದೆ. ಹೀಗಾಗಿ 'ದೀಪಾವಳಿ' ಎಂಬ ಪದಪ್ರಯೋಗ ಕ್ರಮೇಣ ಜನಮಾನಸದಿಂದ ಮರೆಯಾಗುವುದೇನೋ ಎಂಬ ಭಯ ಕಾಡುತ್ತಿದೆ. ದೀಪಾವಳಿಯ ಖರ್ಚಿನ ನಂತರ ಹಲವರಿಗೆ ತಾವು 'ದಿವಾಳಿ' ಅಂಚಿಗೆ ಬಂದಂತೆ ಅನಿಸಿದರೂ, ನಾವು ನಮ್ಮತನ ಮರೆಯಬಾರದು, ನಿರ್ಲಕ್ಷಿಸಬಾರದು. ಅಲ್ಲವೇ?

-ರಮಾನಂದ ಶರ್ಮಾ, ಬೆಂಗಳೂರು

ಅನುಕರಣೀಯ ನಡೆ

'ಅಣ್ಣಾವ್ರು' ಚಿಕ್ಕಮಗಳೂರು ಕ್ಷೇತ್ರದ ಉಪಚುನಾವಣೆಗೆ ನಿಲ್ಲದಿದ್ದುದರ ಹಿಂದಿನ ಸಂಪೂರ್ಣ ಮಾಹಿತಿ 'ರಸದೌತಣ' ಅಂಕಣ ಬರಹದಿಂದ ತಿಳಿಯಿತು. ಚುನಾವಣೆಯಲ್ಲಿ ಟಿಕೆಟ್ ಪಡೆಯಲು ಲಾಬಿ ಮಾಡುವ, ಕೋಟಿ ಕೋಟಿ ಹಣ ಖರ್ಚುಮಾಡುವ, ಒಂದೊಮ್ಮೆ ಟಿಕೆಟ್ ಸಿಗದಿದ್ದರೆ ಅಲ್ಲಿಯವರೆಗೂ ತಾವು ಟೀಕಿಸುತ್ತಿದ್ದ ಪಕ್ಷಕ್ಕೇ ಪಕ್ಷಾಂತರ ಮಾಡುವ ಇಂದಿನ ಸ್ವಾರ್ಥಸಾಧಕ ರಾಜಕಾರಣಿಗಳ ನಡುವೆ, ತಮಗೆಂದು ರಾಜಕೀಯದ ಬಾಗಿಲು ಅನಾಯಾಸವಾಗಿ ತೆರೆದುಕೊಂಡರೂ ಅದನ್ನು ವಿನಯದಿಂದಲೇ ನಿರಾಕರಿಸಿದ ಡಾ.ರಾಜ್‌ಕುಮಾರ್ ಅವರ ಪ್ರಾಮಾಣಿಕ ನಿಲುವು ತುಂಬಾ ಇಷ್ಟವಾಗುತ್ತದೆ.

-ರಾಘವೇಂದ್ರ ಜೋಯಿಸ್, ಮೈಸೂರು

ಇತರರಿಗೂ ಪಾಠವಾಗಲಿ

'ನ್ಯಾಯಾಂಗದ ಮೇಲೆ ಜನರಿಗೆ ವಿಶ್ವಾಸ ಮೂಡುತ್ತಿದೆ, ಇದೊಂದು ಉತ್ತಮ ಬೆಳವಣಿಗೆ' ಎಂದು ಮೊನ್ನೆ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿರುವ ನಿವೃತ್ತ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು, ಕಾರವಾರದ ಶಾಸಕ ಸತೀಶ್ ಕೃಷ್ಣ ಸೈಲ್‌ರಿಗೆ ಬೇಲೆಕೇರಿ ಅದಿರು ಕಳ್ಳತನ ಪ್ರಕರಣದಲ್ಲಿ 7 ವರ್ಷಗಳ ಕಾಲ ಜೈಲುಶಿಕ್ಷೆಯಾಗಿದ್ದನ್ನು ಸ್ವಾಗತಿಸಿ, 'ಇದು ನ್ಯಾಯಾಂಗಕ್ಕೆ ದೊರೆತ ಜಯ; ಇಂಥ ಪ್ರಕರಣಗಳಲ್ಲಿ ಭಾಗಿಯಾಗಿರುವ ಇನ್ನೂ ಅನೇಕರಿಗೆ ಶಿಕ್ಷೆಯಾಗಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬೆಳವಣಿಗೆ ಈಗ ರಾಜ್ಯದ ಕೆಲವೊಂದು ಭ್ರಷ್ಟ ರಾಜಕಾರಣಿಗಳ ನಿದ್ರೆಗೆಡಿಸಿರಬಹುದು! ರಾಜ್ಯದಲ್ಲಿ ಇತ್ತೀಚೆಗೆ ಮುನ್ನೆಲೆಗೆ ಬಂದ ಪ್ರಜ್ವಲ್ ರೇವಣ್ಣ, ನಟ ದರ್ಶನ್, ಶಾಸಕ ಮುನಿರತ್ನ ಮುಂತಾದವರ ಪ್ರಕರಣಗಳಲ್ಲಿ ನ್ಯಾಯಾಂಗವು ತೆಗೆದುಕೊಂಡ ನಿರ್ಧಾರಗಳಿಂದಾಗಿ ಆ ವ್ಯವಸ್ಥೆಯ ಮೇಲೆ ಜನಸಾಮಾನ್ಯರಿಗೆ ಹೆಚ್ಚು ವಿಶ್ವಾಸ ಮೂಡುವಂತಾಗಿದೆ. ಈ ವ್ಯವಸ್ಥೆಯು ಇನ್ನೂ ಬಲಿಷ್ಠವಾದರೆ ಮಾತ್ರ ಶ್ರೀಸಾಮಾನ್ಯರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ, ಭ್ರಷ್ಟ ರಾಜಕಾರಣಿಗಳೂ ಬುದ್ಧಿ ಕಲಿಯುತ್ತಾರೆ.

-ಬೂಕನಕೆರೆ ವಿಜೇಂದ್ರ, ಮೈಸೂರು

ಪ್ರತೀಕಾರದ ಪರಮಾವಧಿ

ಪ್ರಸ್ತುತ ಮಧ್ಯಪ್ರಾಚ್ಯ ವಲಯವು ಅಕ್ಷರಶಃ ಅಗ್ನಿಕುಂಡವಾಗಿದೆ. ಇಸ್ರೇಲ್ ದೇಶವು 100 ಯುದ್ಧವಿಮಾನಗಳನ್ನು ಬಳಸಿಕೊಂಡು ಇರಾನ್ ಮೇಲೆ ಕ್ಷಿಪಣಿ ದಾಳಿ ನಡೆಸಿ, ಅಲ್ಲಿನ ಮಿಲಿಟರಿ ನೆಲೆಗಳನ್ನು ಧ್ವಂಸಮಾಡಿದ್ದು ನೋಡಿದರೆ ಈ ಸಂಘರ್ಷ ಇನ್ನೂ ತೀವ್ರವಾಗುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ಸ್ವಲ್ಪ ದಿನಗಳ ಹಿಂದೆ ಇಸ್ರೇಲ್‌ನ ಕೆಲ ನಗರಗಳ ಮೇಲೆ ಇರಾನ್ ಮಾಡಿದ್ದ ಕ್ಷಿಪಣಿ ದಾಳಿಗೆ ಇಸ್ರೇಲ್ ಕೈಗೊಂಡ ಪ್ರತೀಕಾರವಿದು ಎನ್ನಲಾಗುತ್ತಿದೆ. ಇಸ್ರೇಲ್ ಈ ಕಾರ್ಯಾಚರಣೆಗೆ ಅಮೆರಿಕದ ಎಫ್-35, ಎಫ್-151 ಮುಂತಾದ ಅತ್ಯಾಧುನಿಕ ಯುದ್ಧವಿಮಾನಗಳನ್ನು ಬಳಸಿದೆ. ಇಸ್ರೇಲ್-ಇರಾನ್ ನಡುವಿನ ದ್ವೇಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಂಧಾನ ನಡೆಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆ ಕಾರ್ಯಪ್ರವೃತ್ತವಾಗಬೇಕಿದೆ. ಏಕೆಂದರೆ, ಒಂದೊಮ್ಮೆ ಇರಾನ್‌ನ ತೈಲಾಗಾರಗಳ ಮೇಲೆ ಇಸ್ರೇಲ್ ದಾಳಿಮಾಡಿದರೆ, ಜಾಗತಿಕ ಮಟ್ಟದಲ್ಲಿ ತೈಲಬೆಲೆ ಮತ್ತಷ್ಟು ಏರುವುದಕ್ಕೆ/ಅಭಾವ ಕಾಡುವುದಕ್ಕೆ ಅದು ಕಾರಣವಾಗಬಹುದು. ಇದು ಭಾರತ, ಚೀನಾ ಮುಂತಾದ ದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ.

-ರಾಸುಮ ಭಟ್, ಚಿಕ್ಕಮಗಳೂರು

ಪ್ರಯಾಣಿಕ ಕೋಡಂಗಿ!

ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಿದರೆ ನೋಂದಣಿ ಪತ್ರ ಮತ್ತು ಪರವಾನಗಿಯನ್ನು ರದ್ದುಮಾಡುವುದಾಗಿ ಖಾಸಗಿ ಬಸ್‌ಗಳ ಮಾಲೀಕರಿಗೆ ಸಾರಿಗೆ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿಯ ಎಚ್ಚರಿಕೆಯೂ ಹುಸಿಬಾಂಬ್ ಇದ್ದಂತಿದೆ. ಆದರೆ ಖಾಸಗಿಯವರು, 'ದರ ನಿಯಂತ್ರಿಸುವ ಅಧಿಕಾರ ಸರಕಾರಕ್ಕಿಲ್ಲ' ಎಂದಿದ್ದರೆ, ಅಧಿಕಾರಿಗಳು 'ನಮಗೆ ಅಧಿಕಾರವಿದೆ' ಎಂದು ಹೇಳುತ್ತ ಪ್ರತಿದಿನ ರಾತ್ರಿ ಖಾಸಗಿ ಬಸ್ಸುಗಳ ಕಚೇರಿಗಳಿಗೆ ತೆರಳಿ ಬುಕಿಂಗ್ ಅನ್ನು ಪರಿಶೀಲಿಸುತ್ತಿದ್ದಾರೆ ಹಾಗೂ ದರ ಹೆಚ್ಚಳದ ಕುರಿತು ದೂರು ನೀಡಲು ಬಯಸುವ ಪ್ರಯಾಣಿಕರಿಗೆ ಫೋನ್ ನಂಬರ್ ಕೂಡ ಕೊಟ್ಟಿದ್ದಾರೆ. ಖಾಸಗಿಯವರೇನೂ ದಡ್ಡರಲ್ಲ, ಪಡೆದ ಹೆಚ್ಚಿನ ದರವನ್ನು ಟಿಕೆಟ್‌ನಲ್ಲಿ ನಮೂದಿಸದಿರುವ ಜಾಣತನ ಅವರಿಗೆ ಗೊತ್ತು. ಒಟ್ಟಾರೆ, ಪ್ರಯಾಣಿಕರು ಕೋಡಂಗಿಗಳಾಗಿದ್ದಾರೆ.

-ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕ್ಯಾಬ್

- **ಇಂದಿರಾಬಾಯಿ ವೆಂಕಣ್ಣಾಚಾರ್, (ಇಮೇಲ್ ಮೂಲಕ)**
  ಭಟ್ರೇ, ತುಂಬಿದ ಕೆರೆ, ಜಲಾಶಯಗಳಿಗೆ ಡಿಕೆಶಿಯವರು ಬಾಗಿನ ಅರ್ಪಿಸುತ್ತಿದ್ದಾರಲ್ಲ?
  – **ಬೆಂಗಳೂರಿನಲ್ಲಿ ಮಳೆಯಿಂದಾಗಿ ಮನೆ ಹೊಸ್ತಿಲಿಗೆ ನೀರು ಬಂದಾಗ ಅಲ್ಲೂ ಬಾಗಿನ ಕೊಡಬಹುದಿತ್ತು..ಛೆ!**
- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೇ, ಇಲ್ಲೊಬ್ಬ ವಿಶ್ವವಾಣಿ ಇ-ಪೇಪರ್ ನೋಡದೇ ಮೇಲೆ ಏಳುವುದಿಲ್ಲವಂತೆ?
  – **ಅದೇ ವಾಸಿ, ನಂತರವೂ ಮೇಲೆ ಏಳದಿದ್ದರೆ ಫಜೀತಿ!**
- **ಸಂತೋಷ ಶಿರಸಂಗಿ, ಹಾವೇರಿ**
  ಭಟ್ರೇ, ಇತ್ತೀಚೆಗೆ ಪತ್ರಕರ್ತರನ್ನು ಕಂಡರೆ 'ಏನ್ರೀ ಮೀಡಿಯಾ, ಏನ್ರೀ ಮೀಡಿಯಾ' ಅಂತ ಕೂಗುತ್ತಾರಲ್ಲ?
  – **ಆಡೋರ ಬಾಯಿಯನ್ನು ಮುಚ್ಚಿಸಲು ಆ ಭಗವಂತನಿಗೂ ಸಾಧ್ಯವಿಲ್ಲ!**
- **ಕೃಷ್ಣಮೂರ್ತಿ, ಮೈಸೂರು**
  ಭಟ್ರೇ, ಜೀರೋ ಬಂಡವಾಳದೊಂದಿಗೆ ಕನ್‌ಸ್ಟ್ರಕ್ಷನ್ ಕಂಪೆನಿ ಹುಟ್ಟುಹಾಕಬೇಕೆಂದಿದ್ದೇನೆ. ಸ್ಫೂರ್ತಿವಾಕ್ಯ ಸೂಚಿಸುವಿರಾ?
  – **'ನಿರ್ವಾಣದಿಂದ ನಿರ್ಮಾಣದೆಡೆಗೆ'!**
- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ಯೂಟ್ಯೂಬ್ ಅಡುಗೆ ಕಾರ್ಯಕ್ರಮದಲ್ಲಿ ಹೇಳಿಕೊಡದ ಹೊಸರುಚಿ ಟ್ರಿಕ್ ಯಾವುದು?
  – **ಯಾವಾಗ ಕೂದಲು ಹಾಕಬೇಕು ಅನ್ನೋದನ್ನು ಹೇಳಿಕೊಡದಿರುವುದು!**
- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಹೆಂಡ ಹೆಂಡತಿಯಲ್ಲೇ ಅಡಗಿದೆಯಂತೆ?
  – **ಮಾನವೂ ಯಜಮಾನರಲ್ಲೇ ಅಡಗಿದೆ!**
- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
  ಭಟ್ರೇ, ಎಂಥ ರಣಮಳೆಗೂ ರಾಜಕಾರಣಿಗಳ ಮನೆಗಳಿಗೆ ಏನೂ ಆಗುವುದಿಲ್ಲವಲ್ಲ?
  – **ಅವರು ಕಾಲುವೆ, ಕೆರೆಗಳನ್ನು ನುಂಗಬಹುದು, ಆದರೆ ಅಲ್ಲಿ ಮನೆ ಕಟ್ಟಬಾರದು ಎಂಬ ತಿಳಿವಳಿಕೆ ಅವರಿಗೆ ಇರುತ್ತೆ ಗೊತ್ತಾ?!**
- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೇ, ಕೆಲವು ರಾಜಕೀಯ ನಾಯಕರು ತಮ್ಮ ಜಾತಿ ಉದ್ಧಾರ ಮಾಡಲು ಭೂಮಿ ಮೇಲೆ ಅವತರಿಸಿ ಬಂದಿದೀವಿ ಅಂತಾರಲ್ಲ?
  – **ಹಾಗೆ ಹೇಳಿದರೆ ಪರವಾಗಿಲ್ಲ, ಆದರೆ ನಾವು ಅವರ ಮಾತನ್ನು ನಂಬಿದೀವಿ ಅಂತ ಅಂದುಕೊಳ್ತಾರಲ್ಲಾ?!**
- **ಕೆ.ಲೀಲಾವತಿ, (ಇಮೇಲ್ ಮೂಲಕ)**
  ಭಟ್ರೇ, ಕುಮಾರಸ್ವಾಮಿ ಕೇಂದ್ರ ಮಂತ್ರಿಯಾಗಿ ಏನು ಕೆಲಸ ಮಾಡಬಹುದು?
  – **ರಾಜ್ಯ ರಾಜಕಾರಣ ಮುಗಿಸಿ ಟೈಮಿದ್ರೆ ಫುಲ್ ಕೇಂದ್ರ ಮಂತ್ರಿ ಕೆಲಸ!**
- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
  ಭಟ್ರೇ, ಅಪ್ಪನಿಗೆ ಹುಟ್ಟಿದ್ದರೆ ಅಂತ ಯಾರಾದರೂ ನಿಮ್ಮ ಸ್ಟೈಲಿನಲ್ಲಿ ಹೇಳಿ ಅಂದ್ರೆ, ಏನಂತ ಹೇಳಬೇಕು?
  – **ಯಾರ ಅಪ್ಪನಿಗೆ ಹುಟ್ಟಿದ್ದರೆ... ಅಂತ ಹೇಳಿದರಾಯಿತಪ್ಪ!**

ಬಾರದಂಥ ಮಳೆ ಬಂತಣ್ಣ, ಮರುಭೂಮಿಯೊಳಗೆ

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಬೆಂಗಳೂರಿನಲ್ಲಿ ಮಳೆ ನಿಂತಿತೇ? ನೋಡುವಷ್ಟು ನೋಡಿ, ಸುರಿವಷ್ಟು ಸುರಿದು, ಅದಕ್ಕೇ ಬೇಜಾರಾಗಿರಬೇಕು. ಅದಾದರೂ ಎಷ್ಟು ದಿನ ಅಂತ ಸುರಿದೀತು, ಒಂದು ದಿನ ನಿಲ್ಲಿಸಲೇಬೇಕು ತಾನೆ? ಆದರೆ ನಮ್ಮವರು ಮಾತ್ರ ಪಾಠ ಕಲಿಯುವುದಿಲ್ಲ. ಪ್ರತಿ ಬಾರಿಯೂ ಮಳೆ ಬರುವುದಕ್ಕೆ ಮುಂಚೆ, 'ನಾವು ಸಿದ್ಧರಾಗಿದ್ದೇವೆ, ಎಲ್ಲ ತಯಾರಿ ಮಾಡಿಕೊಂಡಿದ್ದೇವೆ' ಎಂದು ಉದ್ದುದ್ದ ಕಾಲುವೆಯಂತೆ ನಾಲಿಗೆ ಹರಿಬಿಡುವವರು ಮಳೆ ಬಂದಾಗ ಮಾತ್ರ ಗಪ್‌ಚುಪ್! 'ಪ್ರಕೃತಿ ವಿಕೋಪಕ್ಕೆ ನಾವು ತಾನೇ ಏನು ಮಾಡಲು ಸಾಧ್ಯ?', 'ನಮ್ಮ ರಾಜ್ಯದಲ್ಲಿ ಮಾತ್ರ ಮಳೆ ಬಂದಿದೆಯೇ? ಪಕ್ಕದ ರಾಜ್ಯದಲ್ಲಿ/ದೇಶದಲ್ಲಿ ಬಂದಿಲ್ಲವೇ?', 'ಮರುಭೂಮಿಯಲ್ಲೂ ಮಳೆಯಾಗಿಲ್ಲವೇ?', 'ಕೊಲ್ಲಿ ರಾಷ್ಟ್ರಗಳಲ್ಲೂ ಮಳೆಯಿಂದಾಗಿ ಅವಘಡಗಳು ಸಂಭವಿಸಿಲ್ಲವೇ?' ಇತ್ಯಾದಿ ಪುಂಖಾನುಪುಂಖವಾಗಿ ಪುಂಗಿ ಊದುತ್ತಾರೆ. ಆದರೂ ಮಳೆಗೆ ಒಡಿಶಾ ರಾಜ್ಯ ಮಾಡಿಕೊಂಡ ಸಿದ್ಧತೆಗೆ ಶಹಭಾಸ್ ಹೇಳಲೇಬೇಕು. ಮಳೆ ಮತ್ತು ಚಂಡಮಾರುತದ ಮುನ್ಸೂಚನೆ ಸಿಕ್ಕ ಎರಡೇ ದಿನಗಳಲ್ಲಿ 4 ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಅಲ್ಲಿಯ ಆಡಳಿತ ವರ್ಗ ತಲುಪಿಸಿದೆ. ಮುಂದುವರಿದ ದೇಶಗಳಲ್ಲಿ ಅಥವಾ ರಾಜ್ಯಗಳಲ್ಲಿ ಆದರೆ ಒಂದು ಲೆಕ್ಕ. ಒಡಿಶಾದಲ್ಲಿ ಈ ರೀತಿಯ ಒಂದು ಕಾರ್ಯ ನಡೆದಿದೆ ಎಂದರೆ ಇತ್ತೀಚಿನ ವರ್ಷಗಳಲ್ಲೇ ಇದು ಮಾದರಿಯ ಕಾರ್ಯ. ಅಲ್ಲಿಯ ಆಡಳಿತ ವರ್ಗ ನಿಜಕ್ಕೂ ಅಭಿನಂದನೆಗೆ ಅರ್ಹ. ನಮ್ಮವರು ಯಾವಾಗ ಪಾಠ ಕಲಿಯುತ್ತಾರೋ ಏನೋ, ಆ ವರುಣ ದೇವನೇ ಹೇಳಬೇಕು.

ಇರಲಿ, ಈಗ ಒಂದು 3-4 ವರ್ಷದ ಹಿಂದೆ ನಡೆದ ಘಟನೆ ಹೇಳುತ್ತೇನೆ. ಸಾಮಾನ್ಯವಾಗಿ ವಾರಾಂತ್ಯದಲ್ಲಿ ಬಾಕಿ ದಿನಗಳಿಗಿಂತಲೂ ಒಂದೆರಡು ಗಂಟೆ ತಡವಾಗಿ ಮಲಗುವುದು, ಮಾರನೆಯ ದಿನ ತಡವಾಗಿ ಏಳುವುದು ವಾಡಿಕೆ. ಆ ವಾರಾಂತ್ಯದಲ್ಲಿಯೂ ಹಾಗೆಯೇ ಆಯಿತು. ಬೆಳಗ್ಗೆ ಏಳುವಾಗ ಸುಮಾರು ಹತ್ತೂವರೆ-ಹನ್ನೊಂದು ಗಂಟೆಯಾಗಿತ್ತು. ಎದ್ದ ತಕ್ಷಣ ಎಂದಿನಂತೆ, 'ಎಲ್ಲೆಲ್ಲಿ ಏನೇನು ಆಯಿತು' ಎಂದು ನೋಡಲು ಮೊಬೈಲ್ ಕೈಗೆತ್ತಿಕೊಂಡೆ. ಒಂದು ನ್ಯೂಸ್ ಚಾನೆಲ್‌ನಲ್ಲಿ ಬರುತ್ತಿದ್ದ ಸುದ್ದಿಯನ್ನು ಕಂಡು ಆತಂಕಕ್ಕೊಳಗಾದೆ. ಅದರಲ್ಲಿ, 'ಕೊಲ್ಲಿ ರಾಷ್ಟ್ರಗಳು ಮಳೆಯಿಂದಾಗಿ ಸಾಕಷ್ಟು ಹಾನಿಗೊಳಗಾಗುತ್ತಿವೆ' ಎಂಬ ಸುದ್ದಿ ಬರುತ್ತಿತ್ತು. ಇದೇನು, ಸುಡುವ ಬೇಸಗೆಯಲ್ಲಿ ಇಷ್ಟೊಂದು ಮಳೆಯೇ? ಕಳೆದ ಕೆಲವು ದಿನಗಳಿಂದಲೂ ಸೆಕೆ ಮತ್ತು ಬಿಸಿಲಿನ ಝಳ ಮಿತಿಮೀರಿದೆ, ಏನಿಲ್ಲವೆಂದರೂ 46-47 ಡಿಗ್ರಿ ತಾಪಮಾನ ಇರುವ ಜಾಗದಲ್ಲಿ ಇದ್ದಕ್ಕಿದ್ದಂತೆ ಮಳೆ ಬರುತ್ತಿದೆ, ಅದರಲ್ಲೂ ಮಳೆಯಿಂದ ವಾಹನಗಳು, ಕಟ್ಟಡಗಳು ಹಾನಿಗೊಳಗಾಗಿವೆ ಎಂಬ ಸುದ್ದಿಯನ್ನು ಕನ್ನಡದ ವಾಹಿನಿಯಲ್ಲಿ ಕಂಡಾಗ ಮನಸ್ಸು ಕಳವಳಗೊಂಡಿತು. ಹಾಸಿಗೆಯಿಂದ ಎದ್ದು ಕಿಟಕಿಯಿಂದ ಹೊರಗಡೆ ನೋಡಿದರೆ ಕಣ್ಣು ತೆರೆಯಲಾಗದಷ್ಟು ಬೆಳ್ಳಗಿನ ಬಿಸಿಲು. ಕೂಡಲೇ ತಾಪಮಾನ ನೋಡಿದೆ. ಹವಾಮಾನ ವರದಿಯನ್ನೂ ನೋಡಿದೆ. ದೂರ ದೂರದಲ್ಲೆಲ್ಲೂ ಮಳೆಯ ಲಕ್ಷಣ ಕಾಣಿಸಲಿಲ್ಲ. ಅಕ್ಕ-ಪಕ್ಕದ ದೇಶಗಳ ಹವಾಮಾನ ವರದಿಯನ್ನು ಪರಿಶೀಲಿಸಿದರೆ ಎಲ್ಲೆಲ್ಲೂ ಮಳೆಯ ಸುಳಿವಿಲ್ಲ. ಬೆಂಗಳೂರಿನಲ್ಲಿ ಕುಳಿತವರಿಗೆ ಕೊಲ್ಲಿ ರಾಷ್ಟ್ರದಲ್ಲಿ ಇಷ್ಟೊಂದು ಮಳೆಯಾಗುತ್ತಿದೆ ಎಂದು ಹೇಳಿದವರಾದರೂ ಯಾರು? ಅದರಲ್ಲೂ ವಿಡಿಯೋ ಚಿತ್ರೀಕರಣ ಬೇರೆ ಇದೆ, ಮಾಡಿಕೊಟ್ಟವರು ಯಾರು ಎಂಬ ಕುತೂಹಲದಿಂದ ನೇರವಾಗಿ ಆ ಸುದ್ದಿ ವಾಹಿನಿಯವರಿಗೆ ಕರೆ ಮಾಡಿದೆ. 'ನಾವಿರುವ ದೇಶದಲ್ಲಿ ಮಳೆ ಬಂದು ಪ್ರವಾಹ ಉಂಟಾಗಿದೆ, ಅದರಿಂದ ಜನಜೀವನ ಅಸ್ತವ್ಯಸ್ತವಾಗಿದೆ ಎಂದು ತೋರಿಸುತ್ತಿದ್ದೀರಿ, ನಿಮಗೆ ಈ ಮಾಹಿತಿ ಕೊಟ್ಟವರು ಯಾರು?' ಎಂದೆ. ಅದಕ್ಕೆ ಅವರು 'ನಿಮ್ಮ ದೇಶದಲ್ಲಿ ಈಗ ಮಳೆ ಬರುತ್ತಿಲ್ಲವೇ?' ಎಂದು ಕೇಳಿದರು. ಕೂಡಲೇ ನಾನು ಅಂದಿನ ವಾತಾವರಣದ ಎರಡು ಫೋಟೋ, ಒಂದು ವಿಡಿಯೋ ತುಣುಕನ್ನು ಕಳುಹಿಸಿಕೊಟ್ಟೆ. ಅದನ್ನು ನೋಡಿ, ಹಿಂತಿರುಗಿ ಕರೆಮಾಡಿ ನಗುತ್ತಾ, 'ಇದು ಟಿಆರ್‌ಪಿಗೋಸ್ಕರ ನಮ್ಮವರು ಯಾವತ್ತೋ ಮಾಡಿದ ಒಂದು ಕಥೆಯನ್ನು ಹಾಕಿಕೊಂಡಿರುತ್ತಾರೆ. ನೀವು ತಲೆಕೆಡಿಸಿಕೊಳ್ಳಬೇಡಿ' ಎಂದರು. 'ಕೊಲ್ಲಿಯಲ್ಲಿ ಮಳೆಯಾದರೆ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ನಿಮಗೆ ಹೇಗೆ ಟಿಆರ್‌ಪಿ ಸಿಗುತ್ತದೆ?' ಎಂದು ಕೇಳಿದೆ. ಅವರು, 'ಭಾರತದ ಸುದ್ದಿವಾಹಿನಿಗಳಲ್ಲಿ ಭಾರತ-ಪಾಕಿಸ್ತಾನದ ನಡುವಿನ ಯುದ್ಧ ಅಥವಾ ಭಾರತ-ಚೀನಾದ ನಡುವಿನ ಯುದ್ಧ, ಮೋದಿಯವರ ಭಾಷಣ, ಪ್ರಳಯ, ಕೊಲ್ಲಿಯಲ್ಲಿ ಮಳೆ ಮತ್ತು ಪ್ರವಾಹದ ವಿಷಯಗಳು, ಇನ್ನು ಕರ್ನಾಟಕದಲ್ಲಾದರೆ ರಿಯಾಲಿಟಿ ಶೋದಲ್ಲಿ ವಿಜೇತನಾದ ಹಾಡುಗಾರ ಹನುಮಂತುವಿನ ಕಥೆಗೆ ಟಿಆರ್‌ಪಿ ಬರುತ್ತದೆ. ಅದಕ್ಕೆ ಆಗಾಗ ಅದೇ ಕಥೆಯನ್ನು ತೋರಿಸುತ್ತಿರುತ್ತಾರೆ. ನೀವು ನಿಶ್ಚಿಂತರಾಗಿರಿ' ಎಂದರು. ಅಂದು ನನ್ನಂತೆ ಬಹುತೇಕ ಜನರು ಆ ಸುದ್ದಿಯನ್ನು ನೋಡಿ ಆತಂಕಕ್ಕೊಳಗಾಗಿರಬಹುದು ಅಥವಾ ನಕ್ಕಿರಲೂಬಹುದು. ಆದರೆ ಇದೇ ವರ್ಷ ಕೊಲ್ಲಿ ರಾಷ್ಟ್ರಗಳಲ್ಲಿ, ಅದರಲ್ಲೂ ದುಬೈನಲ್ಲಿ ಮಳೆಯಿಂದಾಗಿ ಸಾಕಷ್ಟು ಅವಘಡಗಳು ಸಂಭವಿಸಿದವು. ಆದರೆ ಅಂದು ಕಥೆಯಲ್ಲಿ ತೋರಿಸಿದಷ್ಟನ್ನು ನಿಜವಾಗಿ ಮಳೆಯಾದಾಗ ಯಾವ ಸುದ್ದಿವಾಹಿನಿಗಳೂ ತೋರಿಸಲಿಲ್ಲ. ಇತ್ತೀಚೆಗೆ ಬೆಂಗಳೂರಿನಲ್ಲಿ ಮಳೆಯಿಂದಾಗಿ ಆದ ಅವಾಂತರವನ್ನೂ ಹೆಚ್ಚು ತೋರಿಸಲಿಲ್ಲ, ಅಥವಾ ತೋರಿಸಲು ಆಗಲಿಲ್ಲ ಅನ್ನಿ. ಅಲ್ಲ, ವರದಿಗಾರರು, ಕ್ಯಾಮೆರಾಮನ್‌ಗಳು ತಲುಪಲೇ ಆಗದಿರುವಾಗ ಅಲ್ಲಿಯ ದೃಶ್ಯಗಳನ್ನು ಸೆರೆಹಿಡಿಯುವುದಾದರೂ ಹೇಗೆ? ಸುದ್ದಿ ತೋರಿಸುವುದಾದರೂ ಹೇಗೆ?

ಹಾಗಾದರೆ ಮರುಭೂಮಿಯಲ್ಲಿ ಮಳೆಯೇ ಆಗುವುದಿಲ್ಲವೆ? ಆಗುತ್ತದೆ. ಮಳೆ ಬಂದಾಗ ಇಲ್ಲಿಯ ಸ್ಥಳೀಯ ಜನರು, ಅಂದರೆ ಅರಬ್ಬರು ಅದನ್ನು ತುಂಬಾ ಇಷ್ಟಪಡುತ್ತಾರೆ. ಸಾಮಾನ್ಯವಾಗಿ ಮಳೆಗಾಲದ ಸಂದರ್ಭದಲ್ಲಿ ಇಲ್ಲಿಯ ಶಹರ, ಪಟ್ಟಣದಲ್ಲಿರುವ ಸ್ಥಳೀಯರು ತಮ್ಮ ಕುಟುಂಬ ಸಮೇತ ಮರಳುಗಾಡಿಗೆ ಹೋಗಿ ನೆಲೆಸುತ್ತಾರೆ. ಅಲ್ಲಿಯೇ ಒಂದು ಟೆಂಟ್ ಹಾಕಿಕೊಂಡು, ಕೆಲವು ದಿನ ಅಲ್ಲಿಯೇ ವಾಸಿಸುತ್ತಾರೆ. ಯಾಕೆಂದರೆ ಮಳೆಯ ಪ್ರಮಾಣ ಅಷ್ಟೊಂದು ಜೋರಾಗಿ ಇರುವುದಿಲ್ಲ. ಕೆಲವೊಮ್ಮೆ ಒಂದೆರಡು ದಿನ ಜೋರಾಗಿ ಸುರಿದರೂ ನಂತರ ಒಂದು ನಾಲ್ಕು ದಿನ ವಾತಾವರಣ ತಣ್ಣಗಿರುತ್ತದೆ. ಹಾಗಾಗಿ ಮಡದಿ ಮಕ್ಕಳೊಂದಿಗೆ ಮರಳುಗಾಡಿಗೆ ಹೋಗುವ ಅರಬ್ಬರು, ಅವರದೇ ಭಾಷೆಯಲ್ಲಿ 'ಮರುಭೂಮಿ ಮಳೆಯೇ... ಏನು ನಿನ್ನ ಹನಿಗಳ ಲೀಲೆ' ಎಂದು ಜಾಲಿಹಾಡನ್ನು ಹಾಡಿಕೊಂಡು, ಸಂತೋಷದಿಂದ ಕೆಲ ಸಮಯ ಇದ್ದು ಹಿಂದಿರುಗುತ್ತಾರೆ. ಹಾಗಂತ ಮರುಭೂಮಿಯಲ್ಲಿ ಬೀಳುವ ಎಲ್ಲ ಮಳೆಯೂ ಒಳ್ಳೆಯದಲ್ಲ. 'ನಾಸಾ' ಸಂಸ್ಥೆ ಇತ್ತೀಚೆಗೆ ಸಹಾರಾ ಮರುಭೂಮಿಯ ಒಂದು ಚಿತ್ರವನ್ನು ಬಿಡುಗಡೆ ಮಾಡಿದೆ. ಉಪಗ್ರಹದಿಂದ ತೆಗೆದ ಚಿತ್ರ ಅದು. ಅದರಲ್ಲಿ, ಸಹಾರಾ ಮರುಭೂಮಿಯಲ್ಲಿ ಅಲ್ಲಲ್ಲಿ ಹಸಿರು ಛಾಯೆ ಕಾಣಿಸುತ್ತಿದೆ. ಹಸಿರು ಎಂದರೆ, ಅದು ಗಿಡ-ಗಂಟಿ-ಮರಗಳ ಸಂಕೇತ. ಮರುಭೂಮಿಯಲ್ಲಿ ಹಸಿರು ಕಂಡಾಗ ಸಾಮಾನ್ಯವಾಗಿ ಬಹುತೇಕ ಜನರಿಗೆ ಖುಷಿಯಾಗುತ್ತದೆ. ಆದರೆ ಅದು ಖಂಡಿತವಾಗಿಯೂ ಖುಷಿ ಪಡುವ ವಿಷಯವಲ್ಲ. ಹಾಗಾದರೆ ಮರಳುಗಾಡಿನಲ್ಲಿ ಸಣ್ಣ ಹುಲ್ಲು ಕಡ್ಡಿಯೂ ಹುಟ್ಟುವುದಿಲ್ಲ, ಮಳೆಯೇ ಆಗುವುದಿಲ್ಲ ಎಂದಲ್ಲ. ಒಂದು ಪ್ರಮಾಣದಲ್ಲಿ ಎಲ್ಲವೂ ಆಗುತ್ತದೆ. ಅದು ಆ ಪ್ರಮಾಣದಲ್ಲಿ ಆದರೆ ಮಾತ್ರ ಒಳ್ಳೆಯದು.

ಸಹಾರಾ ಮರುಭೂಮಿ ಆಫ್ರಿಕಾ ಖಂಡದ ಬಹುತೇಕ ಉತ್ತರ ಭಾಗವನ್ನು ಆವರಿಸಿಕೊಂಡಿದೆ. ಸಹಾರಾ, ಭೂಮಿಯ ಮೇಲಿನ ಅತ್ಯಂತ ಒಣ ಪ್ರದೇಶಗಳಲ್ಲಿ ಒಂದು. ಹಠದ ಪಟ್ಟು ಬಿಡದ ಸೂರ್ಯ ಯಾವತ್ತೂ ತನ್ನ ಸುಡುವ ಗುಣದಿಂದ ವಿಮುಖನಾಗದ ಪ್ರದೇಶ ಸಹಾರಾ ಮರುಭೂಮಿ. 90 ಲಕ್ಷ ಚದರ ಕಿಲೋಮೀಟರ್‌ಗಿಂತಲೂ ಹೆಚ್ಚು ವಿಸ್ತೀರ್ಣ ಹೊಂದಿರುವ ಸಹಾರಾ ವಿಶ್ವದ ಅತಿ ದೊಡ್ಡ ಶುಷ್ಕ, ಸುಡುವ ಮರುಭೂಮಿ. ಅಂಥ ಮರುಭೂಮಿಯಲ್ಲಿ ಹಸಿರು ಕಾಣಿಸಿಕೊಳ್ಳುತ್ತಿದೆ ಎಂದರೆ ಹೇಗೆ? ಅದರಲ್ಲೂ, ಆ ಪ್ರದೇಶದಲ್ಲಿ ಕೇವಲ 48 ಗಂಟೆಗಳಲ್ಲಿ 200 ಮಿಲಿಮೀಟರ್ ಮಳೆಯಾಗಿದೆ ಎಂದರೆ ನಂಬಬೇಕೇ?

ನಾಸಾ ಬಿಡುಗಡೆ ಮಾಡಿದ ಚಿತ್ರ ಮತ್ತು ಡ್ರೋನ್ ಸೆರೆಹಿಡಿದ ಕೆಲವು ವಿಡಿಯೋ ದೃಶ್ಯಗಳನ್ನು ಕಂಡಾಗ ನಂಬಲೇಬೇಕು. ಮರುಭೂಮಿಯಲ್ಲಿ ಕೆಲವು ದಿನಗಳ ಹಿಂದೆ ಮಳೆಯಾದದ್ದಷ್ಟೇ ಅಲ್ಲ, ಜಲಾವೃತವಾದ ಮರುಭೂಮಿಯಲ್ಲಿ ಕೆರೆಗಳೇ ನಿರ್ಮಾಣವಾಗಿವೆ. ಅವೆಲ್ಲ ತಾತ್ಕಾಲಿಕ ಕೆರೆಗಳು ಎನ್ನುವುದನ್ನು ಒಪ್ಪಿಕೊಳ್ಳೋಣ. ಮರಳುಗಾಡಿನಲ್ಲಿ, ಬರಡು ಭೂಮಿಯಲ್ಲಿ ಮಳೆ ಬಿದ್ದರೆ ನೀರು ಭೂಮಿಯೊಳಗೆ ಬೇಗ ಇಳಿಯಬೇಕು ಎನ್ನುವುದು ಸಾಮಾನ್ಯರ ವಾದ. ಆದರೆ ಬಹುತೇಕ ಮರುಭೂಮಿಯಲ್ಲಿ, ಮೇಲೆ ಮರಳು ಕಂಡರೂ ಅದರ ಕೆಳಗೆ ಗಟ್ಟಿಯಾದ ಮಣ್ಣು ಇರುತ್ತದೆ. ಮರುಭೂಮಿಯ ಸುತ್ತಮುತ್ತ ಯಾವುದೇ ರಸ್ತೆ ನಿರ್ಮಾಣ ಮಾಡಬೇಕಾದರೆ ಇದೇ ಮಣ್ಣನ್ನು ಬಳಸುತ್ತಾರೆ. ಇದು ಸುಣ್ಣದ ಕಲ್ಲಿನಂಥ ಮಣ್ಣು. ಒಮ್ಮೆ ನೀರು ಹನಿಸಿದಾಗ ಹಸಿಯಾಗಿ ಅರಳುತ್ತದೆಯಾದರೂ, ಒಣಗಿದಾಗ ಗಟ್ಟಿ ಕಲ್ಲಿನಂತಾಗುತ್ತದೆ. ಅದರ ಒಳಗೆ ನೀರು ಬೇಗನೆ ಇಳಿದು ಹೋಗುವುದಿಲ್ಲ. ಆ ಭೂಮಿಯಲ್ಲಿ ನೀರು ಇಂಗುವುದಕ್ಕಿಂತ ಆವಿಯಾಗಿ ಹೋಗುವುದೇ ಹೆಚ್ಚು. ಆದ್ದರಿಂದ ಮರುಭೂಮಿಯಲ್ಲಿ ಅಥವಾ ಆ ಪ್ರದೇಶದಲ್ಲಿ ನಿರ್ಮಿಸಿದ ನಗರಗಳಲ್ಲಿ, ಪಟ್ಟಣಗಳಲ್ಲಿ ಮಳೆ ಬಂದಾಗ ಪ್ರವಾಹದ ಸ್ಥಿತಿ ಏರ್ಪಡುತ್ತದೆ.

ಅದಿರಲಿ, ಸಹಾರಾದ ವಿಷಯಕ್ಕೆ ಬರುವುದಾದರೆ, ಮಿಲಿಯನ್‌ಗಟ್ಟಲೆ ಚದರ ಕಿ.ಮೀ. ವಿಸ್ತೀರ್ಣಕ್ಕೆ ವ್ಯಾಪಿಸಿರುವ ಈ ಮರುಭೂಮಿ, ಮಿಲಿಯನ್ ವರ್ಷಗಳ ಮೊದಲು ಹಸಿರಾಗಿಯೇ ಇತ್ತು ಎಂದು ಅಧ್ಯಯನ ಹೇಳುತ್ತದೆ. ಸಹಾರಾ ಮರುಭೂಮಿ ಎಂದರೆ ಭೂವಿಜ್ಞಾನಿಗಳಿಗೆ ಒಂದು ದೊಡ್ಡ ಭೂವಸ್ತು ಸಂಗ್ರಹಾಲಯದಂತೆ. ಸಾವಿರಾರು ವರ್ಷಗಳ ಹಿಂದೆ ಸಹಾರಾ ಇಂದಿನಂತೆ ಇರಲಿಲ್ಲ, ಅಲ್ಲಿಯೂ ಸರೋವರ, ನದಿ ಇದ್ದವು. ಆ ಭೂಪ್ರದೇಶ ಕಾಡುಗಳಿಂದ ಕೂಡಿ ಹಚ್ಚಹಸಿರಾಗಿತ್ತು ಎನ್ನುವುದು ಈಗ ಇತಿಹಾಸ. ಆದ್ದರಿಂದ ಸಹಾರಾ ಮರುಭೂಮಿ ವಿಜ್ಞಾನಿಗಳಿಗೆ ಸದಾ ಅಧ್ಯಯನಕ್ಕೆ ಯೋಗ್ಯವಾದ ಪ್ರದೇಶ. ಆದರೆ ಈ ಬಾರಿಯ ಹವಾಮಾನ ಬದಲಾವಣೆ ಒಂದು ವಿಶೇಷವೂ ಹೌದು, ಆತಂಕಕಾರಿಯೂ ಹೌದು.

ಇತ್ತೀಚೆಗೆ ಆಫ್ರಿಕಾದ ಉತ್ತರದ ದೇಶಗಳಾದ ಮೊರಾಕೊ, ಅಲ್ಜೀರಿಯಾ, ಲಿಬಿಯಾ, ಟುನೀಶಿಯಾ ದೇಶಗಳಲ್ಲಿ ಸಸ್ಯಗಳು ಹೆಚ್ಚು ಬೆಳೆಯುತ್ತಿವೆ. ಈ ದೇಶ ಸಾಮಾನ್ಯವಾಗಿ ಹೆಚ್ಚು ಮರಗಳಿಲ್ಲದ ಭೂಪ್ರದೇಶ. ಅಲ್ಲಿ ಮಳೆ ಬಹಳ ಅಪರೂಪ. ಆದರೂ ಈಗ ಈ ಪ್ರದೇಶದಾದ್ಯಂತ ಹೆಚ್ಚು ಹೆಚ್ಚು ಹಸಿರು ಚಿಗುರುತ್ತಿದೆ. ಅದು ಒಳ್ಳೆಯದೇ ಅಲ್ಲವೇ? ಮರುಭೂಮಿಯಲ್ಲಿ ಮಳೆ ಬಿದ್ದರೆ ಯಾರಾದರೂ ಏಕೆ ಆತಂಕ ಪಡಬೇಕು? ಎರಡು ಪ್ರಮುಖ ಕಾರಣಗಳಿಂದಾಗಿ ಆತಂಕ ಪಡಬೇಕು.

ಮೊದಲನೆಯದು, ಮರುಭೂಮಿಯಲ್ಲೂ ಕೆಲವು ಜೀವ ಜಂತುಗಳಿರುತ್ತವೆ. ಉದಾಹರಣೆಗೆ, ಇಲಿ, ಉಡ, ಹಲ್ಲಿ, ಹಾವು ಅಥವಾ ನರಿ ಇತ್ಯಾದಿ. ಮರುಭೂಮಿಯಲ್ಲಿ ಸಾಕಷ್ಟು ಕ್ರಿಮಿಕೀಟಗಳೂ ಇರುತ್ತವೆ. ಹಲ್ಲಿ, ಉಡ ಹಾವಿನಂಥ ಜೀವಿಗಳಿಂದಾಗಿ ಅವು ಒಂದು ಮಿತಿಯಲ್ಲಿರುತ್ತವೆ. ಅಲ್ಲಿಯೂ ಒಂದು ಜೀವನಚಕ್ರವಿರುತ್ತದೆ. ಹೆಚ್ಚು ಮಳೆಯಾದರೆ ಇಲಿ, ಹಲ್ಲಿ, ಉಡದಂಥ ಪ್ರಾಣಿಗಳು ಸತ್ತುಹೋಗುತ್ತವೆ. ಆಗ ಮರುಭೂಮಿಯ ಜೀವನಚಕ್ರವೇ ಬದಲಾಗುತ್ತದೆ. ಮರಳುಗಾಡಾಗಲಿ, ಹಸಿರು ಕಾಡಾಗಲಿ, ಎಲ್ಲದಕ್ಕೂ ಅವುಗಳದ್ದೇ ಆದ ಒಂದು ಪ್ರಕೃತಿ ನಿಯಮವಿದೆ. ಯಾವ ಪ್ರದೇಶದಲ್ಲಿಯೇ ಆದರೂ ಈ ಪ್ರಕೃತಿ ನಿಯಮ ಏರುಪೇರಾಗಬಾರದು. ಅವು ತಮ್ಮ ಲಯದಲ್ಲಿಯೇ ಮುಂದುವರಿಯಬೇಕು. ಆ ಲಯ ತಪ್ಪಿದರೆ ಮುಂದೆ ಆಗುವ ಅವಘಡವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

ಇನ್ನೊಂದು ಪ್ರಮುಖ ಕಾರಣ, ಬೋಳು ಬಯಲಿನಲ್ಲಿ ಮರ-ಗಿಡಗಳು ಬೆಳೆದಾಗ ಮಾರುತ ತನ್ನ ದಿಕ್ಕು ಬದಲಿಸಬೇಕಾಗುತ್ತದೆ. ಅಂದರೆ, ಚಂಡಮಾರುತ ಜಾಡು ಬದಲಾಯಿಸಬೇಕಾಗುತ್ತದೆ. ಆಗ ಪ್ರವಾಹದ ಪ್ರದೇಶ ಬೇರೆಯಾಗುತ್ತದೆ. ಈಗ ಆಫ್ರಿಕಾದಲ್ಲಿ ಆಗುತ್ತಿರುವುದು ಅದೇ. ಕೆಲವೇ ದಿನಗಳ ಅವಧಿಯಲ್ಲಿ ಉತ್ತರ ಆಫ್ರಿಕಾದಲ್ಲಿ ಒಂದು ಇಡೀ ವರ್ಷ ಸುರಿಯುವಷ್ಟು ಮಳೆ ಸುರಿದಿದೆ. ಒಣ ಭೂಮಿಯ ದೇಶಗಳಾದ ಚಾಡ್, ನೈಜರ್, ಸುಡಾನ್, ಈಜಿಪ್ಟ್ ಮತ್ತು ಲಿಬಿಯಾದಲ್ಲಿ ಕಳೆದ ಜುಲೈನಿಂದ ಇಲ್ಲಿಯವರೆಗೆ ಪ್ರತಿವರ್ಷಕ್ಕಿಂತ 4 ಪಟ್ಟು ಹೆಚ್ಚು ಮಳೆ ಸುರಿದಿದೆ. ಪ್ರವಾಹದಿಂದಾಗಿ ಸಾಕಷ್ಟು ದುರಂತಗಳಾಗಿವೆ. ಇದರೊಂದಿಗೆ 40 ಲಕ್ಷ ಜನ ತೀವ್ರ ಹಾನಿಗೊಳಗಾಗಿದ್ದಾರೆ. ಸಹಾರಾ ಮರುಭೂಮಿಯಲ್ಲಿ ಬಿದ್ದ ಮಳೆಯಿಂದಾಗಿ ಮರುಭೂಮಿಯು ವಾಸ್ತವವಾಗಿ ಇರಬೇಕಾದದ್ದಕ್ಕಿಂತ 6 ಪಟ್ಟು ಹೆಚ್ಚು ತೇವವಾಗಿದೆ. ಈ ನಡುವೆ ನೈಜೀರಿಯಾ ಮತ್ತು ಕ್ಯಾಮರೂನ್‌ನಂಥ ದೇಶದಲ್ಲಿ ಮಳೆಯ ಪ್ರಮಾಣ ಕುಗ್ಗಿದೆ. ಜುಲೈನಿಂದ ಇಲ್ಲಿಯವರೆಗೆ ಆ ಪ್ರದೇಶದಲ್ಲಿ ಪ್ರತಿವರ್ಷ ಸುರಿಯುವ ಮಳೆಯ ಪ್ರಮಾಣ ಅರ್ಧದಿಂದ ಮುಕ್ಕಾಲು ಭಾಗ ಕಡಿಮೆಯಾಗಿದೆ. ತಜ್ಞರ ಪ್ರಕಾರ ಇದು ಆರಂಭ ಮಾತ್ರ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿಪತ್ತುಗಳು ಎದುರಾಗಲಿವೆ. ನಾಸಾ ಬಿಡುಗಡೆ ಮಾಡಿದ ಇನ್ನೊಂದು ಚಿತ್ರದಲ್ಲಿ ಮಂಜುಗಡ್ಡೆಯ ಪ್ರದೇಶವಾದ ಅಂಟಾರ್ಕ್ಟಿಕಾ ದಲ್ಲೂ ಹಸಿರಿನ ಛಾಯೆ ಕಾಣಿಸಿಕೊಳ್ಳುತ್ತಿದೆ. ಅಲ್ಲಿಯೂ ಸಸ್ಯಗಳು ಬೆಳೆಯಲು ಶುರುವಾಗಿದೆ. ಎಂದರೆ, ಮಂಜು ಕರಗುತ್ತಿದೆ, ತಾಪಮಾನ ಹೆಚ್ಚುತ್ತಿದೆ ಎಂದೇ ಅರ್ಥ. ಅದರಿಂದಾಗಿ ಆ ಪ್ರದೇಶದಲ್ಲಿ ಮಾತ್ರವಲ್ಲ, ಭೂಮಿಯ ಇತರ ಭಾಗಗಳಿಗೂ ಅದರ ಪರಿಣಾಮ ಉಂಟಾಗುತ್ತದೆ. ಅದು ಇನ್ನೊಂದು ವಿಷಯ.

ಮಳೆ ಬೀಳುವಲ್ಲಿ ಬಿದ್ದರೇನೇ ಚೆಂದ, ಹಸಿರು ಇರುವಲ್ಲಿ ಇದ್ದರೇನೇ ಚೆಂದ. ಮರುಭೂಮಿಯೇ ಆಗಲಿ ಅಂಟಾರ್ಕ್ಟಿಕಾದಂಥ ಮಂಜುಗಡ್ಡೆಯ ಪ್ರದೇಶವೇ ಆಗಲಿ, ಹಸಿರಾಗುವುದು ಒಳ್ಳೆಯ ಲಕ್ಷಣವಲ್ಲ. ಕಾಡಿಗೆ ಬೆಂಕಿ ಬೀಳುವುದು, ಮರಳುಗಾಡಿನಲ್ಲಿ ಮಳೆ ಬರುವುದು, ಎರಡೂ ಒಂದೇ!

ಕಳಕಳಿ
ಶಂಕರನಾರಾಯಣ ಭಟ್

ಅಸ್ತ್ರ ಮತದಾರನ ಕೈಯಲ್ಲಿದೆ

ಭ್ರಷ್ಟಾಚಾರಿಗಳನ್ನು, ಕುಟುಂಬ ರಾಜಕಾರಣವನ್ನು ದೂರ ಮಾಡುವ ಅಸ್ತ್ರ ಕೇವಲ ಮತದಾರರ ಕೈಯಲ್ಲಿದೆ ಎಂಬುದು ನಿಜಕ್ಕೂ ಒಪ್ಪುವಂಥ ಮಾತೇ. ಆದರೆ ಇಂದು ಮತದಾರನೇ ಭ್ರಷ್ಟನಾಗುತ್ತಿದ್ದಾನೆ. ಕೇವಲ ಕವಡೆ ಕಾಸಿಗಾಗಿ ತನ್ನ ಅಮೂಲ್ಯ ಮತವನ್ನೇ ಮಾರಾಟಕ್ಕೆ ಇಡುತ್ತಿದ್ದಾನೆ. ಇಂಥ ಮತದಾರರಿಗೆ, ತಮ್ಮ ಅಭ್ಯರ್ಥಿ ಯಾರು, ಅವರಿಂದ ಸಮಾಜಕ್ಕೆ ನಿಜಕ್ಕೂ ಒಳಿತಾದೀತೇ, ಆತ ಸ್ವಂತ ಸಾಮರ್ಥ್ಯ ಹಾಗೂ ಅರ್ಹತೆಯ ಮೇಲೆ ನಿಂತವನೋ ಅಥವಾ ಯಾರೋ ಪ್ರಭಾವಿ ರಾಜಕಾರಣಿಯ ಮಗ ಎಂಬ ಕಾರಣಕ್ಕೋ? ಎಂಬುದನ್ನೂ ಯೋಚಿಸದೆ, ಕೇವಲ ಹಣದ ಹಿಂದೆ ಬಿದ್ದು, 'ಯಾರು ಹೆಚ್ಚು ಹಣ ಕೊಡುತ್ತಾರೋ ಅವರಿಗೇ ನನ್ನ ಮತ' ಎಂಬಲ್ಲಿಗೆ ಬಂದು ನಿಂತಿದ್ದಾನೆ ಮತದಾರ.

ಇದು ಅಶಿಕ್ಷಿತರ ವಲಯದಲ್ಲಷ್ಟೇ ಕಾಣಬರುವ ಸಮಸ್ಯೆಯಲ್ಲ; 'ಸುಶಿಕ್ಷಿತರು' ಎಂಬ ಹಣೆಪಟ್ಟಿ ಹೊತ್ತಿರುವವರೂ ಮಾಡುತ್ತಿರುವ ಘನಂದಾರಿ ಕೆಲಸ! ಇಲ್ಲಿ ಮತ್ತೆ ಚೌಕಾಶಿ ಬೇರೆ- 'ಆ ಅಭ್ಯರ್ಥಿ ಅಷ್ಟು ಕೊಡಲು ತಯಾರಾಗಿದ್ದಾನೆ, ನೀವು ಅದಕ್ಕಿಂತ ತುಸು ಜಾಸ್ತಿ ಕೊಟ್ಟರೇನೇ ನಿಮಗೆ ಮತ' ಅಂತ. ಇದೊಂದು ರೀತಿಯಲ್ಲಿ 'ಚುನಾವಣಾ ಮಾರುಕಟ್ಟೆ' ಅಂದರೂ ತಪ್ಪಲ್ಲ. ಇದನ್ನು ಚೆನ್ನಾಗಿ ಅರಿತಿರುವ ಅಭ್ಯರ್ಥಿಗಳು ತಮ್ಮ ತಾಕತ್ತನ್ನು ತೋರಿಸುವ ಬಗೆ ಎಂದರೆ, ಮತದಾರರನ್ನು ಕೊಂಡುಕೊಳ್ಳುವುದು. ಇದರರ್ಥ, ಮತದಾರ ಒಂದು ವ್ಯಾಪಾರದ ವಸ್ತುವಾಗಿಬಿಟ್ಟಿದ್ದಾನೆ.

ಕುಟುಂಬ ರಾಜಕಾರಣವೋ, ಹಣಬಲ-ತೋಳ್ಬಲದ ರಾಜಕಾರಣವೋ ಅದನ್ನು ಹಿಡಿತಕ್ಕೆ ತರುವ ತಾಕತ್ತು ಕೇವಲ ಮತದಾರನಿಗೇ ಇರುವಂಥದ್ದು. ಇದೊಂದು ಅತ್ಯಂತ ಪ್ರಬಲ ಅಸ್ತ್ರ. ಅಷ್ಟೇ ಅಲ್ಲ, ಇದು ಮತದಾರರ ಕೈಯಲ್ಲೇ ಇರುವುದರಿಂದ, ಅದರ ಸಮರ್ಥ ಪ್ರಯೋಗವೂ ಅವರಿಂದಲೇ ಸಾಧ್ಯವಿರುತ್ತದೆ. ಆದರೇನು? ಸ್ವಾತಂತ್ರ್ಯ ಸಿಕ್ಕಿ 75 ವರ್ಷಗಳಾದರೂ, ಆ ನಂತರ ಅದೆಷ್ಟೋ ಚುನಾವಣೆಗಳು ನಡೆದು ನಮ್ಮ ಮತದಾನ ಮಾಡಿ ಕೈಸುಟ್ಟುಕೊಂಡರೂ ಮತದಾರರಾದ ನಾವು ಇನ್ನೂ ಜಾಗೃತರಾಗಿಲ್ಲ ಅಂದರೆ, ಇದನ್ನು ರಾಜಕಾರಣಿಗಳ ತಾಕತ್ತು ಅನ್ನಬೇಕೋ ಅಥವಾ ಮತದಾರರ ನಿರ್ಲಿಪ್ತತೆ ಅನ್ನಬೇಕೋ ತಿಳಿಯುತ್ತಿಲ್ಲ. 'ಯಾರು ಆರಿಸಿ ಬಂದರೂ ನಾವು ದುಡಿದು ತಿನ್ನುವುದೇನು ತಪ್ಪೀತೇ? ಯಾರು ಅಧಿಕಾರಕ್ಕೆ ಬಂದರೂ ಉದ್ಧಾರ ಆಗುವುದು ಅಷ್ಟರಲ್ಲೇ ಇದೆ' ಎಂಬ ಮತದಾರರ ಒಂದು ರೀತಿಯ ವಿಚಿತ್ರ ಮನೋಧರ್ಮವೇ ರಾಜಕೀಯ ಭ್ರಷ್ಟಾಚಾರ, ಕುಟುಂಬ ರಾಜಕಾರಣಗಳು ಅಡೆತಡೆ ಇಲ್ಲದೆ ಸಾಗುವುದಕ್ಕೆ ಕಾರಣವಾಗಿದೆ. ಇಂದಿನ ಈ ಸ್ಥಿತಿಗೆ ರಾಜಕಾರಣಿಗಳ ಕಡೆಗೆ ಬೆರಳು ಮಾಡಿ ತೋರಿಸುವ ಬದಲು, ನಮ್ಮಂಥ ಮತದಾರರೇ ಹೊಣೆಯನ್ನು ಹೊರಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿ ಪ್ರಜೆಯೂ ಪ್ರಭುವೇ. ಆದರೆ ಆತ ಹಾಗೆ ವರ್ತಿಸದೆ ಗುಲಾಮನಂತೆ ನಡೆದುಕೊಳ್ಳುತ್ತಿದ್ದಾನೆ. ಹೀಗಾಗಿ ಆತ ಗುಲಾಮಗಿರಿಯ ರಾಜಕೀಯ ವ್ಯವಸ್ಥೆಯನ್ನೇ ಅನುಭವಿಸಬೇಕಾಗಿ ಬಂದಿದೆ. ಪಕ್ಷ, ಕುಟುಂಬ, ಹಣ ಅಥವಾ ಇನ್ನಾವುದೇ ಅಂಶ ಲೆಕ್ಕಕ್ಕೇ ಬಾರದೆ, ಅಭ್ಯರ್ಥಿಯ ಸಾಮರ್ಥ್ಯ ಹಾಗೂ ಉತ್ತಮ ಗುಣವನ್ನು ಮಾತ್ರವೇ ಪರಿಗಣಿಸುವಂತಾಗಬೇಕು. ಆಗ ಮಾತ್ರ ರಾಜಕೀಯದಲ್ಲಿನ ಹೊಲಸು ನಿರ್ಮೂಲವಾಗಿ ಸ್ವಚ್ಛ ಪರಿಸರ ದೊರೆಕೀತು. ಅದಕ್ಕೆ ವಿಶೇಷವಾದುದನ್ನೇನೂ ಮಾಡಬೇಕಿಲ್ಲ, 'ನಮ್ಮ ಮತ ಮಾರಾಟಕ್ಕಿಲ್ಲ' ಎಂಬುದನ್ನು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರೆ ಸಾಕು. ಇದು ಅಷ್ಟೊಂದು ಕಷ್ಟದ ಕೆಲಸವೇ? ಅಲ್ಲವೇ ಅಲ್ಲ! ಈ ಅಸ್ತ್ರ ನಮ್ಮಲ್ಲೇ ಇದೆ. ಅದನ್ನು ಸರಿಯಾಗಿ ಪ್ರಯೋಗಿಸಿ ನಮಗೆ ಬೇಕಾದ ಪ್ರತಿನಿಧಿಯನ್ನು ಆಯ್ಕೆಮಾಡಿಕೊಳ್ಳೋಣ.

(ಲೇಖಕರು ಹವ್ಯಾಸಿ ಬರಹಗಾರರು)

ಉಪನಿಷತ್ತುಗಳ ಸುತ್ತಮುತ್ತ ಒಂದು ಕಿರುನೋಟ

ದಶೋಪನಿಷತ್ತುಗಳು ಒಂದೇ ಕಾಲಘಟ್ಟದಲ್ಲಿ ರಚನೆಯಾದುದಲ್ಲ, ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಟ್ಟವೂ ಅಲ್ಲ. ಇವು ನಾಲ್ಕೂ ವೇದಗಳಲ್ಲಿ ವ್ಯಾಪಿಸಿವೆ. ಉಪನಿಷತ್ತುಗಳು ಗುರು-ಶಿಷ್ಯರ ನಡುವಿನ ಸಂವಾದವಾಗಿದೆ. ಕಿವಿಯಿಂದ ಕೇಳಿಸಿಕೊಂಡು ಮೌಖಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದ ಇವು ನಂತರದ ಕಾಲದಲ್ಲಿ ಗ್ರಂಥಸ್ಥವಾಯಿತು. ಆದ್ದರಿಂದ ಉಪನಿಷತ್ತುಗಳನ್ನು 'ಶ್ರುತಿ' ಎನ್ನುತ್ತಾರೆ.

ನಿರ್ಮಲನುಡಿ
ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ
vveditoped@gmail.com

ಹಿಂದಿನ ಗುರುಕುಲಗಳಲ್ಲಿ ಪರಾವಿದ್ಯೆ ಮತ್ತು ಅಪರಾವಿದ್ಯೆ ಎರಡನ್ನೂ ಕಲಿಸಲಾಗುತ್ತಿತ್ತು. ಅಪರಾವಿದ್ಯೆ ಎಂದರೆ ಲೌಕಿಕ ವಿದ್ಯೆ, ಜೀವನೋಪಾಯಕ್ಕಾಗಿ ಕಲಿಯಲಾಗುವ ಕೌಶಲ. ಇಹಲೋಕದ ಸುಖ ಸಮೃದ್ಧಿಗಾಗಿ ದೇವಾನುದೇವತೆಗಳನ್ನು ಪ್ರಾರ್ಥಿಸುವುದು, ಯಜ್ಞಯಾಗಾದಿಗಳಲ್ಲಿ ತೊಡಗುವುದು ಸಹ ಅಪರಾವಿದ್ಯೆಯೇ. ಪರಾವಿದ್ಯೆಯಾದರೂ ಇಹಲೋಕಕ್ಕೆ ಸಂಬಂಧಿಸಿದ ವಿದ್ಯೆಯಲ್ಲ, ಅಧ್ಯಾತ್ಮ ವಿದ್ಯೆಯನ್ನು ಪರಾವಿದ್ಯೆ ಎಂದು ಕರೆಯುತ್ತಿದ್ದರು.

ಉಪನಿಷತ್ತುಗಳು ಪರಾವಿದ್ಯೆಯಾಗಿದೆ. ಉಪನಿಷತ್ತುಗಳಿಗೆ ಲೌಕಿಕ ವಿದ್ಯೆ ಮುಖ್ಯವಲ್ಲ, ಅವು ಯಜ್ಞಯಾಗಾದಿಗಳಿಗೆ ವಿಶೇಷ ಮಹತ್ವ ನೀಡುವುದಿಲ್ಲ. ಯಜ್ಞಯಾಗಾದಿಗಳಿಂದ ದೇವತೆಗಳನ್ನು ಸುಪ್ರೀತರನ್ನಾಗಿಸಿ ಸ್ವರ್ಗಲೋಕವನ್ನು ಪಡೆಯಬಹುದಾದರೂ ಆ ಸುಖ ಸ್ವರ್ಗಗಳು ಕ್ಷಣಭಂಗುರವಾದುದು, ಕೆಲಕಾಲವಾದ ಮೇಲೆ ಸ್ವರ್ಗದಿಂದ ಪುನಃ ಈ ಲೋಕಕ್ಕೆ ಹಿಂದಿರುಗಬೇಕಾಗುತ್ತದೆ ಎಂಬುದು ಉಪನಿಷತ್ತಿನ ನಿಲುವಾಗಿತ್ತು. ಸುಖ ಸ್ವರ್ಗಗಳನ್ನು ಅನುಗ್ರಹಿಸುವ ದೇವಾನುದೇವತೆಗಳು ಸಹ ಆ ಪರಮತತ್ವಕ್ಕೆ ಅಧೀನರಾಗಿ, ಅದಕ್ಕೆ ಭಯಭೀತರಾಗಿ ಲೋಕಕಲ್ಯಾಣ ಕಾರ್ಯಗಳಲ್ಲಿ ತೊಡಗುವರು ಎನ್ನುತ್ತದೆ.

ಆಚರಣಾ ಪ್ರಧಾನವಾದ ಯಜ್ಞ, ಯಾಗ, ಹವಿಸ್ಸು, ಸುಖಭೋಗಗಳ ಬದಲಿಗೆ ಸಾಧನಾ ಪ್ರಧಾನವಾದ ತಪಸ್ಸು, ಧ್ಯಾನ, ಬ್ರಹ್ಮಚರ್ಯ, ಆತ್ಮಜ್ಞಾನಗಳನ್ನು ಬೋಧಿಸಿದ್ದು ಉಪನಿಷತ್ತಿನ ವಿಶೇಷತೆಯಾಗಿದೆ. ನಮ್ಮ ಜನಗಳಿಗೆ ಕರ್ಮ, ಯಜ್ಞ, ತರ್ಕ, ವಾದ, ಸಿದ್ಧಾಂತ ಪ್ರತಿಪಾದನೆಗಳು ನಿರರ್ಥಕವೆಂದು ಕಾಲಾಂತರದಲ್ಲಿ ಮನದಟ್ಟಾಯಿತು ಎನಿಸುತ್ತದೆ. ತತ್ಫಲವಾಗಿ ಉಪನಿಷತ್ತುಗಳ ಜನನವಾಯಿತು. ಧರ್ಮಗಳ ಉದಯಕ್ಕೆ ಮನುಷ್ಯನೊಳಗಿನ ಭಯ ಅಥವಾ ಜೀವೇಷಣೆಯೇ ಮೂಲವೆಂದು ಆಲ್ಬರ್ಟ್ ಐನ್‌ಸ್ಟೀನ್ ಹೇಳುತ್ತಾರೆ. ಉಪನಿಷತ್ತುಗಳಾದರೂ ಭಯ, ಜೀವೇಷಣೆಗಳನ್ನು ಅತಿಕ್ರಮಿಸಿ ಪರಜ್ಞಾನವನ್ನು ಸಿದ್ಧಿಸಿಕೊಂಡು ಧಾರ್ಮಿಕ ಜೀವನ ನಡೆಸಿದ ಪರಮ ಋಷಿಗಳ ನಿರ್ವಚನಗಳಾಗಿವೆ. ಉಪನಿಷತ್ತುಗಳು ಭಾರತೀಯರ ಮನಸ್ಸು ಬುದ್ಧಿಗಳು ಪಕ್ವಗೊಂಡ ಸಂಕ್ರಮಣದ ಕಾಲಘಟ್ಟವನ್ನು ಸೂಚಿಸುತ್ತವೆ.

ಸದಲ್ ಎಂಬ ಧಾತುವಿಗೆ 'ಉಪ' ಮತ್ತು 'ನಿ' ಎಂಬೆರಡು ಉಪಸರ್ಗಗಳು ಸೇರಿ 'ಉಪನಿಷತ್' ಎಂದಾಗಿದೆ. ಉಪನಿಷತ್ ಎಂಬ ಪದಕ್ಕೆ (ಗುರುವಿನ) 'ಸಮೀಪಕ್ಕೆ ಹೋಗುವುದು', 'ಅಜ್ಞಾನವನ್ನು ನಾಶಗೊಳಿಸುವುದು' ಮುಂತಾದ ಅರ್ಥಗಳಿವೆ. ಎಲ್ಲ ಉಪನಿಷತ್ತುಗಳೂ ಸಂಸ್ಕೃತದಲ್ಲಿವೆ. ಉಪನಿಷತ್ತುಗಳ ಸಂಖ್ಯೆಯಲ್ಲಿ ವಿದ್ವಾಂಸರ ನಡುವೆ ಒಮ್ಮತವಿಲ್ಲ. ಕ್ರಿಸ್ತಪೂರ್ವ ಕಾಲದಿಂದ ಹಿಡಿದು 15ನೆಯ ಶತಮಾನದವರೆಗೆ ನೂರೆಂಟು ಉಪನಿಷತ್ತುಗಳನ್ನು ರಚಿಸಲಾಗಿದೆ. ಅದರಲ್ಲಿ ವೈದಿಕ-ಅವೈದಿಕ, ಪ್ರಧಾನ-ಗೌಣ ಹೀಗೆ ನಾನಾ ವಿಂಗಡಣೆಗಳಿವೆ. ಆಚಾರ್ಯತ್ರಯರಿಂದ ವ್ಯಾಖ್ಯಾನಗೊಂಡ 10 ಉಪನಿಷತ್ತುಗಳನ್ನು ಪ್ರಧಾನ ಉಪನಿಷತ್ತು ಎನ್ನುತ್ತಾರೆ.

ಈ ದಶೋಪನಿಷತ್ತುಗಳು ಒಂದೇ ಕಾಲಘಟ್ಟದಲ್ಲಿ ರಚನೆಯಾದುದಲ್ಲ, ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಟ್ಟವೂ ಅಲ್ಲ. ಇವು ನಾಲ್ಕೂ ವೇದಗಳಲ್ಲಿ ವ್ಯಾಪಿಸಿವೆ. ಉಪನಿಷತ್ತುಗಳು ಗುರು-ಶಿಷ್ಯರ ನಡುವಿನ ಸಂವಾದವಾಗಿದೆ. ಕಿವಿಯಿಂದ ಕೇಳಿಸಿಕೊಂಡು ಮೌಖಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದ ಇವು ನಂತರದ ಕಾಲದಲ್ಲಿ ಗ್ರಂಥಸ್ಥವಾಯಿತು. ಆದ್ದರಿಂದ ಉಪನಿಷತ್ತುಗಳನ್ನು 'ಶ್ರುತಿ' (ಕಿವಿಯಿಂದ ಕೇಳಿದುದು) ಎಂದು ಕರೆಯುತ್ತಾರೆ. ಉಪನಿಷತ್ತುಗಳು ಸಂವಾದ ರೂಪಿಯಾದರೂ ಕೆಲವೆಡೆ ಸೃಷ್ಟಿಯ ಅಗಾಧತೆ, ನಿಗೂಢತೆಗಳಿಗೆ ನಿಬ್ಬೆರಗಾದ ಭಾವೋನ್ನತ್ತ ಕಾವ್ಯಾತ್ಮಕ ಅಭಿವ್ಯಕ್ತಿಗಳು ಕಾಣಸಿಗುತ್ತವೆ (ಉದಾಹರಣೆಗೆ, ಕಠ, ಮುಂಡಕ, ತೈತ್ತಿರೀಯ, ಬೃಹದಾರಣ್ಯಕಗಳು). ನಮ್ಮ ದಾರ್ಶನಿಕ ಕವಿ ಕುವೆಂಪು ಅವರ ಕಾವ್ಯದಲ್ಲಿ ಉಪನಿಷತ್ತುಗಳ ಈ ಭಾವೋನ್ನತ್ತತೆಯ ಪ್ರಭಾವ ದಟ್ಟವಾಗಿ ಕಾಣಿಸುತ್ತದೆ.

ಉಪನಿಷತ್ತುಗಳಿಗೆ ವೇದಾಂತವೆಂಬ ಇನ್ನೊಂದು ಹೆಸರೂ ಇದೆ. ವೇದಾಂತವೆಂದರೆ ಅದು ವೇದಗಳ ಕಡೆಯ ಭಾಗ ಎಂದಷ್ಟೇ ಅರ್ಥವಲ್ಲ. ವೇದಗಳಿಗೆ ಅಂತಿಮ ಸ್ಪರ್ಶ ನೀಡಿದ, ವೇದಗಳನ್ನು ಕೃತಾರ್ಥಗೊಳಿಸಿದ ಕೃತಿಗಳು ಎಂಬರ್ಥದಲ್ಲೂ ವೇದಾಂತ ಎಂಬ ಹೆಸರನ್ನು ಪರಿಭಾವಿಸಬಹುದು. ಇದಕ್ಕೆ ಆದಿಶಂಕರರ ಈ ಮಾತುಗಳೇ ಪ್ರಮಾಣವಾಗಿದೆ: ಈಶಾವಾಸ್ಯ ಉಪನಿಷತ್ತಿನ ಮಂತ್ರಗಳನ್ನು ವೇದೋಕ್ತವಾದ ಕರ್ಮಕಾಂಡದ ಆಚರಣೆಗಳಲ್ಲಿ ಅದೇಕೆ ಬಳಸುವುದಿಲ್ಲ? ಏಕೆಂದರೆ ಅದು ಆತ್ಮನ ನಿಜ ಸ್ವರೂಪವನ್ನು ತಿಳಿಸಿಕೊಡುವ ಉಪನಿಷತ್ತಾಗಿದೆ, ಆತ್ಮ ಎಂದಿಗೂ ಕರ್ಮಕ್ಕೆ ಅಂಗವಲ್ಲದ ಕಾರಣ ಮತ್ತು ಆತ್ಮವಿಚಾರ ಕರ್ಮಕಾಂಡಕ್ಕೆ ವಿರುದ್ಧವಾಗಿರುವುದರಿಂದ ಯಜ್ಞಾದಿ ಕರ್ಮಾಚರಣೆಗಳಲ್ಲಿ ಈ ಉಪನಿಷತ್ತಿನ ಮಂತ್ರಗಳನ್ನು ಬಳಸುವುದಿಲ್ಲ, ಏನನ್ನಾದರೂ ಪಡೆಯಲು, ಭೋಗಿಸಲು, ಶುದ್ಧೀಕರಿಸಲು ಕರ್ಮ ಮಾಡಬೇಕು. ಆದರೆ ಆತ್ಮ ಪಡೆವ ವಸ್ತುವಲ್ಲ, ಭೋಗಿಸುವ ವಸ್ತುವಲ್ಲ, ಶುದ್ಧೀಕರಿಸುವ ವಸ್ತುವಲ್ಲ. ಅಂದ ಮೇಲೆ ಯಜ್ಞಯಾಗಾದಿಗಳಿಗೆ ಇಂಥ ಉಪನಿಷತ್ತುಗಳಿಂದ ಪ್ರಯೋಜನವಿಲ್ಲ (ಶ್ರೀ ಶಾಂಕರ ಭಾಷ್ಯ, ಈಶಾವಾಸ್ಯೋಪನಿಷತ್, ಭಾಷ್ಯಾವತರಣಿಕೆ).

ಸೃಷ್ಟಿ ನಿರ್ಮಾಣ, ಪ್ರಜ್ಞೆಯ ಉದಯ, ಪಂಚಭೂತಗಳು, ನಾಮರೂಪಗಳು, ಸೃಷ್ಟಿಯಲ್ಲಿ ಮನುಷ್ಯರ ಅಲ್ಪತ್ವದ ವಿವೇಚನೆ, ಸೃಷ್ಟಿಯ ಏಕತೆಯ ವಿಷಯದಲ್ಲಿ ಲೋಲುಪತೆಗೆ ವಶರಾದ ಮನುಷ್ಯರ ಅಜ್ಞಾನ, ಸ್ವರ್ಗದ ಕ್ಷಣಭಂಗುರತೆ, ಆತ್ಮದ ಶಾಶ್ವತತೆ ಮತ್ತು ಪುನರ್ಜನ್ಮ, ಆತ್ಯಂತಿಕ ಶಾಂತಿ- ಇವು ಸ್ಥೂಲವಾಗಿ ಉಪನಿಷತ್ತುಗಳಲ್ಲಿ ಚರ್ಚಿಸಲಾದ ವಿಷಯಗಳಾಗಿವೆ. 'ಸರ್ವಂ ಖಲ್ವಿದಂ ಬ್ರಹ್ಮ', 'ತತ್ವಮಸಿ', 'ಅಸತೋ ಮಾ ಸದ್ಗಮಯ..', 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ', 'ಶ್ರೇಯಸ್ ಪ್ರೇಯಸ್', 'ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ', ಇವೇ ಮುಂತಾದ ಮಹಾವಾಕ್ಯಗಳು ಭಾರತೀಯ ವಿವೇಕದ ಜೀವಾಳವಾಗಿವೆ.



ಕೆಲವು ವಿದ್ವಾಂಸರು ಉಪನಿಷತ್ತುಗಳು ಲೋಕದೂರವಾದುದು, ಪ್ರಪಂಚಕ್ಕೆ ಬೆನ್ನು ತೋರಿಸುವಂತಹುದು, ನಿರಾಶಾವಾದವನ್ನು ಪ್ರತಿಪಾದಿಸುವಂತಹುದು, ಅದರಲ್ಲಿ ಸದೃಢವಾದ, ತರ್ಕಬದ್ಧವಾದ ಒಂದು ಸಿದ್ಧಾಂತವೇ ಇಲ್ಲ ಎಂದು ಉಪನಿಷತ್ತುಗಳನ್ನು ವಿರೋಧಿಸುವುದುಂಟು. ಮತ್ತೆ ಕೆಲವರು ಉಪನಿಷತ್ತುಗಳು ಬೌದ್ಧಧರ್ಮದಿಂದ ಪ್ರಭಾವಿತವಾದ ರಚನೆಗಳಾಗಿವೆ ಎಂದು ವಾದಿಸುತ್ತಾರೆ. ನಮ್ಮ ವೇದಾಂತವು ಭಗವಾನ್ ಬುದ್ಧನ ವಿವೇಕದಿಂದ ಪ್ರಭಾವಿತವಾಗಿದೆ ಎಂದರೆ ಅದು ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ. ಅದರಿಂದ ಉಪನಿಷತ್ತಿನ ಬೆಲೆ ಹೆಚ್ಚುತ್ತದೆಯೇ ವಿನಾ ಅದು ತಲೆಬಾಗಿಸಬೇಕಾದ, ಮರೆಮಾಚಬೇಕಾದ ವಿಚಾರವೇನಲ್ಲ.

ಆದರೆ ಉಪನಿಷತ್ತು ಪ್ರಪಂಚ ವಿರೋಧಿ ಎಂಬ ಮಾತನ್ನಂತೂ ಒಪ್ಪಲಾಗದು. ವೇದಕಾಲದಲ್ಲಿ ಭಾರತ ದೇಶವು ಎಲ್ಲ ದೃಷ್ಟಿಯಿಂದಲೂ ಸಮೃದ್ಧವಾಗಿತ್ತು, ಶ್ರೀಮಂತವಾಗಿತ್ತು. ಸಮಾಜ ಯಜ್ಞಯಾಗಾದಿ ಬಡಿವಾರಗಳಲ್ಲಿ, ಮಾಂಸ ಸೇವನೆ ಮತ್ತು ಸೋಮರಸಪಾನದ ಸುಖಲೋಲುಪತೆಗಳಲ್ಲಿ ಮುಳುಗಿತ್ತು. ಆ ಕಾಲಘಟ್ಟಕ್ಕೆ ಹಣದಿಂದ, ಐಹಿಕ ಸುಖದಿಂದ ಮನುಷ್ಯ ಬದುಕು ಸಾರ್ಥಕವಾಗುವುದಿಲ್ಲ ಎಂಬ ವಿವೇಕದ ಅಗತ್ಯವಿತ್ತು. ತತ್ಫಲವಾಗಿ ಉಪನಿಷತ್ತುಗಳ ಜನನವಾಯಿತು. ಉಪನಿಷತ್ತುಗಳನ್ನು ವಿರೋಧಿಸುವವರ ವಿಚಾರವನ್ನೇ ಮನ್ನಿಸುವುದಾದರೆ ನಾಗರಿಕತೆಯ ಹುಚ್ಚು ಹಿಡಿಸಿಕೊಂಡಿರುವ ಇಂದಿನ ಕಾಲಘಟ್ಟದಲ್ಲಿ ಸರಳ ಜೀವನದ, ಗ್ರಾಮ ಸ್ವರಾಜ್ಯದ ಕನಸು ಕಂಡ ಮಹಾತ್ಮ ಗಾಂಧಿಯನ್ನೂ ಜೀವನ ವಿರೋಧಿ ಎಂದು ಕರೆಯಬೇಕಾಗುತ್ತದೆ. ವಿಷಯಾಸಕ್ತಿಯಲ್ಲಿ ಮುಳುಗಿದ ಸಮಾಜಕ್ಕೆ ಅನಾಸಕ್ತಿ ಯೋಗ ಎಂದಿಗೂ ಪಥ್ಯವಾಗಿದೆ.

ಕರಣೇಂದ್ರಿಯ ಗೋಚರವಾದ ಜಗತ್ತೇ ಪರಮಸತ್ಯವೆಂದು ನಂಬಿದ್ದ ಕಾಲಘಟ್ಟದಲ್ಲಿ ಉಪನಿಷತ್ತಿನ ದಾರ್ಶನಿಕರು ಇಂದ್ರಿಯಾತೀತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದರು. ಆ ಪರಮಸತ್ಯವನ್ನು ಕರಣೇಂದ್ರಿಯ ಜಗತ್ತಿನಲ್ಲಿ ಸೃಷ್ಟಿಯಾದ ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ ಎಂಬ ಇಂಗಿತವನ್ನು ವ್ಯಕ್ತಪಡಿಸಲು 'ನೇತಿ', 'ನೇತಿ' ಎಂದು ಉದ್ಗರಿಸಿದರು. ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರಗಳಿಂದ ಅದನ್ನು ಸ್ಪರ್ಶಿಸಲಾಗದು ಎಂದರೇ ವಿನಾ ಇಂದ್ರಿಯ, ಮನಸ್ಸು, ಬುದ್ಧಿ ಇತ್ಯಾದಿಗಳ ಶಕ್ತಿ ಸಾಮರ್ಥ್ಯಗಳನ್ನು ಮತ್ತು ಉಪಯೋಗಗಳನ್ನು ನಿರಾಕರಿಸಲಿಲ್ಲ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ। ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ (ಈಶ 2) (ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಬದುಕಲು ಆಶಿಸಬೇಕು. ಇದುವೇ ಬದುಕುವ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವ ಮಾರ್ಗವೂ ಇಲ್ಲ. ಹೀಗೆ ಬಾಳುವವರಿಗೆ ಕರ್ಮಫಲ ಅಂಟುವುದಿಲ್ಲ) ಎಂದು ಬೋಧಿಸುವ ಉಪನಿಷತ್ತನ್ನು ಯಾರಾದರೂ ಜೀವನ ವಿರೋಧಿ ಎಂದು ನಿರ್ಣಯಿಸಬಹುದೇ?

ಉಪನಿಷತ್ತು ತರ್ಕಬದ್ಧವಾದ ಒಂದು ಸಿದ್ಧಾಂತವನ್ನು ಮಂಡಿಸುವುದಿಲ್ಲ ಎಂಬ ಆಕ್ಷೇಪಣೆ ಸ್ವಲ್ಪಮಟ್ಟಿಗೆ ನಿಜ. ಏಕೆಂದರೆ ಸಿದ್ಧಾಂತ ಮಂಡನೆ ಉಪನಿಷತ್ತುಗಳ ಉದ್ದೇಶವೇ ಆಗಿರಲಿಲ್ಲ. ಎಲ್ಲ ಸಿದ್ಧಾಂತಗಳಿಗೂ ಅನುಭಾವವೇ ಅಡಿಗಲ್ಲಾಗಿದೆ. ಆ ಅನುಭಾವವನ್ನು ನಿರ್ವಚಿಸುವ ಉಪನಿಷತ್ತು ಸಿದ್ಧಾಂತ, ಪ್ರಮೇಯಗಳನ್ನು ಪ್ರತಿಪಾದಿಸುವ ಬೌದ್ಧಿಕ ಗೊಡವೆಯನ್ನು ಅನ್ಯರಿಗೆ ಬಿಟ್ಟುಕೊಟ್ಟಿದೆ.

(ಮುಂದುವರಿಯುವುದು)

(ಲೇಖಕರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು)

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಮಹಾರಥಿಗಳ ಘರ್ಷಣೆ

ಯುದ್ಧದೊಳಗೊಂದು ಯುದ್ಧ ನಡೆಯುವುದಕ್ಕೆ ಜಾರ್ಖಂಡ್ ರಾಜ್ಯ ಸಾಕ್ಷಿಯಾಗಲಿದೆ. ಕಾರಣ, ಲೋಕಸಭೆಯಲ್ಲಿ ತನ್ನ ಉಪನಾಯಕ ಗೌರವ್ ಗೊಗೊಯ್‌ರನ್ನು ಕಾಂಗ್ರೆಸ್ ಪಕ್ಷವು ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಹಿರಿಯ ಸಂಯೋಜಕರನ್ನಾಗಿ ನೇಮಿಸಿದ್ದು, ಅವರು ಜಾರ್ಖಂಡ್ ಪಾಲಿಗೆ ಬಿಜೆಪಿಯ 'ಸಹ-ಉಸ್ತುವಾರಿ' ಎನಿಸಿಕೊಂಡಿರುವ ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಿಗೆದುರಾಗಿ ತೊಡೆತಟ್ಟಬೇಕಾಗಿ ಬಂದಿದೆ. ಹೀಗಾಗಿ ಈ ಅತಿರಥ-ಮಹಾರಥರು ತಮ್ಮದೇ ಆದ ನೆಲೆಯಲ್ಲಿ ಪೈಪೋಟಿಗೆ ಇಳಿದಿದ್ದಾರಂತೆ. ಒಂದೆಡೆ ಶರ್ಮಾ ಅವರು ಜಾರ್ಖಂಡ್‌ನಲ್ಲಿ ಆದಿವಾಸಿಗಳನ್ನು ಓಲೈಸುತ್ತಿದ್ದರೆ, ಮತ್ತೊಂದೆಡೆ ಅಸ್ಸಾಂನ ಚಹಾ ಬುಡಕಟ್ಟು ಜನಾಂಗದವರಿಗೆ ನೀಡಿದ್ದ ಭರವಸೆಯನ್ನು ಬಿಜೆಪಿಯು ಈಡೇರಿಸದಿರುವುದನ್ನೇ ಅಸ್ತ್ರವಾಗಿಸಿಕೊಂಡು ಶರ್ಮಾರ ಉದ್ದೇಶವನ್ನು ಗೊಗೊಯ್ ಭಂಗಗೊಳಿಸಬಲ್ಲರು ಎಂದು ಕಾಂಗ್ರೆಸ್ ಲೆಕ್ಕಾಚಾರ ಹಾಕಿದೆಯಂತೆ. ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಗೊಗೊಯ್‌ರನ್ನು ಸೋಲಿಸಲೆಂದು ಆಡಳಿತಾರೂಢ ಬಿಜೆಪಿ ತನ್ನೆಲ್ಲ ಶಕ್ತಿಯನ್ನು ವಿನಿಯೋಗಿಸಿದರೂ, ಅಸ್ಸಾಂನ ಜೊರ್‌ಹಾಟ್ ಕ್ಷೇತ್ರವನ್ನು ಗೆಲ್ಲುವ ಮೂಲಕ ಗೊಗೊಯ್ ತಮ್ಮ ತಾಕತ್ತನ್ನು ತೋರಿಸಿದ್ದುಂಟು. ಈಗ ಜಾರ್ಖಂಡ್‌ನಲ್ಲೂ ಗೊಗೊಯ್ ತಮ್ಮ ಕಾರ್ಯತಂತ್ರ ಮೆರೆಯಲಿದ್ದಾರೆಯೇ ಎಂಬುದನ್ನು ಕಾದುನೋಡಬೇಕು.

ಅವರವರ ಭಾವಕ್ಕೆ...

ಕೋಲ್ಕತ್ತದಿಂದ ಬಂದಿರುವ ಸುದ್ದಿಯಿದು. ಮೂಲತಃ, ಮಲಯಾಳಂ ಚಿತ್ರನಟರಾಗಿದ್ದು ಪ್ರಸ್ತುತ ಕೇಂದ್ರದ ಪೆಟ್ರೋಲಿಯಂ, ನೈಸರ್ಗಿಕ ಅನಿಲ ಹಾಗೂ ಪ್ರವಾಸೋದ್ಯಮ ಖಾತೆಯ ರಾಜ್ಯ ಸಚಿವರಾಗಿರುವ ಸುರೇಶ್ ಗೋಪಿ ಅವರಿಗೆ (ಇವರು ಅಂಬರೀಷ್-ಸುಮಲತಾ- ಊರ್ವಶಿ ಅಭಿನಯದ ಕನ್ನಡದ 'ನ್ಯೂಡೆಲ್ಲಿ' ಚಿತ್ರದಲ್ಲೂ ನಟಿಸಿರುವುದು ನಿಮಗೆ ನೆನಪಿರಬಹುದು), ಕೋಲ್ಕತ್ತದಲ್ಲಿ ನೆಲೆಗೊಂಡಿರುವ 'ಸತ್ಯಜಿತ್ ರೇ ಫಿಲ್ಮ್ ಅ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್' (ಎಸ್‌ಆರ್‌ಎಫ್‌ಟಿಐ) ವಿದ್ಯಾರ್ಥಿಗಳು ಇತ್ತೀಚೆಗೆ 'Annihilation of Caste' ಎಂಬ ಪುಸ್ತಕವನ್ನು ಕೊಡುಗೆಯಾಗಿ ನೀಡಿದರಂತೆ. ಇದು ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿ ಎಂಬುದು ನಿಮ್ಮ ಗಮನಕ್ಕೆ.

ಸುರೇಶ್ ಗೋಪಿ ಅವರು, ''ಮುಂದಿನ ಜನ್ಮ ಎಂಬುದೇನಾದರೂ ಇದ್ದಲ್ಲಿ ನಾನೊಬ್ಬ ಬ್ರಾಹ್ಮಣನಾಗಿ ಹುಟ್ಟಲು ಬಯಸುವೆ'' ಎಂದು ಹಿಂದೊಮ್ಮೆ ಹೇಳಿ ಸಾಕಷ್ಟು ವಿವಾದವನ್ನು ಹುಟ್ಟುಹಾಕಿದ್ದುಂಟು. ಅದನ್ನು ನೆನಪಿನಲ್ಲಿಟ್ಟುಕೊಂಡಿರುವ ಅವರ ಟೀಕಾಕಾರರು, ''ಎಸ್‌ಆರ್‌ಎಫ್‌ಟಿಐ ಸೊಸೈಟಿಯ ಅಧ್ಯಕ್ಷರೂ ಆಗಿರುವ ಸುರೇಶ್ ಗೋಪಿಯವರಿಗೆ ಒಂದು ಸಂದೇಶ ನೀಡುವ ಆಶಯದೊಂದಿಗೇ ಈ ವಿದ್ಯಾರ್ಥಿಗಳು ಹೀಗೆ ಕೊಡುಗೆ ನೀಡಿದಂತಿದೆ; ಜಾತಿ ಸಂಬಂಧಿತ ವಿಷಯಗಳ ಕುರಿತಾಗಿ ಅಗತ್ಯವಿರುವ ಬಹುಪಾಲು ಮಾರ್ಗದರ್ಶನವನ್ನು ಈ ಪುಸ್ತಕ ಗೋಪಿ ಅವರಿಗೆ ನೀಡಬಲ್ಲದು'' ಎಂದು ಹೇಳುತ್ತಾ ಸಂಭ್ರಮಿಸುತ್ತಿದ್ದಾರಂತೆ!

ಎಲ್ಲಾ ಅವರವರ ಭಾವಕ್ಕೆ...!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 308

ಸಮಾಚಾರ ಸಣ್ಣದಲ್ಲ

ಶ್ರೀಲಂಕಾ ನೌಕಾಪಡೆ; 12 ಮೀನುಗಾರರ ಸೆರೆ

ಕೊಲಂಬೊ: ಸಮುದ್ರದ ಗಡಿ ದಾಟಿ ಮೀನುಗಾರಿಕೆಯಲ್ಲಿ ತೊಡಗಿದ್ದ ಆರೋಪದಡಿ 12 ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಭಾನುವಾರ ಬಂಧಿಸಿ, ದೋಣಿಗಳನ್ನು ವಶಪಡಿಸಿಕೊಂಡಿದೆ. ಇದರೊಂದಿಗೆ ಲಂಕಾದಲ್ಲಿ ಈ ವರ್ಷ ಬಂಧನಕ್ಕೆ ಒಳಗಾದ ಭಾರತೀಯ ಮೀನುಗಾರರ ಸಂಖ್ಯೆ 462ಕ್ಕೇರಿದೆ. 62 ಭಾರತೀಯ ಮೀನುಗಾರಿಕೆ ದೋಣಿಗಳನ್ನು ವಶಪಡಿಸಿಕೊಂಡಿದೆ. ಉತ್ತರ ಪ್ರಾಂತ್ಯದ ಜಾಫ್ನಾ, ಪೆಡ್ರೊ ಕರಾವಳಿಯಲ್ಲಿ 12 ಮೀನುಗಾರರನ್ನು ಬಂಧಿಸಿ ಕಂಕಸಂತುರೈ ಬಂದರಿಗೆ ಕರೆದೊಯ್ದು ಮುಂದಿನ ಕಾನೂನು ಕ್ರಮಕ್ಕಾಗಿ ಮೈಲಾಡಿ ಮೀನುಗಾರಿಕಾ ಇನ್ಸ್ಪೆಕ್ಟರ್ ವಶಕ್ಕೆ ಒಪ್ಪಿಸಲಾಗಿದೆ ಎಂದು ಲಂಕಾ ನೌಕಾಪಡೆ ಹೇಳಿದೆ. ಭಾರತ-ಲಂಕಾ ನಡುವಿನ ಬಾಂಧವ್ಯದಲ್ಲಿ ಮೀನುಗಾರರ ಬಂಧನ ವಿಚಾರವೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ಸಮಸ್ಯೆ ಕುರಿತು ಚರ್ಚಿಸಲು 12 ಸದಸ್ಯರ ಭಾರತೀಯ ನಿಯೋಗ ಮಂಗಳವಾರ ಕೊಲಂಬೊಗೆ ಬರಲಿದೆ ಎಂದು ಶ್ರೀಲಂಕಾ ಮೀನುಗಾರಿಕೆ ಸಚಿವಾಲಯ ತಿಳಿಸಿದೆ.

ನುಸುಳುವಿಕೆ ತಡೆದರಷ್ಟೇ ಪ.ಬಂಗಾಳ ಶಾಂತ: ಶಾ

ಕೋಲ್ಕತ್ತ: ಒಳನುಸುಳುವಿಕೆ ತಡೆದರೆ ಮಾತ್ರವೇ ಪಶ್ಚಿಮ ಬಂಗಾಳದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಗಡಿಯ ಪೆಟ್ರಾಪೋಲ್ ಲ್ಯಾಂಡ್ ಪೋರ್ಟ್‌ನಲ್ಲಿ 500 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಿದ ಟರ್ಮಿನಲ್ ಅನ್ನು(ಪ್ರಯಾಣಿಕರ ನೂತನ ಟರ್ಮಿನಲ್) ಭಾನುವಾರ ಉದ್ಘಾಟಿಸಿದ ಅಮಿತ್ ಶಾ, 2026ರಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಅಕ್ರಮ ವಲಸೆ ತಡೆಯಲಾಗುವುದು ಎಂದರು. ದೇಶದಲ್ಲಿ ಶಾಂತಿ ನೆಲೆಸಲು ಭೂಬಂದರುಗಳ ಪಾತ್ರ ಬಹಳ ಪ್ರಮುಖ. ಬಾಂಗ್ಲಾ-ಭಾರತ ಸಂಬಂಧ ಉತ್ತಮವಾಗಿರಲು ಗಡಿಗಳಲ್ಲಿ ನುಸುಳುವಿಕೆ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಹೇಳಿದರು. ಹೊಸ ಟರ್ಮಿನಲ್ 60,000 ಚ.ಮೀ, ವಿಸ್ತಾರವಾಗಿದ್ದು, ನಿತ್ಯ 25 ಸಾವಿರ ಪ್ರಯಾಣಿಕರನ್ನು ನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿದೆ.

ಭಾನುವಾರವೂ 50 ವಿಮಾನಕ್ಕೆ ಬೆದರಿಕೆ

ದೆಹಲಿ: ಭಾರತೀಯ ವಿಮಾನಯಾನ ಸಂಸ್ಥೆಗಳ 50 ವಿಮಾನಗಳಿಗೆ ಭಾನುವಾರವೂ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಇದರೊಂದಿಗೆ 14 ದಿನಗಳಲ್ಲಿ ಭಾರತದ 350ಕ್ಕೂ ಹೆಚ್ಚು ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆಗಳು ಬಂದಂತಾಗಿದೆ. 15 ವಿಮಾನಗಳಿಗೆ ಬೆದರಿಕೆ ಸಂದೇಶ ಬಂದಾಗ ಪೂರ್ಣ ತಪಾಸಣೆ ನಡೆಸಿ ಬಳಿಕ ಎಲ್ಲಾ ವಿಮಾನಗಳು ಹಾರಾಟ ಆರಂಭಿಸಲಾಯಿತು ಎಂದು ಆಕಾಶ ಏರ್ ಸಂಸ್ಥೆ ಭಾನುವಾರ ತಿಳಿಸಿದೆ. ಇಂಡಿಗೋ ಸಂಸ್ಥೆಯ 18 ಮತ್ತು ವಿಸ್ತಾರದ 17 ವಿಮಾನಗಳಿಗೆ ಬೆದರಿಕೆ ಸಂದೇಶಗಳು ಬಂದಿವೆ ಎನ್ನಲಾಗಿದೆ.

ಹಗೆ ಬಿಡಿ ಸಂಯಮ ಇರಲಿ: ಭಾರತ ಸಲಹೆ

ದೆಹಲಿ: ಇರಾನ್ ಮೇಲೆ ಇಸ್ರೇಲ್ 100ಕ್ಕೂ ಅಧಿಕ ಯುದ್ಧ ವಿಮಾನಗಳಿಂದ ದಾಳಿ ನಡೆಸಿದ ನಂತರ ಮಧ್ಯಪ್ರಾಚ್ಯದಲ್ಲಿ ಮತ್ತೊಮ್ಮೆ ಯುದ್ಧಭೀತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಭಾರತ, ಯುದ್ಧದ ಬದಲು ಮಾತುಕತೆ ಮತ್ತು ರಾಜತಾಂತ್ರಿಕ ಕ್ರಮಗಳ ಮೂಲಕ ಸಮಸ್ಯೆ ಪರಿಹಾರ ಕಂಡುಕೊಳ್ಳಲು ಒತ್ತಾಯಿಸಿದೆ. ಯುದ್ಧ ಮಾಡುವ ರಾಷ್ಟ್ರಗಳು ಹಗೆತನದಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂಬುದನ್ನು ತಿಳಿಯಬೇಕು. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಅಶಾಂತಿ ಮತ್ತು ಅಸ್ಥಿರತೆ ಕಂಡು ಭಾರತ ತೀವ್ರ ಕಳವಳಗೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ಮಣಿಪುರ; ಮತ್ತೆ ಗುಂಡಿನ ಮೊರೆತ

ಇಂಫಾಲ: ಮಣಿಪುರದಲ್ಲಿನ ಎರಡು ವಿಭಿನ್ನ ಸ್ಥಳಗಳಲ್ಲಿ ಗುಂಡಿನ ದಾಳಿ ಮತ್ತು ಬಾಂಬ್ ಸ್ಫೋಟ ಘಟನೆಗಳು ವರದಿಯಾಗಿವೆ ಎಂದು ಭದ್ರತಾ ಪಡೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಇಂಫಾಲ ಪಶ್ಚಿಮ ಜಿಲ್ಲೆಯ ಕೊಟ್ರುಕ್ ಚಿಂಗ್ ಲೈಕೈ ಗ್ರಾಮದ ಮೇಲೆ ಕುಕಿ ಉಗ್ರರು ದಾಳಿ ಮಾಡಲೆತ್ನಿಸಿದರು. ಅದರ ಬೆನ್ನಲ್ಲೇ ಪ್ರಾದೇಶಿಕ ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿವೆ ಎಂದು ಪೊಲೀಸರು ಹೇಳಿದ್ದಾರೆ.

ಕುಕಿ ಉಗ್ರರು ಶನಿವಾರ ರಾತ್ರಿ 9.15ರಲ್ಲಿ ಗೆಲ್ಜಾಂಗ್ ಮತ್ತು ಮೊಲ್ಡಾಂಗ್ ಪ್ರದೇಶಗಳಿಂದ ಗುಂಡಿನ ದಾಳಿ ನಡೆಸಿದರು. ರಾಜ್ಯ ಪಡೆಗಳು ಮತ್ತು ಗ್ರಾಮಗಳ ಸ್ವಯಂಸೇವಕರು ಪ್ರತಿದಾಳಿ ನಡೆಸಿದರು ಎಂದು ಪೊಲೀಸರು ಹೇಳಿದ್ದಾರೆ. ಗುಂಡಿನ ದಾಳಿ 4 ಗಂಟೆಗಳ ಕಾಲ ಮುಂದುವರಿಯಿತು ಎಂದು ಸ್ಥಳೀಯರು ಹೇಳಿದ್ದಾರೆ.

{ಎಸ್.ಜೈಶಂಕರ್} ವಿದೇಶಾಂಗ ಸಚಿವ

ಡೆಪ್ಸಾಂಗ್, ಡೆಮ್‌ಚೋಕ್‌ನಲ್ಲಿ ಭಾರತ-ಚೀನಾ ಸೇನೆ ವಾಪಸ್ ಪ್ರಕ್ರಿಯೆಗೆ ಸ್ವಲ್ಪ ಸಮಯ ಹಿಡಿಯಲಿದೆ. ಒಪ್ಪಂದದ ಪೂರ್ಣ ಅಂಶಗಳು ಜಾರಿಗೊಂಡ ಬಳಿಕ ಪೂರ್ವ ಲಡಾಕ್ ಗಡಿಯ ವಾಸ್ತವ ನಿಯಂತ್ರಣ ರೇಖೆ ಬಳಿ 2020ರ ಮೇ ಗೂ ಮುಂಚೆ ಇದ್ದ ಸ್ಥಿತಿಯ ಮರು ನಿರ್ಮಾಣವಾಗಲಿದೆ. ಸೇನೆ ವಾಪಸ್ ಮೊದಲ ಹೆಜ್ಜೆ. ನಂತರ ಉದ್ವಿಗ್ನತೆ ಶಮನ.

ಮನ್ ಕಿ ಬಾತ್-115ರಲ್ಲಿ ಪ್ರಧಾನಿ ನರೇಂದ್ರ ಮೋದಿ ಜಾಗೃತಿ | ಅನಿಮೇಷನ್ ಉದ್ಯಮದಲ್ಲಿ ಭಾರತದಲ್ಲಿ ನವಕ್ರಾಂತಿ ವಿಶ್ವಾಸ | ಒಂದು ಕಾಲದ ಆಮದುದಾರ ದೇಶ ಈಗ ಸಮರ್ಥ ರಫ್ತುದಾರ

ಡಿಜಿಟಲ್ ಅರೆಸ್ಟ್-ಭಯ ಬಿಡಿ, ಜಾಗೃತರಾಗಿ

ದೆಹಲಿ: ಡಿಜಿಟಲ್ ಅರೆಸ್ಟ್ ಎಂಬ ಸೈಬರ್ ಅಪರಾಧ ಬಗ್ಗೆ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಸೈಬರ್ ಕ್ರೈಂ ಹಗರಣಗಳು ಇಂದು ಎಲ್ಲಾ ವರ್ಗದ ಜನರ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಇಂಥ ಸಂದರ್ಭ ಜನರು ಚಿಂತೆಗೀಡಾಗುವುದನ್ನು ನಿಲ್ಲಿಸಿ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಮುಂದಾಗಬೇಕು ಎಂದು ಜಾಗೃತಿ ಮೂಡಿಸಿದರು.

ಮಾಸದ ಕೊನೆಯ ಭಾನುವಾರ ತಮ್ಮ ಬಲು ಇಷ್ಟದ ಚಟುವಟಿಕೆ 'ಮನ್ ಕಿ ಬಾತ್' ನಡೆಸಿಕೊಟ್ಟಿರುವ ಪ್ರಧಾನಿ ಮೋದಿ, ಸೈಬರ್ ಅಪರಾಧಗಳ ಸಮಸ್ಯೆ ಎದುರಿಸಲು ಕೇಂದ್ರದ ತನಿಖಾ ಸಂಸ್ಥೆಗಳು ರಾಜ್ಯ ಸರಕಾರಗಳ ಜತೆ ಕೆಲಸ ಮಾಡುತ್ತಿವೆ. ಈ ಅಪರಾಧಗಳಿಂದ ರಕ್ಷಿಸಿಕೊಳ್ಳುವಲ್ಲಿ ಜಾಗೃತಿ ಅಗತ್ಯ ಎಂದರು. ಅಪರಾಧಿಗಳು ತನಿಖಾ ಸಂಸ್ಥೆ ಅಧಿಕಾರಿಗಳಂತೆ ಹೇಗೆ ಪೋಸ್ ನೀಡುತ್ತಾರೆ ಎಂಬುದನ್ನು ತೋರಿಸಲು ಪ್ರಧಾನಿ ವಿಡಿಯೊವೊಂದನ್ನು ಇದೇ ವೇಳೆ ಪ್ರದರ್ಶಿಸಿದರು.

ಡಿಜಿಟಲ್ ವಂಚನೆಗಳ ಬಗ್ಗೆ ಜನತೆ ಎಚ್ಚರದಿಂದಿರಬೇಕು. ಯಾವುದೇ ತನಿಖಾ ಸಂಸ್ಥೆಯು ಫೋನ್ ಅಥವಾ ವಿಡಿಯೊ ಕರೆ ಮೂಲಕ ಜನರನ್ನು ಸಂಪರ್ಕಿಸಿ ವಿಚಾರಣೆಗೆ ಗುರಿಪಡಿಸುವುದಿಲ್ಲ ಎಂದು ಮೋದಿ ಜಾಗೃತಿ ಮೂಡಿಸಲೆತ್ನಿಸಿದ್ದಾರೆ.

ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಪರ್ಕಿಸಲು ಅಥವಾ ಅದರ ಪೋರ್ಟಲ್‌ಗೆ ಸಂಪರ್ಕ ಸಾಧಿಸಲು 1930 ಸಂಖ್ಯೆಗೆ ಕರೆ ಮಾಡಿ, ಅಪರಾಧ ಘಟನೆ ಬಗ್ಗೆ ಪೊಲೀಸರಿಗೆ ತಿಳಿಸಿ. ವಂಚಕರ ಕರೆ ಬಂದಾಗ ಸಂಭಾಷಣೆ ರೆಕಾರ್ಡ್ ಮಾಡಿ ಸ್ಕ್ರೀನ್ ಶಾಟ್‌ಗಳನ್ನು ಸಂಗ್ರಹಿಸಿಟ್ಟುಕೊಂಡು ಪೊಲೀಸರಿಗೆ ದೂರು ನೀಡಿ ಎಂದರು.

ಸಮನ್ವಯ ಜಾಲ: ಕಾನೂನಿನಲ್ಲಿ ಡಿಜಿಟಲ್ ಬಂಧನ ಎಂಬುದೇನೂ ಇಲ್ಲ. ಅದೊಂದು ಸುಳ್ಳು, ಅಪರಾಧಿಗಳ ಗುಂಪಿನ ವಂಚನೆಯ ಜಾಲ. ಇದನ್ನು ನಡೆಸುತ್ತಿರುವವರು ಸಮಾಜದ ಶತ್ರುಗಳು. ಡಿಜಿಟಲ್ ಬಂಧನ ಹೆಸರಲ್ಲಿ ನಡೆಯುತ್ತಿರುವ ವಂಚನೆಯನ್ನು ತಡೆಯಲು ರಾಜ್ಯ ಸರಕಾರಗಳ ಸಹಯೋಗದಲ್ಲಿ ವಿವಿಧ ತನಿಖಾ ಸಂಸ್ಥೆಗಳು ಶ್ರಮಿಸುತ್ತಿವೆ. ಇಂಥ ತನಿಖಾ ಏಜೆನ್ಸಿ ಮತ್ತು ಸರಕಾರಗಳ ನಡುವೆ ಸಮನ್ವಯ ಸಾಧಿಸಲು ರಾಷ್ಟ್ರೀಯ ಸೈಬರ್ ಕೋ-ಆರ್ಡಿನೇಷನ್ ಸೆಂಟರ್ ಸ್ಥಾಪಿಸಲಾಗಿದೆ ಎಂದು ಪ್ರಧಾನಿ ಹೇಳಿದರು.



ಪಟೇಲ್, ಬಿರ್ಸಾ 150ನೇ ಜಯಂತಿ

ಮನ್ ಕಿ ಬಾತ್ 115ನೇ ಸಂಚಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ತಮ್ಮ ಜೀವನದ ಪ್ರಮುಖ ಕ್ಷಣಗಳನ್ನು ನೆನಪಿಸಿಕೊಂಡಿದ್ದಾರೆ. ಸದ್ಯದಲ್ಲೇ ಇಬ್ಬರು ಮಹಾಪುರುಷರ 150ನೇ ಜಯಂತಿ ಆಚರಿಸಲಿದ್ದೇವೆ. ಸರದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮ ದಿನಾಚರಣೆ ವರ್ಷ ಅ.31ರಂದು ನಡೆಯಲಿದ್ದರೆ, ಲಾರ್ಡ್ ಬಿರ್ಸಾ ಮುಂಡಾ ಅವರ 150ನೇ ಜನ್ಮ ವಾರ್ಷಿಕೋತ್ಸವ ನ.15ರಂದು ಜರುಗಲಿದೆ ಎಂದರು. ಜಾರ್ಖಂಡ್‌ನ ಪ್ರಮುಖ ನಾಯಕ, ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮಸ್ಥಳಕ್ಕೆ ಭೇಟಿ ನೀಡುವ ಅವಕಾಶ ನನಗೆ ಸಿಕ್ಕಿತ್ತು ಎಂದು ನೆನಪಿಸಿಕೊಂಡಿದ್ದಾರೆ.

ಅನಿಮೇಷನ್ ಕ್ಷೇತ್ರದಲ್ಲಿ ಭಾರತ ನವಕ್ರಾಂತಿ

ಅನಿಮೇಷನ್ ಉದ್ಯಮ ಕ್ಷೇತ್ರದಲ್ಲಿ ಭಾರತ ಹೊಸ ಕ್ರಾಂತಿಯನ್ನೇ ಉಂಟು ಮಾಡಲಿದೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದ್ದಾರೆ. 'ಮೇಕ್ ಇನ್ ಇಂಡಿಯ'ದ(ಭಾರತದಲ್ಲೇ ತಯಾರಿಸಿ) ಧನಾತ್ಮಕ ಬೆಳವಣಿಗೆಯನ್ನು ಉಲ್ಲೇಖಿಸಿ ಸಂತಸ ವ್ಯಕ್ತಪಡಿಸಿದರು. ಈ ವೇಳೆ ಅನಿಮೇಟೆಡ್ ಧಾರಾವಾಹಿಗಳ ಕುರಿತು ಮಾತನಾಡಿದರು.

ಮೋಟು-ಪಟ್ಲು ಧಾರಾವಾಹಿ: ಅನಿಮೇಟೆಡ್ ಧಾರಾವಾಹಿಗಳ ಕುರಿತು ಮಾತನಾಡಿದ ಮೋದಿ, ದೇಶದಲ್ಲಿ ಈಗ ಸೃಜನಶೀಲತೆಯ ಅಲೆ ನಡೆಯುತ್ತಿದೆ. ಟಿವಿಯಲ್ಲಿ ಮೊದಲಿಗೆ 'ಛೋಟಾ ಭೀಮ್' ಬಂದಾಗ ಮಕ್ಕಳು ತುಂಬಾ ಸಂಭ್ರಮಿಸಿದ್ದರು. ಇತರೆ ಅನಿಮೇಟೆಡ್ ಧಾರಾವಾಹಿಗಳಾದ ಮೋಟು-ಪಟ್ಲು, ಹನುಮಾನ್ ಕೂಡಾ ಅಷ್ಟೇ ಜನಪ್ರಿಯವಾಗಿವೆ. ಭಾರತದಲ್ಲಷ್ಟೇ ಅಲ್ಲ, ವಿಶ್ವದ ವಿವಿಧೆಡೆಯೂ ಭಾರತದ ಈ ಅನಿಮೇಷನ್ ಸರಣಿಗಳು ಜನಪ್ರಿಯವಾಗಿವೆ ಎಂದು ಸಂತಸ ವ್ಯಕ್ತಪಡಿಸಿದರು. ಭಾರತವನ್ನು, ಭಾರತದ ಈ ಪ್ರತಿಭೆಗಳನ್ನು ಇನ್ನಷ್ಟು ಪ್ರೋತ್ಸಾಹಿಸಿ ಬಲಪಡಿಸಬೇಕಿದೆ ಎಂದು ಹೇಳಿದರು.

ಇಂದು ಅನಿಮೇಷನ್ ಕ್ಷೇತ್ರ ಇತರ ಉದ್ಯಮಗಳಿಗೆ ಬಲ ನೀಡುವ ಉದ್ಯಮವಾಗಿ ರೂಪುಗೊಂಡಿದೆ, ವಿಆರ್ ಪ್ರವಾಸೋದ್ಯಮ ಇತ್ತೀಚಿನ ದಿನಗಳಲ್ಲಿ ಬಹಳ ಪ್ರಸಿದ್ಧವಾಗಿದೆ. ನೀವು ಕುಳಿತಲ್ಲೇ ಜಗದ್ವಿಖ್ಯಾತ ಅಜಂತಾ ಗುಹೆಗಳನ್ನು ವರ್ಚುವಲ್ ಪ್ರವಾಸದ ಮೂಲಕ ವೀಕ್ಷಿಸಿ ಸಂಭ್ರಮಿಸಬಹುದು. ವರ್ಚುವಲ್ ಪ್ರವಾಸದಲ್ಲೇ ನೀವಿಲ್ಲಿ ನಡೆಯಬಹುದು. ಕೋನಾರ್ಕ್ ದೇವಾಲಯದ ಕಾರಿಡಾರ್‌ನಲ್ಲಿ ಹೆಜ್ಜೆ ಹಾಕಬಹುದು, ವಾರಾಣಸಿಯ ಘಟ್ಟಗಳನ್ನು ಕಂಡು ಆನಂದಿಸಬಹುದು ಎಂದು ಡಿಜಿಟಲ್ ಕ್ಷೇತ್ರದ ಆಗುಹೋಗುಗಳನ್ನು ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿದರು. ಪ್ರವಾಸಿ ಸ್ಥಳಗಳ ವರ್ಚುವಲ್ ಪ್ರವಾಸವು ಜನರ ಮನಸ್ಸಿನಲ್ಲಿ ಕುತೂಹಲ ಮೂಡಿಸುವ ಮಾಧ್ಯಮವಾಗಿದೆ ಎಂದು ಗಮನ ಸೆಳೆದರು.

ಅನಿಮೇಷನ್ ಕ್ಷೇತ್ರವೇ ಭವಿಷ್ಯ: ಸ್ವಾವಲಂಬಿ ಭಾರತ ಅಭಿಯಾನ ಸಾಮೂಹಿಕವಾಗುತ್ತಿದೆ ಮತ್ತು ಪ್ರತಿ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದೇವೆ. ಉದಾ: ಈ ತಿಂಗಳು ನಾವು ಏಷ್ಯಾದ ಅತಿದೊಡ್ಡ ಇಮೇಜಿಂಗ್ ಟೆಲಿಸ್ಕೋಪನ್ನು ಲಡಾಖ್‌ನ ಹಾನ್ಲೆಯಲ್ಲಿ 4300 ಮೀ. ಎತ್ತರದಿಂದ ಉದ್ಘಾಟಿಸಿದ್ದೇವೆ ಎಂದರು.

ತಂತ್ರಜ್ಞಾನ-ತಯಾರಿಕೆ ಕ್ಷೇತ್ರದಲ್ಲಿ ದಾಪುಗಾಲು!

10 ವರ್ಷಗಳ ಹಿಂದೆ, ಭಾರತದಲ್ಲಿ ಯಾವುದೇ ಸಂಕೀರ್ಣ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು ಎಂದು ಯಾರಾದರೂ ಹೇಳಿದರೆ, ಅನೇಕ ಜನರು ಅದನ್ನು ನಂಬುತ್ತಿರಲಿಲ್ಲ. ಅನೇಕರು ಅದನ್ನು ಅಪಹಾಸ್ಯ ಮಾಡುತ್ತಿದ್ದರು. ಆದರೆ ಇಂದು ಅದೇ ಜನ ಈಗಿನ ಬೆಳವಣಿಗೆ ಕಂಡು ಆಶ್ಚರ್ಯಚಕಿತರಾಗಿದ್ದಾರೆ. ಒಂದು ಕಾಲದಲ್ಲಿ ಮೊಬೈಲ್ ಫೋನ್‌ಗಳನ್ನು ಆಮದು ಮಾಡಿಕೊಳ್ಳಬೇಕಿದ್ದ ಭಾರತ ಈಗ ಸ್ಮಾರ್ಟ್‌ಫೋನ್ ರಫ್ತುದಾರನಾಗಿ ಬೆಳೆದಿದೆ. ರಕ್ಷಣಾ ಸಾಧನಗಳ ಅತಿದೊಡ್ಡ ಖರೀದಿದಾರನಾಗಿದ್ದುಕೊಂಡೇ ದೇಶದಲ್ಲೂ ರಕ್ಷಣಾ ಸಾಮಗ್ರಿಗಳನ್ನು ದೊಡ್ಡ ಮಟ್ಟದಲ್ಲಿ ತಯಾರಿಸಿ 85 ದೇಶಗಳಿಗೆ ರಫ್ತು ಮಾಡುವಂತಾಗಿದೆ. ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಭಾರತದ ಸಾಧನೆ ಅದ್ವಿತೀಯ. ಚಂದ್ರನ ದಕ್ಷಿಣ ಧ್ರುವದಲ್ಲಿ ಉಪಗ್ರಹವನ್ನು ಸುರಕ್ಷಿತವಾಗಿ ಇಳಿಸಿದ ಮೊದಲ ದೇಶ ಭಾರತ. ಸದ್ಯ ಸೂರ್ಯ ಅಧ್ಯಯನ ನಡೆಯುತ್ತಿದೆ. ಮಾನವ ಸಹಿತ ಗಗನಯಾನಕ್ಕೆ ಸಿದ್ಧತೆಯಾಗುತ್ತಿದೆ. ಅಷ್ಟೇ ಅಲ್ಲ, ಭಾರತ ತನ್ನದೇ ಆದ ಅಂತರಿಕ್ಷ ನಿಲ್ದಾಣವನ್ನೂ ನಿರ್ಮಿಸಲು ಮುಂದಾಗಿದೆ ಎಂದು ಹೆಮ್ಮೆಯಿಂದ ವಿವರಿಸಿದರು.

ನ.5ರಂದು ಅಮೆರಿಕ ಅಧ್ಯಕ್ಷೀಯ ಚುನಾವಣೆ | ಮತದಾನ ದಿನಕ್ಕೂ ಮುನ್ನ 'ಆರಂಭಿಕ ಪ್ರಕ್ರಿಯೆ'

ವಾರ ಮುಂಚೆಯೇ 3 ಕೋಟಿ ಮತ ಚಲಾವಣೆ!

ವಾಷಿಂಗ್ಟನ್: ನವೆಂಬರ್ 5 ಹತ್ತಿರ ಬರುತ್ತಿದ್ದಂತೆಯೇ ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ಚಟುವಟಿಕೆ ಬಿರುಸು ಪಡೆದುಕೊಂಡಿದೆ. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹಾಗೂ ಡೆಮಾಕ್ರಟಿಕ್ ಪಕ್ಷದ ಸ್ಪರ್ಧಿ ಕಮಲಾ ಹ್ಯಾರಿಸ್ ಕೊನೆ ಹಂತದ ಪ್ರಚಾರ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಈ ಮಧ್ಯೆ ಚುನಾವಣೆಗೆ ನಿಗದಿಯಾದ ನ.5ರಂದು ಮತದಾನ ನಡೆಯಬೇಕಿದೆ. ಆದರೆ, ಆ ದಿನಕ್ಕೂ ಮುನ್ನವೇ, ಡಿಸ್ಟ್ರಿಕ್ಟ್ ಆಫ್ ಕೊಲಂಬಿಯ ಸೇರಿದಂತೆ ಕೆಲವು ರಾಜ್ಯಗಳಲ್ಲಿ 'ಆರಂಭಿಕ ಮತದಾನ'ಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಚುನಾವಣೆ ದಿನ ಮತಗಟ್ಟೆಗಳೆದುರು ಜನದಟ್ಟಣೆ ತಗ್ಗಿಸಲು ಮತ್ತು ಮತದಾನ ಸರಾಗಗೊಳಿಸಲು ಈ ಬಾರಿ 'ಆರಂಭಿಕ ಮತದಾನ ಪ್ರಕ್ರಿಯೆ' ನಡೆಸಲಾಗಿದೆ. ನಾಗರಿಕರಿಗೆ ಚುನಾವಣಾ ದಿನದ ಮೊದಲು ನೇರ ಮತಗಟ್ಟೆ ಬಂದು ಮತಪತ್ರ ಮೂಲಕ, ಇಲ್ಲವೇ ಇ-ಮೇಲ್ ಮೂಲಕ ಮತ ಚಲಾಯಿಸಲು ಅವಕಾಶವಿದೆ. ವಾಷಿಂಗ್ಟನ್ ಡಿಸಿ ಮತ್ತು 8 ರಾಜ್ಯಗಳಲ್ಲಿ ಇ ಮೇಲ್ ಮೂಲಕವೇ ಮತದಾನ ನಡೆಯಲಿದೆ.

ಈವರೆಗೆ 3 ಕೋಟಿ ಜನರು 'ಆರಂಭಿಕ ಮತದಾನ' ಪ್ರಕ್ರಿಯೆಯಲ್ಲಿ ಭಾಗಿಯಾಗಿ ತಮ್ಮ ಹಕ್ಕು ಚಲಾಯಿಸಿದ್ದಾರೆ. 65 ವರ್ಷ ದಾಟಿದವರೇ ಹೆಚ್ಚಿನ ಸಂಖ್ಯೆಯಲ್ಲಿ ಆರಂಭಿಕ ಮತದಾನ ಆಯ್ಕೆ ಬಳಸಿಕೊಂಡಿದ್ದಾರೆ. ಜಾರ್ಜಿಯದಲ್ಲಿ 26 ಲಕ್ಷ, ಉತ್ತರ ಕೆರೊಲಿನದಲ್ಲಿ 3.30 ಲಕ್ಷ ಮತ್ತು ದಕ್ಷಿಣ ಕೆರೊಲಿನದಲ್ಲಿ 1.25 ಲಕ್ಷ ಮತದಾರರು ಅ.24ರ ವೇಳೆಗೆ ಆರಂಭಿಕ ಮತ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರು ಎಂದು ತಿಳಿದುಬಂದಿದೆ.

ವರ್ಜೀನಿಯದ ಫೇರ್ ಫ್ಯಾಕ್ಸ್ ಕೌಂಟಿಯಲ್ಲಿನ ಆರಂಭಿಕ ಮತದಾನ ಕೇಂದ್ರಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರು ಸಾಲುಗಟ್ಟಿ ನಿಂತು ಮತ ಚಲಾಯಿಸಿದ್ದಾರೆ. ಫೇರ್‌ಫ್ಯಾಕ್ಸ್ ಕೌಂಟಿ ಡೆಮಾಕ್ರಟಿಕ್ ಪಕ್ಷದ ಸಾಂಪ್ರದಾಯಿಕ ಮತಗಳ ಪ್ರದೇಶ. ಈ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧೆ ಬಹಳ ಕಠಿಣವಾಗಲಿದೆ ಎಂದು ಸ್ಥಳೀಯರು ಪ್ರತಿಕ್ರಿಯಿಸಿದ್ದಾರೆ. ಫಲಿತಾಂಶ ನ.5ರಂದು ಪ್ರಕಟವಾಗಲಿದೆ.

ಮತದಾರರ ಅಭಿಪ್ರಾಯ!

ರಿಪಬ್ಲಿಕನ್ ಪಕ್ಷದ ಬೆಂಬಲಿಗರೊಬ್ಬರು ಡೊನಾಲ್ಡ್ ಟ್ರಂಪ್ ಅವರನ್ನು ಬೆಂಬಲಿಸಿ ಮಾತನಾಡಿ, ಟ್ರಂಪ್ ಕಮಾಂಡರ್-ಇನ್-ಚೀಫ್ ಆಗಲು ಎಲ್ಲಾ ಅರ್ಹತೆ ಹೊಂದಿದ್ದಾರೆ ಎಂದರು. ಕಾರು ವಿಮೆ ಶೇ.700ರಷ್ಟು ಹೆಚ್ಚಾಗಿದೆ. ಅದರಿಂದಾಗಿ ಉಳಿದ ವಸ್ತುಗಳ ಬೆಲೆಯೂ ಏರಿಕೆಯಾಗಿದೆ. ದಿನಬಳಕೆ ವಸ್ತುಗಳೂ ದುಬಾರಿಯಾಗಿವೆ. ಅದೆಲ್ಲಕ್ಕಿಂತ ಮುಖ್ಯವಾಗಿ ವಲಸೆಗಾರರ ಸಮಸ್ಯೆಯಿಂದ ಅಮೆರಿಕ ಪ್ರಜೆಗಳು ಭಯಗೊಂಡಿದ್ದಾರೆ. ಹಣದುಬ್ಬರ, ವಲಸೆ ಸಮಸ್ಯೆ ಈ ಚುನಾವಣೆಯ ಪ್ರಮುಖ ಅಂಶಗಳು ಎಂದರು. ಕಮಲಾ ಹ್ಯಾರಿಸ್ ಬೆಂಬಲಿಗರಾದ ಲೀ ಜೋರ್ಡಿ, ಅಮೆರಿಕದ ಒಕ್ಕೂಟದ ಸ್ಥಿತಿ ಮತ್ತು ಪ್ರಜಾಪ್ರಭುತ್ವ ಸಂರಕ್ಷಣೆ ವಿಚಾರಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಕಮಲಾ ಹ್ಯಾರಿಸ್ ಎಲ್ಲಾ ಅಮೆರಿಕನ್ನರ ಕಾಳಜಿ ವಹಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮತ್ತೊಬ್ಬ ಮತದಾರ ಜಾನಿ ಕ್ಸೇವಿಯರ್ ಕೂಡ ಹ್ಯಾರಿಸ್ ಅವರನ್ನು ಯೋಗ್ಯ ಅಭ್ಯರ್ಥಿ ಎಂದರು. ಹ್ಯಾರಿಸ್ ಉತ್ತಮ ಕೆಲಸ ಮಾಡಿದ್ದಾರೆ ಎಂದು ಪ್ರಶಂಸಿಸಿದರು.

ಬಾಂದ್ರಾ ಕಾಲ್ತುಳಿತ; 9 ಪ್ರಯಾಣಿಕರಿಗೆ ಗಾಯ

ಮುಂಬೈ: ಮಹಾರಾಷ್ಟ್ರದಲ್ಲಿನ ಮುಂಬೈ ಮಹಾ ನಗರದ ಬಾಂದ್ರಾ ಟರ್ಮಿನಲ್ ರೈಲು ನಿಲ್ದಾಣದಲ್ಲಿ ಭಾನುವಾರ ಪ್ರಯಾಣಿಕರು ಒಮ್ಮೆಲೇ ರೈಲು ಹತ್ತಲು ನುಗ್ಗಾಟ ನಡೆಸಿದ್ದರಿಂದ ಕಾಲ್ತುಳಿತವಾಗಿ 9 ಜನ ಗಾಯಗೊಂಡಿದ್ದಾರೆ.

ಬಾಂದ್ರಾ-ಗೋರಖ್‌ಪುರ ಎಕ್ಸ್‌ಪ್ರೆಸ್ ರೈಲು ಹೊರಡುವ ಮುನ್ನ ಪ್ಲಾಟ್‌ಫಾರ್ಮ್ ಸಂಖ್ಯೆ 1ರಲ್ಲಿ ನಸುಕಿನ 5.56 ವೇಳೆ ಅವಘಡ ನಡೆದಿದೆ. ದೀಪಾವಳಿ ಹಬ್ಬಕ್ಕೆ ಊರಿಗೆ ಹೋಗಲು ಸಾವಿರಾರು ಜನ ಬಂದಿದ್ದರಿಂದ ರೈಲು ನಿಲ್ದಾಣದಲ್ಲಿ ವಿಪರೀತ ಜನಜಂಗುಳಿಯಾಗಿದೆ. ಹಾಗಾಗಿಯೇ ಕಾಲ್ತುಳಿತವಾಗಿದೆ ಎಂದು ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಶನ್ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಗ್ಗೆ ಬಾಂದ್ರಾದಿಂದ ಗೋರಖ್‌ಪುರಕ್ಕೆ ಚಲಿಸುವ ರೈಲು ಪ್ಲಾಟ್‌ಫಾರ್ಮ್ ಒಂದನ್ನು ತಲುಪಿದ ಮರುಕ್ಷಣವೇ ಪ್ರಯಾಣಿಕರ ದೊಡ್ಡ ಗುಂಪು ರೈಲು ಏರಲು ಒಮ್ಮೆಲೇ ನುಗ್ಗಿದ್ದರಿಂದ ಕೆಲವರು ಕಾಲು ಜಾರಿ ಕೆಳಗೆ ಬಿದ್ದರು. ಹಿಂದಿದ್ದವರು ಬಿದ್ದವರ ಮೇಲೆಯೇ ಕಾಲಿಟ್ಟು ರೈಲನ್ನೇರಿದರು. ಪರಿಣಾಮ 9 ಮಂದಿ ಗಾಯಗೊಂಡು, ಪ್ಲಾಟ್‌ಫಾರ್ಮ್ ನೆಲದ ಮೇಲೆ ರಕ್ತ ಹರಿಯಿತು. ರೈಲ್ವೆ ಪೊಲೀಸರು ಮತ್ತು ಇತರ ಪ್ರಯಾಣಿಕರು ಗಾಯಗೊಂಡವರನ್ನು ಸ್ಟ್ರೆಚರ್ ಮೂಲಕ ಆಸ್ಪತ್ರೆಗೆ ಕರೆದೊಯ್ದರು. ಅಲ್ಲದೆ ರೈಲ್ವೆ ಅಧಿಕಾರಿಯೊಬ್ಬರು ಒಬ್ಬ ಗಾಯಾಳುವನ್ನು ಭುಜದ ಮೇಲೆ ಹೊತ್ತು ಸಾಗಿರುವ, ಇಬ್ಬರು ಪುರುಷ ಗಾಯಾಳುಗಳು ಪ್ಲಾಟ್‌ಫಾರ್ಮ್ ಮೇಲೆ ಬಿದ್ದುಕೊಂಡಿರುವ ಮತ್ತು ಅವರ ಬಟ್ಟೆಗಳು ರಕ್ತದಿಂದ ಕೂಡಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಗಾಯಾಳುಗಳಲ್ಲಿ ಇಬ್ಬರು ಗಂಭೀರ

ಗಾಯಾಳುಗಳು ಬಾಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಾಬಾ ಆಸ್ಪತ್ರೆಯ ವೈದ್ಯ ರಿತೇಶ್, ಗಾಯಾಳುಗಳಾಗಿರುವ 9 ಜನರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದಾರೆ. ಪರಮೇಶ್ವರ ಸುಖದರ್ ಗುಪ್ತಾ (28), ರವೀಂದ್ರ ಹರಿಹರ ಚುಮಾ (30), ರಾಮಸೇವಕ ರವೀಂದ್ರ ಪ್ರಸಾದ್ ಪ್ರಜಾಪತಿ (29), ಸಂಜಯ್ ತಿಲಕ್ರಂ ಕಾಂಗೇ (27), ದಿವ್ಯಾಂಶು ಯೋಗೇಂದ್ರ ಯಾದವ್ (18), ಇಂದ್ರಜಿತ್ ಸಹಾನಿ (19), ಮೊಹಮ್ಮದ್ ಷರೀಫ್ ಶೇಖ್ (25), ಶಬ್ಬೀರ್ ಅಬ್ದುಲ್ ರೆಹಮಾನ್ (40) ಮತ್ತು ನೂರ್ ಮೊಹಮ್ಮದ್ ಶೇಖ್ (18) ಗಾಯಗೊಂಡವರು.

ಬಾಂಬ್ ಬೆದರಿಕೆ-ದೆಹಲಿ ಯುವಕ ಸೆರೆ

ದೆಹಲಿ: ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಹಾಕಿದ ಪ್ರಕರಣದಲ್ಲಿ ಪಶ್ಚಿಮ ದೆಹಲಿಯ ಉತ್ತಮ್ ನಗರ ಪ್ರದೇಶದ ರಾಜಪುರಿ ಮೂಲದ ನಿರುದ್ಯೋಗಿ ಯುವಕ ಶುಭಂ ಉಪಾಧ್ಯಾಯ(25)ನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ಮತ್ತು ಶನಿವಾರ ಮುಂಜಾನೆ ನಡುವೆ ಸಾಮಾಜಿಕ ಜಾಲತಾಣದ ಮೂಲಕ ಶುಭಂ 2 ಬೆದರಿಕೆ ಸಂದೇಶಗಳನ್ನು ರವಾನಿಸಿದ್ದ. ವಿಮಾನಗಳಿಗೆ ಬೆದರಿಕೆ ಸಂದೇಶಗಳು ಬರುತ್ತಿವೆ ಎಂಬ ವರದಿಯನ್ನು ಟಿವಿಯಲ್ಲಿ ನೋಡಿದ ನಂತರ ಜನರ ಗಮನ ಸೆಳೆಯಲು ತಾನೂ ಹುಸಿ ಬಾಂಬ್ ಬೆದರಿಕೆ ಹಾಕಿದ್ದಾಗಿ ಬಂಧಿತ ಯುವಕ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ವಿಮಾನಯಾನ ಸಂಸ್ಥೆಗಳಿಗೆ ಕಳೆದ 8-10 ದಿನಗಳಿಂದ ಹೀಗೆ ಹುಸಿ ಬಾಂಬ್ ಬೆದರಿಕೆ ಸಂದೇಶಗಳು ನಿರಂತರವಾಗಿ ಬರುತ್ತಿವೆ. ಅ.14ರಿಂದ ಈವರೆಗೆ 300ಕ್ಕೂ ಅಧಿಕ ಹುಸಿ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಇದೇ ವಿಚಾರವಾಗಿ ಮುಂಬೈ ಪೊಲೀಸರು ಕಳೆದ ವಾರ 17 ವರ್ಷದ ಬಾಲಕನನ್ನು ಬಂಧಿಸಿದ್ದಾರೆ. ಆ ನಂತರದಲ್ಲಿ ಶುಭಂ ಬಂಧನವಾಗಿದೆ.

ಸಂದೇಶ ವೀಕ್ಷಿಸಿದ ಬಳಿಕ ಪ್ರಕರಣ ದಾಖಲಿಸಿ ತನಿಖೆ ನಡೆಸಿದಾಗ ಸೋಷಿಯಲ್ ಮೀಡಿಯ ಖಾತೆ ಪಶ್ಚಿಮ ದೆಹಲಿಯ ಉತ್ತಮ್ ನಗರ ಪ್ರದೇಶದ ರಾಜಪುರಿ ಮೂಲದ ಶುಭಂ ಉಪಾಧ್ಯಾಯ ಎಂಬವರಿಗೆ ಸೇರಿದ್ದೆಂದು ತಿಳಿಯಿತು. ಶುಭಂನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ, ಟಿವಿ ನೋಡಿ ಉತ್ತೇಜನಗೊಂಡು ಹೀಗೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ.

ಪಾಕ್ ಮೂಲದ 154 ಕೆಜಿ ಡ್ರಗ್ಸ್, 6 ಪಿಸ್ತೂಲ್ ವಶ

ಚಂಡೀಗಢ: ಟರ್ಕಿ ಮೂಲದ ಮಾದಕವಸ್ತು ಕಳ್ಳಸಾಗಣೆದಾರ ನವಪ್ರೀತ್ ಸಿಂಗ್ ಅಲಿಯಾಸ್ ನವ್ ಭುಲ್ಲರ್‌ನ ಇಬ್ಬರು ಸಹಚರರನ್ನು ಬಂಧಿಸುವ ಮೂಲಕ ಪಂಜಾಬ್ ಪೊಲೀಸರು ಗಡಿಯಾಚೆಗಿನ ಡ್ರಗ್ಸ್ ಕಳ್ಳಸಾಗಣೆ ಜಾಲವನ್ನು ಭೇದಿಸಿದ್ದಾರೆ.

ಬಂಧಿತರನ್ನು ಅಮೃತಸರದ ಬಾಬಾ ಬಕಲದಲ್ಲಿರುವ ಗುರು ತೇಗ್ ಬಹದ್ದೂರ್ ಕಾಲೋನಿ ನಿವಾಸಿ ನವಜೋತ್ ಸಿಂಗ್ ಮತ್ತು ಕಪುರ್ಥಾಲಾ ಕಲಾ ಸಂಘಿಯಾನ್ ನಿವಾಸಿ ಲವ್ಪ್ರೀತ್ ಕುಮಾರ್ ಎಂದು ಗುರುತಿಸಲಾಗಿದೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ತಿಳಿಸಿದ್ದಾರೆ.

105 ಕೆಜಿ ಹೆರಾಯಿನ್, 31.93 ಕೆಜಿ ಕೆಫೀನ್, 17 ಕೆಜಿ ಡೆಕ್ಸ್ಟ್ರೋಮೆಥಾರ್ಫಾನ್ ಮತ್ತು ವಿದೇಶಿ ನಿರ್ಮಿತ 5 ಪಿಸ್ತೂಲ್‌ಗಳು ಮತ್ತು ಒಂದು ದೇಶೀ ಪಿಸ್ತೂಲ್ ವಶಪಡಿಸಿಕೊಂಡಿದ್ದಾರೆ.

ಜಾರ್ಖಂಡ್ ಚುನಾವಣೆ ಎಂ.ಎಸ್.ಧೋನಿ ರಾಯಭಾರಿ

ರಾಂಚಿ: ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಆಯೋಗದ ಪ್ರಚಾರ ರಾಯಭಾರಿಯಾಗಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರನ್ನು ನೇಮಕ ಮಾಡಲಾಗಿದೆ. ಜಾರ್ಖಂಡ್ ವಿಧಾನ ಸಭಾ ಚುನಾವಣೆ ನ.13 ಹಾಗೂ ನ.20ರಂದು ಎರಡು ಹಂತಗಳಲ್ಲಿ ನಡೆಯಲಿದೆ.

ರಾಂಚಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಜಾರ್ಖಂಡ್ ಮುಖ್ಯ ಚುನಾವಣಾಧಿಕಾರಿ ಕೆ.ರವಿಕುಮಾರ್, ವಿಧಾನಸಭಾ ಚುನಾವಣೆಗೆ ಧೋನಿ ತಮ್ಮ ಫೋಟೋ ಬಳಸಿಕೊಳ್ಳಲು ಚುನಾವಣಾ ಆಯೋಗಕ್ಕೆ ಒಪ್ಪಿಗೆ ನೀಡಿದ್ದಾರೆ. ಜತೆಗೆ ಇನ್ಯಾವುದೇ ವಿವರ ಬೇಕಾದಲ್ಲಿ ಅವರ ಒಪ್ಪಿಗೆ ಮೇರೆಗೆ ತೆಗೆದುಕೊಳ್ಳಲಾಗುವುದು. ಮತದಾರರಲ್ಲಿ ಜಾಗೃತಿ ಮೂಡಿಸಲು 'ಸಿಸ್ಟಮ್ಯಾಟಿಕ್ ವೋಟರ್ಸ್ ಎಜುಕೇಶನ್' ಮತ್ತು 'ಎಲೆಕ್ಟೋರಲ್ ಪಾರ್ಟಿಸಿಪೇಷನ್'(ಸ್ವೀಪ್) ಕಾರ್ಯಕ್ರಮದಡಿ ಧೋನಿ ನೆರವಾಗಲಿದ್ದಾರೆ. ವಿಶೇಷವಾಗಿ ಅವರು, ಮತದಾರರನ್ನು ತಪ್ಪದೇ ಮತ ಚಲಾಯಿಸುವಂತೆ ಪ್ರೋತ್ಸಾಹಿಸಲಿದ್ದಾರೆ ಎಂದು ವಿವರಿಸಿದ್ದಾರೆ.

ವಿಕಿಪೀಡಿಯಗೆ ದೇಣಿಗೆ ಕೊಡದಿರಿ: ಎಲಾನ್ ಕರೆ

ವಾಷಿಂಗ್ಟನ್: ಆಧುನಿಕ 'ವಿಶ್ವಕೋಶ' ಎಂದೇ ಬಿಂಬಿತವಾಗಿರುವ 'ವಿಕಿಪೀಡಿಯ'ವನ್ನು ಎಡಪಂಥೀಯರು ನಿಯಂತ್ರಿಸುತ್ತಿದ್ದಾರೆ. ಹಾಗಾಗಿ, ವಿಕಿಪೀಡಿಯಗೆ ದೇಣಿಗೆ ನೀಡಬಾರದು ಎಂದು ವಿಶ್ವದ ನಂ.1 ಶ್ರೀಮಂತ ಉದ್ಯಮಿ, ಟೆಸ್ಲಾ ಕಂಪನಿ ಮುಖ್ಯಸ್ಥ ಎಲಾನ್ ಮಸ್ಕ್ ಬಹಿರಂಗ ಕರೆ ನೀಡಿದ್ದಾರೆ.

ಪೈರೇಟ್ ವೈರ್ಸ್‌ನಲ್ಲಿ ಪ್ರಕಟವಾದ ತನಿಖಾ ವರದಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಮಸ್ಕ್, ಎಡಪಂಥೀಯ ಧೋರಣೆಯ ವಿಕಿಪೀಡಿಯಗೆ ದೇಣಿಗೆ ಕೊಡಬೇಡಿ ಎಂದು ಗಮನ ಸೆಳೆದಿದ್ದಾರೆ. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಯುದ್ಧದ ಬೆಳವಣಿಗೆಗಳನ್ನು ವಿಕಿಪೀಡಿಯದಲ್ಲಿ ಯಾವ ರೀತಿ ತೋರಿಸಲಾಗಿದೆ ಎಂಬ ಅಂಶದತ್ತ ಗಮನ ಸೆಳೆದಿರುವ ಮಸ್ಕ್, ದೇಣಿಗೆ ನೀಡುವುದು ಸಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವಿಕಿಪೀಡಿಯದ 40 ಸೂಪರ್ ಸಂಪಾದಕರು ಇಸ್ರೇಲ್ ವಿರುದ್ಧ ಮತ್ತು ಹಮಾಸ್ ಪರ ಬರಹಗಳನ್ನು ಪ್ರಕಟಿಸುತ್ತಿದ್ದಾರೆ. ಇಸ್ಲಾಮಿಕ್ ಮೂಲಭೂತವಾದಿಗಳಿಗೆ ಅನುಕೂಲವಾಗುವಂತೆ ಲೇಖನಗಳನ್ನು ಎಡಿಟ್ ಮಾಡಲಾಗುತ್ತಿದೆ. ಅಲ್ಲದೇ, ಇಸ್ಲಾಮಿಕ್ ರಿಪಬ್ಲಿಕ್ ಪಾರ್ಟಿ ಅಧಿಕಾರಿಗಳ ಮಾನವ ಹಕ್ಕುಗಳ ಉಲ್ಲಂಘನೆ ಕೃತ್ಯಗಳನ್ನು ಅಳಿಸಲಾಗಿದೆ ಎಂದೂ ಮಸ್ಕ್ ಗಮನ ಸೆಳೆದಿದ್ದಾರೆ. ವಿಕಿಪೀಡಿಯಾ ಬಗ್ಗೆ ಭಾರತದಲ್ಲೂ ಆಕ್ಷೇಪ ವ್ಯಕ್ತವಾಗಿದೆ. ಸುದ್ದಿ ಸಂಸ್ಥೆ ಎಎನ್‌ಐ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್ ವಿಕಿಪೀಡಿಯಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದೆ. ಎಎನ್‌ಐಗೆ ಸಂಬಂಧಿಸಿದ ಪೇಜ್ ಎಡಿಟ್ ಮಾಡದಂತೆ ಸೂಚಿಸಿದೆ.

ದೀಪಾವಳಿ ಶುಭಾಶಯ ಕೋರಿ ಸಂಪ್ರದಾಯ ಮುರಿದ ಡಿಎಂಕೆ

ಚೆನ್ನೈ: ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ರಾಜ್ಯದ ಜನತೆಗೆ 'ದೀಪಾವಳಿ ಹಬ್ಬದ ಶುಭಾಶಯ' ಕೋರುವ ಮೂಲಕ ಪಕ್ಷದ ಸಂಪ್ರದಾಯವನ್ನು ಮುರಿದು ಮತ್ತೆ ಸುದ್ದಿಗೆ ಗ್ರಾಸವಾಗಿದ್ದಾರೆ. ಹೀಗೆ ಹಿಂದೂಗಳ ಹಬ್ಬಕ್ಕೆ ಶುಭಾಶಯ ಕೋರಿರುವುದು ಡಿಎಂಕೆ ಪಕ್ಷದ ಇತಿಹಾಸದಲ್ಲಿ ಇದೇ ಮೊದಲು.

ದಿ. ಎಂ.ಕರುಣಾನಿಧಿ ಅವರಿಂದ ಆರಂಭಿಸಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್‌ವರೆಗೂ ಡಿಎಂಕೆ ಪಕ್ಷದ ಯಾವುದೇ ನಾಯಕರು ಈವರೆಗೂ ಯಾವುದೇ ಹಬ್ಬಕ್ಕೂ ಜನತೆಗೆ ಶುಭಾಶಯ ಕೋರಿದ್ದು ಇಲ್ಲವೇ ಇಲ್ಲ. ಅದಕ್ಕೆ ಕಾರಣ ಪಕ್ಷ ಅನುಸರಿಸುವ ವೈಚಾರಿಕ ನಂಬಿಕೆಗಳು. ಡಿಎಂಕೆ ನಾಯಕ ಕರುಣಾನಿಧಿ ಅವರು ಆರಂಭಿಸಿದ್ದ ಈ ನಿಯಮವನ್ನು ಪಕ್ಷದ ಉಳಿದ ನಾಯಕರೂ ತಪ್ಪದೇ ಪಾಲಿಸಿಕೊಂಡು ಬಂದಿದ್ದರು. ಇದೀಗ ಈ ಸಂಪ್ರದಾಯವನ್ನು ಕರುಣಾನಿಧಿ ಅವರ ಮೊಮ್ಮಗ ಉದಯನಿಧಿ ಸ್ಟಾಲಿನ್ ಮುರಿದಿದ್ದಾರೆ.

ಪಕ್ಷದ ಪ್ಲಾಟಿನಂ ಜುಬಿಲಿ ಆಚರಣೆ ಸಂದರ್ಭ ಬೆಂಬಲಿಗರಿಗೆ ಶುಭಾಶಯ ತಿಳಿಸುವ ಸಂದರ್ಭ ಉದಯನಿಧಿ ಅವರು 'ದೀಪ ಒಲಿ ತಿರುನಾಳ್‌ಗಾಗಿ ಜನರಿಗೆ ಶುಭಾಶಯ' ಎಂದು ಶುಭ ಕೋರಿದರು. ನಮ್ಮ (ಡಿಎಂಕೆ) ಪ್ಲಾಟಿನಂ ಜುಬಿಲಿ ಆಚರಣೆಗಳಿಗೆ ಶುಭಾಶಯಗಳನ್ನು ಕೋರುವೆ. ಅಂತೆಯೇ ನಂಬುವವರಿಗೆ ಮತ್ತು ಹಬ್ಬ ಆಚರಿಸುವವರಿಗೆ ದೀಪ ಒಲಿ ತಿರುನಾಳ್ ಶುಭಾಶಯಗಳು ಎಂದು ಹೇಳಿದರು. 'ತಮಿಳುನಾಡು ತಮಿಳರ ನಾಡಾಗಿಯೇ ಇರುತ್ತದೆ. ಕಪ್ಪು-ಕೆಂಪು ಧ್ವಜ ಮತ್ತು ಡಿಎಂಕೆ ಕಾರ್ಯಕರ್ತರು ಇರುವವರೆಗೂ ಯಾರೂ ತಮಿಳುನಾಡು ಮತ್ತು ದ್ರಾವಿಡಂ ಅನ್ನು ಮುಟ್ಟಲೂ ಸಾಧ್ಯವಿಲ್ಲ' ಎಂದರು.

ಬಿಜೆಪಿ ಆಕ್ರೋಶ: ಉದಯನಿಧಿ ಸ್ಟಾಲಿನ್ ಶುಭ ಕೋರಿರುವ ವಿಚಾರಕ್ಕೆ ತಿರುಗೇಟು ನೀಡಿರುವ ಬಿಜೆಪಿ ನಾಯಕ ನಾರಯಣನ್ ತಿರುಪತಿ, 'ನಂಬಿಕೆ ಇಲ್ಲದವರಿಗೆ ನರಕಾಸುರನಂತೆ ಬಾಳಲು ಶುಭಾಶಯಗಳು' ಎಂದು ವ್ಯಂಗ್ಯಾತ್ಮಕ ಟ್ವೀಟ್ ಮಾಡಿದ್ದಾರೆ.

ಆಕ್ಟೋಪಸ್ ತಲೆಗೇ ಸರಿಯಾಗಿ ಬಡಿದಿದ್ದೇವೆ

ಯೋಜಿಸಿದಂತೇ ಇರಾನ್ ಮೇಲೆ ದಾಳಿ: ನೆತನ್ಯಾಹು

ಟೆಲ್ ಅವಿವ್: ನಾವು ಏನು ಯೋಜನೆ ರೂಪಿಸಿದ್ದೆವೊ ಅದೇ ರೀತಿಯಲ್ಲೇ ಇರಾನ್ ಮೇಲೆ ವೈಮಾನಿಕ ದಾಳಿ ಕೈಗೊಳ್ಳಲಾಗಿದೆ. ಎಲ್ಲಾ ಗುರಿಗಳನ್ನೂ ನಮ್ಮ ವಾಯುಪಡೆ ತಲುಪಿ ದಾಳಿಯನ್ನು ಸಂಪೂರ್ಣ ಯಶಸ್ವಿಯಾಗಿಸಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಒಂದೆಡೆ ಗಾಜಾದಲ್ಲಿ ಹಮಾಸ್‌ಗೆ, ಇನ್ನೊಂದೆಡೆ ಲೆಬನಾನ್‌ನಲ್ಲಿ ಹೆಜ್ಬೊಲ್ಲಾಗೆ ಬೆಂಬಲ ನೀಡುತ್ತಾ ಭಯೋತ್ಪಾದನೆ ಬೆಳೆಸುತ್ತಿದ್ದ ಇರಾನ್ ಮೇಲೆ ನಿಗದಿತ ರೀತಿಯಲ್ಲೇ ದಾಳಿ ನಡೆಸಲಾಗಿದೆ. ಆಕ್ಟೋಪಸ್ ತಲೆಗೇ ಸರಿಯಾಗಿ ಬಡಿಯಲಾಗಿದೆ ಎಂದೂ ನೆತನ್ಯಾಹು ವ್ಯಾಖ್ಯಾನಿಸಿದ್ದಾರೆ.

ಗಾಜಾದಲ್ಲಿ 22 ಸಾವು: ಗಾಜಾ ಪಟ್ಟಿಯ ಉತ್ತರದಲ್ಲಿರುವ ಬೀಟ್ ಲಾಹಿಯಾ ನಗರದ ಮೇಲೆ ಇಸ್ರೇಲ್ ವಾಯುಪಡೆ ನಡೆಸಿದ ಬಾಂಬ್ ದಾಳಿಯಲ್ಲಿ ಮಕ್ಕಳು ಸೇರಿದಂತೆ 22 ಪ್ಯಾಲೆಸ್ತೀನಿಯರು ಸಾವಿಗೀಡಾಗಿದ್ದಾರೆ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

ನಿರ್ಗತಿಕರ ಶಿಬಿರಗಳ ಮೇಲೆ ಇಸ್ರೇಲ್ ವಾಯುಪೊಡೆ ಶೆಲ್ ದಾಳಿ ಮಾಡಿದ್ದರಿಂದ 5 ಮನೆಗಳು ನೆಲಸಮವಾಗಿವೆ.

2023ರ ಅ.7ರಂದು ಇಸ್ರೇಲ್ ಮೇಲೆ ಹಮಾಸ್ ಉಗ್ರ ಸಂಘಟನೆ ನಡೆಸಿದ ದಾಳಿಗೆ ಪ್ರತೀಕಾರವಾಗಿ ಇಸ್ರೇಲ್, ಗಾಜಾ ಪಟ್ಟಿ ಮೇಲೆ ಆಕ್ರಮಣ ನಡೆಸಿದ್ದು, ಈವರೆಗೆ ಸತತ ದಾಳಿಯಿಂದ ಸಾವನ್ನಪ್ಪಿದ ಪ್ಯಾಲೆಸ್ತೀನಿಯರ ಸಂಖ್ಯೆ 42,924ಕ್ಕೆ ಏರಿದೆ ಎಂದು ಗಾಜಾ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿಶ್ವ ಕರ್ನಾಟಕ ಸುವರ್ಣ ಸಂಭ್ರಮ

ಬೆಂಗಳೂರು: ನವೆಂಬರ್ 21ರಂದು ಪ್ಯಾರಿಸ್ ಹಾಗೂ ನ.2ರಂದು ಬರ್ಲಿನ್‌ನಲ್ಲಿ ನಡೆಯಲಿರುವ ವಿಶ್ವ ಕರ್ನಾಟಕ ಸುವರ್ಣ ಸಂಭ್ರಮ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಫ್ರಾನ್ಸ್ ಕನ್ನಡ ಬಳಗ ಹಾಗೂ ಆರಂಭ ಟ್ರಸ್ಟ್ ಸಹಯೋಗದಲ್ಲಿ ಫೌಂಡೇಷನ್ ಡಿ.ಲಾ. ಮಿಷನ್ ಡಿ ಲಿಂಡೇ ಪ್ಯಾರಿಸ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಬರ್ಲಿನ್ ಕನ್ನಡ ಬಳಗದ ಸಹಯೋಗದಲ್ಲಿ ಗೆಮೈನ್ ಶಾಫ್ಟ್ ಹೌಸ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಕಾರ್ಯಕ್ರಮದ ಸಂಯೋಜಕ ಕೆ.ನಾಗರಾಜ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾ ಪೋಷಕರಾದ ಟಿ.ವಿ. ಬಾಬು, ಹೊಂಗಿರಣ ಗೊಂಬೆಯಾಟ ಕಲಾ ತಂಡದ ಮುಖ್ಯಸ್ಥ ಸಿದ್ದು ಬಿರಾದರ್, ಬಿಡಿಎ ಸದಸ್ಯ ಪುಟ್ಟಸ್ವಾಮಿ ಗೌಡ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ವಿಧಾನಸೌಧ ಮೇಲೆ ಡ್ರೋನ್: ವ್ಯಕ್ತಿ ಬಂಧನ

ಬೆಂಗಳೂರು: ಅನುಮತಿ ಇಲ್ಲದೆ ವಿಧಾನಸೌಧ ಕಟ್ಟಡದ ಮೇಲೆ ಡ್ರೋನ್ ಕ್ಯಾಮೆರಾ ಹಾರಿಸುತ್ತಿದ್ದ ವ್ಯಕ್ತಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ. ತುಮಕೂರು ಜಿಲ್ಲೆ ಉಪ್ಪಾರಹಳ್ಳಿ ವಿನಯ್ (33) ಬಂಧಿತ. ಆರೋಪಿಯಿಂದ ಡ್ರೋನ್ ಕ್ಯಾಮೆರಾ ಹಾಗೂ ರಿಮೋಟ್ ಜಪ್ತಿ ಮಾಡಲಾಗಿದೆ. ವಿಧಾನಸೌಧ ಪೊಲೀಸ್ ಠಾಣೆ ಮುಖ್ಯ ಪೇದೆ ಎಚ್.ಎನ್.ಶಿವಕುಮಾರ್ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ. ಬಳಿಕ ಆರೋಪಿಯನ್ನು ಹೊಯ್ಸಳ ಗಸ್ತು ವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್‌ಐ ಸುಭಾಶ್‌ಚಂದ್ರ ಅವರ ವಶಕ್ಕೆ ಒಪ್ಪಿಸಿದ್ದಾರೆ.

ಹಿರಿಯ ನಾಗರಿಕರ ಹಬ್ಬ

ಬೆಂಗಳೂರು: ಜೀವನದಲ್ಲಿ ಅಪಾರ ಅನುಭವ ಪಡೆದು ಸಂಧ್ಯಾಕಾಲದಲ್ಲಿರುವ ಹಿರಿಯ ನಾಗರಿಕರಿಗಾಗಿ 2ನೇ ಆವೃತ್ತಿಯ ಹಿರಿಯರ ಹಬ್ಬಕ್ಕೆ ನಗರದ ಸೇಂಟ್ ಜೋಸೆಫ್ ಆಫ್ ಇನ್ಸ್ಟ್ಯೂಟ್‌ನ ಮೈದಾನದಲ್ಲಿ ಆಯೋಜಿಸಲಾಗಿತ್ತು. ವಯಾ ವಿಕಾಸ್ ಸಂಸ್ಥೆಯ ಸಿಇಒಗಳಾದ ಜಮುನಾ ರವಿ, ಹಿಮಾಂಶು ಜೈನ್, ಸಿಒಒ ಪವಿತ್ರ ರೆಡ್ಡಿ ಉದ್ಘಾಟಿಸಿದರು. ಹಿರಿಯರ ಹಬ್ಬದಲ್ಲಿ 1500-2000 ನಿವೃತ್ತರು ಐಎಎಸ್, ಐಪಿಎಸ್, ಉನ್ನತಾಧಿಕಾರಿಗಳು, ಜನಸಾಮಾನ್ಯರು ಒಳಗೊಂಡಂತೆ ಎಲ್ಲಾ ರೀತಿಯ ಜನಸಮೂಹ ಹಬ್ಬದಲ್ಲಿ ಪರಸ್ಪರ ಸಮ್ಮಿಲನಕ್ಕೆ ರಹದಾರಿಯಾಗಿತ್ತು. ಜ್ಞಾನ ಹಂಚಿಕೆಯ ವಿಚಾರಗೋಷ್ಠಿಗಳು, ಆರೋಗ್ಯ ತಪಾಸಣೆ, ವೈವಿಧ್ಯಮಯ ಆಟಾಟೋಪಗಳು, ಮನೋರಂಜನಾ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಮೊದಲ ವಿಶ್ವಕಪ್ ಗೆದ್ದ ಮಾಜಿ ವಿಕೆಟ್ ಕೀಪರ್ ಸಯ್ಯದ್ ಕಿರ್ಮಾನಿ, ಪ್ರಣಯರಾಜ ಶ್ರೀನಾಥ್, ವಯಾ ವಿಕಾಸ್ ಮಂಡಳಿಯ ಸದಸ್ಯ ಡಾ. ಅಲೆಕ್ಸಾಂಡರ್ ಥಾಮಸ್ ಮತ್ತಿತರು ಪಾಲ್ಗೊಂಡಿದ್ದರು.

ಅಖಂಡ ವೀಣಾ ಸಪ್ತಾಹ ಸಂಪನ್ನ

ಬೆಂಗಳೂರು: ಕರ್ಕಿಹಳ್ಳಿಯ ಶ್ರೀ ಸುರೇಶ್ ಪಾಟೀಲ್ ಬಾಬು ಅವರ ನೇತೃತ್ವದಲ್ಲಿ ನಡೆದ 102 ಅಖಂಡ ವೀಣಾ ಸಪ್ತಾಹ ಭಾನುವಾರ ಸಂಪನ್ನಗೊಂಡಿದೆ. ದೇಶದ ವಿವಿಧ ಧಾರ್ಮಿಕ ಪ್ರದೇಶದಲ್ಲಿ ಅಖಂಡ ವೀಣಾ ಸಪ್ತಾಹ ನಡೆಸುವ ಸಂಕಲ್ಪದೊಂದಿಗೆ ಕೆಲವರ್ಷದ ಹಿಂದೆ ಕರ್ಕಿಹಳ್ಳಿಯ ಶ್ರೀ ಸುರೇಶ್ ಪಾಟೀಲ್ ಪ್ರಭುಗಳು ಆರಂಭಿಸಿದ್ದರು. ಇದರ ಭಾಗವಾಗಿ ಮಹಾರಾಷ್ಟ್ರದ ತುಳಜಾಪುರದಲ್ಲಿ ಹಮ್ಮಿಕೊಂಡಿದ್ದ ಅಖಂಡ ವೀಣಾ ಸಪ್ತಾಹ ಭಾನುವಾರ ಹವನ ಹೋಮಗಳೊಂದಿಗೆ ಮುಕ್ತಾಯಗೊಂಡಿತು. ಏಳು ದಿನದ ಕಾರ್ಯಕ್ರಮದಲ್ಲಿ ಜಪ, ಹೋಮ, ಹವನ, ಭಜನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈಗಾಗಲೇ ತಿರುಪತಿ, ಪಂಡರಾಪುರ, ಕಾಶಿ, ಮಥುರ, ಗೋರ್ಕಣಾ, ಹಾಸನ ಸೇರಿದಂತೆ 101 ಜಾಗದಲ್ಲಿ ಮಾಡಲಾಗಿತ್ತು, ತುಳುಜಾಪುರದಲ್ಲಿ 102ನೇ ಸಪ್ತಾಹ ಪೂರ್ಣಗೊಂಡಿದೆ. ತುಳುಜಾಪುರದ ಈ ಸಪ್ತಾಹವನ್ನು ಅಗಡಿಯ ವಿಶ್ವನಾಥ ಚಕ್ರವರ್ತಿ ಸ್ವಾಮೀಜಿ ಹಾಗೂ ಹೆಬ್ಬಳ್ಳಿ ಮಠದ ಅವಧೂತರು ವಹಿಸಿಕೊಂಡಿದ್ದರು. ಮುಂದಿನ ದಿನದಲ್ಲಿ ಅಯೋಧ್ಯೆ, ಸೌರಾಷ್ಟ್ರ ಸೇರಿದಂತೆ ವಿವಿಧ ಭಾಗದಲ್ಲಿ ನಡೆಸಿ 108ನೇ ಸಪ್ತಾಹವನ್ನು ಕರ್ಕಿಹಳ್ಳಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಶ್ರೀಗಳು ತಿಳಿಸಿದ್ದಾರೆ.

{ **ಗೋವಿಂದ ಕಾರಜೋಳ** } ಚಿತ್ರದುರ್ಗ ಸಂಸದ

ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ಆಸ್ತಿ ಎಂದು ರೈತರಿಗೆ ನೀಡಿರುವ ನೋಟಿಸ್ ವಾಪಸ್ ಪಡೆದು ಪಹಣಿ ತಿದ್ದುಪಡಿ ಮಾಡಲು ರಾಜ್ಯ ಸರಕಾರಕ್ಕೆ ಬಿಜೆಪಿ 15 ದಿನಗಳ ಗಡುವು ನೀಡಿದೆ. ಅಷ್ಟರಲ್ಲಿ ಪಹಣಿ ತಿದ್ದುಪಡಿ ಮಾಡದಿದ್ದರೆ ನಾವು ರಾಜ್ಯಾದ್ಯಂತ ಹೋರಾಟ ಮಾಡುತ್ತೇವೆ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ರೈತರು ಆಸ್ತಿ, ಮನೆ ಕಳೆದುಕೊಳ್ಳುವ ಸ್ಥಿತಿ ಬಂದಿದೆ.

ಭಾರಿ ಮಳೆ; ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಸುರಿದ ತೀವ್ರ ಮಳೆಯಿಂದಾಗಿ ಸಂಚರಿಸಲು ನಮ್ಮ ಮೆಟ್ರೋವನ್ನೇ ಹೆಚ್ಚು ಅವಲಂಬಿಸಿದ್ದು, ಈ ಮೂಲಕ ಮೆಟ್ರೋದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಪ್ರಯಾಣಿಕರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿದೆ.

ನಮ್ಮ ಮೆಟ್ರೋದ ಅಧಿಕಾರಿಗಳು ಈ ಕುರಿತು ಮಾತನಾಡಿ, ವೈಟ್ ಫೀಲ್ಡ್ ನಿಂದ ಚೆಲ್ಲಘಟ್ಟದವರೆಗಿನ 37 ಸ್ಟೇಷನ್ ಹೊಂದಿರುವ 43.49 ಕಿ.ಮೀ ಉದ್ದದ ನೇರಳೆ ಮಾರ್ಗದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಅ.1 ರಿಂದ 24 ವರೆಗಿನ ಅವಧಿಯಲ್ಲಿ ಮೆಟ್ರೊದಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ ಈ ವರ್ಷ 22,93,127 (22.93 ಲಕ್ಷ) ಹೆಚ್ಚಾಗಿದೆ ಎಂದರು.

2023ರ ಅ.1 ರಿಂದ 24ನೇ ಅವಧಿಯಲ್ಲಿ ಪ್ರತಿ ದಿನ ಪ್ರಯಾಣಿಸಿದ ಪ್ರಯಾಣಿಕರ ಸರಾಸರಿ ಹೋಲಿಸಿದಾಗ ಎರಡು ಮಾರ್ಗಗಳಿಂದ ಒಟ್ಟಾರೆ ಈ ವರ್ಷ ಪ್ರತಿದಿನದ ಸರಾಸರಿ ಪ್ರಯಾಣಿಕರ ಸಂಖ್ಯೆ 1,37,103 ನಷ್ಟು ಹೆಚ್ಚಾಗಿದೆ. ಇನ್ನು ನಮ್ಮ ಮೆಟ್ರೋದ ದೈನಂದಿನ ಸರಾಸರಿ ಆದಾಯ ಈ 24 ದಿನಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ 38.44 ಲಕ್ಷ ರು. ನಷ್ಟು ಹೆಚ್ಚಾಗಿ ಸಂಗ್ರಹವಾಗಿದೆ ಎಂದರು.

ಅವಘಡಗಳಿಂದ ಪಾರಾಗಲು ಮೆಟ್ರೋ ಅವಲಂಬನೆ

ಬೆಂಗಳೂರಿನಲ್ಲಿ ಸುರಿದ ಮಳೆಯಿಂದ ವಾಹನದಟ್ಟಣೆ, ರಸ್ತೆಗಳಲ್ಲಿ ನೀರು ನಿಲ್ಲುವ ಘಟನೆಗಳು ಹೆಚ್ಚಾಗಿದ್ದು, ಈ ಸಮಸ್ಯೆಯಲ್ಲಿ ಸಿಲುಕುವುದನ್ನು ತಪ್ಪಿಸಲು ಮೆಟ್ರೋದಲ್ಲಿ ಹೆಚ್ಚು ಪ್ರಯಾಣಿಸಿರುವುದು ಅಂಕಿ ಅಂಶಗಳಿಂದ ತಿಳಿದು ಬಂದಿದೆ. 2023ರ ಅಕ್ಟೋಬರ್ 1-24ರವರೆಗೆ ನೇರಳೆ ಮಾರ್ಗ ಹಾಗೂ ಹಸಿರು ಮಾರ್ಗದಲ್ಲಿ ಸುಮಾರು 1.52ಕೋಟಿ ಜನರು ಸಂಚಾರ ನಡೆಸಿದ್ದರೆ 2024ರಲ್ಲಿ 1.85ಕೋಟಿ ಜನ ಸಂಚರಿಸಿದ್ದಾರೆ. ಈ ವರ್ಷ 32.90 ಲಕ್ಷ ಜನರು ಹೆಚ್ಚು ಮೆಟ್ರೋವನ್ನು ಪ್ರಯಾಣಕ್ಕಾಗಿ ಅವಲಂಬಿಸಿದ್ದು, ಭಾರೀ ಮಳೆಯ ಸಂದರ್ಭದಲ್ಲಿ ಮೆಟ್ರೋವನ್ನೇ ಹೆಚ್ಚು ಬಳಕೆ ಮಾಡಿದ್ದಾರೆ.

9.22 ಕೋಟಿ ರು. ಹೆಚ್ಚುವರಿ ಆದಾಯ: ನಮ್ಮ ಮೆಟ್ರೋದ ಆದಾಯವನ್ನು ಗಮನಿಸುವುದಾದರೆ 2023ರ ಅಕ್ಟೋಬರ್‌ನಲ್ಲಿ 24 ದಿನಗಳಲ್ಲಿ 39.12ಕೋಟಿ ರು ಆದಾಯ ಸಂಗ್ರಹವಾಗಿದೆ. 2024ರಲ್ಲಿ ಅಷ್ಟೇ ಪ್ರಮಾಣದ ದಿನಗಳಲ್ಲಿ 48.35 ಕೋಟಿ ರು. ಆದಾಯ ಸಂಗ್ರಹವಾಗಿದೆ. ಒಟ್ಟಾರೆಯಾಗಿ 9.22ಕೋಟಿ ರು.ಹೆಚ್ಚುವರಿ ಆದಾಯ ಮೆಟ್ರೋಗೆ ಲಭಿಸಿದಂತಾಗಿದೆ. ನಾಗಸಂದ್ರದಿಂದ ರೇಷ್ಮೆ ಸಂಸ್ಥೆವರೆಗಿನ 29 ಸ್ಟೇಷನ್ ಗಳನ್ನು ಹೊಂದಿರುವ 30.5 ಕಿ.ಮೀ ಉದ್ದದ ಹಸಿರು ಮಾರ್ಗದಲ್ಲಿ 2023ರಲ್ಲಿ ನೇ ಇಸವಿ ಅಕ್ಟೋಬರ್ ತಿಂಗಳ 24 ದಿನಗಳ ಅವಧಿಗೆ ಹೋಲಿಸಿದರೆ ಈ ವರ್ಷ ಒಟ್ಟು 9,97,343 (9.97 ಲಕ್ಷ) ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ.

ನಗರದಲ್ಲಿ ಅಕ್ಟೋಬರ್ 1-24ರವರೆಗೆ ಸುರಿದ ಮಳೆಯು ಈವರೆಗೆ ನಗರದಲ್ಲಿ ಸುರಿದ ಮೂರನೇ ಅತ್ಯಧಿಕ (156 ಮಿ.ಮೀ) ದಾಖಲೆಯ ಮಳೆಯಾಗಿದೆ. ಈ ಹಿನ್ನೆಲೆ ನಗರದ ಬಹುತೇಕ ಕಡೆಗಳಲ್ಲಿ ಪ್ರವಾಹದ ಸ್ಥಿತಿ ನಿರ್ಮಾಣವಾಗಿದ್ದು, ಕೆಲಸಕ್ಕೆ ಹೋಗುವವರು ಸಮಸ್ಯೆಯನ್ನು ಅನುಭವಿಸುವಂತಾಗಿದೆ. ಸಂಚಾರ ದಟ್ಟಣೆ ಹಾಗೂ ರಸ್ತೆಯಲ್ಲಿ ನಿಂತ ನೀರಿನಿಂದ ತಪ್ಪಿಸಿಕೊಳ್ಳಲು ಮೆಟ್ರೋ ಪ್ರಯಾಣವನ್ನೇ ಸಾರ್ವಜನಿಕರು ಹೆಚ್ಚಾಗಿ ಅವಲಂಬಿಸಿದ್ದರು.

ಬೆಂಗಳೂರಿನಲ್ಲಿ ಈ ಬಾರಿ ಅ.1 ರಿಂದ 24ರವರೆಗಿನ ಪ್ರಯಾಣಿಕರ ಸಂಖ್ಯೆ

ವರ್ಷ	2023	2024	ಪ್ರಯಾಣಿಕರ ಹೆಚ್ಚಳ
ನೇರಳೆ ಮಾರ್ಗ	3,4,09	4,40,356	95,547
ಹಸಿರು ಮಾರ್ಗ	2,90,497	3,32,053	41,556
ಒಟ್ಟು	6,35,306	7,72,409	1,37,103

ಬಿಎಂಟಿಸಿಗೆ ಮತ್ತೊಂದು ಪ್ರಶಸ್ತಿ

ಗುಜರಾತ್‌ನ ಗಾಂಧಿನಗರದಲ್ಲಿ ಬಿಎಂಟಿಸಿಗೆ ಶ್ರೇಷ್ಠ ಸೇವೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರು: ಕೇಂದ್ರ ಸರಕಾರದಿಂದ ನೀಡಲಾಗುವ ಅವಾರ್ಡ್ ಆಫ್ ಎಕ್ಸಲೆನ್ಸ್ ಇನ್ ಅರ್ಬನ್ ಟ್ರಾನ್ಸ್‌ಪೋರ್ಟ್ ಪ್ರಶಸ್ತಿಯನ್ನು ಬಿಎಂಟಿಸಿಯು ಮುಡಿಗೇರಿಸಿಕೊಂಡಿದೆ.

ಸಿಟಿ ವಿಥ್ ಬೆಸ್ಟ್ ರೆಕಾರ್ಡ್ ಆಫ್ ಪಬ್ಲಿಕ್ ಇನ್‌ವಾಲ್ವ್‌ಮೆಂಟ್ ಇನ್ ಟ್ರಾನ್ಸ್‌ಪೋರ್ಟ್ ವಿಭಾಗದಲ್ಲಿ ಬಿಎಂಟಿಸಿಯು ಭಾರತ ಸರಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ನೀಡುವ ಅವಾರ್ಡ್ ಆಫ್ ಎಕ್ಸಲೆನ್ಸ್ ಇನ್ ಅರ್ಬನ್ ಟ್ರಾನ್ಸ್‌ಪೋರ್ಟ್ ಪ್ರಶಸ್ತಿಯನ ನು ಪಡೆದುಕೊಂಡಿದ್ದು, ಭಾನುವಾರ ಗುಜರಾತ್‌ನ ಗಾಂಧಿನಗರದ ಮಹಾತ್ಮಾ ಗಾಂಧಿ ಮಂದಿರದ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ಸರಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರಲಾಲ್ ರಿಂದ ಬಿಎಂಟಿಸಿಯ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಪ್ರಶಸ್ತಿ ಸ್ವೀಕರಿಸಿದರು. ಅಕ್ಟೋಬರ್‌ನಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಬಿಎಂಟಿಸಿಯು ದೇಶದ ಇತರೆ ನಗರ ಸಾರಿಗೆ ಸಂಸ್ಥೆಗಳು ಮತ್ತು ಮುನ್ಸಿಪಲ್ ಕಾರ್ಪೊರೇಷನ್ ಗಳೊಂದಿಗೆ ಸ್ಪರ್ಧಿಸಿ ಈ ಪುರಸ್ಕಾರವನ್ನು ಪಡೆದಿದೆ.

ಬಿಎಂಟಿಸಿಯ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಮಾತನಾಡಿ, ನಗರದೊಳಗೆ ಪ್ರಯಾಣಿಸಲು ನಾಗರಿಕರಿಗೆ ಸುರಕ್ಷಿತ, ಪರಿಸರ ಸ್ನೇಹಿ ಮಾರ್ಗವನ್ನು ಒದಗಿಸುವುದು ಸಂಸ್ಥೆಯ ಗುರಿಯಾಗಿದ್ದು ಎಚ್‌ಎಸ್‌ಆರ್ ಬಡಾವಣೆಯ ನಾಗರಿಕರಿಗೆ ವಿನೂತನ ಮಾದರಿಯ ಬಡಾವಣೆ ಒಳಗಿನ ಸೇವೆಯಿಂದ ಸಾರ್ವಜನಿಕ ಮನ್ನಣೆ ಪಡೆದಿದ್ದು ರಾಷ್ಟ್ರದಾದ್ಯಂತ ಈ ಮಾದರಿಯ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದರು.

ಅಕ್ರಮ ಒತ್ತುವರಿ ತೆರವಿಗೆ ಮುಂದಾದ ಬಿಬಿಎಂಪಿ

ಬೆಂಗಳೂರು: ಕಳೆದೊಂದು ವಾರದಲ್ಲಿ ಸುರಿದ ಭಾರೀ ಮಳೆಯಿಂದಾಗಿ ನಗರದಲ್ಲುಂಟಾದ ಭಾರೀ ಅನಾಹುತಗಳಿಗೆ ರಾಜಕಾಲುವೆ ಹಾಗೂ ಕೆರೆಗಳ ಅಕ್ರಮ ಒತ್ತುವರಿಯೇ ಪ್ರಮುಖ ಕಾರಣವಾಗಿದ್ದು, ಈ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಒತ್ತುವರಿ ತೆರವು ಕಾರ್ಯಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ.

ನಗರದಲ್ಲಾದ ಮಳೆ ಅನಾಹುತದಿಂದಾಗಿ ರಾಜ್ಯ ಸರಕಾರವು ಭಾರೀ ಮುಜುಗರಕ್ಕೀಡಾಗಿದ್ದು,ಇದಕ್ಕೆ ಅಗತ್ಯ ಕ್ರಮವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಕೂಡಾ ಒತ್ತುವರಿ ತೆರವು ಕಾರ್ಯವನ್ನು ಕೈಗೊಳ್ಳುವಂತೆ ಪಾಲಿಕೆಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆ ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆ, ಕೆರಗಳನ್ನು ಅಕ್ರಮವಾಗಿ ಒತ್ತುವರಿ ತೆರವು ಕಾರ್ಯವನ್ನು ಕೈಗೊಳ್ಳಲು ಅಧಿಕಾರಿಗಳು ಮುಂದಾಗಿದ್ದಾರೆ. ಶೀಘ್ರದಲ್ಲಿಯೇ ಅಕ್ರಮ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪಾಲಿಕೆ ಅಧಿಕಾರಿಗಳು ಕೈಗೊಳ್ಳಲಿದ್ದು, ಈ ಮೂಲಕ ಒತ್ತುವರಿ ಮಾಡಿಕೊಂಡವರಿಗೆ ಬಿಸಿ ಮುಟ್ಟಿಸಲು ಮುಂದಾಗಿದ್ದಾರೆ.

ನಗರದಲ್ಲಿ ಒಟ್ಟಿ 1700ಕ್ಕೂ ಅಧಿಕ ಅಕ್ರಮ ಕಟ್ಟಡಗಳಿವೆ. ಈಗಾಗಲೇ ರಾಜಕಾಲುವೆ ಒತ್ತುವರಿ ಮಾಡಿ ನಿರ್ಮಿಸಲಾದ 1712 ಕಟ್ಟಡಗಳ ಕುರಿತು ವರದಿ ಸಿದ್ಧವಾಗಿದ್ದು, ಈ ವರದಿಯ ಪ್ರಕಾರ 196 ಕಟ್ಟಡಗಳ ಕೇಸ್ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಉಳಿದ 167 ಕಟ್ಟಡಗಳ ಸರ್ವೆ ಕಾರ್ಯವು ಮುಗಿದಿದ್ದು, ಆದೇಶ ದೊರೆತರೆ ಒತ್ತುವರಿ ತೆರವಿಗೆ ಪಾಲಿಕೆ ಮುಂದಾಗಲಿದೆ. 1712 ಒತ್ತುವರಿ ಪ್ರಕರಣಗಳಲ್ಲಿ 300 ಕಡೆ ಖಾಲಿ ನಿವೇಶನ ಇದ್ದು, ಈಗಾಗಲೇ ಒತ್ತುವರಿ ತೆರವು ಮಾಡಲಾಗಿದೆ. ಉಳಿದ 800 ಕಡೆ ಒತ್ತುವರಿ ತೆರವು ಬಾಕಿ ಇದೆ.

ಒತ್ತುವರಿಯಾಗಿರುವ ವಲಯಗಳು
- ಪೂರ್ವ ವಲಯದಲ್ಲಿ 123
- ಪಶ್ಚಿಮ 46
- ದಕ್ಷಿಣ 46
- ಕೋರಮಂಗಲದಲ್ಲಿ 104
- ಯಲಹಂಕ 359
- ಮಹಾದೇವಪುರ 492
- ಬೊಮ್ಮನಹಳ್ಳಿ 201
- ಆರ್‌ಆರ್ ನಗರ 104
- ದಾಸರಹಳ್ಳಿ 207

ನಗರದ ಮಲ್ಲೇಶ್ವರ ಹಾಗೂ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ತರಹೇವಾರಿ ಹಣತೆ, ರಂಗು ರಂಗಿನ ಆಕಾಶ ದೀಪದ ಖರೀದಿಯಲ್ಲಿ ತೊಡಗಿದ ಜನರು.

ಮಳೆಯ ಕಾರಣಕ್ಕೆ ನೀಡಿದ್ದ ರಜೆ: ಕ್ರಿಸ್‌ಮಸ್ ವೇಳೆ ಶಾಲೆ ನಡೆಸಲು ನಿರ್ಧಾರ

ಕ್ರಿಸ್ಮಸ್ ರಜೆಗೆ ಖಾಸಗಿ ಶಾಲೆಗಳ ಕತ್ತರಿ?

ಬೆಂಗಳೂರು: ನಗರದ ಹಲವು ಖಾಸಗಿ ಶಾಲೆಗಳು ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್ ರಜೆಯನ್ನು ಕಡಿತಗೊಳಿಸಿ ತರಗತಿ ನಡೆಸಲು ಮುಂದಾಗಿವೆ.

ಕಳೆದೊಂದು ವಾರದ ಹಿಂದೆ ಭಾರೀ ಮಳೆಯ ಹಿನ್ನೆಲೆ ನಗರದಲ್ಲಿ ಸರಕಾರಿ ಹಾಗೂ ಖಾಸಗಿ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಅಕ್ಟೋಬರ್ 16,21,23ರಂದು ಶಾಲೆಗಳಿಗೆ ರಜೆ ನಿಡಲಾಗಿದ್ದು, ಅಂಗನವಾಡಿ ಮತ್ತು ಎಲ್ಲಾ ಹಿರಿಯ ಮತ್ತು ಕಿರಿಯ ಶಾಲೆಗಳಿಗೆ ರಜೆ ನೀಡಲಾಗಿತ್ತು. ಈ ರಜೆಗಳಿಂದಾಗಿ ತರಗತಿಗಳು ಬಾಕಿಯುಳಿದಿದ್ದು, ಈ ಕೊರತೆಯನ್ನು ಭರ್ತಿ ಮಾಡುವ ಸಲುವಾಗಿ ರಜೆಯಲ್ಲಿ ತರಗತಿಯನ್ನು ನಡೆಸಲು ಖಾಸಗಿ ಶಾಲೆಗಳು ಮುಂದಾಗಿವೆ. ಹಲವು ಶಾಲೆಗಳು ಶನಿವಾರದಂದು ತರಗತಿಗಳನ್ನು ನಡೆಸಲು ಮುಂದಾಗಿದ್ದರೆ, ಇನ್ನೂ ಕೆಲ ಶಾಲೆಗಳು ನವೆಂಬರ್‌ನಲ್ಲಿ ಬಾಕಿ ತರಗತಿಯನ್ನು ಸರಿದೂಗಿಸಲು ನಿರ್ಧರಿಸಿದ್ದಾರೆ.

ರಜೆಗಳಿಂದ ಎದುರಾದ ತರಗತಿಗಳ ಕೊರತೆಯನ್ನು ನೀಗಿಸಲು ಶನಿವಾರ ಹಾಗೂ ಭಾನುವಾರ ಪೂರ್ಣ ದಿನಗಳಂದು ತರಗತಿಯನ್ನು ನಡೆಸಲು ಶಿಕ್ಷಣ ಇಲಾಖೆಯು ಆದೇಶಿಸಿದ್ದು, ಕೆಲ ಖಾಸಗಿ ಶಾಲೆಗಳು ಕ್ರಿಸ್‌ಮಸ್ ರಜೆಯಲ್ಲಿ ಮೂರು ದಿನಗಳನ್ನು ಕಡಿತಗೊಳಿಸಿ ತರಗತಿಯನ್ನು ನಡೆಸಲು ಮುಂದಾಗಿದೆ. ಇನ್ನು ಕೆಲ ಶಾಲೆಗಳು ಶನಿವಾರ ಹಾಗೂ ಭಾನುವಾರದಂದು ತರಗತಿಯನ್ನು ನಡೆಸಲು ಮುಂದಾಗಿದ್ದರೆ ಸ್ವತಃ ಪೋಷಕರೆ ಅಂದು ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಮುಂದಾಗಿಲ್ಲ. ಈ ಹಿನ್ನೆಲೆ ಕ್ರಿಸ್ ಮಸ್ ರಜೆಯಲ್ಲಿಯೇ ತರಗತಿಯನ್ನು ನಡೆಸಿ ಪಠ್ಯವನ್ನು ಪೂರ್ಣಗೊಳಿಸಲು ಮುಂದಾಗಿದೆ.

ಪೋಷಕರ ನಿರ್ಧಾರಕ್ಕೆ ಪ್ರಾಮುಖ್ಯ

ಶನಿವಾರ ಹಾಗೂ ಭಾನುವಾರದಂದು ಶಾಲೆ ತೆರದು ತರಗತಿಯನ್ನು ನಡೆಸಲು ನಾವು ಸಿದ್ಧರಿದ್ದೇವೆ ಇದಕ್ಕೆ ನಮ್ಮ ಶಿಕ್ಷಕರೂ ಅನುಮತಿ ನೀಡಿದ್ದಾರೆ. ಆದರೆ ಕೆಲ ಪೋಷಕರು ಇದಕ್ಕೆ ಸಹಮತ ನೀಡಿಲ್ಲ. ಮಕ್ಕಳೂ ರಜೆಯ ದಿನದಂದು ಶಾಲೆಗೆ ಆಗಮಿಸಲು ಇಷ್ಟ ಪಡುವುದಿಲ್ಲ. ಮಕ್ಕಳು ಶಾಲೆಗೆ ಬರದಿದ್ದರೆ ಮತ್ತೆ ತರಗತಿ ತಪ್ಪಿಸುತ್ತಾರೆ. ಹಾಗಾಗಿ ಪೋಷಕರ ಒಪ್ಪಿಗೆ ಪಡೆದು ಮೂರು ದಿನಗಳ ತರಗತಿಗಳನ್ನು ನಿಗದಿಪಡಿಸುತ್ತೇವೆ ಎಂದು ಖಾಸಗಿ ಶಾಲೆಯ ಪ್ರಾಂಶುಪಾಲರು ತಿಳಿಸಿದರು.

ಆನ್‌ಲೈನ್ ತರಗತಿ ನಡೆಸಿದ್ದ ಐಸಿಎಸ್‌ಇ, ಸಿಬಿಎಸ್‌ಇ ಶಾಲೆ

ರಜಾ ದಿನಗಳಲ್ಲಿ ಮನೆಯಲ್ಲಿ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸುವುದು ಕಷ್ಟ. ಕಳೆದು ಹೋದ ತರಗತಿಗಳ ಕುರಿತು ನಿರ್ಧಾರ ತೆಗೆದುಕೊಳ್ಳಲು ಶಾಲೆಗಳೊಂದಿಗೆ ಸಭೆ ಇದೆ. ಶಾಲಾ ಆಡಳಿತ ಮಂಡಳಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿದ್ದೇವೆ. ಅನೇಕ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ (ಸಿಬಿಎಸ್‌ಇ), ಇಂಡಿಯನ್ ಸರ್ಟಿಫಿಕೇಟ್ ಸೆಕೆಂಡರಿ ಎಜುಕೇಶನ್ (ಐಸಿಎಸ್‌ಇ) ಶಾಲೆಗಳು ಜಿಲ್ಲಾಡಳಿತ ಘೋಷಿಸಿದ ರಜಾ ದಿನಗಳಲ್ಲಿ ಆನ್‌ಲೈನ್ ತರಗತಿ ನಡೆಸಿದ್ದವು ಎಂದು ಪಾಲಕರು ಹೇಳಿದ್ದಾರೆ

ಡಿಎಂಕೆ, ಎಐಎಡಿಎಂಕೆ ಪಕ್ಷಗಳ ವಿರುದ್ಧ ನಟ ವಿಜಯ್ ವಾಗ್ದಾಳಿ

ವಿಕ್ರವಂಡಿಯಲ್ಲಿ 'ಟಿವಿಕೆ' ಪಕ್ಷದ ಪ್ರಥಮ ರಾಜಕೀಯ ಸಮಾವೇಶ

ದ್ರಾವಿಡ ಮಾದರಿ ಎಂದು ಜನರಿಗೆ ವಂಚನೆ

ವಿಲ್ಲುಪುರಂ: ತಮಿಳುನಾಡು ವಿಧಾನಸಭೆಗೆ 2026ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸುವ ಗುರಿ ಇಟ್ಟುಕೊಂಡೇ 'ತಮಿಳಗ ವೆಟ್ರ ಕಳಗಂ'(ಟಿವಿಕೆ) ಪಕ್ಷ ಸ್ಥಾಪಿಸಿರುವ ಖ್ಯಾತ ನಟ ಸಿ.ಜೋಸೆಫ್ ವಿಜಯ್, ಪಕ್ಷದ ಪ್ರಥಮ ಸಮಾವೇಶವನ್ನು ವಿಲ್ಲುಪುರಂ ಬಳಿಯ ವಿಕ್ರವಂಡಿಯಲ್ಲಿ ಭಾನುವಾರ ನಡೆಸಿದರು. 5 ಲಕ್ಷಕ್ಕೂ ಅಧಿಕ ಸಂಖ್ಯೆಯ ಜನರು ನೆರೆದಿದ್ದರು. ನಟ ವಿಜಯ್‌ರ ರಾಜಕೀಯ ಕನಸಿಗೆ ಶಕ್ತಿ ತುಂಬುವ ಭರವಸೆ ನೀಡಿದರು.

ಪಕ್ಷದ ಪ್ರಥಮ ಸಮಾವೇಶದಲ್ಲಿ ವೇದಿಕೆಗೆ ಓಡುತ್ತಾ ಬಂದ ನಟ ವಿಜಯ್, ಉದ್ಘಾಟನಾ ಭಾಷಣ ಮಾಡಿದರು. 'ದ್ರಾವಿಡ ಮಾದರಿ ಆಡಳಿತ ಎಂದು ಸುಳ್ಳು ಹೇಳುತ್ತಲೇ ಎರಡು ರಾಜಕೀಯ ಪಕ್ಷಗಳು ಈವರೆಗೂ ತಮಿಳುನಾಡಿನ ಜನರನ್ನು ಬಹಳವಾಗಿ ವಂಚಿಸಿವೆ. ಈವರೆಗೆ ನಡೆದಿದ್ದು ಜನವಿರೋಧಿ ಆಡಳಿತ. ಇನ್ನು ಹಾಗೆ ಆಗದು. ಜನರಿಗೆ ಟಿವಿಕೆ ಪಕ್ಷ ಒಳ್ಳೆಯದನ್ನೇ ಮಾಡಲಿದೆ' ಎಂದು ಹೇಳಿದರು.

ಪಕ್ಷದ ನೀತಿಗಳು ಮತ್ತು ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳ ಕುರಿತು ಪಕ್ಷದ ಸ್ಥಾಪಕ ಅಧ್ಯಕ್ಷ ವಿಜಯ್, ಸಾರ್ವಜನಿಕಗೊಳಿಸಿದರು. 2026ರ ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಲಿದ್ದು,

ತನ್ನ ಜತೆ ಕೈಜೋಡಿಸುವವರನ್ನೂ ಜತೆಗೇ ಕರೆದೊಯ್ಯಲಿದೆ ಎಂದು 'ಮೈತ್ರಿಗೆ ಮುಕ್ತ'ವಾಗಿರುವ ಸೂಚನೆ ನೀಡಿದರು.

ವಿಕ್ರವಾಂಡಿಯಲ್ಲಿ 85 ಎಕರೆ ಪ್ರದೇಶದಲ್ಲಿ ಸಮ್ಮೇಳನ ನಡೆಸಲಾಗಿದೆ. ಚೆನ್ನೈನ ಐತಿಹಾಸಿಕ ಕೋಟೆ ಸೇಂಟ್ ಜಾರ್ಜ್ ಮಾದರಿಯ ಭವ್ಯವಾದ ಪ್ರವೇಶದ್ವಾರ ರಚಿಸಲಾಗಿತ್ತು. ಡಾ.ಬಿ.ಆರ್.ಅಂಬೇಡ್ಕರ್, ವಿಚಾರವಾದಿ ದ್ರಾವಿಡ ಧೀಮಂತ 'ಪೆರಿಯಾರ್' ಇ.ವಿ.ರಾಮಸಾಮಿ, ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದ ಕೆ.ಕಾಮರಾಜ್, ಹಿಂದಿನ ತಮಿಳು ರಾಜರಾದ ಚೇರ, ಚೋಳ ಮತ್ತು ಪಾಂಡ್ಯ ಹಾಗೂ ಧೀರ ರಾಣಿ ವೇಲು ನಾಚಿಯಾರ್ ಅವರ ಬೃಹತ್ ಕಟೌಟ್‌ಗಳಿಂದ ಆವರಣವನ್ನು ಅಲಂಕರಿಸಲಾಗಿತ್ತು. ವಿಜಯ್ ಕಟೌಟ್‌ಗಳೂ ರಾರಾಜಿಸಿದವು.

ವಿಶ್ಲೇಷಣೆ: ನಟ ವಿಜಯ್ ರಾಜಕೀಯ ಪ್ರವೇಶದಿಂದ ರಾಜ್ಯದಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಮತ ಧ್ರುವೀಕರಣವನ್ನು ಬಹುಧ್ರುವೀಯವಾಗಿಸಲಿದೆ. ಅಪಾರ ಅಭಿಮಾನಿ ಬಳಗ ಹೊಂದಿರುವ ವಿಜಯ್, ರಾಜ್ಯ ರಾಜಕೀಯದಲ್ಲಿ ಹೊಸ ಅಲೆ ಎಬ್ಬಿಸುವ ಸಾಧ್ಯತೆ ಇದೆ ಎಂದು ರಾಜಕೀಯ ವಿಶ್ಲೇಷಕರ ಅಭಿಪ್ರಾಯಪಟ್ಟಿದ್ದಾರೆ.

ಅಪಘಾತಕ್ಕೆ ಇಬ್ಬರು ಕಾರ್ಯಕರ್ತರ ಬಲಿ

ತಮಿಳಗ ವೆಟ್ರ ಕಳಗಂ(ಟಿವಿಕೆ) ಪಕ್ಷದ ಮೊದಲ ಸಾರ್ವಜನಿಕ ಸಮಾವೇಶದಲ್ಲಿ ಪಾಲ್ಗೊಳ್ಳಲು ಬರುತ್ತಿದ್ದ ಇಬ್ಬರು ಕಾರ್ಯಕರ್ತರು ರಸ್ತೆ ಅಪಘಾತದಲ್ಲಿ ಭಾನುವಾರ ಮೃತಪಟ್ಟರು. ಕಲ್ಲಕುರಿಚಿ ಜಿಲ್ಲೆಯ ಉಲುಂದೂರ್‌ಪೇಟ್ ಬಳಿಯ ಶೇಕ್ ಹುಸೇನ್‌ಪೇಟ್‌ನಲ್ಲಿ ಕಾರು ಪಲ್ಟಿಯಾಗಿ ಅದರಲ್ಲಿದ್ದ ತಿರುಚ್ಚಿಯ ಕಲೈ ಮತ್ತು ಶ್ರೀನಿವಾಸನ್ ಮೃತರಾದರು. ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಉಳುಂದೂರುಪೇಟೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಮಾನ ನಿಲ್ದಾಣದ ರಸ್ತೆಯಲ್ಲಿಯೇ ತಲೆ ಎತ್ತುತ್ತಿರುವ ಅಕ್ರಮ ಕಟ್ಟಡ | ರಿಯಲ್ ಎಸ್ಟೇಟ್ ಉದ್ಯಮಿಯೊಂದಿಗೆ ಅಧಿಕಾರಿಗಳು ಶಾಮೀನು?

ಹೆದ್ದಾರಿಯಲ್ಲೇ ಅಕ್ರಮ ಕಟ್ಟಡ; ಅಧಿಕಾರಿಗಳ ನಿರ್ಲಕ್ಷ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಬಾಬುಸಾಪಾಳ್ಯ ಕಟ್ಟಡ ದುರಂತ ಬಳಿಕ ಅಕ್ರಮ ಕಟ್ಟಡಗಳಿಗೆ ಸಂಬಂಧಿಸಿದಂತೆ ಭಾರಿ ಚರ್ಚೆಗಳು ನಡೆಯುತ್ತಿವೆ. ಸರಕಾರವೂ ಅಕ್ರಮ ಕಟ್ಟಡಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾನೂನು ರೂಪಿಸಲು ಸಿದ್ಧತೆ ನಡೆಸಿಕೊಂಡಿದೆ. ಆದರೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಹೆದ್ದಾರಿಯಲ್ಲಿಯೇ ಆರು ಅಂತಸ್ತಿನ ಕಟ್ಟಡ ನಿರ್ಮಾಣವಾಗುತ್ತಿದ್ದರೂ, ಅಧಿಕಾರಿಗಳು ಮಾತ್ರ ಕಣ್ಣು ಮುಚ್ಚಿ ಕುಳಿತಿದ್ದಾರೆ ಎನ್ನುವ ಆರೋಪ ಕೇಳಿಬರುತ್ತಿದೆ.

ಚಿಕ್ಕಜಾಲದಲ್ಲಿರುವ ಸರ್ವೆ ನಂಬರ್ 78/4, 78/5ಬಿ ಹಾಗೂ 78/6ನಲ್ಲಿ ಸಿ.ಆರ್. ಸುರೇಶ್ ಎನ್ನುವ ವ್ಯಕ್ತಿಯು ಸುಮಾರು ಆರು ಅಂತಸ್ತಿನ ವಾಣಿಜ್ಯ ಕಟ್ಟಡವನ್ನು ನಿರ್ಮಿಸಲು ಆರಂಭಿಸಿದ್ದು, ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಕೆಲವೇ ದಿನದಲ್ಲಿ ಪ್ರತಿಷ್ಠಿತ ಕಂಪನಿಗಳ ಶೋರೂಂಗಳು ಆರಂಭಗೊಳ್ಳುವ ಹಂತದಲ್ಲಿದೆ. ಆದರೆ ಈವರೆಗೆ ಈ ಕಟ್ಟಡ ಕಾಮಗಾರಿಗೆ ಸೂಕ್ತ ಅನುಮತಿಯನ್ನು ಪಡೆದಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

ದಾಖಲೆಗಳ ಪ್ರಕಾರ ಈ ಜಾಗ ಈಗಲೂ ಕೃಷಿ ಭೂಮಿಯ ವ್ಯಾಪ್ತಿಯಲ್ಲಿದೆ. ಯಲಹಂಕ ತಾಲೂಕಿನ ಜಾಲ ಹೋಬಳಿಯ ವ್ಯಾಪ್ತಿಯಲ್ಲಿರುವ ಈ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೂ ಮೊದಲು ಸರಕಾರಕ್ಕೆ ಇಂತಿಷ್ಟು ಹಣವನ್ನು ಪಾವತಿಸಬೇಕು ಹಾಗೂ ಕೃಷಿಯಿಂದ ವಾಣಿಜ್ಯ ಉದ್ದೇಶಕ್ಕಾಗಿ ಝೋನ್ ಬದಲಿಸಿಕೊಳ್ಳಬೇಕು ಎನ್ನುವ ಕಾನೂನಿದೆ. ಆದರೆ ಈ ಯಾವುದನ್ನೂ ಮಾಡದೇ ಸರಕಾರದ ಬೊಕ್ಕಸಕ್ಕೂ ಕೋಟ್ಯಂತರ ರುಪಾಯಿ ನಷ್ಟವನ್ನು ಉಂಟು ಮಾಡಲಾಗಿದೆ ಎನ್ನುವ ಆರೋಪ ಕೇಳಿಬರುತ್ತಿದೆ.



- ಅಕ್ರಮ ಕಟ್ಟಣವಿದ್ದರೂ ಕಣ್ಣುಮುಚ್ಚಿ ಕುಳಿತ ಅಧಿಕಾರಿಗಳು
- ಈ ಒಂದು ಕಟ್ಟಡದಿಂದಲೇ ಸರಕಾರಕ್ಕೆ ಮೂರು ಕೋಟಿಗೂ ಹೆಚ್ಚು ನಷ್ಟ
- ಅಗತ್ಯ ಪರವಾನಗಿಯೇ ಇಲ್ಲದಿರುವುದರಿಂದ ಅನಾಹುತವಾದರೆ ನೂರಾರು ಜನರಿಗೆ ಸಂಕಷ್ಟ
- ಕಟ್ಟಡ ಕಾಮಗಾರಿ ಸ್ಥಗಿತಕ್ಕೆ ಮೇಲಧಿಕಾರಿಗಳು ಸೂಚನೆ ನೀಡಿದರೂ, ತಳಮಟ್ಟದ ಅಧಿಕಾರಿಗಳಿಂದ ನಿರ್ಲಕ್ಷ್ಯ
- ಕಟ್ಟಡದ ಮಾಲೀಕ ಸುರೇಶ್‌ರಿಂದ ಇದೇ ರೀತಿ ಹಲವು ಅಕ್ರಮ ಕಟ್ಟಡ ನಿರ್ಮಾಣದ ಆರೋಪ

ದೂರುದಾರರ ವಾದವೇನು?
- ಅಕ್ರಮ ಕಟ್ಟಡದ ವಿರುದ್ಧ ಅಧಿಕಾರಿಗಳು ಕ್ರಮವಹಿಸದೇ ಶಾಮೀಲಾಗಿದ್ದಾರೆ
- ಕಟ್ಟಡ ನಿರ್ಮಾಣಕ್ಕೆ ಸೂಕ್ತ ಅನುಮತಿ ಪಡೆಯದೆ ಸರಕಾರವನ್ನು ವಂಚಿಸಿದ್ದಾರೆ
- ಸರಕಾರಕ್ಕೆ ಕಟ್ಟಬೇಕಿರುವ ಮೊತ್ತವನ್ನು ಕಟ್ಟದೆ ಕೋಟ್ಯಂತರ ರುಪಾಯಿ ವಂಚಿಸಿದ್ದಾರೆ
- ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಅಧಿಕಾರಿಗಳು ಸೇರಿಕೊಂಡು ಅಕ್ರಮಕ್ಕೆ ಪುಷ್ಠಿ ನೀಡುತ್ತಿದ್ದಾರೆ

ದೂರು ನೀಡಿದ ಬಳಿಕ ಝೋನ್ ಬದಲಾವಣೆಗೆ ಮನವಿ: ರಿಯಲ್ ಎಸ್ಟೇಟ್ ಉದ್ಯಮಿ ಸುರೇಶ್ ನಿರ್ಮಿಸುತ್ತಿರುವ ಈ ಕಟ್ಟಡದ ವಿರುದ್ಧ ಸ್ಥಳೀಯರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ರಾಮಚಂದ್ರ ಅವರು ಪಿಡಿಒಗೆ ದೂರುನೀಡಿ, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಆದರೆ ದೂರು ನೀಡಿದ ಬಳಿಕ ಪಿಡಿಒ ದಾಖಲೆಗಾಗಿ ನೋಟಿಸ್ ನೀಡಿದ್ದು, ಬಳಿಕ ಸುರೇಶ್ ಮೂಲಕ ಭೂಮಿ ಪರಿವರ್ತನೆಗೆ ಅರ್ಜಿ ಸಲ್ಲಿಸಲು ಹೇಳುವ ಮೂಲಕ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮಚಂದ್ರ ಅವರು ಮೇಲಧಿಕಾರಿಗಳಿಗೆ ದೂರು ನೀಡಿದ್ದಾರೆ. ಅಧಿಕಾರಿಗಳು ಕೆಳಹಂತದ ಅಧಿಕಾರಿಗಳಿಗೆ ಸ್ಪಷ್ಟೀಕರಣಕ್ಕೆ ನೋಟಿಸ್ ನೀಡಿದ್ದರೂ, ಅಧಿಕಾರಿಗಳು ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

ಪ್ರಕರಣದಲ್ಲಿ ಸ್ಥಳೀಯ ಅಧಿಕಾರಿಗಳೂ ಶಾಮೀಲು

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆದ್ದಾರಿಯಲ್ಲಿಯೇ ನಿರ್ಮಾಣವಾಗುತ್ತಿರುವ ಈ ಅಕ್ರಮ ಕಟ್ಟಡದಿಂದ ಸ್ಥಳೀಯ ಸಾವಿರಾರು ಕುಟುಂಬಗಳಿಗೆ ಸಮಸ್ಯೆಯಾಗುತ್ತಿದೆ ಎನ್ನುವ ದೂರನ್ನು ಚಿಕ್ಕಜಾಲ ಪಿಡಿಒಗೆ ದೂರು ನೀಡಿ, ಕ್ರಮವಹಿಸುವಂತೆ ರಾಮಚಂದ್ರ ಅವರು ಮನವಿ ಮಾಡಿದ್ದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೂ ಈ ಬಗ್ಗೆ ದೂರು ನೀಡಿ ಕ್ರಮಕ್ಕೆ ಮನವಿ ಮಾಡಲಾಗಿತ್ತು. ಮೇಲಾಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರೂ, ಸ್ಥಳೀಯ ಮಟ್ಟದ ಅಧಿಕಾರಿಗಳು ಸುರೇಶ್‌ಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳುತ್ತಿರುವುದರಿಂದ ಅಕ್ರಮ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ಈಗಾಗಲೇ ಉಪ ಲೋಕಾಯುಕ್ತರಿಗೆ ದೂರು

ಅಕ್ರಮ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪಿಡಿಒ, ಕಾರ್ಯನಿರ್ವಾಹಕ ಎಂಜಿನಿಯರ್, ತಹಶೀಲ್ದಾರ್ ಸೇರಿದಂತೆ ಅನೇಕರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎನ್ನುವ ಕಾರಣಕ್ಕೆ ರಾಮಚಂದ್ರ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆರ ಉಪಲೋಕಾಯುಕ್ತರಿಗೆ ದೂರು ನೀಡಲಾಗಿದೆ. ಸುರೇಶ್ ಅವರು ನಿರ್ಮಿಸುತ್ತಿರುವ ಈ ಅಕ್ರಮ ಕಟ್ಟಡದ ಕಾಮಗಾರಿ ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದ್ದು, ಕೂಡಲೇ ಸ್ಥಗಿತಗೊಳಿಸುವಂತೆ ಸೂಚನೆ ನೀಡಬೇಕು ಹಾಗೂ ಈ ಅಕ್ರಮದಲ್ಲಿ ಶಾಮೀಲಾಗಿರುವ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ವಿಶ್ವವಾಣಿ
@vishwavaninews
ಬೆಂಗಳೂರು ಸೋಮವಾರ 28 | 10 | 2024

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಮೆಚ್ಚುಗೆಯ ನಿರೀಕ್ಷೆ ಬೇಡ

ದಿನನಿತ್ಯ ನಾವು ನೂರಾರು ಕೆಲಸಗಳನ್ನು ಮಾಡುತ್ತೇವೆ. ಆ ಕೆಲಸಗಳಲ್ಲಿ ಕೆಲವು ವೈಯಕ್ತಿಕ, ಹಲವು ಸಾಮಾಜಿಕ, ಇನ್ನು ಕೆಲವು ವೃತ್ತಿಪರ ಕೆಲಸಗಳು ಇರುತ್ತವೆ. ಇದಲ್ಲದೇ ಹಲವರು ವೃತ್ತಿ ಹೊರತುಪಡಿಸಿ ಪ್ರವೃತ್ತಿಯಾಗಿ ಹಲವಾರು ಆಸಕ್ತಿಯುತ ಕ್ಷೇತ್ರಗಳಲ್ಲಿ ನಾವು ತೊಡಗುವದನ್ನು ಕಾಣುತ್ತೇವೆ. ನಾವು ಮಾಡುವ ಕೆಲಸ ಸಮಾಜಕ್ಕೆ ಉಪಯೋಗಿ ಆಗಿರಬೇಕು. ಅಂತಹ ಕೆಲಸವನ್ನು ನಾವು ನಿಷ್ಠೆ ಪ್ರಾಮಾಣಿಕತೆಯಿಂದ ಮಾಡಬೇಕು. ಅಂತಹ ಕೆಲಸಗಳು ನಮಗೆ ಆತ್ಮತೃಪ್ತಿ ನೀಡುವಂತಿರಬೇಕು. ಯಾರೋ ಮೇಲಾಧಿಕಾರಿಗಳು ಮೆಚ್ಚಲಿ, ಆಪ್ತರು ಹೊಗಳಲಿ , ಪರಿಚಿತರು ಶಹಬಾಸ್ ಎನ್ನಲಿ ಎಂಬ ನಿರೀಕ್ಷೆಗಳನ್ನು ಇಟ್ಟುಕೊಂಡು ಯಾವುದೇ ಕೆಲಸ ಮಾಡದಿರಿ. ಉತ್ತಮವಾಗಿ ಕೆಲಸ ಮಾಡುವದಷ್ಟೇ ನಮ್ಮ ಕರ್ತವ್ಯವಾಗಿರಲಿ ನಾವು ಮಾಡುವ ಕೆಲಸ ಉಳಿದವರಿಗೆ ಮೆಚ್ಚುಗೆ ಆಗಲಿ ಆಗದೇ ಇರಲಿ ಮೊದಲು ನಮ್ಮ ಆತ್ಮಕ್ಕೆ ಮೆಚ್ಚುಗೆಯಾಗಬೇಕು. ಅದರಿಂದ ಆತ್ಮ ಸಂತೋಷ ಆತ್ಮ ತೃಪ್ತಿ ಸಿಗಬೇಕು. ನಮ್ಮ ಕೆಲಸ, ಕಲೆ ಕಂಡು ಉಳಿದವರಿಂದ ಹೊಗಳಿಕೆ ಮೆಚ್ಚುಗೆ ನಿರೀಕ್ಷೆ ಮಾಡಬೇಡಿ. ಯಾರೂ ಮೆಚ್ಚದಿದ್ದರೂ ಆ ಕೆಲಸವನ್ನು ನಾವು ಇಷ್ಟ ಪಟ್ಟು ಮಾಡಬೇಕು. ನಮ್ಮ ಕೆಲಸ ಕಂಡು ಸಾವಿರಾರು ಪರಿಚಿತರಲ್ಲಿ ಬೆರಳೆಣಿಕೆಯಷ್ಟು ಜನ ಮೆಚ್ಚಬಹುದು ಅವರ ಪ್ರತಿಕ್ರಿಯೆ ಗೌರವಿಸಿ. ಮೆಚ್ಚದೇ ಇರುವವರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ನಮಗೆ ಆಗದವರ ನಮ್ಮ ಏಳ್ಗೆ ಸಹಿಸದವರು ನಮ್ಮ ಬಗ್ಗೆ ಅಸೂಯೆ ಹೊಂದಿದವರು ನಾವು ಎಷ್ಟೇ ಉತ್ತಮ ಕೆಲಸ ಮಾಡಿದರೂ ಮೆಚ್ಚುಗೆ ಸೂಚಿಸುವದಿಲ್ಲ ಅವರು ಸೂಚಿಸಲಿ ಎಂದು ಅಂದುಕೊಳ್ಳಬಾರದು. ಎದೆ ತುಂಬಿ ಹಾಡುವೆನು ಅಂದು ನಾನು – ಗೀತೆ ಇಲ್ಲಿ ಸ್ಮರಿಸಬಹುದು. ಒಬ್ಬ ಗಾಯಕ ಅದ್ಭುತವಾಗಿ ಹಾಡಿದರೂ ಬೆರಳೆಣಿಕೆಯಷ್ಟು ಜನ ಮೆಚ್ಚುವ ಸಾಧ್ಯತೆ ಇದೆ. ಒಬ್ಬ ಬರಹಗಾರ ಅದೆಷ್ಟೇ ಉತ್ತಮವಾಗಿ ಬರೆದರೂ ಕೆಲವರು ಮೆಚ್ಚದೇ ಇರಬಹುದು. ನಮ್ಮೆಲ್ಲಾ ಕೆಲಸಗಳನ್ನು ಬೇರೆಯವರು ಮೆಚ್ಚಲಿ ಎಂದು ನಿರೀಕ್ಷೆ ತಪ್ಪು. ಸಹಾಯ ಪಡೆದ ವ್ಯಕ್ತಿಗಳಲ್ಲಿ ಹಲವರು ಮರಳಿ ಧನ್ಯವಾದ ಹೇಳರು. ಹೇಳಲೆಂದು ನಿರೀಕ್ಷೆ ಬೇಡ.

ಯಾರೂ ಮೆಚ್ಚಲಿ ಮೆಚ್ಚದೇ ಇರಲಿ ಹೊಗಳಲಿ ತೆಗಳಲಿ ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಾ ಹೋಗಬೇಕು. ಆ ಕಾರ್ಯ ನಮಗೆ ಮೆಚ್ಚುಗೆ ಆದರೆ ಸಾಕು. ಹೊಗಳಿಕೆ ನಿರೀಕ್ಷೆ ಮಾಡದಿರಿ. ತೆಗಳಿಕೆ ನಿರ್ಲಕ್ಷ್ಯ ಮಾಡಿ; ನಮ್ಮ ಹಾದಿ ನಮ್ಮ ಗುರಿ ಬಗ್ಗೆ ಸ್ಪಷ್ಟತೆ ಇರಲಿ.

• ರಂಗನಾಥ ಎನ್ ವಾಲ್ಮೀಕಿ

ಯುವ ಕಾವ್ಯ

ಉಗುರು

ಹುಲಿಯ ಪಾದದಲ್ಲಿ ಬೆಳೆದದ್ದನ್ನು
ಸಾಕಾಗಿದೆ ಕತ್ತರಿಸಿ ಕತ್ತರಿಸಿ
ಅಲಂಕರಿಸಿ ಕುತ್ತಿಗೆಗೆ ಹಾಕಿಕೊಂಡವರ
ಬದುಕು ಹೋಗುತ್ತಿದೆ ತತ್ತರಿಸಿ!

• ಮಹಾಂತೇಶ ಮಾಗನೂರ

ದೀಪಗಳಿಗೆ ನಮನ

ನರಕ ಚತುರ್ದಶಿ ಎಂದರೆ, ನಮ್ಮನ್ನು ನರಕದಿಂದ ಪಾರು ಮಾಡಲು ಇರುವ ಹಬ್ಬ ಎಂಬ ನಂಬಿಕೆಗಳೂ ಇವೆ. ಬಲಿಪಾಡ್ಯಮಿ ಎಂದರೆ, ಬಲಿಚಕ್ರವರ್ತಿಯನ್ನು ನಾರಾಯಣ ವಾಮನನ ಅವತಾರವೆತ್ತಿ ಬಂದು ಸುತಳಕ್ಕೆ ತಳ್ಳಿ, ದೇವತೆಗಳಿಗೆ ಮತ್ತೆ ಅಧಿಕಾರ ಕೊಡಿಸಿದ ದಿನ. ಈ ಎರಡೂ ದಿನಗಳಂದು ತಲೆಗೆ ಎಳ್ಳೆಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ಒಳಿತಾಗುತ್ತದೆ ಎಂಬ ನಂಬಿಕೆ ಇದೆ.

ದೀಪಾವಳಿ ಆಚರಣೆಯಲ್ಲಿ ಬರುವ ಪ್ರಮುಖ ಹಂತ ಲಕ್ಷ್ಮೀ ಪೂಜೆ. ಅಂದು ಸಂಜೆ ಲಕ್ಷ್ಮಿ ಪೂಜೆ ಮಾಡಿ, ದೀಪಗಳನ್ನು ಬೆಳಗುವುದು ಹಬ್ಬದ ಪ್ರಮುಖ ಅಂಗ. ಬಲಿಪಾಡ್ಯದ ದಿನ ಬೆಳಗ್ಗೆ ವಿಶೇಷವಾಗಿ ಗೋಪೂಜೆ ಆಚರಣೆಯಿದೆ. ಅಂದು ಲಕ್ಷ್ಮಿಯ ಸನ್ನಿಧಾನ ಗೋವಿನಲ್ಲಿ ಹೆಚ್ಚು ಪ್ರಕಟಗೊಳ್ಳುತ್ತದೆ. ಆಗ ಗೋಮಾತೆಯ ಪೂಜಿಸಿ ಪ್ರಾರ್ಥನೆ ಮಾಡಿದಾಗ ಅವಳ ಅನುಗ್ರಹಕ್ಕೆ ಪಾತ್ರರಾಗಬಹುದು ಎಂದು ಹೇಳುತ್ತಾರೆ. ಮತ್ತು ಅಂದು ಸಂಜೆ, ಜನರ ಪ್ರೀತಿಯ ರಾಜನಾದ ಬಲಿ ಚಕ್ರವರ್ತಿಯು ವಾಪಸು ಬರುತ್ತಾನೆ ಎಂಬ ನಂಬಿಕೆ. ಅವನೊಳಗೆ ವಾಮನನನ್ನು ಅಂದು ಆರಾಧಿಸಬೇಕು. ಅಂದೂ ಕೂಡ ಮನೆಗಳಲ್ಲಿ ದೀಪಗಳನ್ನು ಬೆಳಗಿಸಬೇಕು. ಬಲಿಚಕ್ರವರ್ತಿ ದೈವಭಕ್ತ.

ದೀಪ ಬೆಳಗಿಸಲು ಎಳ್ಳೆಣ್ಣೆ, ತುಪ್ಪ ಮತ್ತು ಕೊಬ್ಬರಿ ಎಣ್ಣೆ ಶ್ರೇಷ್ಠವಾದದ್ದು. ದೀಪಗಳ ಬೆಳಕು ಮತ್ತು ಶಾಖ ನಕಾರಾತ್ಮಕತೆಯನ್ನು ತೊಲಗಿಸಿ, ಧನಾತ್ಮಕತೆಯನ್ನು ಪಸರಿಸುತ್ತದೆ. ಇಂದಿನ ದಿನಗಳಲ್ಲಿ ದೀಪಗಳ ಜಾಗವನ್ನು ಮೊಂಬತ್ತಿ ಮತ್ತು ವಿದ್ಯುತ್ ಅಲಂಕಾರ ಬೆಳಕುಗಳು ಆಕ್ರಮಿಸಿಕೊಂಡಿವೆ. ಮಣ್ಣಿನ ದೀಪಗಳನ್ನು ಹಚ್ಚುವುದು ಹೆಚ್ಚು ಅರ್ಥಪೂರ್ಣ; ಅವು ಪರಿಸರ ಸ್ನೇಹಿ ಸಹ ಹೌದು. ಹಿತ್ತಾಳೆ ದೀಪಗಳನ್ನು ಬೆಳಗುವ ಪದ್ಧತಿ ಇದೆ. ಇವುಗಳನ್ನು ಹಲವು ವರ್ಷಗಳ ಕಾಲ ಮರು ಬಳಕೆ ಮಾಡಬಹುದಾದ್ದರಿಂದ, ಇವು ಸಹ ಪರಿಸರಸ್ನೇಹಿ.

ಈ ವರ್ಷ ದೀಪಾವಳಿಯ ಸಮಯದಲ್ಲಿ, ಹೆಚ್ಚೆಚ್ಚು ಪಟಾಕಿ ಸುಡುವ ಬದಲು ಹೆಚ್ಚೆಚ್ಚು ಹಣತೆಗಳನ್ನು ಬೆಳಗಿಸೋಣ. ಮನದ ಮೌಢ್ಯಾಂಧಕಾರಗಳನ್ನು ಕಳೆದುಕೊಂಡು ಬೆಳಕಿನ ನವ ಬದುಕಿನೆಡೆಗೆ ನಡೆವ ಸಂಕಲ್ಪ ಮಾಡೋಣ.

• ಪಲ್ಲವಿ ಚೆನ್ನಬಸಪ್ಪ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಇನ್ನು ಮೂರು ದಿನಗಳಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಗೊಳ್ಳಲಿದೆ; ಆ ಸಮಯದಲ್ಲಿ ನಾಡಿನಾದ್ಯಂತ ಕನ್ನಡದ ಕಹಳೆ ಮೊಳಗುವದರ ಜತೆಯಲ್ಲೇ, ಗಡಿ ಜಿಲ್ಲೆಗಳಲ್ಲಿರುವ ಪಟ್ಟಣಗಳಲ್ಲೂ ಕನ್ನಡದ ಹಾಡು ಕೇಳಿಬರಲಿ, ಕನ್ನಡದ ಅಸ್ಮಿತೆ ಕಾಪಾಡುವ ಕೆಲಸವಾಗಲಿ.

ಮೊಳಗಲಿ ಕನ್ನಡದ ಕಹಳೆ!

• ನಾಗರಾಜ ಸನದಿ, ಅಥಣಿ

ನಮ್ಮ ನಾಡು ಕರ್ನಾಟಕವೆಂದು ಮರುನಾಮಕರಣಗೊಂಡು ಐವತ್ತು ವರ್ಷದ ಸಂಭ್ರಮ. ಇಂತಹ ಮಹತ್ತರ ಕಾಲಘಟ್ಟದಲ್ಲಿ ಕನ್ನಡದ ಉಳಿವು ಏಳಿಗಾಗಿ ದುಡಿದ ಎಲ್ಲಾ ಕನ್ನಡದ ಮನಸುಗಳನ್ನು ಸ್ಮರಿಸುವ ಸಮಯ ಜೊತೆಗೆ ಕನ್ನಡಕ್ಕಾಗಿ ಇಂದಿನ ಯುವ ಪೀಳಿಗೆ ಹೊಂದಿರುವ ಕಾಳಜಿ ಸರಕಾರದ ಯೋಜನೆ, ಕ್ರಮಗಳನ್ನ ಪರಾಮರ್ಶಿಸುವುದಾದರೆ ಮೊದಲಿಗೆ ಬರುವುದೇ ಕನ್ನಡದ ಬಳಕೆ. ಹಿಂದಿ ಹೇರಿಕೆ, ತ್ರಿಭಾಷಾ ಸೂತ್ರದ ಬಳಕೆಯಂತಹ ಮಾತುಗಳು ಆಗಾಗಲೇ ನಡೆಯುತ್ತಲೇ ಇರುತ್ತವೆ. ಇವೆಲ್ಲವುಗಳ ಹೊರತಾಗಿ ಕನ್ನಡದ ನೆಲದಲ್ಲಿ ಹುಟ್ಟಿ ಬೆಳೆದು ಕನ್ನಡದ ಗಾಳಿ ಬೆಳಕಿನಿಂದ ಬದುಕುತ್ತಿರುವವರೆಷ್ಟು ಜನ ಕನ್ನಡದಲ್ಲಿಯೇ ದಿನನಿತ್ಯ ವ್ಯವಹರಿಸುತ್ತಿದ್ದಾರೆ ಎಂಬ ಸಮೀಕ್ಷೆ ನಡೆಸಿದರೆ ನಗರ ಪ್ರದೇಶದ ಕನ್ನಡದ ಮನಸುಗಳು ಇಂಗ್ಲಿಷ್ ಅಥವಾ ಇನ್ನಾವುದೊ ಭಾಷೆಗೆ ಬಿಕರಿಯಾಗಿರುವುದು ತಿಳಿದು ಬರುತ್ತದೆ.

ನವೆಂಬರ್ 1 ಕನ್ನಡದ ರಾಜ್ಯೋತ್ಸವ ಎಂದರೆ ಮೊದಲಿಗೆ ನಾಡಿನ ಯುವ ಪೀಳಿಗೆಗೆ ನೆನಪಾಗುವುದೇ ಗಡಿನಾಡ ಜಿಲ್ಲೆ ಬೆಳಗಾವಿ. ಕರ್ನಾಟಕದ ನಾನಾ ಭಾಗಗಳಿಂದ ಇಲ್ಲಿ ಬಂದು ಸೇರುವ ಯುವ ಪೀಳಿಗೆಯ ಕನ್ನಡ ರಾಜ್ಯೋತ್ಸವದ ಸಂಭ್ರಮ ಎಲ್ಲಿಗಿಂತಲೂ ಬೆಳಗಾವಿಯಲ್ಲಿ ಜೋರಾಗಿಯೇ ಇರುತ್ತದೆ. ಹಾಗೆ ನಮ್ಮ ಯುವ ಪೀಳಿಗೆ ಅಲ್ಲಿ ಸಂಭ್ರಮಿಸುವ ವಾತಾವರಣವಾದರೂ ಯಾವುದರಿಂದ ಕೂಡಿರುತ್ತದೆಂದರೆ ಅದೇ ಪಾಶ್ಚಿಮಾತ್ಯ ಸಂಸ್ಕೃತಿಯ ಡಿಜೆ ರಿಮಿಕ್ಸ್ ಹಾಡುಗಳ ಗುಂಗಿನ ಸಡಗರದಿಂದ! ಹೀಗೆ ರಾಜ್ಯೋತ್ಸವಕ್ಕೆಂದು ಬೆಳಗಾವಿಗೆ ಬಂದು ಕುಣಿದು ಕುಪ್ಪಳಿಸಿ ಮತ್ತೆ ತಮ್ಮೂರಿಗೆ ಹೊರಡುವುದೇ ಕನ್ನಡ ರಾಜ್ಯೋತ್ಸವದ ಸಂಭ್ರಮವಾಗಿ ಬಿಟ್ಟಿದೆ. ಬೆಂಗಳೂರಿನಂತಹ ಬಹತ್ ನಗರಗಳಲ್ಲಿ ಕನ್ನಡದ ಹೊರತಾಗಿ ಇನ್ನಾವುದೇ ಭಾಷೆಯ ನಾಮಫಲಕಗಳು ಕಂಡರೆ ತ್ವರಿತವಾಗಿಯೇ ಕನ್ನಡದ ರಕ್ಷಣೆಗೆ ಹೋರಾಟಕ್ಕಿಳಿಯುವ ಕನ್ನಡ ಪರ ಸಂಘಟನೆಯ ಸಹೋದರರು ಬೆಳಗಾವಿಯ ಬಗ್ಗೆ ಮೌನವಾಗಿರುವುದು ಬೇಸರದ ಸಂಗತಿ. ಇನ್ನು ಬೆಳಗಾವಿಯಲ್ಲಿ ನೆಲೆಸಿರುವ ಕನ್ನಡದ ಮನಸುಗಳ ದಿನಚರಿ ಆರಂಭವಾಗುವುದೇ ಹಿಂದಿ ಗೀತೆಯೊಂದು ಕಿವಿಗಳಿಗೆ ಮುಟ್ಟಿದಾಕ್ಷಣ.

ಹೌದು! ನಗರದಲ್ಲಿ ದಿನವಿಡೀ ಸಂಚರಿಸುವ ಹಸಿ-ಕಸ ಒಣ-ಕಸ ತುಂಬಿಕೊಳ್ಳುವ ಕಾರ್ಪೊರೇಷನ್ ವ್ಯಾನಿನ ಧ್ವನಿ ವರ್ಧಕ ಹೊರ ಹಾಕುವುದು ಸಾಮಾನ್ಯವಾಗಿ ಹಿಂದಿ ಹಾಡೊಂದನ್ನ ಹಾಗೂ ಅಂತಹ ವಾತಾವರಣದಲ್ಲಿ ಬದುಕುತ್ತಿರುವ ಬೆಳಗಾವಿ ಜನತೆ ಹಾಗೂ ಮಹಾನಗರ ಪಾಲಿಕೆಯ ಅಧಿಕಾರಿ ವರ್ಗವು ಹೊಂದಿರುವ ಕನ್ನಡದ ಕಾಳಜಿಯ ಕುರಿತು ಜಿಗುಪ್ಸೆ ಉಂಟಾಗುತ್ತದೆ.

ಕನ್ನಡ, ಕರ್ನಾಟಕವೀಗ ಇತಿಹಾಸದ ಎರಡು ಮಹತ್ತರ ಕಾಲಘಟ್ಟದ ಸಂಭ್ರಮಾಚರಣೆಯಲ್ಲಿದೆ. ಒಂದು ನಾಡಿಗೆ ಕರ್ನಾಟಕವೆಂದು ನಾಮಕರಣಗೊಂಡು ಐವತ್ತು ವರ್ಷಗಳು ತುಂಬಿದರೆ, ಎರಡನೆಯದು ಸ್ವಾತಂತ್ರ ಚಳುವಳಿಯ ಅಖಿಲ ಭಾರತೀಯ ಕಾಂಗ್ರೆಸ್ ಅಧಿವೇಶನವೊಂದು ಕರ್ನಾಟಕದ ಬೆಳಗಾವಿಯಲ್ಲಿ ನಡೆದು ಇದೇ ಡಿಸೆಂಬರ್ ತಿಂಗಳ ಅಂತ್ಯದ ವೇಳೆಗೆ ಬರೋಬ್ಬರಿ ನೂರು ವರ್ಷಗಳು ಪೂರ್ಣವಾಗುತ್ತವೆ.

ಈ ಎರಡು ಮಹತ್ತರ ಘಟನೆಗಳನ್ನ ಮೆಲುಕು ಹಾಕಲು ನಮ್ಮ ಜನರು ಸೂಕ್ತ ಪ್ರಾಧಿಕಾರಕ್ಕೆ ನೆನಪಿಸಬೇಕಾದ ಪರಿಸ್ಥಿತಿ ಬಂದಿದೆ. ಇವೆರಡೂ ಸಂಭ್ರಮಗಳನ್ನು ಬೆಳಗಾವಿಯಲ್ಲಿ ಆಚರಿಸಲು ಮುಂದಿನ ದಿನಗಳಲ್ಲಾದರೂ ನಮ್ಮ ಜನರು ಮನಸ್ಸು ಮಾಡಬೇಕು; ಇದು ನಮ್ಮ ಅಸ್ಮಿತೆಯನ್ನು ರಕ್ಷಿಸುವ ಸಂಗತಿ ಎನಿಸಿದೆ.

ಈ ವರ್ಷದ ಕನ್ನಡ ರಾಜ್ಯೋತ್ಸವಕ್ಕೆ ಇನ್ನು ಮೂರು ದಿನಗಳಿವೆ; ಈ ಬಾರಿಯಾದರೂ ಗಡಿನಾಡಿನ ಈ ಸುಂದರ ಪಟ್ಟಣದಲ್ಲಿ ಕನ್ನಡದ ಕಹಳೆ ಮೊಳಗಲಿ, ಕನ್ನಡದ ಮನಸುಗಳು ಅರಳಲಿ, ಕನ್ನಡದ ಹಾಡುಗಳು ತೇಲಿಬರಲಿ! ಜೈ ಕನ್ನಡಾಂಬೆ, ಜೈ ಕರ್ನಾಟಕ.

ಸತ್ಯ ಸ್ನೇಹ ಪ್ರೀತಿಯ ಬೆಳಕು

• ಡಾ. ಮೈತ್ರಿ ಭಟ್,ವಿಟ್ಲ

ಬೆಳಕಿನ ಹಬ್ಬ ಮನಕೆ ಹರುಷ ತುಂಬಲು ಮತ್ತೊಮ್ಮೆ ಬಂದಿದೆ. ಕತ್ತಲು ಎಂದರೆ ಮನ ಮುದುಡುವುದು. ಆದರೆ ಬೆಳಕು ಮನವ ಮುದಗೊಳಿಸುವುದು. ಬೆಳಕಿಲ್ಲದೆ ಈ ಜಗವೇ ಇಲ್ಲ; ಜಗಕೆ ಅಸ್ತಿತ್ವವಿಲ್ಲ. ಬೆಳಕೇ ಬದುಕು.

ಭೂಮಿಯ ತಾಪ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಧರೆಯೊಡಲು ಬೆಂಕಿಯಂತೆ ಸುಡುತ್ತಿದೆ. ಕತ್ತಲನ್ನು ಗೆದ್ದೇ ತೀರುತ್ತೇನೆಂಬ ಮಾನವನೆದೆಯ ದಾಹವಿಂದು ಭುವಿಯ ಬೆಂಕಿಯಾಗಿಸುತ್ತಿದೆ. ಬೆಳಕೇ ಹೊಸಹುಟ್ಟು; ಬೆಳಕೇ ಭಾವದೀಪ್ತ ಎಂದು ಮತ್ತೆ ಮತ್ತೆ ನೆನಪಿಸುವ ಬೆಳಕಿನೊಲುಮೆಯ ಮೂಲಕ ಮನುಜನೆದೆಯ ಸಿಂಗರಿಸುವ ಕುಡಿ ಬೆಳಕಿನಲ್ಲಿ ಮನವ ನವಿರಾಗಿಸಿ ಸಿಂಗರಿಸುವ ದೀಪಾವಳಿ ಬೆಳಕಿನ ಒಲುಮೆಯ ಹರಡಲು ಭಾವದೀಪ್ತಿಯಲಿ ಸಿಂಗರಿಸಿ ನಿಂತಿದೆ.

ಬದುಕಿನ ಒತ್ತಡ, ನಾಗಲೋಟದ ಮಧ್ಯೆ ಮನವ ಗರಿಗೆದರಿಸಿ ಮುಂದಿನ ಪಯಣಕೆ ಉತ್ಸಾಹ ತುಂಬಿ ಚೈತನ್ಯದ ಸೆಲೆಯಲ್ಲಿ ಮುಳುಗೇಳಿಸಬಲ್ಲ ಸಾಮರ್ಥ್ಯ ಈ ದೀಪಾವಳಿಗಿದೆ. ಮನೆಯಂಗಳದಿ ಸಾಲು ಸಾಲಾಗಿ ಬೆಳಗುವ ಹಣತೆ, ಆಕಾಶಬುಟ್ಟಿಯ ಬೆಳಕ ರಂಗೋಲಿ, ಮನದೊಳಗಿನ ಸಂಭ್ರಮ ಎಲ್ಲವೂ ಜೊತೆ ಸೇರಿದಾಗ ದೀಪಾವಳಿ ಹಬ್ಬ ಕಳೆಗಟ್ಟಿ ನಲಿಯುವುದು. ಮನದ ಬೇಸರವ ಮರೆಯಲು, ಏಕತಾನತೆಯಿಂದ ಹೊರಬರಲು ಈ ಬೆಳಕಿನ ಹಬ್ಬ ನಾಂದಿಯಾಗುವುದು.

ಭಾರತದ ವಿವಿಧ ಕಡೆಗಳಲ್ಲಿ ಬೇರೆ ಬೇರೆ ಹೆಸರಿನೊಂದಿಗೆ ಆಚರಿಸಲಾಗುವ ಈ ಹಬ್ಬ ದೀಪದ ಆರಾಧನೆಯಲ್ಲೇ ತನ್ನ ಉಸಿರನ್ನು ಹೊಂದಿದೆ. ಈ ಬೆಳಕ ಹಬ್ಬಕ್ಕೆ ಬೆಳಕೇ ತೋರಣ. ಅದೇ ಬೆಳಕೇ ಎಲ್ಲರ ಸಂಭ್ರಮಕ್ಕೆ ಕಾರಣ. ಮನದ ಗೆಲುವಿಗೆ ಹೂರಣ. ದೀಪವೊಂದು ತಾನು ಬೆಳಕಾಗಿ ತನ್ಮೂಲಕ ಇನ್ನೊಂದು ದೀಪವ ಬೆಳಗಿಸಿ ಮತ್ತೊಂದಕ್ಕೆ ಬೆಳಕಾಗಿ ಹರಿಯುತ್ತಾ ಸಾಲು-ಸಾಲಾಗಿ ದೀಪಗಳ ಪೋಣಿಸುತ್ತಾ ಬದುಕಿನ ನಂಬಿಕೆಯಾಗಿ ಮುನ್ನಡೆಯುತ್ತದೆ.

ಬೆಳಕು ಎನ್ನುವುದೇ ಸ್ಪಷ್ಟತೆ. ಸ್ಪಷ್ಟತೆ ಬದುಕಿನ ಅಗತ್ಯ. ಭಾರತೀಯರು ಹಬ್ಬಗಳ ಪ್ರಿಯರು. ಭಾರತೀಯ ಸಂಸ್ಕೃತಿಯಲ್ಲಿ ವರ್ಷದ ಪ್ರತಿದಿನವೂ ಒಂದೊಂದು ಹಬ್ಬವನ್ನಾಗಿ ಆಚರಿಸುವ ಕಾಲವಿತ್ತು. ನಮ್ಮ ಇಡೀ ಬದುಕನ್ನೇ ಸಂಭ್ರಮಿಸುವ ಹಬ್ಬವಾಗಿಸುವ ಆಲೋಚನೆಯೇ ಇದರ ಹಿಂದಿರುವಂಥಹುದು. ಆದರೆ ಇಂದು ಬದುಕಿನ ನೂರಾರು ಜಂಜಾಟಗಳ ನಡುವೆ ಹಬ್ಬದ ಆಚರಣೆಗೆ ಸಮಯವೆಲ್ಲಿದೆ? ಈಗ ಉಳಿದಿರುವ 40–50 ಹಬ್ಬಗಳನ್ನು ಆ... ಕೊರತೆಯಿದೆ. ಹಾಗಾಗಿ ಆಚರಿಸುವುದೇ ಎಂಟರಿಂದ ಹತ್ತು ಹಬ್ಬಗಳನ್ನು ಮಾತ್ರ. ಆದರೆ ಅವುಗಳನ್ನು ಕೂಡಾ ಆಚರಿಸುವ ಕ್ರಮ ಮರೆಯುತ್ತಿದ್ದೇವೆ. ಇದು ಹೀಗೇ ಮುಂದುವರಿದಲ್ಲಿ ಮುಂದಿನ ದಿನಗಳಲ್ಲಿ ಹಬ್ಬದಾಚರಣೆಯನ್ನು ನಿಧಾನವಾಗಿ ಮರೆಯುವ ಸಾಧ್ಯತೆ ಇದೆ. ಹೆಚ್ಚಿನವರಿಗೆ ತಿಳಿದಿರುವುದು ಇಷ್ಟೇ. ಆ ದಿನ ಶಾಲೆ, ಕಚೇರಿಗೆ ರಜೆಯಿರುತ್ತದೆ. ಬೆಳಿಗ್ಗೆ ತಡವಾಗಿ ಏಳುವುದು, ಎಲ್ಲಾದರೂ ಸುತ್ತಾಡುವುದು, ತಿನ್ನುವುದು, ಟಿವಿ ನೋಡುವುದು ಇಷ್ಟೇ. ಆದರೆ ಹಬ್ಬ ಎಂದರೆ ಹಾಗಲ್ಲ. ಅದು ಸಂಭ್ರಮ, ಸಡಗರದ ಓಕುಳಿ.

ದೀಪಾವಳಿಯ ಉದ್ದೇಶವೇ ಬದುಕಿನ ಸಂಭ್ರಮವನ್ನು ಇಮ್ಮಡಿಸುವುದು. ನಾವು ಸಿಡಿಸುವ ಪಟಾಕಿ ನಮ್ಮೊಳಗಿರುವ ಅರಿವಿನ ಕಿಚ್ಚನ್ನು ಉದ್ದೀಪಿಸಬೇಕು; ದ್ವೇಷದ ದಳ್ಳುರಿಯನ್ನು ಅಲ್ಲ. ಪಟಾಕಿ ಸುಡುವುದು ಪ್ರಸ್ತುತ ನಮ್ಮ ಭುಮಿಯ ಒಳಿತಿಗೆ ...ವಾಗ ಮನೆಯನ್ನು ಹಸಿರ ತೋರಣಗಳಿಂದ ಸಿಂಗರಿಸಿ, ಮುಸ್ಸಂಜೆಯ ವೇಳೆಯಲ್ಲಿ ಪುಟ್ಟ ಹಣತೆಯ ಬೆಳಕು ಇಡೀ ಮನೆಯನ್ನು ಮನವನ್ನು ವ್ಯಾಪಿಸುವಂತೆ ಹಚ್ಚಿಟ್ಟು ಸಂಭ್ರಮಿಸುವ ರೀತಿಗಿಂತ ಮಿಗಿಲಾದುದು ಬೇರೆ ಬೇಕೇ? ಇಂದು ಸಿಡಿಸಬೇಕಾಗಿರುವುದು ಪಟಾಕಿಯನ್ನಲ್ಲ. ನಮ್ಮ ಪ್ರಾಣಶಕ್ತಿ, ಹೃದಯ, ಮನಸ್ಸು ಮತ್ತು ಈ ದೇಹವು ಸದಾ ಕ್ರಿಯಾಶೀಲವಾಗಿ ಒಳಿತಿನ ಚಿಂತನೆಗಳ ಒಡಗೂಡಿ ಸದಾ ಜೀವಂತ ಪಟಾಕಿಯಂತೆ ಸಿಡಿಯುತ್ತಿರಬೇಕು. ಆಗ ಹೊರಗಿನ ಪಟಾಕಿಯ ಅಗತ್ಯವೇ ಇರುವುದಿಲ್ಲ.

ಅಂತೆಯೇ, ಈ ದೀಪಾವಳಿಯಂದು ನಾವು ಬೆಳಗುವ ದೀವಿಗೆ ಮನೆ-ಮನಕೆ ಹೊಸ ಕಳೆಯ ತುಂಬುತ ನಂದಾದೀಪವಾಗಿ ಬೆಳಗಲಿ. ಬಾಳ ಕತ್ತಲೆಯ ಹೊಡೆದೋಡಿಸಿ ಅರಿವಿನ ಬೆಳಕಿಗೆ ಮುನ್ನುಡಿಯಾಗಲಿ. ನಮ್ಮ ಅಂತರಂಗವೇ ದೀಪವಾಗಿ ಸತ್ಯ, ಸ್ನೇಹ, ಕರುಣೆಗಳ ಎಣ್ಣೆಯನ್ನು ಹೊಯ್ದು ಜ್ಞಾನ ಜ್ಯೋತಿಯು ಸಂಭ್ರಮಿಸಲಿ

ಅಜ್ಜ ತಯಾರಿಸಿದ ಆಕಾಶಬುಟ್ಟಿ

• ಸುಮಲತಾ ಗಡಿಯಪ್ಪನವರ

ನನಗೂ ದೀಪಾವಳಿ ಎಂದರೆ ತುಂಬಾ ವಿಶಿಷ್ಟ. ಬಾಲ್ಯದ ದಿನಗಳಲ್ಲಿ ನನ್ನ ಅಜ್ಜನ ಊರಾದ ಹುಬ್ಬಳ್ಳಿ ಬಳಿಯ ಉಣಕಲ್ಲಿನಲ್ಲಿ ನಾವೆಲ್ಲರೂ ಪ್ರತಿ ವರ್ಷ ದೀಪಾವಳಿಯನ್ನು ಸಡಗರ ಸಂಭ್ರಮದದಿಂದ ಆಚರಿಸುತ್ತಿದ್ದೆವು.

ನಮ್ಮ ಅಜ್ಜನವರು ತುಂಬಾ ಪ್ರತಿಭಾವಂತರು. ಬೆಳಕಿನ ಹಬ್ಬಕ್ಕೆ ಮುಖ್ಯವಾಗಿ ಬೇಕಾದ ಆಕಾಶಬುಟ್ಟಿಯನ್ನ ತಯಾರಿಸುವ ಅದ್ಭುತ ಕಲೆ ಅವರಲ್ಲಿ ಇತ್ತು. ಬಿದಿರಿನ ಕಡ್ಡಿಗಳು, ಬಣ್ಣದ ಕಾಗದ, ಮಿಂಚಿನ ಹಾಳೆಗಳು ಮತ್ತು ಅಂಟನ್ನು ಬಳಸಿ ತುಂಬಾ ಸುಂದರವಾದ, ಬಗೆ ಬಗೆ ವಿನ್ಯಾಸದ ಆಕಾಶಬುಟ್ಟಿಗಳನ್ನು ತಯಾರಿಸುತ್ತಿದ್ದರು.

ಈಗಿನ ದಿನಗಳಲ್ಲಿ ಆಕಾಶಬುಟ್ಟಿಯನ್ನು ಮನೆಯಲ್ಲಿ ತಯಾರಿಸುವವರು ಕಡಿಮೆ; ಅಂಗಡಿಗಳಲ್ಲಿ ವಿವಿಧ ವಿನ್ಯಾಸದ ಆಕಾಶ ಬುಟ್ಟಿಗಳು ದೊರಕುವುದರಿಂದ, ಅವನ್ನು ಖರೀದಿಸಿ ಬೆಳಗುವ ಪದ್ಧತಿ ಚಾಲ್ತಿಗೆ ಬಂದಿದೆ.

ವಿಶೇಷವೆಂದರೆ, ಅವರು ತಮ್ಮ ಮನೆಗೆ, ನಮ್ಮ ರೋಣದ ಮನೆಗೆ ಮತ್ತು ಕೆಲವು ಸ್ನೇಹಿತರ ಮನೆಗೂ ಸಹ ಅವರೇ ಆಕಾಶಬುಟ್ಟಿ ತಯಾರಿಸಿ ಕೊಡುತ್ತಿದ್ದರು. ಈಗ ಅವರು ಇಲ್ಲದಿದ್ದರೂ ಸಹ ಪ್ರತಿ ವರ್ಷ ನನ್ನ ಮನೆಯಲ್ಲಿ ಆಕಾಶಬುಟ್ಟಿಯನ್ನು ಬೆಳಗಿದಾಗ, ನನ್ನ ಹಿರಿಯ ಮಗಳು ಮಣ್ಣಿನ ಹಣತೆಗಳಿಗೆ ಚಿತ್ರ ಬಿಡಿಸಿ ಸಿಂಗರಿಸುವಾಗ ಅವರ ನೆನಪಾಗಿ ಕಣ್ಣು ತೇವವಾಗುತ್ತವೆ.

ಜತೆಗೆ, 80 ರ ಹರೆಯದಲ್ಲೂ ನಮ್ಮ ಅಜ್ಜಿ ತಯಾರಿಸುವ ವಿವಿಧ ಭಕ್ಷ್ಯಗಳು, ಶ್ರದ್ಧಾ ಭಕ್ತಿಯಿಂದ ಮಾಡುವ ಪೂಜೆ.ದೀಪಾವಳಿ ಪಾಡ್ಯದಂದು ಸಗಣಿಯಲ್ಲಿ ಪಂಚ ಪಾಂಡವರನ್ನು ಕೂರಿಸಿ ಮಾಡುವ ವಿಶಿಷ್ಟ ಪೂಜೆ ಎಲ್ಲವೂ ಮತ್ತೆ ಬಾಲ್ಯವನ್ನು ನೆನಪಿಸುತ್ತದೆ.

ಈಗ ಬೆಂಗಳೂರಿನಲ್ಲಿ ಸಮಾನ ಮನಸ್ಕ ಸ್ನೇಹಿತೆಯರ ಗುಂಪನ್ನು ಕಟ್ಟಿಕೊಂಡು ಎಲ್ಲಾ ಹಬ್ಬಗಳನ್ನು ಸಾಂಪ್ರದಾಯಿಕವಾಗಿ ಆಚರಿಸುವುದನ್ನು ರೂಢಿಸಿಕೊಂಡಿದ್ದೇವೆ. ನಮ್ಮೆಲ್ಲರ ಮಕ್ಕಳಿಗೆ ಪ್ರತಿಯೊಂದು ಹಬ್ಬದ ಹಿನ್ನೆಲೆ,ಆಚರಣೆ ಅದರ ಪದ್ಧತಿಗಳನ್ನು ತಿಳಿಸುವ ಮತ್ತು ಎಲ್ಲರೊಟ್ಟಿಗೆ ಕೂಡಿಸಂಭ್ರಮಿಸುವ ಅವಕಾಶವನ್ನು ಮಾಡಿ ಕೊಡುತ್ತಿದ್ದೇವೆ. ಹಬ್ಬಗಳಂದು ಪರಸ್ಪರ ಸ್ನೇಹಿತರ ಮನೆಗೆ ಭೇಟಿ ನೀಡಿ.ಪೂಜೆಯಲ್ಲಿ ಪಾಲ್ಗೊಂಡು ಮಕ್ಕಳಿಗೂ ಸಹ ಆ ಸಂಸ್ಕಾರ ಮೂಡುವಂತೆ ಮಾಡುತ್ತಿದ್ದೇವೆ.

ಕೆಸುವಿನ ಗೆಡ್ಡೆಯ ಸೇವ್

• ಸವಿತಾ ಭಟ್

ಇತ್ತೀಚಿನ ದಿನಗಳಲ್ಲಿ ಕೆಸುವಿನ ಗಡ್ಡೆಯನ್ನು ವಿವಿಧ ರೀತಿಯ ತಿನಿಸುಗಳಲ್ಲಿ ಬಳಸುವ ಪದ್ಧತಿ ಜನಪ್ರಿಯವಾಗುತ್ತಿದೆ. ಕೆಸುವಿನ ಗಡ್ಡೆಯು ಹೆಚ್ಚಿನ ನಾರಿನ ಅಂಶ ಹೊಂದಿರುವುದರಿಂದ, ಅದು ಆರೋಗ್ಯಕ್ಕೂ ಉತ್ತಮ.

ತಯಾರಿಸುವ ವಿಧಾನ: 8–10 ಕೆಸುವಿನ ಗಡ್ಡೆಯನ್ನು ಬೇಯಿಸಿ ಸಿಪ್ಪೆ ತೆಗೆದು ಸ್ಮಾಷ್ ಮಾಡಿ. ಇದಕ್ಕೆ 1 ಕಪ್ ಹುರಿಗಡಲೆ ಪುಡಿ, 1 ಕಪ್ ಅಕ್ಕಿ ಹಿಟ್ಟು, ಓಂ ಕಾಳು, ಉಪ್ಪು, ಅಚ್ಚ ಖಾರದ ಪುಡಿ ಸ್ವಲ್ಪ, ಬಿಸಿ ಮಾಡಿದ ಎಣ್ಣೆ 4 ಸ್ಪೂನ್ ಇದಿಷ್ಟೂ ಸೇರಿಸಿ ಸ್ವಲ್ಪ ನೀರು ಹಾಕಿ ಚೆನ್ನಾಗಿ ಚಕ್ಕುಲಿ ಹಿಟ್ಟಿನ

ಹದಕ್ಕೆ ಕಲಸಿಕೊಳ್ಳಿ. ಸೇವ್ ಮಾಡುವ ಒರಳಿಗೆ ಹಾಕಿ, ಕಾದ ಎಣ್ಣೆಯಲ್ಲಿ ಕರಿಯಿರಿ. ಇದರಿಂದ ತಯಾರಿಸಿದ ಸೇವ್ ರುಚಿಕರವಾಗಿರುತ್ತದೆ ಮತ್ತು ಅಂಗಡಿಯಲ್ಲಿ ದೊರಕುವ ಸೇವ್ ರೀತಿಯೇ ಉಪಯೋಗಿಸಬಹುದು.

ಪರಿಸರ ಸ್ನೇಹಿ ಎನಿಸಿರುವ ಮಣ್ಣಿನ ಹಣತೆಗಳನ್ನು ದೀಪಗಳ ಹಬ್ಬದ ಸಮಯದಲ್ಲಿ ಬೆಳಗುವ ಮೂಲಕ ಪರಿಸರ ರಕ್ಷಿಸಲು ಕಿರು ಕಾಣಿಕೆ ನೀಡೋಣ.

ಮಣ್ಣಿನ ಹಣತೆ ಬೆಳಗೋಣ

• ಸುರೇಂದ್ರ, ಪೈ, ಭಟ್ಕಳ

ದೀಪಗಳ ಹಬ್ಬ ದೀಪಾವಳಿ ಇನ್ನೇನು ಸಮೀಪಿಸುತ್ತಿದೆ. ಬೆಳಕಿನ ಹಬ್ಬ ದೀಪಾವಳಿ ಎಂದಾಕ್ಷಣ ನೆನಪಾಗುವುದೇ ಹಣತೆ, ದೀಪಗಳು, ಆಕಾಶ ಬುಟ್ಟಿ ಹಾಗೂ ಪಟಾಕಿ.

ದೀಪಾವಳಿಯಂದು ಬಲಿಂದ್ರನಿಗೆ ಪೂಜೆ ಮಾಡಿ, ಎಲ್ಲರೂ ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸಿ, ದೇವಸ್ಥಾನಕ್ಕೆ ಹೋಗುತ್ತೇವೆ. ಸಂಜೆಯಾಗುತ್ತಿದ್ದ ಹಾಗೇ ಮನೆಯವರೆಲ್ಲಾ ಸೇರಿ ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೊಡಿಸಿ ಜ್ಞಾನದ ಬೆಳಕನ್ನು ತೋರುವ ದೀಪಗಳನ್ನು ಮನೆಯ ಒಳಗೂ ಹೊರಗೂ ಹಚ್ಚುತ್ತಾ , ಪಟಾಕಿ ಸಿಡಿಸುತ್ತಾ ಸಂಭ್ರಮಿಸುವ ದೃಶ್ಯ ನೋಡುವುದೇ ಒಂದು ಸೊಬಗು.

ನಾವೆಲ್ಲಾ ದೀಪಾವಳಿ ಹಬ್ಬವೇನೋ ಆಚರಿಸುತ್ತಿದ್ದೇವೆ ನಿಜ; ಆದರೆ ಮಣ್ಣಿನ ದೀಪಕ್ಕೆ ಬದಲಾಗಿ ಬಣ್ಣ ಬಣ್ಣದ ಪಿಂಗಾಣಿ ಹಾಗೂ ಪ್ಲಾಸ್ಟಿಕ್ ಮತ್ತು ಎಲ್ಇಡಿ ಬಲ್ಬ್‌ನಂತಹ ವಿದ್ಯುತ್ಚಾಲಿತ ದೀಪಗಳನ್ನು ಬಳಸುತ್ತಿದ್ದೇವೆ. ಇವೆಲ್ಲವೂ ಸಹ ದೀಪಗಳನ್ನೇನೋ ಬೆಳಗುತ್ತವೆ ನಿಜ, ಆದರೆ ದೀಪಾವಳಿಯಂದು ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಮಣ್ಣಿನ ಪ್ರಣತಿಗಳಲ್ಲಿ ದೀಪಗಳನ್ನು ಹಚ್ಚುವ ಹಿಂದಿನ ಉದ್ದೇಶ, ಪೌರಾಣಿಕ ಹಿನ್ನೆಲೆ, ಅವುಗಳನ್ನು ಹಚ್ಚುವ ಸಡಗರ, ಅವು ಬೀರುವ ಬೆಳಕಿನ ಹೊಳಪು ಇವೆಲ್ಲವೂ ವಿಶಿಷ್ಟವಾದ ಅನುಭೂತಿಯನ್ನು

ನೀಡುತ್ತಿದ್ದವು. ಹಾಗಾಗಿ ಮಣ್ಣಿನ ಪ್ರಣತಿಗಳ ದೀಪಗಳು ವಿಶೇಷವಾದ ಸ್ಥಾನವನ್ನು ಹೊಂದಿವೆ.

ದೀಪಾವಳಿಯಂದು ಮಣ್ಣಿನ ಹಣತೆಯಲ್ಲಿ ಬೆಳಗುವ ದೀಪಗಳಿಗೆ ವಿಶೇಷ ಮಹತ್ವವಿದೆ. ಮಣ್ಣಿನ ಪಾತ್ರೆಯಲ್ಲಿ ಬ್ರಹ್ಮ ದೇವರ ಸಾನಿಧ್ಯ, ತೈಲದಲ್ಲಿ ಲಕ್ಷ್ಮೀದೇವಿಯು ಹಾಗೂ ಹಚ್ಚುವ ಬತ್ತಿಯಲ್ಲಿ ವಸುದೇವನ ಸನ್ನಿಧಾನ ಇರುವುದರಿಂದಲೇ ಮಣ್ಣಿನ ಹಣತೆಗಳಲ್ಲಿ ದೀಪ ಬೆಳಗಿದರೆ ಸುಖ, ನೆಮ್ಮದಿ ಹಾಗೂ ಸಮೃದ್ಧಿಯ ಸಂಕೇತವೆಂದು ಪುರಾಣದಲ್ಲಿ ಉಲ್ಲೇಖವಾಗಿದೆ. ಇಷ್ಟೇ ಅಲ್ಲದೇ ಮಣ್ಣಿನ ಹಣತೆಯಲ್ಲಿ ದೀಪ ಬೆಳಗಿದರೆ ಗುರುಗಳ ಮತ್ತು ದೇವತೆಗಳ ಅನುಗ್ರಹವು ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯು ಇದೆ.

ಪರಿಸರ ಸ್ನೇಹಿ ಮಣ್ಣಿನ ಹಣತೆಗಳು

ಮೊದಲೆಲ್ಲಾ ದೀಪಾವಳಿಗೂ ಒಂದೆರಡು ತಿಂಗಳು ಮುನ್ನವೇ ಕುಶಲಕರ್ಮಿಗಳು ಜೇಡಿ ಮಣ್ಣನ್ನು ತಂದು ಹದಗೊಳಿಸಿ ಸಾವಿರಾರು ಮಣ್ಣಿನ ಹಣತೆಗಳನ್ನು ತಯಾರಿಸುತ್ತಿದ್ದರು. ಅಂಗಡಿ ವ್ಯಾಪಾರಸ್ಥರು ಅವುಗಳನ್ನು ಖರೀದಿಸಿ ದೀಪಾವಳಿ ಸಮಯದಲ್ಲಿ ದಿನಕ್ಕೆ ಸಾವಿರಾರು ಮಣ್ಣಿನ ಹಣತೆಯನ್ನು ಮಾರಾಟ ಮಾಡುತ್ತಿದ್ದರು. ಒಬ್ಬೊಬ್ಬರು ಕನಿಷ್ಠ 40 –50 ಹಣತೆಗಳನ್ನು ಕೊಳ್ಳುತ್ತಿದ್ದರು. ಆಗ ಕುಶಲಕರ್ಮಿಗಳ ಬದುಕು ಹಾಗೂ ನಮ್ಮ ಸಾಂಪ್ರದಾಯಿಕ ಕಲೆಯು ಸುರಕ್ಷಿತವಾಗಿತ್ತು. ಇಂತಹ ಮಣ್ಣಿನ ದೀಪಗಳನ್ನು ಹಬ್ಬ ಮುಗಿದ ಬಳಿಕ ರಕ್ಷಿಸಿಟ್ಟು, ಮರುವರ್ಷ ಮರುಬಳಕೆ ಮಾಡುತ್ತಿದ್ದರು.

ಆದರೆ ಇತ್ತೀಚಿನ ವರ್ಷಗಳಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟ ಬಣ್ಣ ಬಣ್ಣದ ಪಿಂಗಾಣಿ ದೀಪ, ಪ್ಲಾಸ್ಟಿಕ್ ದೀಪ ಹಾಗೂ ಎಲ್ ಇ ಡಿ ವಿದ್ಯುತ್ಚಾಲಿತ ದೀಪಗಳ ಹಾವಳಿಯಿಂದಾಗಿ ಗ್ರಾಹಕರೆಲ್ಲರೂ ಮಣ್ಣಿನ ದೀಪಗಳನ್ನು ಕೊಳ್ಳಲು ಮನಸ್ಸು ಮಾಡುತ್ತಿಲ್ಲ. ಇಂದಿನ ಪ್ಲಾಸ್ಟಿಕ್ ಯುಗದ ಆಧುನಿಕತೆಯ ಬಿರುಗಾಳಿಗೆ ಸಿಲುಕಿ ಮಣ್ಣಿನ ಹಣತೆ ತಯಾರಿಸುವ ಕಲೆ ಕಣ್ಮರೆಯಾಗುತ್ತಿದೆ.

ಆಧುನಿಕತೆಯ ಹಾಗೂ ಜಾಗತಿಕರಣದ ಹೆಸರಿನಲ್ಲಿ ಹಬ್ಬಗಳ ರೀತಿಗಳು ಬದಲಾಗುತ್ತಿವೆ. ನಮ್ಮ ಸುತ್ತಮುತ್ತಲಿನ ಕುಂಬಾರರ ಬದುಕು ಹಸನಾಗಲು ಆದಷ್ಟು ಮಣ್ಣಿನ ಹಣತೆಗಳನ್ನು ಖರೀದಿಸೋಣ. ಈ ಮೂಲಕ ಹಚ್ಚುವ ಹಣತೆಯು ಅವರ ಬದುಕಿನಲ್ಲಿ ಬೆಳಕು ಹೆಚ್ಚಿಸಲಿ. ಹಬ್ಬದ ಜತೆಯಲ್ಲೇ ಪರಿಸರ ಸ್ನೇಹಿ ಚಟುವಟಿಕೆಗಳನ್ನು ಉಳಿಸಿಕೊಳ್ಳೋಣ, ಮಣ್ಣಿನ ಹಣತೆ ಬೆಳಗೋಣ

ದಿನ ದರ್ಶಿಕೆ

ಅಶ್ವಿನ ಮಾಸ, ಕೃಷ್ಣ ಪಕ್ಷ, ಏಕಾದಶಿ ತಿಥಿ, ಪೂರ್ವ ಫಲ್ಗುಣಿ ನಕ್ಷತ್ರ, ಬ್ರಹ್ಮ ಯೋಗ, ಬಾಲವ ಕರಣ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಮೂಗು ಅಥವಾ ಕಿವಿ ಚುಚ್ಚುವಿಕೆಯಲ್ಲಿ ಸೋಂಕು ಬಂದರೆ, ತುರಿಕೆ ಮತ್ತು ತೀವ್ರವಾದ ನೋವಿನ ಸಾಧ್ಯತೆಯು ಹೆಚ್ಚಾಗುತ್ತದೆ. ಇದರಿಂದ ಉಪಶಮನ ಪಡೆಯಲು ಅಲೋವೆರಾ ಜೆಲ್ ಬಳಸಬಹುದು, ಉರಿಯೂತದ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿರುವ ಇದು, ಊತ ಮತ್ತು ನೋವನ್ನು ಕಡಿಮೆ ಮಾಡುತ್ತದೆ. ಅಲೋವೆರಾ ಜೆಲ್ ನೇರವಾಗಿ ರಂಧ್ರದ ಮೇಲೆ ಹಚ್ಚಿ ಮತ್ತು 10 ನಿಮಿಷಗಳ ಕಾಲ ಬಿಡಿ. ನಂತರ ಉಗುರುಬೆಚ್ಚನೆಯ ನೀರಿನಿಂದ ತೊಳೆಯಿರಿ.

ಸೌಂದರ್ಯ ಸೂತ್ರ

ಹೊಳೆಯುವ ಚರ್ಮಕ್ಕಾಗಿ ಮೊಟ್ಟೆಗಳನ್ನು ಬಳಸುವುದು ಪ್ರಯೋಜನಕಾರಿ, ಏಕೆಂದರೆ ಇವು ಪ್ರೋಟೀನ್‌ಗಳನ್ನು ಹೊಂದಿದೆ. ಇದು ಚರ್ಮವನ್ನು ನಯವಾಗಿ ಮತ್ತು ಹೊಳೆಯುವಂತೆ ಮಾಡಲು ಚರ್ಮವನ್ನು ನಿಧಾನವಾಗಿ ಎಕ್ಸ್‌ಫೋಲಿಯೇಟ್ ಮಾಡುತ್ತದೆ. ಇದಲ್ಲದೆ, ಮೊಟ್ಟೆಗಳು ಚರ್ಮದ ಕಾಂತಿಯನ್ನು ಹೆಚ್ಚಿಸುತ್ತವೆ.

ದಿನ ಭವಿಷ್ಯ

ಮೇಷ: ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹ ಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ.

ವೃಷಭ: ಅನಾವಶ್ಯಕವಾಗಿ ವಾದ ಮಾಡಿ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ಒಂದು ವಾದದಿಂದ ಏನನ್ನೂ ಪಡೆಯುವುದಕ್ಕಿಂತ ಕಳೆದುಕೊಳ್ಳುವುದೇ ಜಾಸ್ತಿ.

ಮಿಥುನ: ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಇಂದು ಹಣ ಪಡೆಯಬಹುದು.

ಕಟಕ: ಕೆಲವು ಅನಿವಾರ್ಯ ಸಂದರ್ಭ ಗಳು ಅಹಿತಕರವೆನಿಸಬಹುದು. ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿ ನಿಭಾಯಿಸಿ.

ಸಿಂಹ: ಸಂಗಾತಿಯ ಆರೋಗ್ಯಕ್ಕೆ ಸೂಕ್ತ ರಕ್ಷಣೆ ಮತ್ತು ಗಮನದ ಅಗತ್ಯವಿದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ.

ಕನ್ಯಾ: ತುಂಬಾ ಚಿಂತೆ ಮತ್ತು ಒತ್ತಡ ರಕ್ತದೊತ್ತಡವನ್ನು ಉಂಟುಮಾಡಬಹುದು. ಪ್ರಯಾಣ ಮಾಡುತ್ತಿದ್ದರೆ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

ತುಲಾ: ಕೆಲಸದಲ್ಲಿ ಉತ್ತಮ ಲಾಭ ಪಡೆಯಲು ತಮ್ಮ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಿ, ಬೇಡದಿದ್ದರ ಬಗ್ಗೆ ಯೋಚಿಸದಿರಿ.

ವೃಶ್ಚಿಕ: ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ಚೈತನ್ಯವನ್ನು ಬಳಸಿ. ಪ್ರೇಮಿ ಇಂದು ತುಂಬಾ ಕೋಪದಲ್ಲಿ ಕಾಣಬಹುದು.

ಧನು: ಬಹಳಷ್ಟು ವಿಷಯಗಳು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು.

ಮಕರ: ಕೆಲವು ಅನಿವಾರ್ಯ ಸಂದರ್ಭಗಳು ಅಹಿತಕರವೆನಿಸಬಹುದು. ಆದರೆ ಸಮತೊಲನ ಕಾಯ್ದುಕೊಳ್ಳಬೇಕು.

ಕುಂಭ: ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದಾದರೂ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ.

ಮೀನ: ಕಠಿಣ ಪದಗಳು ಶಾಂತಿ ಹಾಳು ಮಾಡಿ ಪ್ರಿಯತಮೆಯ ಜೊತೆಗಿನ ಮಧುರ ಸಂಬಂಧವನ್ನು ಹಾಳು ಮಾಡಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1955: ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್‌ಗೇಟ್ಸ್ ಹುಟ್ಟುಹಬ್ಬ
- 1627: ಮೊಘಲ್‌ರ ರಾಜ ಜಹಾಂಗೀರನು ಕಾಶ್ಮೀರದ ರಜೌರಿಯಲ್ಲಿ ಮರಣಹೊಂದಿದ
- 1922: ಇಟಲಿಯ ಬೆನಿಟೋ ಮುಸೋಲಿನಿ ಮುಂದಾಳತ್ವದಲ್ಲಿ ಫ್ಯಾಸಿಸ್ಟ್‌ಗಳು ಸೇರಿ ರೋಮ್ ಮೇಲೆ ದಾಳಿ ಮಾಡಿ ಇಟಾಲಿಯನ್ ಸರಕಾರವನ್ನು ಖಬ್ಜ ಮಾಡಿಕೊಂಡರು.

ಚಿತ್ರಸ್ಫೂರ್ತಿ

ಪ್ರತಿ ಮುಂಜಾನೆಯೂ ಶುಭವಾಗಿರಲ್ಲ, ಪ್ರತಿ ದಿನವೂ ಪಾರ್ಕ್ ಅಥವಾ ಜಿಮ್‌ಗೆ ಹೋಗಬೇಕೆಂಬ ಮನಸ್ಸಿರಲ್ಲ, ಆದರೆ, ಕೆಲವೊಮ್ಮೆ ಇಂಥ ವಾತಾವರಣದ ನಡುವೆ ನಡೆಯುವಾಗ ಪ್ರತಿದಿನ ಹೀಗೇ ಇರ್ಲಪ್ಪ ಅಂತ ಅಂದುಕೊಳ್ಳೂದೂ ಇರುತ್ತದೆ. ಹಾಗೇ ಮಂಜಿನ ನಡುವೆ ಪ್ರೀತಿಹೊತ್ತು ಬರುತ್ತಿ ರುವ ಈ ಹುಡುಗಿಯೂ ಸುದಾಕರ್ ದೇವರಾಜ್ ಅವರ ಕ್ಯಾಮರಾ ಕಣ್ಣಿಗೆ ಕಂಡಿದ್ದು ಹೀಗೆ.

ಗತಿಗಳ ಆಧಾರದ ಮೇಲೆ ಪ್ರಾರಬ್ಧ ಕರ್ಮಗಳಿಂದ ಮುಕ್ತಿ

ಒಬ್ಬ ವ್ಯಕ್ತಿ ಸತತವಾಗಿ ಹರಿನಾಮದ ಜಪವನ್ನು ಮಾಡುತ್ತಿದ್ದ. ಅವನಿಗೂ ವಯಸ್ಸಾಗುತ್ತಾ ಎಲ್ಲಕ್ಕೂ ಮಗನನ್ನು ಅವಲಂಬಿಸಬೇಕಾಗಿತ್ತು.

ದಿನಕಳೆದಂತೆ ಮಗನು ಅವನು ಕರೆದಾಗಲಿಲ್ಲ ನಿರ್ಲಕ್ಷ್ಯ ಮಾಡತೊಡಗಿದ. ಹೊತ್ತು ಸಾರಿ ಕರೆದರೆ ಒಮ್ಮೆ ಬಂದು ವಿಚಾರಿಸುತ್ತಿದ್ದ. ವೃದ್ಧನ ಬದುಕು ಬಹಳ ತ್ರಾಸದಾಯಕವಾಗಿತ್ತು.

ಒಂದು ದಿವಸ ರಾತ್ರಿ ವೃದ್ಧನು ಬಚ್ಚಲು ಮನೆಗೆ ಹೋಗಲು ಮಗನನ್ನು ಕರೆದನು. ಕೂಡಲೇ ಒಬ್ಬ ಹುಡುಗ ಧಾವಿಸಿ ಬರುತ್ತಾನೆ. ಬಹಳ ಕಾಳಜಿ ಪೂರ್ವಕವಾಗಿ ಆ ವೃದ್ಧನನ್ನು ಕರೆದೋಯ್ದು ಬಹಿರ್ದೆಸೆ ಮಾಡಿಸಿ ಪುನಃ ಹಾಸಿಗೆ ಮೇಲೆ ಕರೆತಂದು ಮಲಗಿಸಿ ಹೋದನು. ಆ ದಿನದ ನಂತರ ಈ ಕೆಲಸವು ನಿತ್ಯದ ನಿಯಮದ ಹಾಗೆ ನಡೆಯತೊಡಗಿತು.

ಒಮ್ಮೆ ವೃದ್ಧನಿಗೆ ಸಂಶಯ ಬಂದಿತು, ಮೊದಮೊದಲು ಎಷ್ಟು ಕೂಗಿದರೂ ಬರಲಾರದ ಮಗನು ಈಗೀಗ ಕರೆದಾಕ್ಷಣವೇ ಬಂದು ಬಹಳ ಕಾಳಜಿ ಪೂರ್ವಕವಾಗಿ ಕರೆಯೊಯ್ದು ಕೆಲಸ ಮುಗಿಸಿ ಮರಳಿ ಕರೆತಂದು ಹಾಸಿಗೆಯ ಮೇಲೆ ಮಲಗಿಸುತ್ತಾನೆ. ಈ ಎಲ್ಲ ಕೆಲಸಗಳಲ್ಲಿ ಅವನ ಒಡನಾಟ ಮತ್ತು ಅವನ ಸ್ಪರ್ಶವು ಬಹಳ ಮೃದುವಾಗಿರುತ್ತದೆ. ಅದೂ ಅಲ್ಲದೇ ತನ್ನ ಹಾಸಿಗೆ, ಕೋಣೆಯ ಶುಚಿತ್ವಕ್ಕೆ ಬಹಳ ಗಮನ ಕೊಡುತ್ತಿದ್ದಾರೆ. ಎಲ್ಲ ನನ್ನ ಪುಣ್ಯ ಎಂದುಕೊಂಡರು.

ಒಂದು ರಾತ್ರಿ ಆ ವ್ಯಕ್ತಿ ಬಂದಾಗ ಅವನ ಕೈ ಹಿಡಿದು ಆ ವೃದ್ಧನು ಪ್ರೀತಿಯಿಂದ ಕೇಳುತ್ತಾನೆ. 'ನಿಜ ಹೇಳು ನೀನು ಯಾರು..!?, ನನ್ನ ಮಗನಂತೂ ಈ ರೀತಿ ವರ್ತಿಸುವುದಿಲ್ಲ..!'

ಆ ವೃದ್ಧರ ಮಾತಿಗೆ ಕತ್ತಲು ಕವಿದ ಆ ಕೋಣೆಯಲ್ಲಿ ಒಂದು ಅಲೌಕಿಕವಾದ ಬೆಳಕು ಮೂಡುತ್ತದೆ. ಆ ಹುಡುಗನ ರೂಪದಲ್ಲಿರುವ ಭಗವಂತನು ಅವನ ಮುಂದೆ ಪ್ರಕಟನಾಗಿ ದರ್ಶನ ಕೊಟ್ಟ.

ಆಗ ವೃದ್ಧನು ಅಮಿತಾನಟದಿಂದ ಕಂಬನಿ ತುಂಬಿ ಬಂದು ಯಾವ ಮಾತೂ ಆಡಲು ಆಗದ ಪರಿಸ್ಥಿತಿಯಲ್ಲಿ ಕೆಲವು ಭಾವಪೂರ್ಣ ಶಬ್ದಗಳನ್ನು ಹೇಳುತ್ತಾನೆ 'ಹೇ ಪ್ರಭು..! ನೀನು ಸ್ವತ: ಬಂದು ನನ್ನ ಪ್ರಾತಃವಿಧಿಗಳನ್ನು ಮಾಡಿಸುತ್ತಿದ್ದೆಯಾ, ಹೇ ಅನಾಥ ರಕ್ಷಕನೇ ಸತತವಾಗಿ ನಿನ್ನ ನಾಮಸ್ಮರಣೆಯನ್ನು ಮಾಡುತ್ತಿರುವ ನನ್ನಿಂದ ನೀನು ಒಂದು ವೇಳೆ ಪ್ರಸನ್ನನಾಗಿದ್ದರೆ ನನ್ನನ್ನು ಮುಕ್ತನನ್ನಾಗಿ ಮಾಡಿಬಿಡು.'

ಆಗ ಪ್ರಭು ಹೇಳಿದ – 'ಈಗ ನೀನು ಇದೆಲ್ಲ ಅನುಭವಿಸುತ್ತಿರುವುದು ನಿನ್ನ ಪ್ರಾರಬ್ಧ. ನೀನು ಸದಾ ನನ್ನ ನಾಮ ಸ್ಮರಣೆಯನ್ನು ಮಾಡಿ ನನ್ನ ಪ್ರೀತಿಯ ಭಕ್ತನಾಗಿದ್ದಿ. ಅದಕ್ಕೆ ನಿನ್ನ ಪ್ರಾರಬ್ಧವನ್ನು ಸವೆಸಲು ನಿನಗೆ ಸಹಾಯ ಮಾಡುತ್ತಿರುವೆ.' ಆಗ ಮುದುಕ ತಡೆಯದೆ ಕೇಳುತ್ತಾನೆ 'ನನ್ನ ಪ್ರಾರಬ್ಧ ಕರ್ಮಗಳು ನಿನ್ನ ಕೃಪೆಗೂ ನಿಲುಕದಷ್ಟು ಕಠಿಣವಾಗಿವೆಯೇನು..? ನಿನ್ನ ಕೃಪೆಯಿಂದ ನನ್ನ ಪ್ರಾರಬ್ಧ ಕರ್ಮಗಳು ಕರಗಲಾರದೇನು..?'

ಅವನು ಈ ಮಾತಿಗೆ ಪ್ರಭು ಹೇಳುತ್ತಾನೆ 'ನನ್ನ ಕೃಪೆಯು ಪ್ರತಿ ಜೀವಿಗಳ ಮೇಲಿದೆ..! ಅವಶ್ಯವಾಗಿ ನಿನ್ನ ಪ್ರಾರಬ್ಧ ಕರ್ಮವನ್ನು ಕರಗಿಸಬಲ್ಲದು. ಆದರೆ ಮುಂದಿನ ಜನ್ಮದಲ್ಲಿ ಈ ಪ್ರಾರಬ್ಧ ಕರ್ಮಗಳನ್ನು ಅನುಭವಿಸಲು ಪುನಃ ನೀನು ಜನ್ಮವೆತ್ತಬೇಕಾಗುವುದು. ಇದೇ ಕರ್ಮದ ನಿಯಮವಾಗಿದೆ. ಅದಕ್ಕಾಗಿ ನಿನ್ನ ಪ್ರಾರಬ್ಧವನ್ನು ಸ್ವತಃ ಅನುಭವಿಸಿ ನಿನ್ನ ಕೈಯಿಂದಲೇ ಕಡಿಮೆಗೊಳಿಸಿ ನಿನ್ನನ್ನು ಈ ಜನನ ಮರಣದ ಚಕ್ರದಿಂದ ಮುಕ್ತಿ ಕೊಡಲು ಇಚ್ಛಿಸುತ್ತೇನೆ..!'

ಭಗವಂತ ಮಾತು ಮುಂದುವರೆಸುತ್ತಾ 'ಪ್ರಾರಬ್ಧಗಳು ಮಂದಗತಿಯದ್ದು, ತೀವ್ರಗತಿದ್ದು ಹಾಗೂ ಅತ್ಯಂತ ತೀವ್ರಗತಿದ್ದಿರುತ್ತವೆ. ಮಂದಗತಿಯ ಪ್ರಾರಬ್ಧವು ನನ್ನ ನಾಮಜಪದಿಂದಲೇ ಕಳೆದು ಹೋಗುವುದು, ತೀವ್ರ ಗತಿಯ ಪ್ರಾರಬ್ಧವು ಸಜ್ಜನರ ಸಹವಾಸ ಭಗವಂತನ ನಾಮಸ್ಮರಣೆ ಮತ್ತು ಸತ್ಕಾರ್ಯಗಳಿಂದ ಕಡಿಮೆಯಾಗುತ್ತದೆ. ಅತ್ಯಂತ ತೀವ್ರವಾದ ಪ್ರಾರಬ್ಧವು ಅನುಭವಿಸದೇ ಅದರಿಂದ ಬಿಡುಗಡೆಯೇ ಇಲ್ಲ. ಆದರೆ ಯಾರು ಶ್ರದ್ಧೆ ಭಕ್ತಿಗಳಿಂದ ಸತತವಾಗಿ ನನ್ನ ನಾಮಸ್ಮರಣೆಯಲ್ಲಿದ್ದು ವಿಶ್ವಾಸದಿಂದ ನನ್ನನ್ನು ಪೂಜಿಸುತ್ತ ಹೋಗುವವರೋ ಅವನೊಂದಿಗೆ ನಾನೇ ಇದ್ದು ಅವನ ಪ್ರಾರಬ್ಧವನ್ನು ಕಡಿಮೆಗೊಳಿಸುತ್ತೇನೆ.' ಎಂದು ಹೇಳಿದರು.

ಈ ಮಾತನ್ನು ಕೇಳುತ್ತಾ ಮುದುಕನಿಗೆ ಕಣ್ಣಲ್ಲಿ ಆನಂದಾಶ್ರು ತುಂಬಿ ಹರಿಯಿತು. ನೆನಪಿರಲಿ ಭಗವಂತನ ನಾಮಸ್ಮರಣೆ, ಸಜ್ಜನರ ಸಹವಾಸ, ಸತ್ಕಾರ್ಯಗಳಲ್ಲಿ ಭಾಗಿಯಾದಷ್ಟು ನಾವೇ ನಮ್ಮ ಪ್ರಾರಬ್ಧ ಕರ್ಮಗಳನ್ನ ಕಡಿಮೆ ಮಾಡಿಕೊಳ್ಳುತ್ತೇವೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಪ ದ ಬಂ ಧ



ಎಡದಿಂದ ಬಲಕ್ಕೆ

2. ನಾವೆಯನ್ನು ನಡೆಸುವವನು (3)
5. ಉಬ್ಬರ ಮತ್ತು ಇಳಿತ (4)
6. ಮಾರಾಮಾರಿ (4)
7. ವನದಲ್ಲೂ ಬರೆಯಬಹುದಾದ ಪದ್ಯ (3)
9. ಕಾಣದಂತೆ ಹೇಳಿದ ನೆಪ (3)
10. ಚಾಂದ್ರಮಾನ ವರ್ಷದ ಎಂಟನೆಯ ತಿಂಗಳು (3)
12. ಗಂಡ ಮತ್ತು ಹೆಂಡತಿ ಜೊತೆಯಾಗಿ ಬಂದಿದ್ದಾರೆ (3)
13. ಹತ್ತು ವರ್ಷಗಳ ಅವಧಿ (3)
15. ವಿಶಾಲವಾದ ಕಟ್ಟಡ (3)
17. ನಾಡಿಗೇ ರಾಜ (3)
19. ಹೊಟ್ಟೆಬಾಕನಿಗೆ ಹೀಗೆ ಹೇಳುವುದು ಸರಿಯಿದೆ (4)
20. ಬೆಳ್ಳಿಯ ಬೆಟ್ಟ (4)
21. ಆಯುಧದ ಏಟು ತಪ್ಪಿಸಲು ಅಡ್ಡ ಹಿಡಿಯುವ ಸಾಧನ (3)

ಮೇಲಿನಿಂದಕೆಳಕ್ಕೆ

1. ಸುತ್ತಲಿನ ಜನರಿಗೆ ಹೀಗೆನ್ನುವರು (4)
2. ಹಂತಕನಾಗಿ ಬಂದ ಯಮ (3)
3. ಸುಲಭವಲ್ಲದುದು ಎಂದರ್ಥ (3)
4. ಜೊತೆಗಾರನಿಗೆ ಹೀಗೆನ್ನುವರು (4)
8. ವರನಿಗೆ ಹೆಣ್ಣಿನ ತಂದೆಯು ನೀಡುವ ಉಡುಗೊರೆ (5)
9. ಬರೆಯುವ ಹಾಳೆ (3)
11. ರೆಂಬೆ ಅಥವಾ ಟಿಸಿಲು (3)
14. ಪದಗಳ ಅರ್ಥ ತಿಳಿಸುವ ನಿಘಂಟು (4)
16. ಮಂದಿ ಮಾಡುವ ಸಂಪು (4)
17. ಮುದ್ರೆ ಮಾಡಲು ಬಳಸುವ ಒಂದು ದ್ರವ್ಯ (3)
18. ಮತ್ತೊಂದು ಹಾರದೊಂದಿಗೆ ಬಂದಿರುವ ಸಾಲು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
1. ಉಪದೇಶ 3. ಅರಸ 5. ಮಾದರಿ 6. ಕಮರು 8. ಕೆಲಸ 10. ನಾವಿಕ 12. ಅನನ್ವಯ 13. ತವಂಲಬ 14. ಕರಡಿ 16. ಕೊರಗು 18. ಸಕೆರು 20. ಲಾಲಸೆ 21. ಲಿನಮ 22. ಸವಕಲು

ಮೇಲಿನಿಂದ ಕೆಳಕ್ಕೆ
1. ಉದಕ 2. ದೇವರು 3. ಅರಿಕೆ 4. ಸಮೋಸ 5. ಮಾಧವಿ 7. ಮಹಾನಗರ 9. ಲವಲವಿಕೆ 10. ನಾಯಕ 11. ಕತಡಿ 15. ರವಾನೆ 16. ಕೊಡಲಿ 17. ಗುಲಾಮ 18. ಸಜೀವ 19. ರುಮಾಲು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಆಸ್ಟ್ರೇಲಿಯಾ ಚಂದ್ರನಿಗಿಂತ ವಿಶಾಲ



ಆಸ್ಟ್ರೇಲಿಯಾ ಚಂದ್ರನಿ ಗಿಂತ ವಿಶಾಲವಾಗಿದೆ. ಚಂದ್ರನು 3400 ಕಿಮೀ ವ್ಯಾಸದಲ್ಲಿ ಕುಳಿತಿದ್ದರೆ, ಪೂರ್ವದಿಂದ ಪಶ್ಚಿಮಕ್ಕೆ ಆಸ್ಟ್ರೇಲಿಯಾದ ವ್ಯಾಸವು ಸುಮಾರು 4000 ಕಿಮೀ. ಹಾಗಂತ ಆಸ್ಟ್ರೇಲಿಯಾವು ಚಂದ್ರನಿಗಿಂತ ದೊಡ್ಡದಾ ಗಿದೆ ಎಂದು ಅರ್ಥವಲ್ಲ ಆಸ್ಟ್ರೇಲಿಯಾ ಸಮತಟ್ಟಾಗಿದ್ದು ಅದರ ಮೇಲ್ಮೈ 7,617,930 ಚದರ ಕಿ.ಮೀ. ಚಂದ್ರನ ಮೇಲ್ಮೈ ದುಂಡ ಗಿದ್ದು, 37,940,000 ಚದರ ಕಿ.ಮೀ.ವಿಸ್ತೀರ್ಣ ಹೊಂದಿದೆ. ಉಳಿದಂತೆ ರಷ್ಯಾ, ಕೆನಡಾ, ಚೀನಾ, ಅಮೆರಿಕಾ ಮತ್ತು ಬ್ರೆಜಿಲ್ ನಂತರ ಆಸ್ಟ್ರೇಲಿಯಾವು ವಿಶ್ವದ ಆರನೇ ದೊಡ್ಡ ದೇಶವಾಗಿದೆ.

ಪುಸ್ತಕ ಲೋಕ

ಆರ್ಟ್ ಆಫ್ ಹ್ಯಾಪಿನೆಸ್



ದಲೈ ಲಾಮಾ ಬರೆದಿರುವ ಆರ್ಟ್ ಆಫ್ ಹ್ಯಾಪಿನೆಸ್, ನಮ್ಮ ಜೀವನದ ಮುಖ್ಯ ಉದ್ದೇಶ ಸಂತೋಷದ ಕಡೆಗೆ ಎನ್ನುವ ಸಂದೇಶವನ್ನು ಸಾರುತ್ತದೆ. ಇದು ಮನೋವಿಜ್ಞಾನ ಮತ್ತು ಅಧ್ಯಾತ್ಮದ ಒಳನೋಟ ಹೊಂದಿರುವ ಕೈಪಿಡಿಯು ಹೌದು. ಬದುಕಿನ ಮೂಲ ಗುರಿಯೇನು, ಸಂತೋಷದ ಮಾರ್ಗಗಳು ಯಾವುವು? ಇವನ್ನೆಲ್ಲಾ ಈ ಪುಸ್ತಕದಲ್ಲಿ ಚೆಂದವಾಗಿ ವಿವರಿಸಿದ್ದಾರೆ. ಮನೋವೈದ್ಯ ಹೊವಾರ್ಡ್ ಇ ಕಟ್ಲರ್, ಈ ಕೃತಿಯ ಸಹ ಲೇಖಕರು. ಓದುತ್ತಾ ಹೋದಂತೆ ಆಳವಾದ ಪ್ರಭಾವ ಬೀರುವ ಈ ಕೃತಿಯು ಸುಂದರ ಬದುಕಿಗೆ ಮಾರ್ಗದರ್ಶಿ.

ಟ್ವೀಟ್‌ಮೆಂಟ್

ಸೇಜಲ್ ಸೂದ್: ಈಗ ತಾನೇ ರೂ. 193 ಕೊಟ್ಟು ಏರ್‌ಪೋರ್ಟ್ ಅಲ್ಲಿ ಮ್ಯಾಗಿ ತೊಗೊಂಡೆ. ಆದ್ರೆ, ಮ್ಯಾಗಿ ಅಂಥ ಪದಾರ್ಥವನ್ನು ಅಷ್ಟೊಂದು ಹೆಚ್ಚಿನ ಬೆಲೆಗೆ ಮಾರುವುದಾದರೂ ಏಕೆ?!

ದೆಬ್ಜಿತ್ ಬಿ: ನಂಗನಿಸೋ ಪ್ರಕಾರ ಆ ಮ್ಯಾಗಿಯನ್ನ ವಿಮಾನಕ್ಕೆ ಬಳಸುವ ಇಂಧನದಿಂದ ಮಾಡಿರಬಹುದು! ಯಾರಿಗೆ ಗೊತ್ತು!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಎಂದು ಆಚರಿಸಲಾಗುತ್ತದೆ?

- ಎ. ಡಿಸೆಂಬರ್ 6
- ಬಿ. ಜನೆವರಿ 8
- ಸಿ. ನವೆಂಬರ್ 2
- ಡಿ. ಡಿಸೆಂಬರ್ 2

ಉತ್ತರ: ಡಿಸೆಂಬರ್ 2



ಮಾಹಿತಿ

ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನ. ಇದನ್ನು ಡಿಸೆಂಬರ್ 2ರಂದು ಆಚರಿಸಲಾಗುತ್ತದೆ ಮತ್ತು ಮುಖ್ಯವಾಗಿ ಭಾರತದಲ್ಲಿನ ಮಕ್ಕಳು ಮತ್ತು ಮಹಿಳೆಯರಲ್ಲಿ ತಾಂತ್ರಿಕ ಕೌಶಲ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿ ಯನ್ನು ಇದು ಇಟ್ಟುಕೊಂಡಿದೆ. ಈ ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಭಾರತೀಯ ಕಂಪ್ಯೂಟರ್ ಕಂಪನಿಯಾದ ಎನ್‌ಐಐಟಿ ಅವರು 2001ರಲ್ಲಿ ತಮ್ಮ 20 ನೇ ವಾರ್ಷಿಕೋತ್ಸವವನ್ನು ಗುರುತಿಸಲು ಈ ದಿನವನ್ನು ಆಚರಿಸುವ ರೂಢಿಯನ್ನು ತಂದರು. ಮೊದಲ ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು 2ನೇ ಡಿಸೆಂಬರ್ 2001 ರಂದು ಆಚರಿಸಲಾಯಿತು. ಅಂದಿನಿಂದ, ಇದು ವಿಶ್ವಾದ್ಯಂತ ಕಂಪ್ಯೂಟರ್‌ಗಳ ಬಳಕೆ ಯನ್ನು ಉತ್ತೇಜಿಸುವ ವಾರ್ಷಿಕ ಕಾರ್ಯಕ್ರಮವಾಗಿದೆ.

ಸೋಪಲ್ಲೂ ಇದೆ, ಅನಾರೋಗ್ಯಕ್ಕೆ ನಂಟು!

ಬೆಂ. ಮು. ಮಾರುತಿ

ನಾವು ಸ್ನಾನ ಮಾಡಲು ಬಳಸುವ ಸೋಪು, ಇದು ದ್ರವರೂಪದಲ್ಲಿದ್ದರೂ ಘನರೂಪದಲ್ಲಿದ್ದರೂ ಸರಿ, ನಮ್ಮ ಆರೋಗ್ಯಕ್ಕೆ ಮಾರಕವಾಗಬಹುದು. ಇದರ ಪರಿಣಾಮಗಳು ಅಲರ್ಜಿಯಿಂದ ತೊಡಗಿ ಕ್ಯಾನ್ಸರ್ ವರೆಗೂ ಇರಬಹುದು. ಸಾಮಾನ್ಯವಾಗಿ ನಾವು ಸೋಪು ಎಂದು ಕೊಳ್ಳುವ ಉತ್ಪನ್ನದ ಬೆಲೆಯನ್ನೇ ಗಮನಿಸುತ್ತೇವೆಯೋ ಹೊರತು ಇದರ ಗುಣಮಟ್ಟವಲ್ಲ. ಆದರೆ ಅಗ್ಗದ ಸೋಪು ತಯಾರಿಸಲು ಬಳಸುವ ಅಗ್ಗದ ಮತ್ತು ಪ್ರಬಲ ರಾಸಾಯನಿಕಗಳೇ ಈ ತೊಂದರೆಗೆ ಮೂಲ ಕಾರಣ.

ಸೋಪು ಎಂಬ ಈ ಉತ್ಪನ್ನ ಭಾರೀ ಪ್ರಮಾಣದ ಹಣದ ವಹಿವಾಟನ್ನು ಹೊಂದಿರುವ ಉದ್ಯಮವೇ ಆಗಿದ್ದು ಗ್ರಾಹಕರ ಬೇಡಿಕೆಗೆ ತಕ್ಕಂತೆ ಅಗ್ಗದ ಸೋಪುಗಳನ್ನು ಪೂರೈಸುತ್ತಿವೆ. ಇವನ್ನು ಅಗ್ಗವಾಗಿಸಲೆಂದೇ ಇದಕ್ಕೆ ಅಗತ್ಯವಿರುವ ನೈಸರ್ಗಿಕ ಸಾಮಾಗ್ರಿಗಳನ್ನು ಬದಲಿಸಿ ಇಲ್ಲಿ ಕೃತಕ, ಕೆಲವು ಸಂದರ್ಭಗಳಲ್ಲಿ ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತದೆ.

ಬಳಸುವ ರಾಸಾಯನಿಕಗಳು: ಹೆಚ್ಚಿನ ಗ್ರಾಹಕರಿಗೆ ಇಷ್ಟವಾಗುವ ಪರಿಮಳಗಳನ್ನೇ ಕೃತಕ ರೂಪದಲ್ಲಿ ಸೋಪುಗಳಿಗೆ ಬೆರೆಸಲಾಗುತ್ತದೆ. ಐರಿಶ್ ಸ್ಪ್ರಿಂಗ್ ಮತ್ತು ಕೋಸ್ಟ್ ಎಂಬ ಎರಡೇ ಪರಿಮಳಗಳನ್ನು ಬಳಸಿದ ಸೋಪುಗಳ ಜಾಹೀರಾತಿಗೆ ವ್ಯಯಿಸಿದ ಬೆಲೆ ಕೋಟ್ಯಂತರ! ಇಂದು ಅತ್ಯಂತ ಹೆಚ್ಚು ಮಾರಾಟವಾಗುವುದರಿಂದ ಹಿಡಿದು ಗುಡಿಕೈಗಾರಿಕೆಯಲ್ಲಿ ನೈಸರ್ಗಿಕವಾಗಿ ತಯಾರಿಸಿದ ಸೋಪುಗಳು ಸಹ ಗ್ರಾಹಕರ ಈ ಬೇಡಿಕೆಯನ್ನು ಪೂರೈಸಲು ಅನಿವಾರ್ಯವಾಗಿ ಕೃತಕ ಸುಗಂಧಗಳನ್ನು ಬಳಸಲೇಬೇಕಾಗುತ್ತದೆ.

ವಿಷಕಾರಿ ರಾಸಾಯನಿಕಗಳು: ಸಾಮಾನ್ಯವಾಗಿ ಈ ಕೃತಕ ಸುಗಂಧಗಳು ತೈಲ ಉದ್ಯಮದಲ್ಲಿ ಎಣ್ಣೆಯನ್ನು ಹಿಂಡಿ ತೆಗೆದ ಬಳಿಕ ಉಳಿದ ತ್ಯಾಜ್ಯದಿಂದ ತಯಾರಿಸಲಾಗುತ್ತದೆ. ಪ್ರಾಥಮಿಕವಾಗಿ ಇವು ಸುಗಂಧಿತ ಗ್ಯಾಸೋಲೀನ್ ಆಗಿದ್ದು ಇದರಲ್ಲಿ ಸುಮಾರು ನಾನೂರಕ್ಕೂ ಹೆಚ್ಚು ಬಗೆಯ ಮಾನವರಿಗೆ ಹಾನಿಯಾಗಬಲ್ಲ ವಿಷಕಾರಿ ರಾಸಾಯನಿಕಗಳಿವೆ.

ಸೋಪು ಕೊಳ್ಳುವಾಗ ಜಾಗೃತೆಯಾಗಿರಿ: ಸೋಪು ವಿಷಕಾರಿಯಲ್ಲದಿದ್ದರೂ ಇದರಲ್ಲಿ ಬೆರೆತ ಸುಗಂಧ ವಿಷಕಾರಿಯಾಗಿದ್ದು ಸೋಪು ಸಹಾ ವಿಷಕಾರಿಯಾಗಿರುತ್ತದೆ. ಅಲ್ಲದೇ ಬಹಳ ಹಿಂದಿನಿಂದಲೂ ಗುಡಿಕೈಗಾರಿಕೆಯಾಗಿ ತಯಾರಿಸಲ್ಪಡುತ್ತಿದ್ದ ಸೋಪುಗಳಲ್ಲಿಯೂ ಈ ಸುಗಂಧಗಳು ಬೆರೆತು ಇವನ್ನೂ ವಿಷಕಾರಿಯಾಗಿಸಿವೆ.

ಕ್ಯಾನ್ಸರ್‌ಕಾರಕ ವಿಷದಷ್ಟೇ ಅಪಾಯಕಾರಿ: ಸೋಪುಗಳಲ್ಲಿ ನೈಸರ್ಗಿಕ ತೈಲಗಳ ಬದಲು Sodium Lauryl Sulfate (SLS) ಎಂಬ ರಾಸಾಯನಿಕ ಬೆರೆಸಲಾಗಿರುತ್ತದೆ. ಇದು ಬಟ್ಟೆಯ ಕಲೆಯನ್ನು ನಿವಾರಿಸುವ ಪ್ರಬಲ ರಾಸಾಯನಿಕವಾಗಿದ್ದು ಚರ್ಮಕ್ಕೆ ಉರಿಯುಂಟು ಮಾಡುತ್ತದೆ. ಇದರ ಸರಿಸಮನಾದ Sodium Laureth Sulfate ಎಂಬ ರಾಸಾಯನಿಕದಷ್ಟೇ ಸುರಕ್ಷಿತ ಎಂಬ ಉತ್ಪಾದಕರ ವಾದವನ್ನು ವಿಜ್ಞಾನಿಗಳು ಒಪ್ಪುತ್ತಿಲ್ಲ. ಆದರೆ Sodium Lauryl Sulfate ನಲ್ಲಿ 1,4 dioxaneಎಂಬ ವಿಷಕಾರಿ ವಸ್ತುವಿರುವುದು ಪ್ರಯೋಗಗಳಿಂದ ಸಾಬೀತಾಗಿದೆ. ಇದೊಂದು ಅಪ್ಪಟ ಕ್ಯಾನ್ಸರ್‌ಕಾರಕ ವಿಷ! ಬಹುತೇಕ ದೊಡ್ಡ ಸಂಸ್ಥೆಗಳ ಸೋಪುಗಳಲ್ಲಿರುವ ರಾಸಾಯನಿಕಗಳ ಹೆಸರು ಉದ್ದುದ್ದವಾಗಿದ್ದು ಹೆಚ್ಚಿನವು ಆರೋಗ್ಯ ಮತ್ತು ವಾತಾವರಣಕ್ಕೆ ಮಾರಕವಾಗಿವೆ.

ಎಂದಿಗೂ ಆಂಟಿ ಬ್ಯಾಕ್ಟೀರಿಯಲ್ ಎಂದು ಬರೆದಿರುವ ಉತ್ಪನ್ನಗಳನ್ನು ಕೊಳ್ಳದಿರಿ: ಆಂಟಿ ಬ್ಯಾಕ್ಟೀರಿಯಲ್ ಅಥವಾ ಬ್ಯಾಕ್ಟೀರಿಯಾ ನಿವಾರಕ ಎಂಬ ಪದವೇ ಒಂದು ದೊಡ್ಡ ಮೋಸ. ನಮಗೆ ಬ್ಯಾಕ್ಟೀರಿಯಾಗಳನ್ನು ಕೊಲ್ಲಲು ಸೋಪೇ ಆಗಬೇಕೆಂದಿಲ್ಲ, ಸಾಮಾನ್ಯ ಉಪ್ಪೇ ಸಾಕು. ನಿಜವಾಗಿ ನಮಗೆ ಬೇಕಾದದ್ದು ಆಂಟಿ ವೈರಲ್ ಅಥವಾ ವೈರಸ್ ನಿವಾರಕ ಗುಣ. ಈ ಗುಣವಿರುವ ಉತ್ಪನ್ನಗಳು ದುಬಾರಿಯಾದ ಕಾರಣ ಉತ್ಪಾದಕರು ಅಪ್ಪಿ ತಪ್ಪಿಯೂ ಈ ಪದವನ್ನು ಬಳಸದೇ ಆಂಟಿ ಬ್ಯಾಕ್ಟೀರಿಯಲ್ ಎಂಬ ಹೆಸರನ್ನೇ ಧಾರಾಳವಾಗಿ ಬಳಸಿಕೊಳುತ್ತವೆ. ಬ್ಯಾಕ್ಟೀರಿಯಾಗಳನ್ನೇ ನಿವಾರಿಸಬೇಕಿದ್ದರೆ ಯಾವುದೇ ಸೋಪು ಸಾಕು, ಇಲ್ಲದಿದ್ದರೆ ಉಪ್ಪು, ಅರಿಶಿನ ಪುಡಿ ಅದೂ ಬೇಡ, ಕೇವಲ ಬೆಚ್ಚನೆಯ ನೀರಿನಿಂದ ತೊಳೆದುಕೊಂಡರೂ ಸಾಕು. ಅಮೆರಿಕದ ಊಈಅ ಸಲಹಾ ಸಂಸ್ಥೆ ಬ್ಯಾಕ್ಟೀರಿಯಾ ನಿವಾರಣೆಗಾಗಿ ಈ ಹಣೆಪಟ್ಟಿ ಇರುವ ಸೋಪು ಕೊಳ್ಳದಿರಿ, ಇದರಿಂದೇನೂ ಹೆಚ್ಚಿನ ಪ್ರಯೋಜನವಿಲ್ಲ ಎಂದು ಸಲಹೆ ಮಾಡಿದೆ.

ಅಧ್ಯಾಯನದ ಪ್ರಕಾರ: ಈ ಸೋಪುಗಳ ಇನ್ನೊಂದು ತೊಂದರೆ ಎಂದರೆ ಇವುಗಳ ಬಳಕೆಯಿಂದ ನಮ್ಮ ದೇಹದಲ್ಲಿರುವ ಪ್ರತಿರೋಧಕ ಶಕ್ತಿಯನ್ನು ಮೀರಿದ ಶಕ್ತಿ ಹೊಂದಿರುವ MRSಅಮೊದಲಾದ ಎಂಬ ಅತ್ಯಂತ ಮಾರಕ ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ಪ್ರಚೋದನೆ ದೊರಕುವುದಾಗಿದೆ. The Centers for Disease Control and Preventionಎಂಬ ಸಂಸ್ಥೆ ಈ ತೊಂದರೆಯನ್ನು ವಿಶ್ವವ್ಯಾಪಿ ಆರೋಗ್ಯದ ಕಾಳಜಿಯನ್ನಾಗಿ ಪರಿಗಣಿಸಿದೆ. ಈ ಬ್ಯಾಕ್ಟೀರಿಯಾಗಳ ಮೂಲಕ ಎದುರಾಗುವ ಸೋಂಕುಗಳಿಂದಾಗಿ ಪ್ರತಿವರ್ಷ ಆಸ್ಪತ್ರೆಗಳಲ್ಲಿ 60,000 ಕ್ಕೂ ಹೆಚ್ಚು ಜನರು ದಾಖಲಾಗುತ್ತಿದ್ದಾರೆ. ಇವರಲ್ಲಿ ಪ್ರತಿ ನಾಲ್ವರಲ್ಲಿ ಮೂವರ ರಕ್ತದಲ್ಲಿ Triclosan ಅಂಶವಿರುವುದು ದೃಢಪಟ್ಟಿದೆ. ಹಲವು ದೊಡ್ಡ ಸಂಸ್ಥೆಗಳು FDCಎಂಬ ಬಣ್ಣಕಾರಕ ರಾಸಾಯನಿಕಗಳನ್ನು ಬಳಸಿ ಸೋಪು ಸುಂದರವಾದ ಬಣ್ಣ ಪಡೆಯುವಂತೆ ಮಾಡುತ್ತವೆ. ವಾಸ್ತವವಾಗಿ ಈ ರಾಸಾಯನಿಕಗಳು ತಯಾರಾಗುವುದು ನಮ್ಮ ರಸ್ತೆಗೆ ಬಳಿಯುವ ಡಾಂಬರಿನಿಂದ! ಇವೂ ಕ್ಯಾನ್ಸರ್‌ಕಾರಕವಾಗಿವೆ.

ಹಾಗಾದರೆ ಆರೋಗ್ಯಕ್ಕೆ ಯಾವ ಸೋಪು ಒಳ್ಳೆಯದು? ಆದಷ್ಟು ಗಿಡಮೂಲಿಕೆಯ ಸೋಪುಗಳನ್ನು ಬಳಸಿ, ಈ ಸೋಪುಗಳಲ್ಲಿ ಸೌಮ್ಯವಾದ ಗಿಡಮೂಲಿಕೆಗಳಾದ ಕ್ಯಾಮೊಮೈಲ್, ಲ್ಯಾವೆಂಡರ್, ಪುದಿನಾ, ಸ್ಪಿಯರ್ ಮಿಂಟ್, ಓಟ್ ಮೀಲ್ ಅಥವಾ ಬೆಣ್ಣೆಹಣ್ಣುಗಳಿರುತ್ತವೆ. ಕೆಲವು ಸೋಪುಗಳ ಮುಖ್ಯ ಪರಿಕರವಾಗಿ ಆಲಿವ್ ಎಣ್ಣೆ ಅಥವಾ ಶಿಯಾ ಬೆಣ್ಣೆಯನ್ನೂ ಬಳಸಲಾಗುತ್ತದೆ. ಚರ್ಮದ ಜೀವಕೋಶಗಳನ್ನು ಮರುನಿರ್ಮಿಸಲು ಆಲಿವ್ ಎಣ್ಣೆ ಉತ್ತಮವಾಗಿದ್ದು ಕಾಂತಿ ಹೆಚ್ಚಿಸಲು ಸಹಾ ನೆರವಾಗುತ್ತದೆ. ಅಲ್ಲದೇ ಆಲಿವ್ ಎಣ್ಣೆಯಲ್ಲಿರುವ ಆಂಟಿ ಆಕ್ಸಿಡೆಂಟುಗಳು ಮತ್ತು ವಿಟಮಿನ್ನುಗಳು ಕ್ಯಾನ್ಸರ್‌ಕಾರಕ ಕಣಗಳನ್ನು ದೂರ ಇರಿಸುತ್ತವೆ. ಈ ಸೋಪುಗಳು ಒಣಚರ್ಮದವರಿಗೆ ಹೆಚ್ಚು ಸೂಕ್ತವಾಗಿದೆ. ಇದರಲ್ಲಿ ಲೋಳೆಸರ, ಕೋಕೋ ಬೆಣ್ಣೆ ಅಥವಾ ಬೆಣ್ಣೆಹಣ್ಣಿನ ಅಂಶಗಳಿದ್ದರೆ ಇನ್ನೂ ಉತ್ತಮವಾಗಿದೆ.

ದುಬಾರಿ ಆದರೂ ಪರವಾಗಿಲ್ಲ, ನೈಸರ್ಗಿಕ ಸೋಪನ್ನೇ ಬಳಸಿ: ಕೇವಲ ಕೊಂಚ ದುಬಾರಿ ಎಂಬ ಕಾರಣಕ್ಕೇ ನೈಸರ್ಗಿಕ ಸೋಪುಗಳನ್ನು ಇಂದಿಗೂ ಪ್ರಯತ್ನಿಸದಿರುವವರು ನಮ್ಮ ನಡುವೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವುಗಳನ್ನೊಮ್ಮೆ ಬಳಸಿದ ಬಳಿಕ ಇದಕ್ಕೇಕೆ ಕೊಂಚ ದುಬಾರಿ ಬೆಲೆ ತೆರುತ್ತಿದ್ದೇವೆ ಎಂಬ ಅರಿವಾಗುತ್ತದೆ. ಇವು ಉತ್ತಮ ಪರಿಣಾಮವನ್ನು ನೀಡುವ ಜೊತೆಗೇ ಆರೋಗ್ಯವನ್ನೂ ಬಾಧಿಸುವುದಿಲ್ಲ. ತ್ವಚೆಯೂ ಮೃದು, ನುಣ್ಣಗೆ ಮತ್ತು ಆರೋಗ್ಯಕರವಾಗಿ ನಳನಳಿಸುತ್ತದೆ. ಆರೋಗ್ಯಕ್ಕಾಗಿ ಕೊಂಚ ಹಣ ವ್ಯಯಿಸುವುದಾದರೆ ಇದು ಸೂಕ್ತವಾದ ವ್ಯಯವಲ್ಲವೇ!

ಕಾಡಿನ ಶಾಲೆಯಲ್ಲಿ ಒಂದು ಸುತ್ತು

ಡಾ. ಉಮಾಮಹೇಶ್ವರಿ ಎನ್.

ಸಿಯಟ್ಲ್ ನಗರದ ಕೇಂದ್ರ ಭಾಗದಲ್ಲಿರುವ ಸಸ್ಯೋದ್ಯಾನಕ್ಕೆ ಭೇಟಿ ಕೊಟ್ಟಿದ್ದೆವು. ಅದರ ವಿವಿಧ ಭಾಗಗಳಲ್ಲಿ ಪಾದಚಾರಿಯಾಗಿ ಸಂಚರಿಸುತ್ತಾ ಇದ್ದಾಗ, ಒಂದೆಡೆ ಚಿಕ್ಕಮಕ್ಕಳು ಜೊತೆಯಾಗಿ ಆಟ ಆಡುತ್ತಿದ್ದುದು ಕಾಣಿಸಿತು. ಜೊತೆಗೆ ಕೆಲವು ಮಹಿಳೆಯರೂ ಇದ್ದರು. ಮರದ ಬೊಡ್ಡೆಗಳಿಂದ ತಯಾರಿಸಿದ ಆಸನಗಳು, ಮರಗಳ ಕಾಂಡಗಳಿಗೆ ಕಟ್ಟಿದ ಟರ್ಪಾಲು, ಮಕ್ಕಳು ಆಟವಾಡಬಹುದಾದಂತಹ ಮರದ ನಿರ್ಮಿತಿಗಳು ಕುತೂಹಲ ಉಂಟು ಮಾಡಿದವು. ಮತ್ತೆ ಮುಂದುವರಿದಾಗ ಕಾಣಿಸಿದ್ದು ಫಿಡ್ಲ್ ಹೆಡ್ಸ್ ಫಾರೆಸ್ಟ್ ಸ್ಕೂಲ್ ಎಂಬ ಫಲಕ ಮತ್ತು ವಿವರಣೆ.

ಪೂರ್ತಿಯಾಗಿ ಹೊರಾಂಗಣದಲ್ಲಿ ಪ್ರಕೃತಿಯ ಮಧ್ಯೆ ಕಾರ್ಯ ನಿರ್ವಹಿಸುವ ಶಾಲೆ. ಸಣ್ಣ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಪ್ರಕೃತಿಯ ನಡುವೆ ಆಟಗಳನ್ನಾಡಿಕೊಂಡು ಕಲಿಯುವಂತಹ ವಾತಾವರಣವನ್ನು ಸೃಷ್ಟಿಸಲಾಗಿದೆ. ದೇಶದ ನಗರಗಳಲ್ಲಿರುವ ಈ ತರಹದ ಪ್ರಥಮ ಪ್ರಿಸ್ಕೂಲ್ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿನ ಶಿಕ್ಷಕಿಯರು ಮಕ್ಕಳನ್ನು ಸ್ವತಂತ್ರವಾಗಿ ಚಿಂತನೆಗೆ ಹಚ್ಚಿ, ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವಂತೆ, ಮಾನಸಿಕವಾಗಿ ಸದೃಢವಾಗಿರುವಂತೆ ಪ್ರೇರೇಪಿಸುತ್ತಾರೆ. ಸಸ್ಯೋದ್ಯಾನ ವಾಷಿಂಗ್ಟನ್ ವಿಶ್ವವಿದ್ಯಾಲಯದ ಆವರಣದಲ್ಲಿದೆ. ಈ ಶಾಲೆಯ ಆಡಳಿತವೂ ಅದರ ಅಧೀನದಲ್ಲಿದೆ.

ಸಮಾಚಾರ ಸಣ್ಣದಲ್ಲ

ಡಬ್ಲ್ಯುಟಿಸಿ: ತಿಯಾನಿಗೆ ಮಣಿದ ಮಣಿಕಾ



ದೆಹಲಿ: ಭಾರತದ ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ, ಅವರು ಫ್ರಾನ್ಸ್‌ನ ಮಾಂಟ್ ಪೆಲೀರ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಚಾಂಪಿಯನ್ಸ್ ಮಹಿಳೆಯರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತದ 29 ವರ್ಷ ವಯಸ್ಸಿನ ಮಣಿಕಾ 3-0 (8-11, 8-11, 10-12) ನೇರ ಗೇಮ್‌ಗಳಿಂದ ಚೀನಾದ ಕಿಯಾನ್ ತಿಯಾನಿ ಅವರಿಗೆ ಶರಣಾದರು. ವಿಶ್ವದ 30ನೇ ಕ್ರಮಾಂಕದ ಮಣಿಕಾ, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ 14ನೇ ಕ್ರಮಾಂಕದ ರೊಮೇನಿಯಾದ ಬರ್ನಾಡೆಟ್ ಸ್ಜೋಕ್ಸ್‌ಗೆ ಆಘಾತ ನೀಡಿ ಡಬ್ಲ್ಯುಟಿಟಿ ಚಾಂಪಿಯನ್ಸ್‌ನಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಮೊದಲ ಭಾರತದ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರವಾಗಿದ್ದರು. ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿ ಶ್ರೀಜಾ ಅಕುಲಾ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದ್ದರು. ಅವರು 2-3 (11-6, 7-11, 1-11, 11-8, 8-11) ರಿಂದ ವಿಶ್ವದ ವಿಶ್ವದ 13ನೇ ಕ್ರಮಾಂಕದ ಆ್ಯಡ್ರಿಯಾನಾ ಡಯಾಜ್ (ಪೋರ್ಟೊ ರಿಕೊ) ಅವರಿಗೆ ಮಣಿದಿದ್ದಾರೆ.

ನೆಟ್‌ಬಾಲ್: ಫೈಬಲ್‌ಗೆ ಶ್ರೀಲಂಕಾ, ಸಿಂಗಪುರ

ಬೆಂಗಳೂರು: ಹಾಲಿ ಚಾಂಪಿಯನ್ ಶ್ರೀಲಂಕಾ ಮತ್ತು ಸಿಂಗಪುರ ತಂಡಗಳು ಇಲ್ಲಿ ನಡೆಯುತ್ತಿರುವ 13ನೇ ಏಷ್ಯನ್ ನೆಟ್‌ಬಾಲ್ ಮಹಿಳಾ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ಪ್ರವೇಶಿಸಿದವು. ಭಾರತ ತಂಡವು ಟೂರ್ನಿಯಲ್ಲಿ 9ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು. ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಆರು ಬಾರಿಯ ಚಾಂಪಿಯನ್ ಶ್ರೀಲಂಕಾ ತಂಡವು 71-47ರಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿದರೆ, ಸಿಂಗಪುರ 54-46ರಿಂದ ಮಲೇಷ್ಯಾ ತಂಡವನ್ನು ಮಣಿಸಿತು. ಫೈನಲ್ ಹಣಾಹಣಿ ಭಾನುವಾರ ನಡೆಯಲಿದೆ. ಇದಕ್ಕೂ ಮೊದಲು ನಡೆದ ಲೀಗ್‌ನಲ್ಲಿ ಭಾರತ ತಂಡವು 56-37ರಿಂದ ಚೀನಾ ತೈಪೆಯನ್ನು ಸೋಲಿಸಿತು. ಇತರ ಪಂದ್ಯಗಳಲ್ಲಿ ಸೌದಿ ಅರೇಬಿಯಾ 44-22ರಿಂದ ಇರಾಕ್ ತಂಡವನ್ನು; ಜಪಾನ್ 44-33ರಿಂದ ಬಹರೇನ್ ತಂಡವನ್ನು; ಥಾಯ್ಲೆಂಡ್ 57-39ರಿಂದ ಮಾಲ್ಡೀವ್ಸ್ ತಂಡವನ್ನು ಸೋಲಿಸಿತು.

ನ್ಯೂಜಿಲೆಂಡ್ ವಿರುದ್ಧ ಮುಗ್ಗರಿಸಿದ ಭಾರತ | ದೇಶಾದ್ಯಂತ ಕ್ರಿಕೆಟ್ ಅಭಿಮಾನಿಗಳ ಟೀಕೆ

ಟೆಸ್ಟ್‌ನಲ್ಲಿ ಹಿರಿಯರು ವಿಫಲ: ಸಿಗದ ಫಲ

ದೆಹಲಿ: ಪ್ರವಾಸಿ ನ್ಯೂಜಿಲೆಂಡ್ ತಂಡದ ವಿರುದ್ಧದ ಮೊದಲೆರಡು ಟೆಸ್ಟ್ ಪಂದ್ಯಗಳಲ್ಲಿ ಹೀನಾಯವಾಗಿ ಸೋಲು ಅನುಭವಿಸುವ ಮೂಲಕ ಟೀಮ್ ಇಂಡಿಯಾ ಕಳಪೆ ಸಾಧನೆ ಮಾಡಿದೆ. ಇದರೊಂದಿಗೆ 2012ರ ನಂತರ ಭಾರತ ಇದೇ ಮೊದಲ ಬಾರಿ ತವರಿನಲ್ಲಿ ಸರಣಿ ಸೋತಿತ್ತು. ನ್ಯೂಜಿಲೆಂಡ್, ಇದೇ ಮೊದಲ ಬಾರಿ ಭಾರತದ ನೆಲದಲ್ಲಿ ಸರಣಿ ಜಯದ ಸಂಭ್ರಮ ಆಚರಿಸಿತ್ತು.

ಎರಡೂ ಪಂದ್ಯಗಳಲ್ಲಿ ಭಾರತ ತಂಡದ ನೀರಸ ಪ್ರದರ್ಶನದಿಂದ ಅಭಿಮಾನಿಗಳು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ಹೊರಹಾಕಿದ್ದಾರೆ. ಜತೆಗೆ, ರೆಡ್ ಬಾಲ್ ಕ್ರಿಕೆಟ್‌ನ ಅನುಭವಿಗಳಾದ ಚೇತೇಶ್ವರ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರನ್ನು ಆಯ್ಕೆ ಮಾಡುವಂತೆಯೂ ಒತ್ತಾಯಿಸಿದ್ದಾರೆ.

ಬಾರ್ಡರ್- ಗವಾಸ್ಕರ್ ಟ್ರೋಫಿ ಟೂರ್ನಿಗಾಗಿ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿರುವ ಭಾರತ ತಂಡದಲ್ಲಿ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರಿಗೆ ಅವಕಾಶ ನೀಡುವಂತೆ ಬಿಸಿಸಿಐಗೆ ನೆಟ್ಟಿಗರು ಮನವಿ ಮಾಡಿದ್ದಾರೆ.

ಬಿಸಿಸಿಐಗೆ ನಾಚಿಕೆಯಾಗಬೇಕು, ರಹಾನೆ ಮತ್ತು ಪೂಜಾರ ಆಸ್ಟ್ರೇಲಿಯಾದಲ್ಲಿ ನಡೆದ ಹಲವು ಟೆಸ್ಟ್ ಸರಣಿಗಳನ್ನು ಗೆಲ್ಲಲು ಸಾಕಷ್ಟು ಸಹಾಯ

ಮಾಡಿದ್ದಾರೆ. ಸದ್ಯ ಇವರಿಬ್ಬರೂ ತಂಡದಲ್ಲಿಲ್ಲ. ಬಾರ್ಡರ್- ಗವಾಸ್ಕರ್ ಟ್ರೋಫಿ ಟೂರ್ನಿಗಾಗಿ ಅವರನ್ನು ತಂಡಕ್ಕೆ ಕರೆತನ್ನಿ ಎಂದು ನೆಟ್ಟಿಗರು ಪೋಸ್ಟ್ ಮಾಡಿದ್ದಾರೆ.

ಬಿಸಿಸಿಐ ಆಯ್ಕೆ ಸಮಿತಿಯವರು ದಯವಿಟ್ಟು ನನ್ನ ಮಾತುಗಳನ್ನು ಕೇಳಿಸಿಕೊಳ್ಳಬೇಕು. ಭಾರತ ಟೆಸ್ಟ್ ಸ್ಪೆಷಲಿಸ್ಟ್‌ಗಳಾದ ರಹಾನೆ, ಪೂಜಾರ, ಮೊಹಮ್ಮದ್ ಶಮಿ, ಇಶಾಂತ್ ಶರ್ಮಾ ಅವರನ್ನು ತಂಡಕ್ಕೆ ಮರು ಆಯ್ಕೆ ಮಾಡದಿದ್ದರೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಎಂದು ಮತ್ತೊಬ್ಬ ನೆಟ್ಟಿಗರೊಬ್ಬರು ಪೋಸ್ಟ್ ಮಾಡಿದ್ದಾರೆ.

ಅಭಿಮಾನಿಗಳು ಏನೇ ಹೇಳಿದರೂ ರಹಾನೆ ಮತ್ತು ಪೂಜಾರ ಅವರನ್ನು ಮತ್ತೆ ಟೆಸ್ಟ್ ತಂಡಕ್ಕೆ ಕರೆತರುವ ಸಾಧ್ಯತೆ ಕಾಣುತ್ತಿಲ್ಲ. ಚೇತೇಶ್ವರ ಪೂಜಾರ ಅವರು ಕೊನೆಯದಾಗಿ 2023ರ ಜೂನ್‌ನಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಕಣಕ್ಕಿಳಿದಿದ್ದರು. ರಹಾನೆ 2023ರ ಜುಲೈನಲ್ಲಿ ವೆಸ್ಟ್ ಇಂಡೀಸ್ ಪ್ರವಾಸ ಕೈಗೊಂಡಿದ್ದ ಟೀಮ್ ಇಂಡಿಯಾದ ಭಾಗವಾಗಿದ್ದರು.

ಪ್ರಸಕ್ತ ಸಾಲಿನ ನ್ಯೂಜಿಲೆಂಡ್ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯ ಮುಂಬೈನ ವಾಂಖೆಡೆಯಲ್ಲಿ ನವೆಂಬರ್ 1ರಿಂದ ಆರಂಭವಾಗಲಿದೆ.

ಗಂಭೀರ್‌ರನ್ನು ದೂಷಿಸುವಲ್ಲಿ ಅರ್ಥವಿಲ್ಲ

ದೆಹಲಿ: ನ್ಯೂಜಿಲೆಂಡ್ ತಂಡದ ಎದುರು ಭಾರತ ತಂಡವು ಸರಣಿ ಸೋತಿರುವ ಹೊಣೆಯನ್ನು ಅನುಭವಿ ಆಟಗಾರರೇ ತೆಗೆದುಕೊಳ್ಳಬೇಕು ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ ಎಂದು ಮಾಜಿ ಕ್ರಿಕೆಟಿಗರಾದ ದಿನೇಶ್ ಕಾರ್ತಿಕ್ ಮತ್ತು ಸಂಜಯ್ ಮಾಂಜ್ರೇಕರ್ ಅಭಿಪ್ರಾಯಪಟ್ಟಿದ್ದಾರೆ.

ಎರಡೂ ಪಂದ್ಯಗಳಲ್ಲಿ ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಈ ಸರಣಿಯ ಎರಡೂ ಪಂದ್ಯಗಳಲ್ಲಿ ರನ್ ಗಳಿಸಲು ಪರದಾಡಿದ್ದಾರು. ಅವರು ಉತ್ತಮ ಲಯದಲ್ಲಿ ಇಲ್ಲ. ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರೂ ನಿರೀಕ್ಷಿತ ಪರಿಣಾಮ ಬೀರಿಲ್ಲ.

ಸೀನಿಯರ್ ಆಟಗಾರರು ತಾವು ಮಾಡಿರುವ ಸಾಧನೆ ಏನು ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಈ ಹೊಣೆಯಿಂದ ಅವರು ನುಣುಚಿಕೊಳ್ಳಲು ಸಾಧ್ಯವಿಲ್ಲ. ತಂಡ ಗೆದ್ದಾಗ ಅಭಿಮಾನಿಗಳು ಅಪಾರವಾಗಿ ಸಂಭ್ರಮಿಸುತ್ತಾರೆ. ಆಗ ನೀವು ಕೂಡ ಸಡಗರಪಡುತ್ತೀರಿ. ಸೋತಾಗ ಅಭಿಮಾನಿಗಳು ಟೀಕಿಸುತ್ತಾರೆ. ಅವುಗಳನ್ನು ಎದುರಿಸುವ ಧೈರ್ಯವನ್ನು ಸೀನಿಯರ್ಸ್ ತೋರಿಸಬೇಕು. ಆದ್ದರಿಂದ ಸೀನಿಯರ್ ಆಟಗಾರರೇ ಸೋಲಿನ ಹೊಣೆಯನ್ನು ತೆಗೆದುಕೊಳ್ಳಬೇಕು ಎಂದು ಕ್ರಿಕ್‌ಬಜ್ ಕಾರ್ಯಕ್ರಮದಲ್ಲಿ ಅವರು ಹೇಳಿದ್ದಾರೆ. ಮುಖ್ಯ ಕೋಚ್ ಗಂಭೀರ್ ಅವರ ಬಗ್ಗೆ ಟೀಕೆಗಳು ಬಹಳಷ್ಟು ಕೇಳಿಬರುತ್ತಿವೆ.

ಸೋಲಿಗೆ ತಿಯಾಗಿ ಪ್ರತಿಕ್ರಿಯಿಸಲ್ಲ: ಶರ್ಮಾ

12 ವರ್ಷಗಳ ನಂತರ ತವರಿನಲ್ಲಿ ಟೆಸ್ಟ್ ಸರಣಿ ಸೋತಿರಬಹುದು. ಆದರೆ, ಆತಂಕ ಪಡುವ ಅಗತ್ಯವಿಲ್ಲ. ನಾವು ನಮ್ಮ ಆಟ ಸುಧಾರಿಸಿಕೊಳ್ಳುವ ಕಡೆಗೆ ಗಮನ ಹರಿಸುತ್ತೇವೆ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.ಈ ಸೋಲಿನ ಕುರಿತು ಅತಿಯಾಗಿ ಪ್ರತಿಕ್ರಿಯಿಸುವುದಿಲ್ಲ. ನಾವು ನಿರ್ದಿಷ್ಟ ಆಟಗಾರರೊಂದಿಗೆ ಚರ್ಚಿಸಬೇಕಿದೆ. ತಂಡವಾಗಿ ನಾವು ಅವರಿಂದ ಏನನ್ನು ನಿರೀಕ್ಷಿಸುತ್ತಿದ್ದೇವೆ ಎಂಬುದನ್ನು ಅವರಿಗೆ ಮನವರಿಕೆ ಮಾಡುತ್ತೇವೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಇಂದಿನ ಸೋಲಿಗೆ ಯಾರೊಬ್ಬರನ್ನು ಹೊಣೆ ಮಾಡುವುದಿಲ್ಲ. ಇದು ತಂಡದ ಸೋಲು. ಇಲ್ಲಿ ಬ್ಯಾಟಿಂಗ್ ವೈಫಲ್ಯ ಅಥವಾ ಬೌಲಿಂಗ್ ವೈಫಲ್ಯ ಎಂದು ಹೇಳಲು ಸಾಧ್ಯವಿಲ್ಲ. ವಾಂಖೆಡೆಯಲ್ಲಿ ನಡೆಯುವ ಮುಂದಿನ ಟೆಸ್ಟ್ ಪಂದ್ಯ ಗೆಲ್ಲಲು ನಾವು ಯೋಜನೆ ರೂಪಿಸುತ್ತೇವೆ ಎಂದರು.

ಡೌನ್ಸ್ ಗಾಲ್ಫ್ ಕ್ಲಬ್ ಹಿರಿಮೆಯ ಕಿರೀಟಕ್ಕೆ ಗರಿ

ಮಡಿಕೇರಿ: ಭಾರತದ ಗಾಲ್ಫ್ ಕ್ಲಬ್‌ಗಳಲ್ಲಿಯೇ ಪ್ರಥಮ ಎಂಬ ಹಿರಿಮೆಗೆ ಕಾರಣವಾದ ಒಳಾಂಗಣ ಗಾಲ್ಫ್ ಕ್ರೀಡಾ ಸೌಲಭ್ಯವನ್ನು ಮಡಿಕೇರಿ ಡೌನ್ಸ್ ಗಾಲ್ಫ್ ಕ್ಲಬ್‌ನಲ್ಲಿ ಎಕ್ಸೆಲ್ ಸಂಸ್ಥೆಯ ಪಾಲುದಾರ ಮಹೀಂದ್ರನ್ ಬಾಲಚಂದ್ರನ್ ಉದ್ಘಾಟಿಸಿದರು.

ಮಡಿಕೇರಿ ಹೊರವಲಯದಲ್ಲಿರುವ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನಲ್ಲಿ ಅಂದಾಜು 7 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಸಭಾಭವನ, ಒಳಾಂಗಣ ಗಾಲ್ಫ್ ಕ್ರೀಡಾ ಸೌಲಭ್ಯ, ನೂತನ ಬಿಲಿಯರ್ಡ್ಸ್ ಕ್ರೀಡಾಂಗಣವನ್ನು ದಾನಿಗಳೂ ಆದ, ಎಕ್ಸೆಲ್ ಸಂಸ್ಥೆಯ ಪಾಲುದಾರ ಮಹೀಂದ್ರನ್ ಬಾಲಚಂದ್ರನ್ ವಿದ್ಯುಕ್ತವಾಗಿ ಉದ್ಘಾಟಿಸಿದರು,

ಮಹೀಂದ್ರನ್ ಬಾಲಚಂದ್ರನ್ ಮಾತನಾಡಿ, ನಿಸರ್ಗದ ಮಡಿಲಲ್ಲಿರುವ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಒಳಾಂಗಣ ಗಾಲ್ಫ್ ಮೈದಾನ ನಿರ್ಮಾಣವಾಗಿರುವುದು ಕೊಡಗಿನಲ್ಲಿ ಗಾಲ್ಫ್ ಕ್ರೀಡಾ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ನೀಡಿದಂತಾಗಿದೆ, ತನ್ನ ಸಂಸ್ಥೆ ಟುವರ್ಡ್ಸ್ ಈಕ್ವಲ್ ಫೌಂಡೇಷನ್ ಮೂಲಕ ಈಗಾಗಲೇ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನ ಸಿಬ್ಬಂದಿಗಳ ಮಕ್ಕಳಿಗೆ ಸೂಕ್ತ ಶಿಕ್ಷಣ ಸೌಲಭ್ಯ ಕಲ್ಪಿಸುತ್ತಿದ್ದು, ಮುಂದಿನ ದಿನಗಳಲ್ಲಿಯೂ ಅಗತ್ಯ ನೆರವು ನೀಡುವುದಾಗಿ ಘೋಷಿಸಿದರು.

ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್ ಅಧ್ಯಕ್ಷ ಐ.ಕೆ. ಅನಿಲ್ ಮಾತನಾಡಿ, 1914 ರಲ್ಲಿ ಸ್ಥಾಪನೆಯಾದ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್ ಪಾಲಿಗೆ ಸ್ಮರಣೀಯ ದಿನ ಇದಾಗಿದ್ದು 7 ಕೋಟಿ ರು. ವೆಚ್ಚದಲ್ಲಿ ಹಲವಷ್ಟು ವಿನೂತನ ಸೌಲಭ್ಯಗಳನ್ನು ಇದೀಗ ಮಡಿಕೇರಿಯ ಈ ಗಾಲ್ಫ್ ಮೈದಾನ ಹೊಂದುವಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

2002 ರಲ್ಲಿ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನಲ್ಲಿ ಕ್ಲಬ್ ಹೌಸ್ ಸ್ಥಾಪನೆಯಾಯಿತು, 2013 ರಲ್ಲಿ ನೂತನ ರಸ್ತೆ ನಿರ್ಮಾಣವಾಗಿದ್ದರೆ, 2017 ರಲ್ಲಿ 8 ಕೋಣೆಗಳ ನೂತನ ಅತಿಥಿಗೃಹವಾಯಿತು, 2019 ರಲ್ಲಿ ಹೊನಲು ಬೆಳಕಿನ ವ್ಯವಸ್ಥೆಯಾಯಿತು, ಇದೀಗ 2024 ರಲ್ಲಿ ಸಭೆ, ಸಮಾರಂಬಗಳಿಗೆ ಅನುಕೂಲಕರವಾದ ಸಭಾಂಗಣ ಅತ್ಯಾಧುನಿಕ ತಂತ್ರಜ್ಞಾನದ ಒಳಾಂಗಣ ಗಾಲ್ಫ್ ಕ್ರೀಡಾ ಸೌಲಭ್ಯ, ನೂತನ ಬಿಲಿಯಾರ್ಡ್ಸ್ ಕ್ರೀಡಾಂಗಣ, 10 ಸುಸಜ್ಜಿತ ಕೋಣೆಗಳು, ಈಜುಕೊಳ ಕಟ್ಟಡ ನಿರ್ಮಾಣವಾಗಿರುವುದು ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನ ಹೆಮ್ಮೆಯ ಸಾಧನೆಯಾಗಿದೆ ಎಂದೂ ಐ.ಕೆ. ಅನಿಲ್ ಹೇಳಿದರು. ಈ ಎಲ್ಲ ಸೌಲಭ್ಯಗಳು ಮುಂದಿನ ದಿನಗಳಲ್ಲಿ ಮಡಿಕೇರಿಯಲ್ಲಿ ಮತ್ತಷ್ಟು ಗಾಲ್ಫ್ ಕ್ರೀಡಾ ಚಟುವಟಿಕೆಗಳ ಆಯೋಜನೆಗೆ ಸಹಕಾರಿಯಾಗಲಿದೆ ಎಂದೂ ಅನಿಲ್ ಆಶಾಭಾವನೆ ವ್ಯಕ್ತಪಡಿಸಿದರು. ಭಾರತದ ಗಾಲ್ಫ್ ಕ್ಲಬ್‌ಗಳಲ್ಲಿಯೇ ಮೊದಲ ಬಾರಿಗೆ ಮರ್ಕೇರಾ ಡೌನ್ಸ್ ಗಾಲ್ಫ್ ಕ್ಲಬ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಒಳಾಂಗಣ ಗಾಲ್ಫ್ ಕ್ರೀಡಾ ಸೌಲಭ್ಯ ಹೊಂದುವ ಮೂಲಕ ಮಳೆಗಾಲದಲ್ಲಿಯೇ ಗಾಲ್ಫ್ ಕ್ರೀಡಾಪಟುಗಳು ಈ ಒಳಾಂಗಣ ಗಾಲ್ಫ್ ಕ್ರೀಡಾಂಗಣದ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ ಎಂದೂ ಅನಿಲ್ ಮಾಹಿತಿ ನೀಡಿದರು.

ಟಿ.ಆರ್ ಬಾಲಚಂದ್ರನ್ ಗಾಲ್ಫ್ ಪಂದ್ಯಾವಳಿಯ ವಿಜೇತರಿಗೆ ಬಹುಮಾನ ವಿತರಿಸಿದರು. ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಕೆ. ಹರೀಶ್ ಅಪ್ಪಣ್ಣ, ಸಂಗೀತಾ ಮಹೀಂದ್ರನ್, ಚಿಕ್ಕಮಗಳೂರು ಗಾಲ್ಫ್ ಕ್ಲಬ್ ಅಧ್ಯಕ್ಷ ಸುದರ್ಶನ್, ಉಪಾಸಿ ಕ್ರೀಡಾ ಸಮಿತಿ ಅಧ್ಯಕ್ಷ ಸಿ.ಎಂ. ಅಪ್ಪಣ್ಣ, ಕೊಡಗು ವೈಲ್ಡ್ ಲೈಫ್ ಸೊಸೈಟಿ ಅಧ್ಯಕ್ಷ ಕೆ.ಎ.ಚಂಗಪ್ಪ, ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಕೆ. ರಾಜೀವ್, ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ರಾಮಲಿಂಗೇಗೌಡ ಇನ್ನೂ ಅನೇಕರು ಇದ್ದರು.

ಜೊಹೊರ್ ಕಪ್: ಭಾರತಕ್ಕೆ ಕಂಚು

ಜೊಹೊರ್‌ಬಹ್ರು (ಮಲೇಶ್ಯ): ಇಲ್ಲಿ ನಡೆದ ಸುಲ್ತಾನ್ ಆಫ್ ಜೊಹೊರ್ ಕಪ್ ಜೂನಿಯರ್ ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಭಾರತ ತಂಡ ನ್ಯೂಜಿಲ್ಯಾಂಡ್ ವಿರುದ್ಧ ಶೂಟೌಟ್‌ನಲ್ಲಿ 3-2 ಗೋಲುಗಳಿಂದ ಗೆದ್ದು ಕಂಚಿನ ಪದಕ ಜಯಿಸಿದೆ.

ಅತ್ಯಂತ ಜಿದ್ದಾಜಿದ್ದಿನಿಂದ ನಡೆದ ಈ ಪಂದ್ಯದಲ್ಲಿ ಉಭಯ ತಂಡಗಳ ಬಲಿಷ್ಠ ಕ್ಷೇತ್ರ ರಕ್ಷಣೆಯಿಂದ ನಿಗದಿತ ಅವಧಿಯಲ್ಲಿ 2-2ರ ಸಮಬಲ ಕಂಡಿತು. ಫಲಿತಾಂಶಕ್ಕಾಗಿ ಶೂಟೌಟ್ ಮೊರೆಹೋಗಲಾಯಿತು. ಗುರ್ಜೋತ್ ಸಿಂಗ್, ಮನ್ಮೀತ್ ಸಿಂಗ್ ಮತ್ತು ಸೌರಭ್ ಆನಂದ್ ಕುಶ್ವಾಹ ಶೂಟೌಟ್‌ನಲ್ಲಿ ಯಶಸ್ವಿಯಾಗಿ ಗೋಲು ಬಾರಿಸಿದರೆ, ಗೋಲ್ ಕೀಪರ್ ಬಿಕ್ರಮ್ ಜಿತ್ ಸಿಂಗ್ ಮೂರು ಗೋಲುಗಳನ್ನು ತಡೆಯುವ ಮೂಲಕ ಅಮೋಘ ಪ್ರದರ್ಶನವನ್ನು ನೀಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ನಿಗದಿತ ಅವಧಿಯ ಆಟದ ವೇಳೆ, ಭಾರತದ ಪರವಾಗಿ ದಿಲ್ರಾಜ್ ಸಿಂಗ್ 11ನೇ ನಿಮಿಷದಲ್ಲಿ ಮತ್ತು ಮನ್ಮೀತ್ ಸಿಂಗ್ 20 ನೇ ನಿಮಿಷದಲ್ಲಿ ಗೋಲು ಬಾರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, ಪಂದ್ಯದದ

ಅಂತಿಮ ಕ್ವಾರ್ಟರ್‌ನಲ್ಲಿ ನ್ಯೂಜಿಲ್ಯಾಂಡ್ ಆಟಗಾರರು ಪ್ರತಿಹೋರಾಟ ನೀಡಿದರು. ಓವನ್ ಬ್ರೌನ್ 51ನೇ ನಿಮಿಷದಲ್ಲಿ ಗೋಲು ಬಾರಿಸಿದರೆ, ಜಾಂಟಿ ಎಲ್ಮ್ಸ್ 57ನೇ ನಿಮಿಷದಲ್ಲಿ ಗೋಲು ದಾಖಲಿಸಿ ಪಂದ್ಯವನ್ನು ಸಮಬಲಗೊಳಿಸಿದರು.

ಮಾಜಿ ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ಅವರ ಚೊಚ್ಚಲ ಕೋಚಿಂಗ್‌ನಲ್ಲಿ ಜೂನಿಯರ್ ತಂಡ ಕಣಕ್ಕಿಳಿದಿತ್ತು. ಅವರ ಮಾರ್ಗದರ್ಶನದ ಮೊದಲ ಪ್ರಯತ್ನದಲ್ಲೇ ತಂಡ ಪದಕ ಗೆದ್ದಿರುವ ಬಗ್ಗೆ ಹಾಕಿ ಇಂಡಿಯಾ ಸಂತಸ ವ್ಯಕ್ತಪಡಿಸಿದೆ. ಚಾಂಪಿಯನ್ ಆಟಗಾರ ಯಾವಾಗಲೂ ತಂಡವನ್ನು ಚಾಂಪಿಯನ್ ಹಾದಿಯಲ್ಲೇ ಕೊಂಡೊಯ್ಯುತ್ತಾರೆ ಎಂದು ಹರ್ಷ ವ್ಯಕ್ತಪಡಿಸಿದೆ.

ಚೌಕಿದಾರ್ ತಂಡ ಸೇರಿದ ಶ್ವೇತಾ

ಚೈತ್ರದ ಪ್ರೇಮಾಂಜಲಿ, ಕರ್ಪೂರದ ಗೊಂಬೆ, ಲಕ್ಷ್ಮಿ ಮಹಾಲಕ್ಷ್ಮಿ ಸೇರಿದಂತೆ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿ ಮನ ಗೆದ್ದಿದ್ದ ನಟಿ ಶ್ವೇತಾ, ಅದ್ಯಾಕೋ ಚಿತ್ರರಂಗದಿಂದ ದೂರವೇ ಉಳಿದಿದ್ದರು. ಇತ್ತೀಚೆಗೆ ಕಿರುತೆರೆಯ ಧಾರಾವಾಹಿಯ ಮೂಲಕ ನಟನೆಗೆ ಎಂಟ್ರಿಕೊಟ್ಟಿದ್ದಾರೆ. ಈಗ ಬರೋಬ್ಬರಿ ಎರಡು ದಶಕಗಳ ಬಳಿಕ ಚಂದನವನಕ್ಕೆ ಮರಳಿದ್ದಾರೆ. ಹೌದು, ಟೈಟಲ್ ಹಾಗೂ ಪೋಸ್ಟರ್ ಮೂಲಕ ಕುತೂಹಲ ಮೂಡಿಸಿರುವ ಚೌಕಿದಾರ್ ಸಿನಿಮಾದಲ್ಲಿ ಶ್ವೇತಾ ನಟಿಸುತ್ತಿದ್ದಾರೆ.

ವಿವಿಧ ಭಾಷೆಗಳಲ್ಲಿ ಸುಮಾರು ಎಪ್ಪತ್ತೈದು ಸಿನಿಮಾಗಳಲ್ಲಿ ನಟಿಸಿದ್ದ ಶ್ವೇತಾ 2003ರಲ್ಲಿ ತೆರೆಕಂಡ ಕುಟುಂಬ ಸಿನಿಮಾದಲ್ಲಿ ಅಭಿನಯಿಸಿದ್ದರು. ಆ ಬಳಿಕ ಯಾವುದೇ ಸಿನಿಮಾದಲ್ಲಿ ಕಾಣಿಸಿಕೊಂಡಿರಲಿಲ್ಲ. ಈಗ ಇಪ್ಪತ್ತು ವರ್ಷಗಳ ಬಳಿಕ ಮತ್ತೆ ನಟನೆಗೆ ಮರಳಿದ್ದಾರೆ. ಚೌಕಿದಾರ್ ಸಿನಿಮಾದಲ್ಲಿ ಶ್ವೇತಾ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಚೌಕಿದಾರ್ ಸಿನಿಮಾದಲ್ಲಿ ಪೃಥ್ವಿ ಅಂಬಾರ್ ನಾಯಕನಾಗಿ ನಟಿಸುತ್ತಿದ್ದು, ಈ ಹಿಂದೆ ಲವ್ವರ್ ಬಾಯ್ ಕಾಣಿಸಿಕೊಂಡಿದ್ದ ಪೃಥ್ವಿ ಈ ಸಿನಿಮಾದಲ್ಲಿ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಧನ್ಯಾ ರಾಮ್ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಹಿರಿಯ ನಟ ಸಾಯಿ ಕುಮಾರ್ ವಿಶೇಷ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಹೊಸ ಕಥೆಯನ್ನು ಹೆಕ್ಕಿ ತರುವ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಈ ಬಾರಿಯೂ ವಿಭಿನ್ನ ಕಥೆಯನ್ನು ತೆರೆಗೆ ತರುತ್ತಿದ್ದಾರೆ.

ಸಚಿನ್ ಬಸ್ರೂರು ಸಂಗೀತ ನಿರ್ದೇಶನ, ಸಿದ್ದು ಕಂಚನಹಳ್ಳಿ ಛಾಯಾಗ್ರಹಣ, ಪ್ರಮೋದ್ ಮರವಂತೆ, ಸಂತೋಷ್ ನಾಯಕ್, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಈ ಚಿತ್ರಕ್ಕಿದೆ. ಚೌಕಿದಾರ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ವಿಎಸ್ ಎಂಟರ್‌ಟೇನ್ ಮೆಂಟ್ ಬ್ಯಾನರ್‌ನಲ್ಲಿ ಕಲ್ಲಹಳ್ಳಿ ಚಂದ್ರಶೇಖರ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ವಿಟಾಕೀಸ್

ಯೋಗರಾಜ್ ಭಟ್‌ಗೆ ಬಿಗ್‌ಬಾಸ್ ಸಾರಥ್ಯ ?

ಕನ್ನಡದ ಬಿಗ್‌ಬಾಸ್ ಹತ್ತು ಸೀಸನ್ ಯಶಸ್ವಿಯಾಗಿ ಮುಗಿಸಿ ಹನ್ನೊಂದನೇ ಸೀಸನ್ ಆರಂಭವಾಗಿದ್ದು ಒಂದು ತಿಂಗಳು ಕಳೆಯುತ್ತಾ ಬಂದಿದೆ.

ಬಿಗ್‌ಬಾಸ್ ಮನೆಯಿಂದ ಈಗಾಗಲೇ ಮೂವರು ಸ್ಪರ್ಧಿಗಳು ಹೊರ ಹೋಗಿದ್ದಾರೆ. ಈ ನಡುವೆ ಕಿಚ್ಚ ಸುದೀಪ್ ಬಿಗ್‌ಬಾಸ್ ತೊರೆಯುವುದಾಗಿ ಹೇಳಿದ್ದಾರೆ. ಇದು ನಾನು ನಡೆಸಿಕೊಡುವ ಕೊನೆಯ ಬಿಗ್‌ಬಾಸ್ ಸೀಸನ್ ಎಂದಿದ್ದಾರೆ. ಇದು ಕಿಚ್ಚ ಸುದೀಪ್ ಅವರ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದೆ. ಅದರ ಜತೆಗೆ ಮುಂದೆ ಬಿಗ್‌ಬಾಸ್ ನಡೆಸಿ ಕೊಡುವವರು ಯಾರು ಎಂಬ ಕುತೂಹಲವೂ ಕಾಡುತ್ತಿದೆ. ನಟ ಗಣೇಶ್, ರಿಷಬ್ ಶೆಟ್ಟಿ ಮುಂದಿನ ಸೀಸನ್ ನಡೆಸಿಕೊಡಬಹುದು ಎನ್ನಲಾಗುತ್ತಿದೆ.

ಈ ನಡುವೆ ಮುಂದಿನ ಸೀಸನ್ ಬಿಗ್‌ಬಾಸ್ ಅನ್ನು ನಿರ್ದೇಶಕ ಯೋಗರಾಜ್ ಭಟ್ ನಡೆಸಿಕೊಡಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಯಾಕೆಂದರೆ ಈ ವಾರಾಂತ್ಯದಲ್ಲಿ ಬಿಗ್‌ಬಾಸ್ ಮನೆಗೆ ಬಂದಿದ್ದ ಭಟ್ರು ದೊಡ್ಡ ಪಂಚಾಯಿತಿಯನ್ನೇ ನಡೆಸಿದರು. ಅಪ್ಪಟ ಹಳ್ಳಿ ಸೊಗಡಿನಲ್ಲಿ ಸಿದ್ಧವಾಗಿದ್ದ ಸೆಟ್‌ನಲ್ಲಿ ಕುಳಿತು ಸ್ಪರ್ಧಿಗಳ ಬಗ್ಗೆ ಕೇಳಿ ಬಂದಿರುವ ಆರೋಪ ಪ್ರತ್ಯಾರೋಪವನ್ನು ಓದಿ ಉತ್ತರ ಪಡೆದರು. ಭಟ್ಟರ ಪಂಚಾಯಿತಿ ಎಲ್ಲರಿಗೂ ಹಿಡಿಸಿತು. ಮಾತ್ರವಲ್ಲ ಅವರ ಮಾತಿನ ದಾಟಿ, ಹಾಸ್ಯಮಯ ಸಂಭಾಷಣೆ ಎಲ್ಲರನ್ನೂ ನಗುವಿನ ಅಲೆಯಲ್ಲಿ ತೇಲಿಸಿತು.

ಬಿಗ್‌ಬಾಸ್ ಆರಂಭದಿಂದಲೂ ಪ್ರಸಾರವಾಗುತ್ತಿರುವ ಗೀತೆಗೆ ಸಾಹಿತ್ಯ ಬರೆದಿದ್ದು ಇದೇ ಯೋಗರಾಜ್ ಭಟ್. ಒಂದೇ ಮನೇಲಿ ದೊಡ್ಡ ದೊಡ್ಡ ಮಂದಿ.. ಹೌದು ಸ್ವಾಮಿ... ಎಂಬ ಗೀತೆ ಕೇಳಲು ಹಿತವಾಗಿತ್ತು. ವಿಜಯ್ ಪ್ರಕಾಶ್ ಅವರ ದನಿಯಲ್ಲಿ ಈ ಹಾಡು ಮೂಡಿಬಂದಿತ್ತು. ಈಗಲೂ ಕೂಡ ಕಿರುತೆರೆ ಪ್ರಿಯರಲ್ಲಿ ಈ ಹಾಡು ಗುನುಗುನಿಸುತ್ತದೆ.

ಯೋಗರಾಜ್ ಭಟ್ ಈಗಾಗಲೇ ರಿಯಾಲಿಟಿ ಶೋಗಳಲ್ಲಿಯೂ ತೀರ್ಪುಗಾರರಾಗಿ ಪಾಲ್ಗೊಳ್ಳುತ್ತಿದ್ದಾರೆ. ಇದೆಲ್ಲವನ್ನು ನೋಡಿದರೆ ಮುಂದಿನ ಸೀಸನ್ ಅನ್ನು ಯೋಗರಾಜ್ ಭಟ್ಟರೇ ನಡೆಸಿ ಕೊಡುತ್ತಾರೆ ಎನ್ನಿಸುತ್ತಿದೆ, ಪ್ರೇಕ್ಷಕರ ವಲಯದಿಂದಲೂ ಇದೇ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಈ ಬಾರಿಯ ಬಿಗ್‌ಬಾಸ್ ಸೀಸನ್ ಮುಗಿದ ಮೇಲೆ ಇದೆಲ್ಲದಕ್ಕೂ ಉತ್ತರ ಸಿಗಲಿದೆ.

ಚಿತ್ರೀಕರಣ ಮುಗಿಸಿದ ಫೈರ್ ಫ್ಲೈ

ಶಿವಣ್ಣ ಅವರ ಪುತ್ರಿ ನಿವೇದಿತಾ ನಿರ್ಮಿಸುತ್ತಿರುವ ಮೊದಲ ಸಿನಿಮಾ ಫೈರ್ ಫ್ಲೈ ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು, ಚಿತ್ರತಂಡ ಕುಂಬಳಕಾಯಿ ಒಡೆದಿದೆ. ಈ ಕಾರ್ಯಕ್ರಮದಲ್ಲಿ ಶಿವರಾಜ್ ಕುಮಾರ್, ಗೀತಾ ಶಿವರಾಜ್ ಕುಮಾರ್, ನಿವೇದಿತಾ ಶಿವರಾಜ್ ಕುಮಾರ್, ನಿರ್ದೇಶಕ ವಂಶಿ, ಸಂಗೀತ ನಿರ್ದೇಶಕ ಚರಣ್ ರಾಜ್, ನಾಯಕಿ ರಚನಾ ಸೇರಿದಂತೆ ಇಡೀ ಚಿತ್ರತಂಡ ಭಾಗಿಯಾಗಿತ್ತು.

ಫೈರ್ ಫ್ಲೈನಲ್ಲಿ ಸೈನ್ಸ್ ಫಿಕ್ಷನ್ ಜತೆಗೆ ಲವ್ ಸ್ಟೋರಿಯೂ ಇದ್ದು, ಈ ಚಿತ್ರವನ್ನು ವಂಶಿ ನಿರ್ದೇಶಿಸಿದ್ದಾರೆ. ಜತೆಗೆ ನಾಯಕನಾಗಿ ನಟಿಸಿದ್ದು, ರಚನಾ ಇಂದರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಹಿರಿಯ ನಟಿ ಸುಧಾರಾಣಿ, ಅಚ್ಯುತ್ ಕುಮಾರ್, ಶೀತಲ್ ಶೆಟ್ಟಿ ಹಲವರು ಚಿತ್ರದಲ್ಲಿ ನಟಿಸಿದ್ದಾರೆ. ಫೈರ್ ಫ್ಲೈ ಸಿನಿಮಾಗೆ ಅಭಿಲಾಷ್ ಕಳತ್ತಿ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಸಂಯೋಜಿಸಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ಶ್ರೀಮುತ್ತು ಸಿನಿ ಸರ್ವಿಸ್ ಸಂಸ್ಥೆಯಲ್ಲಿ ಫೈರ್ ಫ್ಲೈ ನಿರ್ಮಾಣವಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಜನವರಿಯಲ್ಲಿ ಫೈರ್ ಫ್ಲೈ ಚಿತ್ರ ತೆರೆಗೆ ಬರಲಿದೆ.

ಸಂದೇಶ ಸಾರಿದ ಬಿಳಿಚುಕ್ಕಿ ಹಳ್ಳಿಹಕ್ಕಿ

ಎಲ್ಲರೂ ಈಗ ಕಂಟೆಂಟ್ ಓರಿಯಂಟೆಡ್ ಸಿನಿಮಾಗಳತ್ತ ಚಿತ್ತ ನೆಟ್ಟಿದ್ದಾರೆ. ಅಂತೆಯೇ ಈಗ ಪಕ್ಕಾ ಕಮರ್ಶಿಯಲ್ ದಾಟಿಯಲ್ಲಿ ರೂಪುಗೊಂಡಿರುವ ಬಿಳಿಚುಕ್ಕಿ ಬೆಳ್ಳಿಹಕ್ಕಿ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಈ ಹಿಂದೆ ಮಹಿರಾ ಚಿತ್ರವನ್ನು ನಿರ್ದೇಶನ ಮಾಡಿದ್ದ ಮಹೇಶ್ ಗೌಡ, ಬಿಳಿಚುಕ್ಕಿ ಹಳ್ಳಿಹಕ್ಕಿ ಚಿತ್ರವನ್ನು ನಿರ್ದೇಶಿಸಿದ್ದಾರೆ, ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಚಿತ್ರದ ಪೋಸ್ಟರ್ ರಿಲೀಸ್ ಆಗಿದ್ದು ಗಮನಸೆಳೆಯುತ್ತಿದೆ. ಈ ಸಿನಿಮಾ ವಿಟಿಲಿಗೋ ಅಂದರೆ, ತೊನ್ನಿನ ಸಮಸ್ಯೆಯ ಕುರಿತ ಕಥೆಯನ್ನು ಒಳಗೊಂಡಿದೆ. ಅಂದರೆ ತೊನ್ನಿನಿಂದ ಬಳಲುತ್ತಿರುವ ವ್ಯಕ್ತಿಯೊಬ್ಬ ಯಾವೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಇಂತಹ ಕಥೆಯ ಸಿನಿಮಾದಲ್ಲಿ ಪಾತ್ರಧಾರಿಗಳು ಮೇಕಪ್ ಮೂಲಕ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ. ಆದರೆ, ಇಲ್ಲಿ ಸ್ವತಃ ವಿಟಿಲಿಗೋದಿಂದ ಬಳಲುತ್ತಿರುವ ಮಹೇಶ್ ಗೌಡ ಅವರೇ ನಾಯಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ತೊನ್ನೆಂಬುದು ಅಪರಿಚಿತ ಕಾಯಿಲೆಯೇನಲ್ಲ. ಅದರ ಮನೋದೈಹಿಕ ಯಾತನೆಗಳಿವೆಯಲ್ಲಾ ಅದು ಬೇರೆಯವರ ಸುಲಭವಾಗಿ ಅರ್ಥವಾಗುವಂತದ್ದಲ್ಲ. ಅದನ್ನೇ ಇಲ್ಲಿ ಹೇಳಲಾಗಿದೆ. ಇದೊಂದು ಕಲಾತ್ಮಕ ಚಿತ್ರವೆಂಬ ಚಿತ್ರಣ ಎಂಬ ಭಾವ ನಿಮ್ಮೊಳಗೆ ಮೂಡಿದರೂ ಅದರಾಚೆಗೆ ಈ ಚಿತ್ರ ರೂಪುಗೊಂಡಿದೆ ಎಂದು ಮಹೇಶ್ ಹೇಳುತ್ತಾರೆ.

ಇಂಥಾದ್ದೊಂದು ಸೂಕ್ಷ್ಮ ಕಥೆಯನ್ನು ಪಕ್ಕಾ ಮನೋರಂಜನಾತ್ಮಕ ಅಂಶಗಳೊಂದಿಗೆ, ಕಮರ್ಶಿಯಲ್ ಧಾಟಿಯಲ್ಲಿಯೇ ಕಟ್ಟಿ ಕೊಡಲಾಗಿದೆ. ರೊಮ್ಯಾಂಟಿಕ್ ಶೈಲಿಯಲ್ಲಿ ಸಾಗುವ ಈ ಚಿತ್ರದಲ್ಲಿ ಹಾಸ್ಯಕ್ಕೂ ಒತ್ತು ನೀಡಲಾಗಿದೆಯಂತೆ. ನಗಿಸುತ್ತಲೇ ಅಳಿಸುವ, ಬಹುಕಾಲ ಕಾಡುವ, ಎಲ್ಲ ವಯೋಮಾನದ, ಅಭಿರುಚಿಗಳ ಪ್ರೇಕ್ಷಕರಿಗೂ ಹಿಡಿಸುವ ಸ್ಟೋರಿ ಚಿತ್ರದಲ್ಲಿದೆಯಂತೆ.

ಖದರ್ ಖಳ ಸೂರ್ಯ

ಚಿತ್ರರಂಗದಲ್ಲಿ ನಾಯಕನಿಗೆ ಇರುವಷ್ಟೇ ಪ್ರಾಮುಖ್ಯತೆ ಖಳನಾಯಕನಿಗೂ ಇರುತ್ತದೆ. ಇಬ್ಬರಿಂದಲೇ ಕಥೆ ಸಾಗುತ್ತದೆ. ಈ ಹಿನ್ನೆಲೆಯಲ್ಲಿ ಹಲವರು ಖಳನ ಪಾತ್ರವನ್ನೇ ಆಯ್ದುಕೊಳ್ಳುತ್ತಿದ್ದಾರೆ. ಅಂತಹವರಲ್ಲಿ ನಟ ಸೂರ್ಯ ಪ್ರವೀಣ್ ಕೂಡ ಒಬ್ಬರು. ನಾಯಕನಾಗಿ ಮಿಂಚಬೇಕು ಎಂದು ಚಿತ್ರರಂಗಕ್ಕೆ ಬಂದ ಸೂರ್ಯ ಪ್ರವೀಣ್ ಗುರುತಿಸಿಕೊಂಡಿದ್ದು ಖಳ ನಟನಾಗಿ. ನಿರ್ದೇಶಕ ನಾಗಣ್ಣ ನಿರ್ದೇಶನದ ಸಂಗೊಳ್ಳಿ ರಾಯಣ್ಣ ಚಿತ್ರದ ಮೂಲಕ ನಟನೆಗೆ ಎಂಟ್ರಿಕೊಟ್ಟ ಸೂರ್ಯ, ಈ ಚಿತ್ರದಲ್ಲಿ ದರ್ಶನ್ ಸ್ನೇಹಿತನ ಪಾತ್ರದಲ್ಲಿ ಕಾಣಿಸಿಕೊಂಡರು. ಈ ಚಿತ್ರದಿಂದ ಸಾಕಷ್ಟು ಅವಕಾಶ ಪಡೆದರು. ಈ ಸಿನಿಮಾದ ಬಳಿಕ ಅವನೇ ಶ್ರೀ ಮನ್‌ನಾರಾಯಣ, ಆಪರೇಶನ್ ಅಲಮೇಲಮ್ಮ, ಯಜಮಾನ, ಬಾನದಾರಿಯಲ್ಲಿ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನೆಗೆಟಿವ್ ಶೇಡ್‌ನಲ್ಲಿಯೇ ಮಿಂಚಿದ್ದಾರೆ.

ಕಿರುತೆರೆಗೂ ಪ್ರವೇಶಿಸಿದ ಸೂರ್ಯ, ಕಾದಂಬರಿ, ಮಂಗಳಗೌರಿ ಮದುವೆ ಹರಹರ ಮಹದೇವ, ಗೀತಾ ಹೀಗೆ ಹಲವು ಧಾರಾವಾಹಿಗಳಲ್ಲಿ ಖಳ ನಟನಾಗಿ ಕಾಣಿಸಿಕೊಂಡು ಮೆಚ್ಚುಗೆ ಪಡೆದಿದ್ದಾರೆ. ಮುಂದೆಯೂ ನಕರಾತ್ಮಕ ಪಾತ್ರದಲ್ಲಿ ಗುರುತಿಸಿಕೊಳ್ಳಬೇಕೆಂಬ ಬಯಕೆ ಸೂರ್ಯ ಪ್ರವೀಣ್‌ಗಿದೆ. ನಾಯಕನಾಗಿ ಆಫರ್ ಬಂದರೂ, ಅದರಲ್ಲೂ ನೆಗಟಿವ್‌ನಿಂದ ಪಾಸಟಿವ್ ಇರುವಂತಹ ರೋಲ್ ಸಿಕ್ಕರೆ ಖುಷಿಯಾಗುತ್ತದೆ ಎನ್ನುತ್ತಾರೆ ಸೂರ್ಯ ಪ್ರವೀಣ್. ಸದ್ಯ ಚಿತ್ರೀಕರಣ ಮುಗಿಸಿ ತೆರೆಗೆ ಸಿದ್ಧವಾಗಿರುವ 45, ಉಗ್ರಾವತಾರ, ಕೆಡಿ ಚಿತ್ರಗಳಲ್ಲಿಯೂ ವಿಲನ್ ಆಗಿ ನಟಿಸಿದ್ದು ತೆರೆಯಲ್ಲಿ ಅಬ್ಬರಿಸಲು ಸಿದ್ಧವಾಗಿದ್ದಾರೆ.